ಮೂಸಾ(ಅ) v/s
ಫಿರ್‌ಔನ್

✍ ಅಖ್ಲಾಕ್ ಹುಸೈನ್

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಪ್ರವಾದಿ ಮೂಸಾ(ಅ) ಮತ್ತು ಈಜಿಪ್ಟ್‌ನ ನಿರಂಕುಶ ಆಡಳಿತಗಾರ ಕಿಬ್ತೀ ವಂಶಜ ಫಿರ್‌ಔನನ ಮಧ್ಯೆ ನಡೆದ ಸುದೀರ್ಘ ಸಂಘರ್ಷದ ಕತೆಯು ಪವಿತ್ರ ಕುರ್‌ಆನಿನಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ವಿವಿಧ ಘಟನೆಗಳು ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಮೂಸಾರ(ಅ) ಜೀವನದ ವಿವಿಧ ಮಜಲುಗಳು ಆಗಾಗ ಪವಿತ್ರ ಕುರ್‌ಆನಿನಲ್ಲಿ ಅವತೀರ್ಣಗೊಳ್ಳುತ್ತಾ ಇತ್ತು. ಮೂಸಾ(ಅ) ಮತ್ತು ಫಿರ್‌ಔನ್ ಕೇವಲ ಇಬ್ಬರು ವ್ಯಕ್ತಿಗಳಲ್ಲ, ಚರಿತ್ರೆಯ ಪುಟಗಳಲ್ಲಿ ಆಗಾಗ ಪ್ರತ್ಯಕ್ಷಗೊಳ್ಳುತ್ತಿರುವ ಎರಡು ಪಾತ್ರಧಾರಿಗಳು. ಹಠಮಾರಿತನ, ದಬ್ಬಾಳಿಕೆ ಮತ್ತು ಕ್ರೌರ್ಯವು ಫಿರ್‌ಔನನ ನೀತಿಯಾದರೆ, ಮೂಸಾ(ಅ) ಶಾಂತ ರೀತಿಯಲ್ಲಿ ಅವನನ್ನು ಸರಿದಾರಿಗೆ ತರುವ ಓರ್ವ ಸುಧಾರಕ ಹಾಗೂ ಅವನ ಕಪಿಮುಷ್ಟಿಯಲ್ಲಿ ಸಿಲುಕಿ ಸಾವಿರಾರು ವರ್ಷಗಳಿಂದ ಒದ್ದಾಡುತ್ತಿದ್ದ ಬನೀ ಇಸ್ರಾಈಲ್ ಜನಾಂಗದ ವಿಮೋಚಕರಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಈಜಿಪ್ಟ್‌ನ ಆಡಳಿತಗಾರರನ್ನು 'ಫಿರ್‌ಔನ್' ಎಂದು ಕರೆಯಲಾಗುತ್ತದೆ.

ಸತ್ಯ-ಮಿಥ್ಯದ ನಡುವಿನ ಸಂಘರ್ಷವು ಇಂದು ನಿನ್ನೆಯದಲ್ಲ, ಮಾನವನ ಆರಂಭದಿಂದಲೂ ನಡೆದು ಬಂದಿದೆ. ಒಂದೆಡೆ ಅಲ್ಲಾಹನ ಪ್ರವಾದಿಗಳು ಜನರನ್ನು ಸತ್ಯಧರ್ಮದ ಕಡೆಗೆ ಆಹ್ವಾನಿಸುತ್ತಿದ್ದರೆ, ಮಿಥ್ಯದ ಶಕ್ತಿಗಳು ಅದರ ಸ್ವರವನ್ನು ಅಣಗಿಸಲು, ಅದರ ಅಸ್ತಿತ್ವವನ್ನೇ ಅಳಿಸಲು ತಮ್ಮ ಗರಿಷ್ಠ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಸತ್ಯದ ವಾಹಕರು ಅತ್ಯಂತ ದುರ್ಬಲರೂ ಅಸಹಾಯಕರೂ ಆಗಿದ್ದರೆ, ಮಿಥ್ಯದ ಶಕ್ತಿಗಳು ಸರ್ವ ಶಸ್ತ್ರ ಸಜ್ಜಿತರಾಗಿರುತ್ತಿದ್ದರು. ಸತ್ಯಮಿಥ್ಯಗಳ ನಡುವಿನ ಈ ಸಂಘರ್ಷದಲ್ಲಿ ಬಾಹ್ಯ ನೋಟಕ್ಕೆ ಸತ್ಯದ ಶಕ್ತಿಗಳು ಸೋತಂತೆ ಕೊಂಡರೂ ಅಂತಿಮ ವಿಜಯವು ಅವರಿಗೇ ಆಗಿರುವುದು. ಪ್ರವಾದಿ ಮುಹಮ್ಮದ್(ಸ) ಮತ್ತವರ ಸಂಗಾತಿಗಳು ಇಂತಹದೇ ಪರಿಸ್ಥಿತಿಯನ್ನೆದುರಿಸಿದ್ದರು. ಆ ಸಂದರ್ಭದಲ್ಲಿ ಅವರಲ್ಲಿ ಸಹನೆ, ಧೈರ್ಯ-ಸ್ಥೈರ್ಯ, ಆತ್ಮವಿಶ್ವಾಸ ಹಾಗೂ ಹೋರಾಟದ ಸ್ಫೂರ್ತಿ ತುಂಬಲು ಮೂಸಾ(ಅ) ಮತ್ತು ಫಿರ್‌ಔನ್‌ನ ಕತೆಯನ್ನು ಕುರ್‌ಆನಿನಲ್ಲಿ ಅಲ್ಲಲ್ಲಿ ಪ್ರಸ್ತಾಪಿಸಲಾಗಿದೆ. ಅದನ್ನೆಲ್ಲ ಕ್ರಮಬದ್ಧವಾಗಿ ಜೋಡಿಸಿ ಒಂದು ಪೂರ್ಣ ಕತೆಯ ರೂಪದಲ್ಲಿ ಪ್ರಸ್ತುತಪಡಿಸಿದವರು ಅಖ್ಲಾಕ್ ಹುಸೈನ್.

ಮೂಸಾ(ಅ) vs ಫಿರ್‌ಔನ್ ಎಂಬ ಈ ಗ್ರಂಥವನ್ನು ಕೇವಲ ಚರಿತ್ರೆಯ ರೂಪದಲ್ಲಿ ಓದಿದರೆ ಸಾಲದು ಇದರಲ್ಲಿ ಇಸ್ಲಾಮಿಗಾಗಿ ಸೇವೆ ಸಲ್ಲಿಸುವ, ಅದರ ಸಂಸ್ಥಾಪನೆಗಾಗಿ ಸದಾ ಶ್ರಮಿಸುತ್ತಿರುವ ಸಕಲರಿಗೂ ಪ್ರಾಯೋಗಿಕ ಮಾರ್ಗದರ್ಶನವಿದೆ. ಇದರ ಅಧ್ಯಯನದಿಂದ ಒಂದು ಹೊಸ ಸ್ಫೂರ್ತಿ ಮತ್ತು ಆತ್ಮಚೈತನ್ಯ ಓದುಗರಲ್ಲಿ ಮೂಡಿಸಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಮುನ್ನುಡಿ

ಪವಿತ್ರ ಕುರ್‌ಆನಿನಲ್ಲಿ ಪ್ರಸ್ತಾಪಿಸಲಾಗಿರುವ ಪೂರ್ವ ಪ್ರವಾದಿಗಳ ಕತೆಗಳು ಮತ್ತು ವೃತ್ತಾಂತಗಳನ್ನು ಅಧ್ಯಯನ ನಡೆಸುವುದು ಇಸ್ಲಾಮಿನ ಸಂದೇಶ ಪ್ರಚಾರ ಕಾರ್ಯ ನಡೆಸುವವರ ಮಟ್ಟಿಗೆ ಬಹಳ ಅಗತ್ಯವಾಗಿದೆ. ಅವುಗಳ ಗಾಢ ಅಧ್ಯಯನದಿಂದಲ್ಲದೆ ಸಂದೇಶ ಪ್ರಚಾರ ಕಾರ್ಯವನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಿಲ್ಲ. ಕುರ್‌ಆನಿನ ಕತೆಗಳು ಈ ನಿಟ್ಟಿನಲ್ಲಿ ವಿಶೇಷ ಮಹತ್ವ ಪಡೆದಿವೆ. ಕುರ್‌ಆನಿನ ವಿದ್ಯಾರ್ಥಿಯು ಅದರಿಂದ ಸರಿಯಾದ ಪ್ರಯೋಜನ ಪಡೆಯಬೇಕಾದರೆ ಈ ಎಲ್ಲ ಅಂಶಗಳನ್ನು ಮುಂದಿಟ್ಟು ಆ ಕತೆಗಳ ಅಧ್ಯಯನ ನಡೆಸಬೇಕು.

ಪ್ರಪ್ರಥಮವಾಗಿ ಕುರ್‌ಆನ್ ಪ್ರಸ್ತಾಪಿಸಿರುವ ಪೂರ್ವ ಸಮುದಾಯಗಳ ಚರಿತ್ರೆಗಳು, ಮಾನವ ಇತಿಹಾಸದ ಅತ್ಯಂತ ಅಧಿಕೃತ, ಸತ್ಯ ಘಟನೆಗಳಾಗಿವೆ. ಅದಕ್ಕಿಂತ ಅಧಿಕೃತ ವಿಷಯಗಳು ಬೇರಾವ ಗ್ರಂಥದಲ್ಲೂ ಸಿಗಲಾರದು. ತಿದ್ದುಪಡಿಗೊಳಗಾದ ಪೂರ್ವ ದೈವಿಕ ಗ್ರಂಥಗಳು, ಲೋಕದ ಇನ್ನಿತರ ಐತಿಹಾಸಿಕ ದಾಖಲೆಗಳು ಹಾಗೂ ಅಧ್ಯಯನ-ಸಂಶೋಧನೆಗಳ ಎಲ್ಲ ಭಂಡಾರಗಳು ನೀಡುವ ಮಾನವನ ಆರಂಭದ ಇತಿಹಾಸ ಮತ್ತು ಹಿಂದಿನ ಜನಾಂಗಗಳ ಉತ್ಥಾನ-ಪತನಗಳ ಮಾಹಿತಿಗಳು ಹೆಚ್ಚಾಗಿ ಊಹೆ ಮತ್ತು ಅಂದಾಜಿನಿಂದಾಗಿರುತ್ತವೆ. ಆದರೆ ಕುರ್‌ಆನ್ ಮಾನವ ಇತಿಹಾಸದ ವಿವಿಧ ಮಜಲುಗಳು ಮತ್ತು ಘಟನೆಗಳ ಸರಿಯಾದ ಚಿತ್ರಣವನ್ನು ವಿವರಿಸಿರುವುದು ಮಾನವನ ಮೇಲೆ ಮಾಡಿರುವ ಮಹದುಪಕಾರವಾಗಿದೆ.

ಲಕ್ಷಾವಧಿ ವರ್ಷಗಳ ಹಿಂದೆ ಮಾನವನ ಆರಂಭ ಹೇಗಾಯಿತು. ಈ ಭೂಮುಖದ ಮೇಲೆ ವಿವಿಧ ಕಾಲಘಟ್ಟಗಳಲ್ಲಿ ಪ್ರತ್ಯಕ್ಷಗೊಂಡ ದೊಡ್ಡ ದೊಡ್ಡ ನಾಗರಿಕತೆಗಳು ಹಾಗೂ ಪ್ರಸ್ತಾಪನೀಯ ಜನಾಂಗಗಳು ಯಾವುವು? ಎಂಬಿತ್ಯಾದಿಗಳ ಅನೇಕಾನೇಕ ಮಾಹಿತಿಗಳು ಕುರ್‌ಆನಿನ ಕತೆಗಳಲ್ಲಿ ಸಿಗಬಹುದು. ಈ ಪ್ರಸ್ತಾಪಗಳು ನೂರಾರು ವರ್ಷಗಳ ಬಳಿಕ ಹುಟ್ಟಿದ ಇತಿಹಾಸಕಾರರು ಬರೆದುದಲ್ಲ, ಬದಲಾಗಿ ಮಾನವ ಮತ್ತು ಮಾನವ ಇತಿಹಾಸ ನಿರ್ಮಿಸಿದ ಆ ಸೃಷ್ಟಿಕರ್ತನ ಹೇಳಿಕೆಗಳಾಗಿವೆಯೆಂದು ಧೈರ್ಯವಾಗಿ ಹೇಳಬಹುದು.

ಹಿಂದಿನ ದೈವಿಕ ಗ್ರಂಥಗಳು ತಿದ್ದುಪಡಿಗೊಳಗಾಗದೆ ಇರುತ್ತಿದ್ದರೆ, ಅಲ್ಲಾಹನ ವಾಣಿಯೆಂಬ ನೆಲೆಯಲ್ಲಿ ಸತ್ಯ ಸಂದೇಶ ಮತ್ತು ಚರಿತ್ರೆಯ ಅಧಿಕೃತ ದಾಖಲೆಗಳಾಗಿರು

ತ್ತಿದ್ದುವು. ಆದರೆ ಆ ಗ್ರಂಥಗಳನ್ನು ಅಂಗೀಕರಿಸುವವರೇ ಅದು ಯಹೂದಿಗಳಾಗಲಿ, ಕ್ರೈಸ್ತರಾಗಲಿ ಅವುಗಳಲ್ಲಿ ತಿದ್ದುಪಡಿ ಮತ್ತು ಸೇರ್ಪಡೆಗಳನ್ನು ಮಾಡಿರುವುದು ದುರಂತ. ಅವರು ತಮ್ಮ ಪ್ರವಾದಿಗಳ ಮತ್ತು ಸುಧಾರಕರ ಚಾರಿತ್ರ್ಯವನ್ನು ಸಂಶಯಾಸ್ಪದ ರೀತಿಯಲ್ಲಿ ಮಸುಕಾಗಿಸಿದರು ಮತ್ತು ಓರ್ವ ಸಾಮಾನ್ಯ ಸಭ್ಯ ಮನುಷ್ಯನೂ ನಂಬಲಸಾಧ್ಯವಿಲ್ಲದಷ್ಟು ಅವರ ವ್ಯಕ್ತಿತ್ವಗಳ ಮೇಲೆ ಭೀಕರ ಆರೋಪಗಳನ್ನು ಹೊರಿಸಿಬಿಟ್ಟರು. ಆ ಪಾವನ ವ್ಯಕ್ತಿಗಳ ಮೇಲಿನ ಅಪವಾದಗಳನ್ನು ಸ್ವಚ್ಛಗೊಳಿಸಿ ಅವರ ಘನತೆ-ಗೌರವಗಳನ್ನು ಕಾಪಾಡಿರುವುದು ಪವಿತ್ರ ಕುರ್‌ಆನ್ ಮಾಡಿರುವ ಎರಡನೆಯ ಮಹದುಪಕಾರವಾಗಿದೆ.

ಮಾನವ ಚರಿತ್ರೆಯ ದಾಖಲೆಗಳು ಇಂದಿನ ಮಾನವನಿಗೆ ಹಿಂದಿನ ಮಾನವರ ವೃತ್ತಾಂತಗಳು ತಿಳಿಸುತ್ತವೆ. ಇದು ಅದರ ಒಂದು ಸಾಮಾನ್ಯ ಪ್ರಯೋಜನವಾದರೆ, ಇಂದಿನ ಮಾನವನು ಹಿಂದಿನ ಮಾನವರ ಇತಿಹಾಸ ಮತ್ತು ಅನುಭವಗಳಿಂದ ಪಾಠ ಕಲಿಯುವುದು ಅದರ ವಿಶೇಷ ಪ್ರಯೋಜನವಾಗಿದೆ. ಕುರ್‌ಆನಿನ ಕತೆಗಳು ಪೂರ್ವ ಪ್ರವಾದಿಗಳ ನೈಜ ಜೀವನ ಚರಿತ್ರೆಯನ್ನು ವಿವರಿಸಿ ಮಾನವ ಇತಿಹಾಸಕ್ಕೆ ನೈಜ ಬುನಾದಿಯನ್ನು ಒದಗಿಸಿಕೊಟ್ಟಿದೆ. ಈ ಕತೆಗಳಲ್ಲಿ, ಮಾನವ ಇತಿಹಾಸದಲ್ಲಿ ಅಲ್ಲಾಹನಿಗೆ ವಿಧೇಯರಾಗಿ ಬಾಳಿದ ಜನಾಂಗಗಳು ಮಾನವ ಕುಲವನ್ನು ಯಾವ ರೀತಿ ಯಶಸ್ಸು ಮತ್ತು ಸೌಭಾಗ್ಯದ ಕಡೆಗೆ ಕೊಂಡೊಯ್ದರು ಮತ್ತು ಅವಿಧೇಯ ಜನಾಂಗಗಳು ಹೇಗೆ ತಮ್ಮ ದುರ್ಗತಿಯನ್ನು ಕಂಡರು ಎಂಬುದನ್ನು ತಿಳಿಯಬಹುದು. ಕುರ್‌ಆನಿನಲ್ಲಿ ವಿವರಿಸಲಾದ ಕತೆಗಳಲ್ಲಿ ಈ ಅಂಶವನ್ನು ಎತ್ತಿ ತೋರಿಸ ಲಾಗಿದೆ. ಇತಿಹಾಸವನ್ನು ಕಟ್ಟುಕತೆಗಳೆಂದು ಭಾವಿಸುವುದರ ಬದಲು ಪಾಠ ಬೋಧಕ ದಾಖಲೆಗಳೆಂದು ಭಾವಿಸಿದಾಗ ಮಾತ್ರ ಅದು ಪ್ರಯೋಜನಕಾರಿಯಾಗಬಲ್ಲುದು. ಅದಕ್ಕೆ ಕುರ್‌ಆನಿನ ಕತೆಗಳಿಗಿಂತ ಉತ್ತಮವಾದುದು ಬೇರೊಂದಿರಲಾರದು. ಮಾನವನ ಉತ್ಥಾನ-ಪತನಗಳ ನೈಜ ತತ್ವಜ್ಞಾನವನ್ನು(Philosophy) ಕುರ್‌ಆನಿನ ಕತೆಗಳಲ್ಲಿ ದರ್ಶಿಸ ಬಹುದು. ಅದಕ್ಕೆ ಪಾಠ ಕಲಿಯುವ ದೃಷ್ಟಿ ಬೇಕು.

ಕುರ್‌ಆನಿನ ಈ ಕತೆಗಳು ವಾಸ್ತವದಲ್ಲಿ ಆದಮ್(ಅ) ಅವರಿಂದ ಆರಂಭಗೊಂಡು ಪ್ರವಾದಿ ಮುಹಮ್ಮದ್(ಸ) ಅವರ ಮೂಲಕ ಪರಿಪೂರ್ಣಗೊಂಡ ಹಾಗೂ ಅವರ ನಂತರ ಅವರ ಸಮುದಾಯದ ಸಜ್ಜನರ ಮೂಲಕ ಅಂತ್ಯ ದಿನದ ವರೆಗೂ ಮುಂದುವರಿಯುವ ಇಸ್ಲಾಮಿನ ಸಾರ್ವಲೌಕಿಕ ಆಂದೋಲನದ ವಿವಿಧ ಅಧ್ಯಾಯಗಳಾಗಿವೆ. ಪ್ರವಾದಿ ಮುಹಮ್ಮದ್(ಸ) ಅವರಿಗಿಂತ ಹಿಂದಿನ ಈ ಆಂದೋಲನದ ಸ್ಫೂರ್ತಿದಾಯಕ ಮತ್ತು ಪಾಠ ಬೋಧಕ ವೃತ್ತಾಂತಗಳನ್ನು ಕುರ್‌ಆನಿನ ಕತೆಗಳಲ್ಲಿ ಓದಿರಿ. ಇಸ್ಲಾಮೀ ಆಂದೋಲನದ ಧ್ವಜವಾಹಕರು ಸಂದೇಶ ಪ್ರಚಾರ ಮತ್ತು ಸನ್ಮಾರ್ಗ ದರ್ಶನದ ಕಾರ್ಯ ಮಾಡುವವರು ಕುರ್‌ಆನಿನ ಕತೆಗಳ ಅಧ್ಯಯನದಿಂದ ಐತಿಹಾಸಿಕ ಸತ್ಯದ ಕಾರವಾನದ ಹೃದಯ

ತಲ್ಲಣಗೊಳಿಸುವ ಕಾರ್ಯ ವಿಧಾನದಿಂದ ಸ್ಫೂರ್ತಿ ಪಡೆಯಬಲ್ಲರು. ಮಾತ್ರವಲ್ಲ, ಅವರೆಲ್ಲ ಇತಿಹಾಸದ ವಿವಿಧ ಕಾಲ ಘಟ್ಟಗಳಲ್ಲಿ ಎಂತಹ ಸತ್ವಪರೀಕ್ಷೆಗಳು, ವಿರೋಧಗಳು ಮತ್ತು ಕಷ್ಟ ಕೋಟಲೆಗಳ ಬಿರುಗಾಳಿಗಳನ್ನು ಎದುರಿಸುತ್ತಾ ಮುಂದೆ ಸಾಗಿದರು ಹಾಗೂ ವಿವಿಧ ಪರಿಸ್ಥಿತಿಗಳಲ್ಲಿ ವಿವಿಧ ಹಂತಗಳಲ್ಲಿ ಧರ್ಮ ಸಂಸ್ಥಾಪನೆಗಾಗಿ ಈ ಆಂದೋಲನವು ಎಂತಹ ಧೋರಣೆಗಳನ್ನು ಅನುಸರಿಸಿತು. ಯಶಸ್ಸು ಯಾವ ಕಾರಣಗಳಿಂದ ಲಭಿಸಿತು, ಸೋಲಿಗೆ ಏನು ಕಾರಣವಾಯಿತು ಎಂಬಿತ್ಯಾದಿ ವಿಷಯಗಳನ್ನೂ ಅರಿತುಕೊಳ್ಳಬಹುದು.

ಒಟ್ಟಿನಲ್ಲಿ ಸತ್ಯ ಪ್ರಚಾರಕನು ಈ ಕತೆಗಳಲ್ಲಿ ತನ್ನದೇ ವೃತ್ತಾಂತವನ್ನು ಓದುವನು, ತನ್ನದೇ ಕೆಲಸದ ಮಿತಿ ಮೇರೆಗಳನ್ನು ಅರಿಯುವನು. ತನ್ನದೇ ಧ್ಯೇಯದ ಯಶಸ್ಸಿಗಾಗಿ ಅಗತ್ಯವಿರುವ ಮಾನದಂಡಗಳನ್ನು ಅರಿಯುವನು. ಆದ್ದರಿಂದ ಕುರ್‌ಆನಿನಲ್ಲಿ ಈ ಕತೆಗಳನ್ನು ಒಮ್ಮೆಲೇ ಅವತೀರ್ಣಗೊಳಿಸಲಾಗಿಲ್ಲ. ಆಂದೋಲನಕ್ಕೆ ಯಾವ ಘಟ್ಟದಲ್ಲಿ ಯಾವ ತರಬೇತಿ ಮತ್ತು ಉದಾಹರಣೆಯ ಅಗತ್ಯ ಬರುತ್ತಿತ್ತೋ ಅದಕ್ಕನುಸಾರ ಪೂರ್ವ ಪ್ರವಾದಿಗಳ ಘಟನೆಗಳಿಂದ ಸಂಬಂಧಿತ ಮತ್ತು ಸಕಾಲಿಕ ಅಂಶಗಳನ್ನು ಮಾತ್ರ ಅವತೀರ್ಣಗೊಳಿಸಲಾಗುತ್ತಿತ್ತು. ಇತರ ಕತೆಗಳಿಗೆ ಹೋಲಿಸಿದರೆ ಮೂಸಾ(ಅ) ಮತ್ತು ಫಿರ್‌ಔನ್‌ನ ಕತೆಯನ್ನು ಕುರ್‌ಆನಿನಲ್ಲಿ ಹೆಚ್ಚು ವಿಸ್ತಾರವಾಗಿ ವಿವರಿಸಲಾಗಿದೆ. ಸತ್ಯಸಂದೇಶ ಮತ್ತು ಅಧಿಕಾರದ ನಡುವಿನ ಸಂಘರ್ಷವು ಈ ಕತೆಯಲ್ಲಿ ಸಿಗುವಷ್ಟು ವಿವರವಾಗಿ ಬೇರಾವ ಕತೆಗಳಲ್ಲೂ ಸಿಗುವುದಿಲ್ಲ. ವಾಸ್ತವದಲ್ಲಿ, ಮಿಥ್ಯದ ಮಾನಸಿಕ ವಿಶ್ಲೇಷಣೆ ಮತ್ತು ಅದರ ಸರ್ವತ್ರ ಮೋಸ-ವಂಚನೆ ಹಾಗೂ ಅದಕ್ಕೆ ತದ್ವಿರುದ್ಧವಾಗಿ ಸತ್ಯದ ಧೈರ್ಯ-ಸ್ಥೈರ್ಯ, ಆತ್ಮವಿಶ್ವಾಸ ಮತ್ತು ದೂರದೃಷ್ಟಿಯ ಕುರಿತು ಈ ಕತೆಯಲ್ಲಿ ಎಷ್ಟು ಹೃದಯ ಸ್ಪರ್ಶಿಯಾಗಿ ಲಭಿಸುತ್ತದೋ ಅಷ್ಟು ವಿವರವಾಗಿ ಇತರ ಪ್ರವಾದಿಗಳ ಕತೆಗಳಲ್ಲಿ ಸಿಗುವುದಿಲ್ಲ. ಸತ್ಯ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡುವವನಿಗೆ ತನ್ನ ಹೋರಾಟಕ್ಕೆ ಕಾರ್ಯ ನೀತಿಯನ್ನು ರೂಪಿಸಲು ಬೇಕಾದ ಎಲ್ಲ ಮಾರ್ಗದರ್ಶನವನ್ನೂ ಈ ಕತೆಯಲ್ಲಿ ಲಭಿಸಬಹುದು.

'ಕಸಸುಲ್ ಅಂಬಿಯಾ' ಎಂಬ ಹೆಸರಲ್ಲಿ ಅನೇಕ ಮಂದಿ, ಪ್ರವಾದಿಗಳ ಕತೆಗಳನ್ನು ಕ್ರೋಢೀಕರಿಸಿದ್ದಾರೆ. ಆದರೆ ಅವೆಲ್ಲವೂ ಕೇವಲ ಘಟನೆಗಳಾಧಾರಿತವಾಗಿವೆ. ಅದರಲ್ಲಿ ಆಂದೋಲನದ ಅಂಶಗಳು ಕಾಣುವುದಿಲ್ಲ. ಅರಬಿ ಭಾಷೆಯಲ್ಲಿ ಈ ಕುರಿತು ರಚಿಸಲಾದ ಸಾಹಿತ್ಯಗಳಲ್ಲೂ ಐತಿಹಾಸಿಕ ಬಣ್ಣವೇ ಇದೆ. ಆಂದೋಲನದ ಬಣ್ಣದಿಂದ ಹೆಚ್ಚಾಗಿ ಬರಿದೇ ಆಗಿವೆ. ಉರ್ದು ಭಾಷೆಯಲ್ಲಿ ಸೈಯದ್ ಮೌದೂದಿ(ರ) ಅವರು ತಫ್ಹೀಮುಲ್ ಕುರ್‌ಆನಿನಲ್ಲಿ ಈ ಕತೆಗಳ ನೈಜ ಔಚಿತ್ಯವನ್ನು ಎತ್ತಿ ತೋರಿಸಿದ್ದಾರೆ. ಅದೇ ರೀತಿ ಅರಬಿ ಭಾಷೆಯಲ್ಲಿ ಈಜಿಪ್ಟ್‌ನ ವಿದ್ವಾಂಸ ಸೈಯದ್ ಕುತುಬ್ ಶಹೀದ್(ರ) ಅವರು ತಮ್ಮ 'ಫೀ ಝಿಲಾಲಿಲ್

ಕುರ್‌ಆನ್' ಎಂಬ ಸುಪ್ರಸಿದ್ಧ ವ್ಯಾಖ್ಯಾನದಲ್ಲಿ ಇದೇ ದೃಷ್ಟಿಕೋನದಿಂದ ಬೆಳಕು ಬೀರಿದ್ದಾರೆ. ಆದರೆ ಅವೆಲ್ಲ ವಿವಿಧ ಕಡೆಗಳಲ್ಲಿ ಹರಡಿಕೊಂಡಿವೆ. ಅವುಗಳನ್ನು ಕ್ರೋಢೀಕರಿಸುವ ಅಗತ್ಯವಿದೆ.

ಈ ಗ್ರಂಥವನ್ನು ಆಂದೋಲನದ ದೃಷ್ಟಿಕೋನದಿಂದ ರಚಿಸಲಾಗಿದೆ. ಮೂಸಾ(ಅ) ಅವರ ಜನನದಿಂದ ಹಿಡಿದು ಬನೀ ಇಸ್ರಾಈಲರ ವಿಮೋಚನೆಯ ತನಕದ ಎಲ್ಲ ಘಟನೆಗಳನ್ನು ಪವಿತ್ರ ಕುರ್‌ಆನಿನ ಸೂಕ್ತಗಳ ಪ್ರಕಾರ ಕ್ರೋಢೀಕರಿಸಲಾಗಿದೆ. ಇಡೀ ಕತೆಯು ಕುರ್‌ಆನಿನ ವಿವಿಧೆಡೆಗಳಲ್ಲಿ ಹರಡಿಕೊಂಡಿವೆ. ಅದಕ್ಕಾಗಿ ಇಡೀ ಕುರ್‌ಆನಿನ ಅಧ್ಯಯನ ಮಾಡಬೇಕಾದೀತು. ಆದರೆ ಈ ಗ್ರಂಥದಲ್ಲಿ ಆ ಎಲ್ಲ ಘಟನೆಗಳನ್ನು ಒಂದೆಡೆ ಪೋಣಿಸಿ, ಚರಿತ್ರೆಯ ಅನುಕ್ರಮದಂತೆ ಪೂರ್ಣ ಕತೆಯನ್ನು ಚಿತ್ರಿಸಲಾಗಿದೆ. ಇದನ್ನು ಓದುವಾಗ ಸತ್ಯ-ಅಸತ್ಯದ ಸಂಘರ್ಷವು, ಮೂಸಾ ಮತ್ತು ಫಿರ್‌ಔನನ ರೂಪದಲ್ಲಿ, ನಮ್ಮ ಕಣ್ಣ ಮುಂದೆಯೇ ನಡೆದ ಹಾಗೇ ಭಾಸವಾಗುತ್ತದೆ. ಇದರಲ್ಲಿ ಸಾವಿರಾರು ವರ್ಷಗಳ ಹಿಂದೆ ನಡೆದ ಒಂದು ಸಂಘರ್ಷದ ಚಿತ್ರ ಮಾತ್ರ ಇರುವುದಲ್ಲ, ಬದಲಾಗಿ ಎಲ್ಲ ಕಾಲಗಳ 'ಮೂಸಾರ(ಅ) ಆಂದೋಲನ ಮತ್ತು ಫಿರ್‌ಔನನ ಅಧಿಕಾರ'ದ ರೂಪದಲ್ಲಿ ಸತ್ಯ-ಮಿಥ್ಯದ ಸಂಘರ್ಷವನ್ನು ದರ್ಶಿಸಬಹುದಾಗಿದೆ. ಅದುವೇ ಈ ಗ್ರಂಥದ ಸೌಂದರ್ಯವಾಗಿದೆ. ಇದು ಎಲ್ಲ ಆಂದೋಲನ ಬಾಂಧವರ ಬಳಿ ಇರಬೇಕಾದ ಅಗತ್ಯವಿದೆ. ಆದಕ್ಕಾಗಿ ಗ್ರಂಥಕರ್ತರಾದ ಅಖ್ಲಾಕ್ ಹುಸೈನ್ ಅವರು ಅಭಿನಂದನಾರ್ಹರು.

ಡಾ. ಖಲೀಲ್ ಅಹ್ಮದ್ ಹಾಮಿದಿ,
ಲಾಹೋರ್, ಪಾಕಿಸ್ತಾನ

ಅನುಕ್ರಮಣಿಕೆ

اِذْهَبَآ اِلٰى فِرْعَوْنَ اِنَّهٗ طَغٰى ۝٤٣

فَقُوْلَا لَهٗ قَوْلًا لَّيِّنًا لَّعَلَّهٗ يَتَذَكَّرُ اَوْ يَخْشٰى ۝٤٤

"ನೀವಿಬ್ಬರೂ ಫಿರ್‌ಔನನ ಬಳಿಗೆ ಹೋಗಿರಿ. ಅವನು ವಿದ್ರೋಹಿಯಾಗಿ ಬಿಟ್ಟಿದ್ದಾನೆ. ಅವನೊಡನೆ ನಯವಾಗಿ ಮಾತನಾಡಿರಿ. ಅವನು ಉಪದೇಶ ಸ್ವೀಕರಿಸಬಹುದು ಅಥವಾ ಭಯಪಡಬಹುದು."

(ಪವಿತ್ರ ಕುರ್‌ಆನ್, 20:43-44)

ಚರಿತ್ರೆಯ ಮುಖ್ಯ ಉದ್ದೇಶ

ಪವಿತ್ರ ಕುರ್‌ಆನಿನಲ್ಲಿ ಫಿರ್‌ಔನ್ ಮತ್ತು ಮೂಸಾರ(ಅ) ಚರಿತ್ರೆಯನ್ನು ಪದೇ ಪದೇ ವಿವಿಧ ಶೈಲಿಯಲ್ಲಿ ಪ್ರಸ್ತಾಪಿಸಲಾಗಿದೆ. ಮೂಸಾರ(ಅ) ಬಗ್ಗೆ ವಿವರಿಸಿರುವಷ್ಟು ಬೇರಾವ ಪೂರ್ವ ಪ್ರವಾದಿಯ ಚರಿತ್ರೆಯನ್ನೂ ವಿಸ್ತಾರವಾಗಿ ವಿವರಿಸಲಾಗಿಲ್ಲ, ಅದಕ್ಕೆ ಅನೇಕ ಕಾರಣಗಳಿದ್ದು, ಕೆಲವನ್ನು ಇಲ್ಲಿ ನೀಡಲಾಗುತ್ತದೆ.

1. ಪ್ರವಾದಿ ಮುಹಮ್ಮದ್‌ರಿಗಿಂತ(ಸ) ಮುಂಚೆ ಧರ್ಮಶಾಸ್ತ್ರಗಳನ್ನು ತಂದವರಲ್ಲಿ ಪ್ರವಾದಿ ಮೂಸಾ(ಅ) ಕೊನೆಯವರಾಗಿದ್ದರು. ದೇವವತಿಯಿಂದ ಮಾನವ ಸಮುದಾಯಕ್ಕೆ ನೀಡಲಾಗಿದ್ದ ತೌರಾತ್ ಕೊನೆಯ ಜೀವನ ಸಂಹಿತೆಯಾಗಿತ್ತು. ಹಿಂದಿನ ಸಮುದಾಯ ಗಳಿಗೆ ಅದನ್ನು ಅನುಸರಿಸಿ ಜೀವಿಸುವಂತೆ ಆದೇಶಿಸಲಾಗಿತ್ತು.

2. ಪ್ರವಾದಿ ಮುಹಮ್ಮದ್‌ರ(ಸ) ಕಾಲವು ಮೂಸಾರ ಪರಿಸ್ಥಿತಿಗನುಗುಣವಾಗಿರುವಷ್ಟು ಬೇರಾವ ಪ್ರವಾದಿಯ ಕಾಲವೂ ಇರಲಿಲ್ಲ, ಆರಂಭದಲ್ಲಿ ಸಂದೇಶದ ಅಪರಿಚಿತತೆ, ಪ್ರತಿಕೂಲ ಪರಿಸ್ಥಿತಿ, ವಿರೋಧದಲ್ಲಿ ಏಕರೂಪತೆ, ವಿರೋಧಿಗಳು ಮತ್ತು ವೈರಿಗಳ ಸಮಾನ ಕುತಂತ್ರಗಳು, ಸ್ವಾರ್ಥಿಗಳ (Vested Interests) ಪ್ರತಿರೋಧ, ಕ್ರುದ್ಧ ನಾಯಕತ್ವದ ದೌರ್ಜನ್ಯ, ಹಠಮಾರಿಗಳ ದ್ವೇಷ, ಶಕ್ತಿಶಾಲಿ ಮತ್ತು ದರ್ಪದ ಆಡಳಿತಾರೂಢರೊಂದಿಗೆ ಸಂಘರ್ಷ, ವಲಸೆ ಮತ್ತು ಕೊನೆಯಲ್ಲಿ ವಿಜಯ- ಈ ಎಲ್ಲ ಹಂತಗಳು ಎಷ್ಟು ಸಾಮ್ಯತೆ ಹೊಂದಿದ್ದುವೆಂದರೆ, ಮೂಸಾ ಮತ್ತು ಫಿರ್‌ಔನ್‌ರ ಸಂಘರ್ಷದ ಘಟನೆಗಳನ್ನು ಕೇಳುತ್ತಲೇ ಮಕ್ಕಾದ ಪರಿಸ್ಥಿತಿಯು ಕಣ್ಣ ಮುಂದೆ ಸುಳಿದಾಡ ತೊಡಗುತ್ತದೆ. ಅದೇ ಕತೆಯನ್ನು ಪುನರಾವರ್ತಿಸಲಾಗಿದೆಯೋ ಎಂದು ಸುಲಭದಲ್ಲಿ ಗ್ರಹಿಸಬಹುದು.

3. ಪ್ರವಾದಿಯವರ(ಸ) ಕಾಲವು ಮೂಸಾರ ಕಾಲಕ್ಕೆ ಬಹಳ ನಿಕಟವಾಗಿದ್ದು, ಆ ಕಾಲದ ವೃತ್ತಾಂತಗಳು ಜನಮನದಲ್ಲಿ ಜಾಗೃತವಾಗಿತ್ತು. ಅವುಗಳಿಗೆ ಸಾಕ್ಷಿಯಾಗಿದ್ದ ಒಂದು ಸಮುದಾಯವೇ ಅಲ್ಲಿ ಜೀವಿಸುತ್ತಿತ್ತು.

4. ಫಿರ್‌ಔನ್ ಮತ್ತು ಮೂಸಾ ಕೇವಲ ಇಬ್ಬರು ವ್ಯಕ್ತಿಗಳಲ್ಲ, ಅವರು ಇತಿಹಾಸದಲ್ಲಿ ಪದೇ ಪದೇ ಮೂಡಿ ತಮ್ಮ ಆಳವಾದ ಛಾಪನ್ನು ಬಿಡುತ್ತಾ ಮರೆಯಾದ ಇತಿಹಾಸದ ಎರಡು ಸಂಕೇತ(Symbols)ಗಳಾಗಿದ್ದಾರೆ.

ಒಂದೆಡೆ ಫಿರ್‌ಔನನು ಅಕ್ರಮ, ದೌರ್ಜನ್ಯ, ದಬ್ಬಾಳಿಕೆ, ಹಠಮಾರಿತನ, ಅಧಿಕಾರ ಮದದ ಪೂರ್ಣ ಪ್ರದರ್ಶಕನಾದಾಗ, ಅತ್ತ ಮೂಸಾ(ಅ) ಪ್ರವಾದಿತ್ವದ ದೂರದೃಷ್ಟಿ, ಧೈರ್ಯ-ಸ್ಥೈರ್ಯ, ದುರ್ಬಲರ ವಿಮೋಚಕ, ಸತ್ಯದ ವಾಹಕ, ಪ್ರತಿಕೂಲ ಪರಿಸ್ಥಿತಿ ಮತ್ತು ಸಂಪನ್ಮೂಲಗಳ ನಾಸ್ತಿಯ ಹೊರತಾಗಿಯೂ ಸತ್ಯವನ್ನು ವಿಜಯದೆಡೆಗೆ ಸಾಗಿಸುವ ಒಂದು ಪರಿಪೂರ್ಣ ಮಾದರಿಯ ರೂಪದಲ್ಲಿ ಗೋಚರಿಸುತ್ತಾರೆ. ಆದ್ದರಿಂದ ಎಲ್ಲಾದರೂ ಎಂದಾದರೂ ಮಿಥ್ಯವು ಸತ್ಯದೊಂದಿಗೆ ಸಂಘರ್ಷಕ್ಕಿಳಿದಾಗ, ಅಕ್ರಮಿ ಆಡಳಿತಗಾರರು ಮತ್ತು ಮರ್ದಿತ ಜನಸಾಮಾನ್ಯರ ನಡುವೆ ತಿಕ್ಕಾಟವುಂಟಾದಾಗ, ದುರಾಡಳಿತ ಮತ್ತು ನಿರಾಯುಧ ದುರ್ಬಲ-ಅಸಹಾಯಕ ಜನತೆಯ ನಡುವೆ ಹೋರಾಟ ನಡೆದಾಗ, ಫಿರ್‌ಔನ್ ಮತ್ತು ಮೂಸಾರ ಚರಿತ್ರೆ ಮರುಕಳಿಸುತ್ತಿದೆಯೆಂದೇ ಜನರು ಭಾವಿಸಿದರು. ಮೂಸಾರ ಧೈರ್ಯ, ಸ್ಥೈರ್ಯ ಮತ್ತು ಸಹನೆ ಸತ್ಯದ ವಾಹಕರಿಗೆ ದಾರಿದೀಪವಾಗಿ ಗೋಚರಿಸಿತು. ಫಿರ್‌ಔನನ ಅಪಮಾನಕಾರಿ ದುರ್ಗತಿಯಿಂದ ಸತ್ಯವು ಗೆಲ್ಲಲೇ ಬೇಕು, ಮಿಥ್ಯವು ಸೋಲಲೇಬೇಕು ಎಂಬ ನಂಬಿಕೆಗೆ ಇನ್ನಷ್ಟು ಬಲ ದೊರೆಯಿತು.

5. ಈ ಸಂಘರ್ಷದ ಕತೆಯನ್ನು ಮಕ್ಕಾದ ಸತ್ಯವಿಶ್ವಾಸಿಗಳ ಮುಂದೆ ಇಡಲಾದಾಗ ಅವರಲ್ಲಿ ಒಂದು ಹೊಸ ಈಮಾನ್, ಹೊಸ ಚೈತನ್ಯ ಮತ್ತು ಹೊಸ ಸ್ಫೂರ್ತಿಯುಂಟಾಯಿತು. ಕುರೈಶರ ಯಾವುದೇ ಅಕ್ರಮ-ದಬ್ಬಾಳಿಕೆಗಳು ಅವರಲ್ಲಿ ಒಂದು ಕ್ಷಣದ ಮಟ್ಟಿಗಾದರೂ ನಿರಾಶೆಯನ್ನುಂಟು ಮಾಡಲಿಲ್ಲ, ಅಕ್ರಮವು ಹೆಚ್ಚುತ್ತಲೇ ಹೋದಂತೆ ಇದಕ್ಕೆ ಒಂದು ದಿನ ಅಂತ್ಯವಿದ್ದೇ ಇದೆ ಎಂಬ ದೃಢ ನಂಬಿಕೆಯು ಅವರಲ್ಲಿ ಹೆಚ್ಚುತ್ತಲೇ ಹೋಯಿತು. ಅದನ್ನು ಬದ್ರ್, ಅಹ್‌ಝಾಬ್, ಮಕ್ಕಾ ಮತ್ತು ಹುನೈನ್‌ಗಳಲ್ಲಿ ಸಾಕ್ಷಾತ್ಕಾರಗೊಂಡದ್ದನ್ನು ಲೋಕ ಕಂಡಿತು.

ಆದ್ದರಿಂದಲೇ ಅಲ್ಲಾಹನು ಮೂಸಾರ ವೃತ್ತಾಂತವನ್ನು ಅಲ್‌ಬಕರಃ, ಅಲ್ ಅಅ್‌ರಾಫ್, ಯೂನುಸ್, ಹೂದ್, ತಾಹಾ, ಅಶ್ಶುಅರಾ, ಅನ್ನಮ್ಲ್, ಅಲ್ ಕಸಸ್, ಅಲ್ ಮೂಮಿನ್ ಮತ್ತು ಅದ್ದಾರಿಯಾತ್ ಮೊದಲಾದ ಅಧ್ಯಾಯಗಳಲ್ಲಿ ಪದೇ ಪದೇ ಪ್ರಸ್ತಾಪಿಸಿದನು. ವಿಶ್ವಾಸಿಗಳು ಪ್ರತಿಕೂಲ ಪರಿಸ್ಥಿತಿಯಿಂದಾಗಿ ಹತಾಶರಾಗಿ ಧೈರ್ಯಗುಂದ ಬಾರದೆಂಬುದೇ ಅದರ ಉದ್ದೇಶವಾಗಿತ್ತು.

ಇಂದು ದೇವನ ಭೂಮಿಯಲ್ಲಿ ಅಕ್ರಮ, ದಬ್ಬಾಳಿಕೆ ಮತ್ತು ಮಿಥ್ಯಗಳು ತಾಂಡವವಾಡುತ್ತಿದ್ದು ವಿಶ್ವಾಸಿಗಳನ್ನು ನಾಲ್ದೆಸೆಗಳಿಂದಲೂ ಸಂಕಷ್ಟಗಳು ಆವರಿಸಿರುವಾಗ ಅವರ ಆತ್ಮಸ್ಥೈರ್ಯ ಕುಂದಬಾರದು, ಅವರು ಪರಿಸ್ಥಿತಿಯಿಂದ ಹತಾಶರಾಗಿ ಮಂಡಿಯೂರಬಾರದು ಎಂಬ ಉದ್ದೇಶದಿಂದ ಫಿರ್‌ಔನ್ ಮತ್ತು ಮೂಸಾರ ಸಂಘರ್ಷದ ಚರಿತ್ರೆಯನ್ನು ಪದೇ ಪದೇ ಪುನರಾವರ್ತಿಸುವುದು ಅಗತ್ಯವಾಗಿತ್ತು.

ವಿಶ್ವಾಸಿಗಳಿಗೆ ಶುಭವಾರ್ತೆ

ಫಿರ್‌ಔನ್ ಮತ್ತು ಮೂಸಾರ ಚರಿತ್ರೆಯನ್ನು ಪ್ರಸ್ತಾಪಿಸಿರುವುದರ ಉದ್ದೇಶ ಮತ್ತು ಮಹತ್ವವನ್ನು ಕುರ್‌ಆನ್ ಈ ರೀತಿ ಹೇಳಿದೆ,

"ತಾ ಸೀ ಮ್ಮೀಮ್. ಇವು ಸುವ್ಯಕ್ತ ಗ್ರಂಥದ ಸೂಕ್ತಗಳು. ನಾವು ನಿಮಗೆ ಮೂಸಾ ಮತ್ತು ಫಿರ್‌ಔನರ ಕೆಲವು ವೃತ್ತಾಂತಗಳನ್ನು ನಿಖರವಾಗಿ ತಿಳಿಸುತ್ತೇವೆ- ಸತ್ಯವಿಶ್ವಾಸ ಸ್ವೀಕರಿಸುವವರ ಪ್ರಯೋಜನಕ್ಕಾಗಿ." (ಪವಿತ್ರ ಕುರ್‌ಆನ್, 28:1-3)

ಅಂದರೆ ಜನರಿಗೆ ಕತೆ ಕೇಳಿಸುವುದೋ ಅವರು ತಲೆಯಲ್ಲಾಡಿಸುವಂತೆ ಮಾಡುವುದೋ ಅವರಲ್ಲಿ ಇತಿಹಾಸದ ಜ್ಞಾನ ಹೆಚ್ಚುವಂತೆ ಮಾಡುವುದೋ ಈ ಕತೆಯನ್ನು ವಿವರಿಸಿರುವುದರ ಉದ್ದೇಶವಲ್ಲ, ಬದಲಾಗಿ ಈ ಘಟನೆಗಳ ಮಹತ್ವವೇನೆಂದರೆ ಇದು ಅಲ್ಲಾಹನ ಗ್ರಂಥದ ಒಂದು ಭಾಗವಾಗಿದೆ. ಇದನ್ನು ಅಲ್ಲಾಹನ ದೃಷ್ಟಾಂತಗಳೆಂಬ ನೆಲೆಯಲ್ಲಿ ವಿವರಿಸಲಾಗುತ್ತಿದೆ. ವಿಶ್ವಾಸಿಗಳಿಗೆ ಇದರಿಂದ ಪ್ರಯೋಜನವಾಗಬೇಕೆಂಬುದೇ ಇದರ ಉದ್ದೇಶವಾಗಿದೆ.

ಇಲ್ಲಿ 'ವಿಶ್ವಾಸಿಗಳು' ಎಂಬ ಪದ ಗಮನಾರ್ಹವಾಗಿದೆ. ಇದರಲ್ಲಿ ಎರಡು ಮುಖಗಳಿವೆ. ಒಂದನೆಯದಾಗಿ, ಅಲ್ಲಾಹ್ ಮತ್ತು ಗ್ರಂಥದ ಮೇಲೆ ವಿಶ್ವಾಸವಿರಿಸದವರಿಗೆ ಈ ಘಟನೆಗಳಿಂದ ಏನೂ ದೊರೆಯದು. ಅವರು ಸಹನೆ-ಸ್ಥೈರ್ಯದ ಪಾಠ ಕಲಿಯಲಾರರು. ಅದರಿಂದ ಆಧ್ಯಾತ್ಮಿಕ, ನೈತಿಕ ಪ್ರಯೋಜನ ಸಿಗುವುದಾದರೆ ಅದು ಗ್ರಂಥ ಮತ್ತು ಗ್ರಂಥವನ್ನು ಇಳಿಸಿದವನ ಮೇಲೆ ವಿಶ್ವಾಸವಿರಿಸುವವರಿಗೆ ಮಾತ್ರ.

ಅದರ ಇನ್ನೊಂದು ಮುಖವನ್ನು ಗ್ರಹಿಸಬೇಕಾದರೆ ಈ ಸೂಕ್ತಗಳು ಅವತೀರ್ಣಗೊಂಡ ಹಿನ್ನೆಲೆಯನ್ನು ನೋಡಬೇಕಾಗಿದೆ ಮತ್ತು ಅಂತಹ ವಿಶ್ವಾಸಿಗಳು ಸಿಲುಕಿದ್ದಂತಹ ಪರಿಸ್ಥಿತಿಯನ್ನು ಅರಿಯಲು ಪ್ರಯತ್ನಿಸಬೇಕಾಗಿದೆ.

ಅಂದು ಸತ್ಯ ಮತ್ತು ಮಿಥ್ಯದ ವಾಹಕರ ನಡುವೆ ತೀವ್ರ ಸಂಘರ್ಷವಿತ್ತು. ಬಾಹ್ಯ ನೋಟಕ್ಕೆ ಪರಿಸ್ಥಿತಿಯು ವಿಶ್ವಾಸಿಗಳ ಮಟ್ಟಿಗೆ ಪೂರ್ಣ ಪ್ರತಿಕೂಲವಾಗಿತ್ತು. ಸತ್ಯನಿಷೇಧಿಗಳು ಜನಬಲದಲ್ಲೂ ಆರ್ಥಿಕವಾಗಿಯೂ ಸಂಪನ್ನರಾಗಿದ್ದರು. ಭೌತಿಕವಾಗಿ ವಿಶ್ವಾಸಿಗಳು ಯಾವ ಲೆಕ್ಕಕ್ಕೂ ಇರಲಿಲ್ಲ, ಮುಸ್ಲಿಮರು ಎಲ್ಲೆಡೆ ಪೀಡಿಸಲ್ಪಡುತ್ತಿದ್ದರು, ಮರ್ದಿಸಲ್ಪಡುತ್ತಿದ್ದರು. ಅವರ ವಿಶ್ವಾಸ ಘೋಷಣೆಯೇ ಅವರ ಮೇಲೆ ಎಲ್ಲ ರೀತಿಯ ಆಕ್ರಮಣಕ್ಕೆ ಪರವಾನಿಗೆಯಾಗಿತ್ತು. ಅವರು ಎಲ್ಲೆಡೆ ಮರ್ದಿತರೂ, ಅಸಹಾಯಕರೂ ಆಗಿದ್ದರು. ಆದರೆ ಇಸ್ಲಾಮಿನ ವೈರಿಗಳು ಈ ಎಲ್ಲ ದೌರ್ಜನ್ಯಗಳನ್ನೆಸಗಿಯೂ ಎದೆ ಸೆಟೆದು ಮೆರೆದಾಡುತ್ತಿದ್ದರು. ಬಾಹ್ಯ ನೋಟಕ್ಕೆ ಈ ಹೊಸ ಆಂದೋಲನವು ಕೆಲವೇ ದಿನಗಳ ಅತಿಥಿಯಾಗಿದ್ದು ವಿರೋಧಿಗಳ ಹೊಡೆತವನ್ನು ತಾಳಲಾರದೆ ಸತ್ತು ಹೋಗುವುದರಲ್ಲಿತ್ತು. ವಿಶ್ವಾಸಿಗಳು ವಿಜಯ ಸಾಧಿಸುವ ಪ್ರಶ್ನೆಯೇ

ಇರಲಿಲ್ಲ, ಅವರು ಉಳಿದು ಬಿಟ್ಟರೆ ಅದೇ ಒಂದು ಪವಾಡವಾಗಿತ್ತು. ಈಗ ಮುಸ್ಲಿಮರ ಕೊನೆಯ ದಿನ ಬಂದೇ ಬಿಟ್ಟಿದೆಯೆಂದು ಬಾಹ್ಯದೃಷ್ಟಿಗಳು ನೋಡುತ್ತಿದ್ದವು. ಸ್ವತಃ ಮುಸ್ಲಿಮರ ದೃಷ್ಟಿಯಲ್ಲೂ ಲೋಕವು ಅಂಧಕಾರಮಯವಾಗಿತ್ತು. ಯಾವುದೇ ಆಶ್ರಯ ಕಾಣುತ್ತಿರಲಿಲ್ಲ, ನಾಲ್ದೆಸೆಯಲ್ಲೂ ನಿರಾಶೆ ಮತ್ತು ಸೋಲು. ಬೆಂಕಿಯ ಹಾಸಿಗೆ, ಕೊರಳಿಗೆ ಉರುಳು, ಕುದಿಯುತ್ತಿರುವ ಮರಳು, ಮೈಮೇಲೆ ಕಲ್ಲಿನ ಭಾರ ಇತ್ಯಾದಿ ಅವರ ನಿತ್ಯದ ಗೋಳಾಗಿತ್ತು. ಅವರ ಅಸಹಾಯಕತೆಗೆ ರೋದಿಸುವವರಾಗಿ, ನಿಟ್ಟುಸಿರು ಬಿಡುವವರಾಗಿ ಯಾರೂ ಇರಲಿಲ್ಲ, ಪ್ರತಿಯೊಂದು ಬೀದಿ ಕೇರಿಗಳಲ್ಲಿ ಅವರಿಗೆ ಬೈಗುಳ, ಲೇವಡಿ ಮತ್ತು ತಮಾಷೆಗಳ ಸುರಿಮಳೆ!

ಇಂತಹ ನಿರಾಶಾಜನಕ ಪರಿಸ್ಥಿತಿಯಲ್ಲಿ ಅಲ್ಲಾಹನ ಕಡೆಯಿಂದ ಈ ಎಲ್ಲ ಅಕ್ರಮಿಗಳಿಗೆ, ವಿರೋಧಿಗಳಿಗೆ ಫಿರ್‌ಔನನ ದುರ್ಗತಿ ಬರಲಿದೆ ಮತ್ತು ಮರ್ದಿತ ವಿಶ್ವಾಸಿಗಳು ಮೂಸಾರಂತೆ ವಿಜಯಿಗಳಾಗುವರೆಂಬ ಶುಭವಾರ್ತೆ ಲಭಿಸುತ್ತದೆ. ಈ ಮಹಾನ್ ಶುಭ ವಾರ್ತೆಯಿಂದ ಈಮಾನ್ ತುಂಬಿರುವವರು ಮಾತ್ರ ಸಮಾಧಾನಗೊಳ್ಳಬಹುದಾಗಿತ್ತು. ಈ ನಂಬಿಕೆಯಿಂದ ಬರಿದಾದವರಿಗೆ ಇದು ಶುಭವಾರ್ತೆಯಾಗುವುದಾದರೂ ಹೇಗೆ? ಅವರ ದೃಷ್ಟಿಯಲ್ಲಿ ಯಾರ ಬಳಿ ಅಧಿಕಾರವಿದೆಯೋ ಅದು ಶಾಶ್ವತವಾಗಿದೆ. ದುರ್ಬಲರು ಮತ್ತು ಅಧಿಕಾರ ವಿಹೀನರಿಗೆ ಅಪಮಾನವೂ ಶಾಶ್ವತವಾಗಿದೆ. ಅವರು ಫಿರ್‌ಔನನ ಸ್ವಭಾವದವರನ್ನು ಪದೇಪದೇ ಮುಳುಗುತ್ತಿರುವುದನ್ನು ಕಂಡಿದ್ದರೂ ಪ್ರತಿಯೊಬ್ಬ ಫಿರ್‌ಔನನ ಬಗ್ಗೆಯೂ ಅವನು ಶಾಶ್ವತ ಅಧಿಕಾರದ ಗುತ್ತಿಗೆದಾರನೆಂದೇ ಭಾವಿಸಿದರು.

❖ ❖ ❖

ಮೂಸಾ(ಅ): ಜನನ ಮತ್ತು ಅಂದಿನ ಸ್ಥಿತಿಗತಿಗಳು

ಮೂಸಾ(ಅ) ಯಾವ ಕಾಲದಲ್ಲಿ ಜನಿಸಿದರೋ ಅಂದಿನ ಪರಿಸ್ಥಿತಿಯನ್ನು ಕುರ್‌ಆನ್ ಈ ರೀತಿ ವಿವರಿಸಿದೆ-

"ಫಿರ್‌ಔನನು ಭೂಮಿಯಲ್ಲಿ ಬಂಡಾಯವೆದ್ದನು ಮತ್ತು ಅದರ ನಿವಾಸಿಗಳನ್ನು ಪಂಗಡಗಳಾಗಿ ವಿಂಗಡಿಸಿಬಿಟ್ಟನು. ಆ ಪೈಕಿ ಒಂದು ಪಂಗಡವನ್ನು ಅವನು ಅವಮಾನಿಸುತ್ತಿದ್ದನು. ಅವರ ಗಂಡು ಮಕ್ಕಳನ್ನು ವಧಿಸುತ್ತಿದ್ದನು ಮತ್ತು ಹೆಣ್ಣು ಮಕ್ಕಳನ್ನು ಬದುಕಿರಲು ಬಿಡುತ್ತಿದ್ದನು. ನಿಜಕ್ಕೂ ಅವನು ದಂಗೆಕೋರರಲ್ಲಾಗಿದ್ದನು." (ಪವಿತ್ರ ಕುರ್‌ಆನ್, 28:4)

ಪವಿತ್ರ ಕುರ್‌ಆನಿನ ಅಲ್ ಕಸಸ್ ಅಧ್ಯಾಯದ ಪ್ರಸ್ತುತ ಸೂಕ್ತದಿಂದ ಮೂಸಾ(ಅ) ಅವರ ಜನನದ ಘಟನೆಯ ಪ್ರಸ್ತಾಪ ಆರಂಭಗೊಳ್ಳುತ್ತದೆ. ಎಂತಹ ಭಯಾನಕ ವಾತಾವರಣದಲ್ಲಿ ಅವರು ಹುಟ್ಟಿದರು. ತರುವಾಯ ವೈರಿಗಳ ಆಶ್ರಯದಲ್ಲೇ ಅವರು ಹೇಗೆ ಬೆಳೆದರು ಮತ್ತು ಫಿರ್‌ಔನೀಯರ ರಾಜ ವೈಭವವನ್ನು ಹೇಗೆ ಮಣ್ಣು ಮುಕ್ಕಿಸಿದರು ಎಂಬುದನ್ನು ವಿವರವಾಗಿ ಪ್ರಸ್ತಾಪಿಸಲಾಗಿದೆ.

ಆಗ ಫಿರ್‌ಔನ್ ಎಂಬ ಕಿಬ್ತಿ ವಂಶಜನು ಈಜಿಪ್ಟನ್ನು ಆಳುತ್ತಿದ್ದ. ಆತ ಸರ್ವಾಧಿಕಾರಿಯಾಗಿ ಮೆರೆಯುತ್ತಿದ್ದ. ಒಂದೆಡೆ 'ಒಡೆದು ಆಳುವ' ನೀತಿಯು ಅವನ ಸರಕಾರದ್ದಾಗಿತ್ತು. ಜನಾಂಗ ದ್ವೇಷವನ್ನು ಕಟ್ಟಿ ಬೆಳೆಸಿ, ಇಂದು ದಕ್ಷಿಣ ಆಫ್ರಿಕದ ಬಿಳಿಯರ ಸರಕಾರವು ಅಲ್ಲಿನ ಕರಿಯರೊಂದಿಗೆ ಅಥವಾ ಭಾರತದ ಬ್ರಾಹ್ಮಣರು ಇಲ್ಲಿನ ಅಸ್ಪೃಶ್ಯರೊಂದಿಗೆ ಮತ್ತು ಮುಸ್ಲಿಮರೊಂದಿಗೆ ವರ್ತಿಸುವಂತೆ, ಬನೀ ಇಸ್ರಾಈಲ್ ಜನಾಂಗದವರೊಂದಿಗೆ ಅವನು ವರ್ತಿಸುತ್ತಿದ್ದನು. ಬಹುಶಃ ಇಂದಿನ ಆಡಳಿತ ವರ್ಗದ ನೀತಿ ಅದೇ ಫಿರ್‌ಔನೀಯರ ಕಹಿ ಪಳೆಯುಳಿಕೆಯಾಗಿರಬಹುದು. ಕಿಬ್ತಿ ಜನಾಂಗದವರು ಆಡಳಿತ ವರ್ಗದವರಾಗಿದ್ದರೆ, ಬನೀ ಇಸ್ರಾಈಲರು ಗುಲಾಮರೂ ಕೂಲಿಯಾಳುಗಳೂ ನಿರಾಶ್ರಿತರೂ ಆಗಿದ್ದರು. ಅವರನ್ನು ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ದಮನಿಸಿದ ಬಳಿಕ ಫಿರ್‌ಔನನಿಗೆ ಸಮಾಧಾನವಾಗಲಿಲ್ಲ. ಈ ಗುಲಾಮರು ಮತ್ತು ಅವರ ಸಂತತಿಯು ಏರುತ್ತಲೇ ಹೋದರೆ ಒಂದು

ದಿನ ಅವರು ಈ ದೇಶದಲ್ಲಿ ಪ್ರಾಬಲ್ಯ ಪಡೆಯದಿರಲಾರರೆಂಬ ಚಿಂತೆಯಲ್ಲಿ ಅವನು ನಿದ್ದೆಗೆಡುತ್ತಿದ್ದ. ಈ ಭೀತಿಯಿಂದ ಮುಕ್ತಿ ಪಡೆಯಲು ಆತ ಆಂಶಿಕ ಜನಾಂಗ ಹತ್ಯೆಯ ಮಾರ್ಗ ಹಿಡಿದ. ಆದರೆ ಆ ಕಾಲದ ಜನರು ಇಂದಿನವರಂತೆ ಬುದ್ಧಿ ಬಲಿತವರಾಗಿರಲಿಲ್ಲ. ಅನ್ಯಥಾ ಆರ್ಥಿಕ ಯೋಜನೆ, ಸಂಪನ್ನ ಕುಟುಂಬ, ಸಂತಾನ ನಿಯಂತ್ರಣ, ಕೃತಕ ಆಹಾರ ಕೊರತೆಯ ಸುಂದರ ಕಾರ್ಯಕ್ರಮ ನಡೆಸಿ ಈ ಬೇಡದ ಸಂತತಿಯಿಂದ ಮುಕ್ತಿ ಪಡೆಯುತ್ತಿದ್ದ. ಆತ ಆ 'ಕೊರಳೊಡ್ಡುವ' ಜನಾಂಗವನ್ನು ಸ್ವಯಂಪ್ರೇರಿತ ಆತ್ಮಹತ್ಯೆಗೆ ದೂಡುವಷ್ಟು ತಂತ್ರಜ್ಞ (Diplomat) ಕೂಡಾ ಆಗಿರಲಿಲ್ಲ. ಅಹಂಕಾರದಿಂದಾಗಿ ಆತ ತನ್ನ ಅಧಿಕಾರವು ಸುಭದ್ರವಾಗಿದೆಯೆಂದು ಭಾವಿಸಿದ್ದ. ಆದ್ದರಿಂದ ಈ ಹಾಲಾಹಲವನ್ನು ಅಮೃತವೆನ್ನುವಷ್ಟು ಸಂಕೋಚವನ್ನೂ ಮಾಡಲಿಲ್ಲ. ಬದಲಾಗಿ 'ಗಂಡು ಮಕ್ಕಳನ್ನೆಲ್ಲ ಕೊಲ್ಲಿ', ಹೆಣ್ಣು ಮಕ್ಕಳನ್ನು ಬದುಕಲು ಬಿಡಿ' ಎಂದು ಸ್ಪಷ್ಟವಾಗಿ ಸಾರಿ ಬಿಟ್ಟ. ಪುರುಷರಿಲ್ಲದಿದ್ದರೆ ಸಂತಾನ ಬೆಳೆಯಲಾರದಷ್ಟೆ.

ಗಂಡು ಮಕ್ಕಳ ಹರಣದಿಂದ ಹೆಣ್ಣು ಸಂತಾನ ಉಳಿಯುವುದು. ಕಿಬ್ತಿ ಆಡಂಬರ ಪ್ರಿಯರಿಗೆ ದಾಸಿಯರೂ ಸೇವಕಿಯರೂ ಸಿಗುವರು. ಕಿಬ್ತಿಗಳಿಂದ ಅವರಿಗೆ ಹುಟ್ಟುವ ಸಂತಾನವು ಕಿಬ್ತಿಗಳಾಗಿಯೇ ಇರುವರು. ಈ ಯೋಜನೆಯನ್ನು ಕಾರ್ಯಗತಗೊಳಿಸಲಿಕ್ಕಾಗಿ 'ಹೆಣ್ಣು ಭ್ರೂಣ ಪತ್ತೆ' ಹಚ್ಚುವ ಕ್ಲಿನಿಕ್‌ಗಳನ್ನು ತೆರೆಯಲಾಗಿತ್ತೋ ಗೊತ್ತಿಲ್ಲ. ಆದರೆ ಬೈಬಲ್‌ನಿಂದ ಇಷ್ಟು ಮಾತ್ರ ತಿಳಿಯುತ್ತದೆ. ಆ ಕಾಲದಲ್ಲಿ ಬನೀ ಇಸ್ರಾಈಲರಲ್ಲಿ ಗಂಡು ಮಗು ಹುಟ್ಟಿದರೆ ಅದರ ಕತ್ತು ಹಿಚುಕಿ ಕೊಲ್ಲುವುದಕ್ಕಾಗಿ ದಾದಿಯರನ್ನು ನೇಮಿಸ ಲಾಗಿತ್ತು. ಗಲ್ಲಿ ಕೇರಿಗಳಲ್ಲಿ, ಗ್ರಾಮ ಗ್ರಾಮಗಳಲ್ಲಿ ಬೇಹುಗಾರರು ಎಲ್ಲಾದರೂ ಒಂದು ಇಸ್ರೇಲಿ ಹುಡುಗ ಬದುಕಿಗಾಗಿ ಹೋರಾಡುತ್ತಿದ್ದಾನೆಯೇ ಎಂಬುದನ್ನು ಹುಡುಕುತ್ತಾ ತಿರುಗುತ್ತಿದ್ದರು. ಈ ಆಂಶಿಕ ಸಂತಾನ ಹರಣವು ಎಷ್ಟು ದೊಡ್ಡ ವಿಪತ್ತಾಗಿತ್ತೆಂದರೆ ಅದರಿಂದ ಮುಕ್ತಿಯನ್ನು ಅಲ್ಲಾಹನು ಬನೀ ಇಸ್ರಾಈಲ್‌ರ ಮೇಲೆ ಮಾಡಿದ ಅತಿದೊಡ್ಡ ಉಪಕಾರವೆಂದು ಬಣ್ಣಿಸಿದ್ದಾನೆ,

"ನಾವು ನಿಮ್ಮನ್ನು ಫಿರ್‌ಔನೀಯರ ದಾಸ್ಯದಿಂದ ವಿಮೋಚನೆ ಗೊಳಿಸಿದ ಕಾಲವನ್ನು ಸ್ಮರಿಸಿರಿ. ಅವರು ನಿಮ್ಮನ್ನು ಘೋರ ಯಾತನೆಯಲ್ಲಿ ಸಿಲುಕಿಸಿದ್ದರು. ನಿಮ್ಮ ಗಂಡು ಮಕ್ಕಳನ್ನು ಕೊಲೆ ಮಾಡುತ್ತಿದ್ದರು ಮತ್ತು ನಿಮ್ಮ ಹೆಣ್ಣು ಮಕ್ಕಳನ್ನು ಬದುಕಿರಲು ಬಿಡುತ್ತಿದ್ದರು. ಆ ಪರಿಸ್ಥಿತಿಯಲ್ಲಿ ನಿಮ್ಮ ಪ್ರಭುವಿನ ಕಡೆಯಿಂದ ನಿಮಗೊಂದು ದೊಡ್ಡ ಪರೀಕ್ಷೆ ಎದುರಾಗಿತ್ತು."

(ಪವಿತ್ರ ಕುರ್‌ಆನ್, 2:49)

ಫಿರ್‌ಔನನ ಈ ದೌರ್ಜನ್ಯ ಎಷ್ಟು ಕಠಿಣವಾಗಿತ್ತೆಂದರೆ ಅದರಿಂದ ಮುಕ್ತಿಯನ್ನು ಅಲ್ಲಾಹನ ಮಹಾನ್ ಕೊಡುಗೆಯೆಂದು ಮೂಸಾ(ಅ) ಹೇಳಿದ್ದಾರೆ.

"ಮೂಸಾ ತನ್ನ ಜನಾಂಗದೊಡನೆ ಹೇಳಿದ ಸಂದರ್ಭವನ್ನು ಸ್ಮರಿಸಿರಿ, ಅಲ್ಲಾಹನು ನಿಮ್ಮ ಮೇಲೆ ಮಾಡಿದ ಉಪಕಾರವನ್ನು ಸ್ಮರಿಸಿರಿ. ಅವನು ನಿಮ್ಮನ್ನು ಫಿರ್‌ಔನನ

ಜನಾಂಗದಿಂದ ಬಿಡಿಸಿದನು. ಅವರು ನಿಮಗೆ ಅತ್ಯಧಿಕ ಹಿಂಸೆ ಕೊಡುತ್ತಿದ್ದರು. ನಿಮ್ಮ ಗಂಡು ಮಕ್ಕಳನ್ನು ವಧಿಸಿ ಬಿಡುತ್ತಿದ್ದರು ಮತ್ತು ನಿಮ್ಮ ಹೆಣ್ಣು ಮಕ್ಕಳನ್ನು ಜೀವಂತ ಬಿಟ್ಟು ಬಿಡುತ್ತಿದ್ದರು. ಇದರಲ್ಲಿ ನಿಮ್ಮ ಪ್ರಭುವಿನ ಕಡೆಯಿಂದ ನಿಮ್ಮ ಪಾಲಿಗೆ ಮಹಾ ಪರೀಕ್ಷೆಯಿತ್ತು."

(ಪವಿತ್ರ ಕುರ್‌ಆನ್, 14:6)

ಇನ್ನೊಂದು ಕಡೆ ಅಲ್ಲಾಹನು ಮೂಸಾರ ಬಾಯಿಯಿಂದ ಹೀಗೆ ಹೇಳಿಸುತ್ತಾನೆ,

"ನಾವು ಫಿರ್‌ಔನ್‌ನವರಿಂದ ನಿಮ್ಮನ್ನು ವಿಮೋಚನೆಗೊಳಿಸಿದ ಸಂದರ್ಭವನ್ನು ಸ್ಮರಿಸಿರಿ (ಎಂದು ಅಲ್ಲಾಹನು ಹೇಳುತ್ತಾನೆ). ಅವರು ನಿಮ್ಮನ್ನು ಕಠಿಣ ಯಾತನೆಯಲ್ಲಿ ಸಿಲುಕಿಸಿದ್ದರು. ನಿಮ್ಮ ಗಂಡು ಮಕ್ಕಳನ್ನು ವಧಿಸುತ್ತಿದ್ದರು ಮತ್ತು ನಿಮ್ಮ ಹೆಣ್ಣು ಮಕ್ಕಳನ್ನು ಬದುಕಲು ಬಿಡುತ್ತಿದ್ದರು. ಇದರಲ್ಲಿ ನಿಮ್ಮ ಪ್ರಭುವಿನ ಕಡೆಯಿಂದ ನಿಮಗೊಂದು ದೊಡ್ಡ ಪರೀಕ್ಷೆ ಇತ್ತು."

(ಪವಿತ್ರ ಕುರ್‌ಆನ್, 7:141)

ಈ ಸೂಕ್ತಗಳ ಬೆಳಕಿನಲ್ಲಿ, ಬನೀ ಇಸ್ರಾಈಲರು ಈಜಿಪ್ಟ್‌ನಲ್ಲಿ ಅನುಭವಿಸುತ್ತಿದ್ದ ಕಠಿಣ ಸತ್ವಪರೀಕ್ಷೆಗಳನ್ನು ಊಹಿಸಬಹುದು.

ಒಂದನೆಯದಾಗಿ, ತಲೆಯ ಮೇಲೆ ಓರ್ವ ನಿರಂಕುಶ ಆಡಳಿತಗಾರನಿದ್ದ, ಅಕ್ರಮ-ಅತ್ಯಾಚಾರ, ಕೊಲೆ-ದೌರ್ಜನ್ಯಗಳು ಆತನ ಆಡಳಿತ ನೀತಿಯಾಗಿತ್ತು.

ಎರಡನೆಯದಾಗಿ, ಅವರು ಒಂದು ಕ್ರೂರಿ ಜನಾಂಗದ ಮಧ್ಯೆ ಸಿಲುಕಿಕೊಂಡಿದ್ದರು. ಅದರ ಒಂದೊಂದು ಮಗುವೂ ರಕ್ತದಾಹಿಯಾಗಿತ್ತು.

ಮೂರನೆಯದಾಗಿ, ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ರಾಜಕೀಯವಾಗಿಯೂ ಅವರನ್ನು ಸಂಪೂರ್ಣ ದಮನಿಸಲಾಗಿತ್ತು. ಮುಂದೆಂದೂ ಅವರು ತಲೆಯೆತ್ತದಂತೆ ಬಹಳ ಜಾಗ್ರತೆ ವಹಿಸಲಾಗಿತ್ತು.

ನಾಲ್ಕನೆಯದಾಗಿ, ಆಂಶಿಕ ಜನಾಂಗ ಹತ್ಯೆ ಅಥವಾ ಕುಟುಂಬ ನಿಯಂತ್ರಣ ಯೋಜನೆಯನ್ನು ಅವರ ಮೇಲೆ ಬಲವಂತವಾಗಿ ಹೇರಲಾಗಿತ್ತು. ಮುಂದೆಂದೂ ಅವರು ಬಹುಸಂಖ್ಯಾತರಾಗಬಾರದು, ಹೋರಾಡುವವರಿಂದ ಅವರು ಸಂಪೂರ್ಣ ಬರಿದಾಗಿರಬೇಕೆಂಬುದೇ ಇದರ ಉದ್ದೇಶವಾಗಿತ್ತು.

ಫಿರ್‌ಔನ್ ಮತ್ತವನ ಅಧಿಕಾರಿಗಳು ತಮ್ಮ ಶಾಶ್ವತ ಅಧಿಕಾರಕ್ಕೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಮಾಡಿದ್ದೇವೆಂದು ತಮ್ಮಷ್ಟಕ್ಕೇ ಭಾವಿಸಿದ್ದರು. ಆದರೆ ಅಲ್ಲಾಹನ ವಿಧಿಯು ಅವರ ಈ ಮರಳ ಸೌಧವನ್ನು ನೋಡಿ ಮುಗುಳ್ನಗುತ್ತಿತ್ತು. ಒಂದೇ ಹೊಡೆತಕ್ಕೆ ಈ ಸೌಧವು ನೆಲಸಮವಾಗಲಿದೆಯೆಂದು ಮೌನ ಭಾಷೆಯಲ್ಲಿ ಹೇಳುತ್ತಿತ್ತು.

ಅಕ್ರಮದ ನಿರ್ಮೂಲನ-ಅಲ್ಲಾಹನ ಕಾರ್ಯ ವಿಧಾನ

ಅಕ್ರಮವು ಮಿತಿಮೀರಿದಾಗ ಮತ್ತು ಬದಲಾವಣೆಯ ಯಾವುದೇ ದಾರಿಗಾಣದೆ ಜನಸಾಮಾನ್ಯರು ಹತಾಶರಾದಾಗ, ಆಡಳಿತ ವರ್ಗವು ತನ್ನನ್ನು ನಿರಂಕುಶ ಪ್ರಭುತ್ವದ

ಒಡೆಯರೆಂದು ಭಾವಿಸಿದಾಗ ಮತ್ತು ಒಂದು ವರ್ಗವು ತನ್ನ ಅಧಿಕಾರವನ್ನು ಭದ್ರಪಡಿಸಿ ಅದೆಂದೂ ಅಳಿದು ಹೋಗದೆಂದು ಭಾವಿಸಿ ದಬ್ಬಾಳಿಕೆ ನಡೆಸಿ ಹಿಂಸೆ ದೌರ್ಜನ್ಯಗಳ ಎಲ್ಲ ಮೇರೆಗಳನ್ನು ಮೀರಿದಾಗ, ಅಲ್ಲಾಹನ ಕರುಣೆಯು ಅಸಹಾಯಕ ದಾಸರ ಸಹಾಯಕ್ಕೆ ಧಾವಿಸಿ ಬರುತ್ತದೆ. ತನ್ನ ಸಹಾಯದ ನಿರೀಕ್ಷೆಯಿರಿಸಿದವರನ್ನೆಂದೂ ನಿರಾಶೆಗೊಳಿಸದ ಒಂದು ಅಸ್ತಿತ್ವವಿದೆಯೆಂಬುದನ್ನು ಮತ್ತೊಮ್ಮೆ ತೋರಿಸಿ ಕೊಡುತ್ತದೆ. ಅವನ ಕೆಲಸದಲ್ಲಿ ವಿಳಂಬವಾಗಬಹುದು. ಅದರಲ್ಲೂ ಯುಕ್ತಿ ಅಡಗಿವೆ. ಆದರೆ ಅಂಧಕಾರವಿಲ್ಲ, ನಾವು ನೋಡುತ್ತೇವೆ. ಈಜಿಪ್ಟ್‌ನಲ್ಲಿ ಇಸ್ರಾಈಲ್ ಜನಾಂಗಕ್ಕೆ ಜೀವಿಸುವ ಹಕ್ಕನ್ನು ನಿಷೇಧಿಸಿದಾಗ, ಅವರನ್ನು ಶಾಶ್ವತ ಗುಲಾಮಗಿರಿಯಲ್ಲಿ ಬಂಧಿಸಿಡುವ ಎಲ್ಲ ವ್ಯವಸ್ಥೆಗಳನ್ನು ಮಾಡಲಾದಾಗ ಮತ್ತು ಈ ಸ್ಥಿತಿಯಿಂದ ಹೊರಬರುವ ಎಲ್ಲ ಬಾಗಿಲುಗಳನ್ನು ಮುಚ್ಚಿ ಬಿಡಲಾದಾಗ ಅಲ್ಲಾಹನು ಆ ಅಕ್ರಮಿಗಳ ಅಧಿಕಾರವನ್ನು ಕಿತ್ತೆಸೆಯುವ ತೀರ್ಮಾನ ಮಾಡಿದನು.

"ನಾವು ಭೂಮಿಯಲ್ಲಿ ತುಳಿಯಲ್ಪಟ್ಟವರ ಮೇಲೆ ಕೃಪೆ ತೋರಬೇಕೆಂದೂ ಅವರನ್ನು ನಾಯಕರಾಗಿ ಮಾಡಿ ಬಿಡಬೇಕೆಂದೂ ಅವರನ್ನೇ ಉತ್ತರಾಧಿಕಾರಿಗಳಾಗಿ ಮಾಡಬೇಕೆಂದೂ-ಭೂಮಿಯಲ್ಲಿ ಅವರಿಗೆ ಪ್ರಭುತ್ವ ನೀಡಬೇಕೆಂದೂ ಫಿರ್‌ಔನ್, ಹಾಮಾನ್ ಮತ್ತು ಅವರ ಸೇನೆಗಳಿಗೆ ಯಾವುದರ ಭಯವಿತ್ತೋ ಅದನ್ನೇ ತೋರಿಸಿಕೊಡಬೇಕೆಂದೂ ಬಯಸಿದ್ದೆವು."

(ಪವಿತ್ರ ಕುರ್‌ಆನ್, 28:5-6)

ಚರಿತ್ರೆಯಲ್ಲಿ ಪದೇ ಪದೇ ಪುನರಾವರ್ತನೆಗೊಳ್ಳುತ್ತಿರುವ ದೈವಿಕ ಕಾರ್ಯ ವಿಧಾನವಿದು. ಲೋಕದಲ್ಲಿ ಎಂದಾದರೂ ಒಬ್ಬ ಫಿರ್‌ಔನ್ ತನ್ನ ನಿರಂಕುಶ ಆಡಳಿತದ ಮೂಲಕ ಜನರ ಮೇಲೆ ದಬ್ಬಾಳಿಕೆ ನಡೆಸಿದಾಗ ಅವನನ್ನು ದಮನಿಸಲು ಅಲ್ಲಾಹನು ವ್ಯವಸ್ಥೆ ಮಾಡಿದನು. ಕಾಲದ ಫಿರ್‌ಔನನ ಅಕ್ರಮ-ಅತ್ಯಾಚಾರಕ್ಕೆ ಬಲಿಯಾಗಿ ಯಾವುದೇ ಮುಕ್ತಿಯ ಮಾರ್ಗವನ್ನು ಕಾಣದೆ ತತ್ತರಿಸುವ ಎಲ್ಲ ದಮನಿತರು ಮತ್ತು ಮರ್ದಿತರಿಗೆ ಈ ಸೂಕ್ತಗಳಲ್ಲಿ ಸುವಾರ್ತೆ ಇದೆ. ಅನ್ಯಾಯದ ಹಗ್ಗವು ದೀರ್ಘವಾಗಿರಬಹುದು. ಆದರೆ ಅದು ಶಾಶ್ವತವಲ್ಲ, ಒಂದಲ್ಲ ಒಂದು ದಿನ ಈ ಪರಂಪರೆ ಕೊನೆಗೊಳ್ಳಲೇಬೇಕು. ಸಕಲ ಅಕ್ರಮ-ಅತ್ಯಾಚಾರಕ್ಕೆ ಬಲಿಯಾಗಿದ್ದ ಅದೇ ಮರ್ದಿತರು ತಮ್ಮನ್ನು ದಮನಿಸುವುದರಲ್ಲಿ ಯಾವುದೇ ಕೊರತೆಯುಂಟು ಮಾಡಿರದ ಅದೇ ಆಡಳಿತದ ಒಡೆಯರಾಗಲಿರುವರೆಂಬ ಶುಭ ಸಂದೇಶವನ್ನು ಅಲ್ಲಾಹನ ವತಿಯಿಂದ ಆ ಎಲ್ಲ ಜನ ವರ್ಗಗಳಿಗೆ ಈ ಮೂಲಕ ನೀಡಲಾಗಿದೆ.

ಇಲ್ಲಿ ಫಿರ್‌ಔನ್ ಮತ್ತು ಅವನ ಪರಿವಾರದವರೊಂದಿಗೆ ಅದೇ ನಡೆಯಿತು. ಹುಟ್ಟುವ ಸ್ವಾತಂತ್ರ್ಯದಿಂದಲೂ ವಂಚಿತರಾಗಿದ್ದ ಇಸ್ರಾಈಲ್ ಜನಾಂಗವನ್ನು ಅಲ್ಲಾಹನು ಫಿರ್‌ಔನನ ಕಪಿಮುಷ್ಟಿಯಿಂದ ಬಿಡಿಸಿದ್ದಷ್ಟೇ ಅಲ್ಲ, ಫಿರ್‌ಔನ್ ಮತ್ತವನ ಆಪ್ತರನ್ನೂ ಬೆಂಬಲಿಗರನ್ನೂ

ಸಂಪೂರ್ಣ ಅಳಿಸಿ ಹಾಕುವ ವ್ಯವಸ್ಥೆ ಮಾಡಿದನು. ಯಾವ ಆತಂಕವನ್ನು ನೀಗಿಸಲಿಕ್ಕಾಗಿ ಫಿರ್‌ಔನ್ ರಾತ್ರಿ ಹಗಲೆನ್ನದೆ ಚಿಂತಿಸುತ್ತಿದ್ದನೋ ಅಲ್ಲಾಹನು ಅದನ್ನೇ ಮಾಡಿ ಬಿಟ್ಟನು.

ಫಿರ್‌ಔನನಂತಹ ಬಲಶಾಲಿ ಚಕ್ರವರ್ತಿಯನ್ನು ಕಾಡುತ್ತಿದ್ದ ಆ ಆತಂಕಗಳು ಯಾವುದಾಗಿತ್ತು? ತನ್ನ ಪ್ರಜೆಗಳ ಮೇಲೆ ದಬ್ಬಾಳಿಕೆ ನಡೆಸುತ್ತಾ ಇರುವಾಗ ಪ್ರತಿಯೊಬ್ಬ ನಿರಂಕುಶಾಡಳಿತಗಾರನಿಗೂ ತನ್ನ ಅಧಿಕಾರವು ಬುಡಮೇಲಾಗಿ ಬಿಡುವುದೋ ಎಂಬ ಚಿಂತೆ ಕಾಡುತ್ತಿರುತ್ತದೆ. ಎಲ್ಲಾದರೂ ಒಂದು ಎಲೆ ಅಲುಗಾಡಿದರೂ ಅವನ ನಿದ್ರೆ ಹಾರಿ ಬಿಡುತ್ತದೆ. ಇದು ತನ್ನನ್ನು ಹತ್ತಿಕ್ಕುವ ಯಾವನೋ ವೈರಿಯ ವಿಧ್ವಂಸಕ ಕೃತ್ಯವಾಗಿರಲೇ ಬೇಕೆಂದು ಆತ ಭಾವಿಸುತ್ತಾನೆ. ಆದ್ದರಿಂದ ಮುಂದೆಂದಾದರೂ ಬರಬಹುದಾದ ಅಥವಾ ಅವನ ಮನಮಸ್ತಿಷ್ಕದಲ್ಲಿ ಮೂಡುವ ಯಾವುದೋ ಅಪಾಯವನ್ನು ತಡೆಗಟ್ಟುವ ಚಿಂತೆ ಯಲ್ಲೇ ಆತ ದಿನ ಕಳೆಯುತ್ತಾನೆ.

ಇಸ್ರಾಈಲ್ ಜನಾಂಗವು ಈಜಿಪ್ಟ್ ದೇಶದಲ್ಲಿ ಅತ್ಯಂತ ಶಕ್ತಿಶಾಲಿ ಆಡಳಿತ ವರ್ಗ ವೆಂಬ ನೆಲೆಯಲ್ಲಿ ಬದುಕಿತ್ತು. ಜನಸಂಖ್ಯೆಯ ಬಹುದೊಡ್ಡ ಪಾಲು ಅವರದೇ ಆಗಿತ್ತು. ಜನರ ಸಂಖ್ಯಾಬಲವು ಯಾವಾಗಲೂ ವಿರೋಧಿಗಳಿಗೆ ಪ್ರಾಣಕಂಟಕವಾಗಿರುತ್ತದೆ. ಫಿರ್‌ಔನ್ ಈ ಅಪಾಯವನ್ನು ಚೆನ್ನಾಗಿ ಮನಗಂಡಿದ್ದನು. ಅವನು ಈ ಜನಬಲವನ್ನು ಕಡಿಮೆ ಗೊಳಿಸಲು ಗಂಡು ಸಂತಾನವನ್ನು ನಿಯಂತ್ರಿಸುವ ವ್ಯವಸ್ಥೆ ಮಾಡಿದನು. ಆರ್ಥಿಕವಾಗಿ ಅವರನ್ನು ವ್ಯಾಪಾರ ಮತ್ತು ಹುದ್ದೆಗಳಿಂದ ದೂರವಿರಿಸಿದನು. ಸಾಮಾಜಿಕವಾಗಿ ಅವರಿಗೆ ಗುಲಾಮರ ಮತ್ತು ನೌಕರರ ಸ್ಥಾನಮಾನ ನೀಡಿದನು. ರಾಜಕೀಯವಾಗಿ ಎಂದೂ ತಲೆಯೆತ್ತಲು ಸಾಧ್ಯವಿಲ್ಲದ ರೀತಿಯಲ್ಲಿ ಅವರನ್ನು ಅತ್ಯಂತ ದುರ್ಬಲ ಅಲ್ಪಸಂಖ್ಯಾತರಾಗಿ ಮಾಡಿದನು. ಈ ರೀತಿ ತನ್ನ ಶಾಶ್ವತ ಪ್ರಭುತ್ವವನ್ನು ಉಳಿಸುವ ವ್ಯವಸ್ಥೆ ಮಾಡಿದನು.

ಈ ರಕ್ಷಣಾ ವ್ಯವಸ್ಥೆ ಕೇವಲ ಫಿರ್‌ಔನನಿಗೆ ಸೀಮಿತವಾಗಿರಲಿಲ್ಲ. ಅದರಲ್ಲಿ ಹಾಮಾನ್‌ನ ನಾಯಕತ್ವದಲ್ಲಿದ್ದ ಅವನ ಮಂತ್ರಿ ಮಹೋದಯರೂ ಇದ್ದರು. ಇವರು ನಿರಂಕುಶ ಪ್ರಭುಗಳ ಬೆಂಬಲಕ್ಕಿರುವ ವರ್ಗವಾಗಿರುವುದರಿಂದಲೂ ಅವರ ರಕ್ಷಣೆ ಅಗತ್ಯವಾಗಿತ್ತು. ಇವರು ಚಕ್ರವರ್ತಿಗೆ ಅತ್ಯಧಿಕ ನಿಷ್ಠರಾಗಿರುತ್ತಾರೆ. ಇಂತಹ ನಿರಂಕುಶ ಪ್ರಭುತ್ವದ ಉಳಿವಿಗಾಗಿ ಅವರ ಅಗತ್ಯವಿರುತ್ತದೆ. ಆದ್ದರಿಂದ ಅಲ್ಲಾಹನು ಕೇವಲ ಫಿರ್‌ಔನನಿಗೆ ಮಾತ್ರ ಗತಿ ಕಾಣಿಸುವ ವ್ಯವಸ್ಥೆ ಮಾಡಿದ್ದಲ್ಲ, ಅವನ ಜೊತೆಯಲ್ಲಿ ಈ ವರ್ಗದ ದುರ್ಗತಿಯ ವ್ಯವಸ್ಥೆಯನ್ನೂ ಮಾಡಿದನು.

ಮೂಸಾರ(ಅ) ಜನನ

ಸರಕಾರದ ಬೇಹುಗಾರರು ಗಲ್ಲಿ ಕೇರಿಗಳಲ್ಲಿ ಬನೀ ಇಸ್ರಾಈಲರ ಮನೆಗಳನ್ನು ತಪಾಸಣೆಗೈಯುತ್ತಿದ್ದಂತಹ ಆ ಭಯಾನಕ ಪರಿಸ್ಥಿತಿಯಲ್ಲಿ ಅದೇ ಜನಾಂಗದ ಇಮ್ರಾನ್ ಎಂಬವರ ಮನೆಯಲ್ಲಿ ಅಲ್ಲಾಹನು ಮೂಸಾರನ್ನು(ಅ) ಹುಟ್ಟಿಸಿದನು. ಅದು ತಂದೆ

ತಾಯಿಯರ ಮೂರನೆಯ ಗಂಡು ಮಗುವಾಗಿತ್ತು. ಆ ಮಗುವಿಗೆ ಓರ್ವ ಹಿರಿಯ ಸಹೋದರಿ ಮತ್ತು ಸಹೋದರ ಇದ್ದರು. ಇವರು ಬಹುಶಃ ಮಕ್ಕಳ ವಧೆಯ ಶಾಸನ ಜಾರಿಗೊಳ್ಳುವುದಕ್ಕಿಂತ ಮುಂಚೆ ಹುಟ್ಟಿರಬೇಕು. ಆದ್ದರಿಂದ ಬದುಕುಳಿದಿದ್ದರು. ಆ ಕಾಲದ ಕಾನೂನು ಪೂರ್ವಾನ್ವಯ (With restrospective effect) ಆಗಿರಲಿಲ್ಲ. ಅನ್ಯಥಾ ಈ ಸಹೋದರ ಸಹೋದರಿಯರು ಎಂದೋ ವಿಧಿವಶರಾಗಿರುತ್ತಿದ್ದರು.

ಒಂದು ಬಲಿಷ್ಠ ಮತ್ತು ದುಷ್ಟ ಬೇಹುಗಾರರ ತಂಡವು ನಾಲ್ಕೂ ಸುತ್ತ ಹರಡಿ ಕೊಂಡಿದ್ದು ಮನೆಮನೆಯ ಶೋಧ ನಡೆಸುತ್ತಿದ್ದಂತಹ ಆ ಪರಿಸ್ಥಿತಿಯಲ್ಲಿ ಒಂದು ದುರ್ಬಲ ಮತ್ತು ಅಸಹಾಯಕ ಮನೆತನದಲ್ಲಿ ಒಂದು ಗಂಡು ಮಗು ಹುಟ್ಟಿದ್ದು ಬಹಿರಂಗವಾಗದೆ ಇರುವುದಾದರೂ ಹೇಗೆ? ಆದ್ದರಿಂದ ಅಲ್ಲಾಹನು ಜನನದ ಸಂದರ್ಭದಲ್ಲೇ ಮೂಸಾರ ತಾಯಿಗೆ ಈ ಅಪಾಯದ ಕುರಿತು ಎಚ್ಚರಿಕೆ ನೀಡಿದರು. ಮಾತ್ರವಲ್ಲ, ಅದರಿಂದ ಪಾರಾಗುವ ಉಪಾಯವನ್ನೂ ತಿಳಿಸಿದನು. ಮಗುವಿನ ರಕ್ಷಣೆಯ ಭಾರವನ್ನು ತಾನೇ ವಹಿಸಿಕೊಂಡು ಮುಂದೆ ಇದು ಪ್ರವಾದಿತ್ವದ ಉನ್ನತ ಪದವಿ ಪಡೆಯಲಿದೆಯೆಂಬ ಶುಭವಾರ್ತೆಯನ್ನೂ ಆಕೆಗೆ ನೀಡಿದನು. ಕುರ್‌ಆನ್ ಅದನ್ನು ಹೀಗೆ ವಿವರಿಸುತ್ತದೆ,

"ನಾವು ಮೂಸಾರ ತಾಯಿಗೆ, 'ಇದಕ್ಕೆ ಮೊಲೆಹಾಲುಣಿಸು. ಮುಂದೆ ನಿನಗೆ ಇದರ ಪ್ರಾಣದ ಬಗ್ಗೆ ಭಯವುಂಟಾದರೆ ಇದನ್ನು ನದಿಯಲ್ಲಿ ಹಾಕಿ ಬಿಡು. ನೀನು ಕೊಂಚವೂ ಭಯ ಪಡಬೇಡ. ವ್ಯಥೆ ಪಡಬೇಡ. ನಾವು ಇದನ್ನು ನಿನ್ನ ಬಳಿಗೇ ಮರಳಿ ತರುವೆವು ಮತ್ತು ಇದನ್ನು ಸಂದೇಶವಾಹಕರಲ್ಲಿ ಸೇರಿಸುವೆವು' ಎಂದು ಸೂಚನೆ ನೀಡಿದೆವು."

(ಪವಿತ್ರ ಕುರ್‌ಆನ್, 28:7)

"(ಓ ಮೂಸಾ!) ನಾವು ಇನ್ನೊಮ್ಮೆ ನಿಮ್ಮ ಮೇಲೆ ಅನುಗ್ರಹ ತೋರಿದೆವು. ನಾವು ನಿಮ್ಮ ತಾಯಿಗೆ ಸೂಚನೆಕೊಟ್ಟ ಸಂದರ್ಭವನ್ನೂ ಸ್ಮರಿಸಿರಿ. ಇಂತಹ ಸೂಚನೆಯನ್ನು 'ದಿವ್ಯವಾಣಿ'ಯ ಮುಖಾಂತರವೇ ಕೊಡಲಾಗುತ್ತದೆ. 'ಈ ಮಗುವನ್ನು ಪೆಟ್ಟಿಗೆಯೊಳಗೆ ಇರಿಸಿ ಬಿಡು. ಪೆಟ್ಟಿಗೆಯನ್ನು ನದಿಯಲ್ಲಿ ಬಿಟ್ಟು ಬಿಡು. ನದಿಯು ಅದನ್ನು ದಡಕ್ಕೆ ಎಸೆದು ಬಿಡುವುದು ಮತ್ತು ಅದನ್ನು ನನ್ನ ಶತ್ರು ಹಾಗೂ ಈ ಮಗುವಿನ ಶತ್ರು ಎತ್ತಿಕೊಳ್ಳುವನು' (ಎಂಬ ಸೂಚನೆ). ನಾನು ನನ್ನ ಕಡೆಯಿಂದ ನಿಮ್ಮ ಮೇಲೆ ಅನುರಾಗವನ್ನು ಆವರಿಸಿ ಬಿಟ್ಟೆನು ಮತ್ತು ನನ್ನ ಮೇಲ್ನೋಟದಲ್ಲೇ ನಿಮ್ಮ ಪೋಷಣೆಯ ವ್ಯವಸ್ಥೆ ಮಾಡಿದೆನು. ನಿಮ್ಮ ಸಹೋದರಿ ನಡೆಯುತ್ತಲಿದ್ದ ಸಂದರ್ಭವನ್ನು ಸ್ಮರಿಸಿರಿ. ಅವಳು ಹೋಗಿ, 'ಈ ಶಿಶುವನ್ನು ಅತ್ಯುತ್ತಮ ರೀತಿಯಿಂದ ಪಾಲನೆ ಪೋಷಣೆ ಮಾಡಬಲ್ಲವಳನ್ನು ನಿಮಗೆ ತೋರಿಸಿಕೊಡಲೇ?' ಎಂದು ಹೇಳುತ್ತಾಳೆ. ಹೀಗೆ ನಿಮ್ಮ ತಾಯಿಯ ಕಣ್ತಣಿಯುವಂತಾಗಲು ಹಾಗೂ ಅವಳು ದುಃಖಿತಳಾಗ ದಂತಾಗಲು ನಾವು ನಿಮ್ಮನ್ನು ಪುನಃ ನಿಮ್ಮ ತಾಯಿಯ ಬಳಿಗೆ ತಲುಪಿಸಿ ಬಿಟ್ಟೆವು."

(ಪವಿತ್ರ ಕುರ್‌ಆನ್, 20:37-40)

ಅಲ್ಲಾಹನು ಮೂಸಾರ ತಾಯಿಗೆ ಈ ಮಗುವನ್ನು ನದಿಯಲ್ಲಿ ಹಾಕಿ ಬಿಡು ಎಂದು ಹೇಳಿದ್ದು ಮಾತ್ರವಲ್ಲ ತನ್ನ ಎಲ್ಲ ಯೋಜನೆಗಳನ್ನೂ ಆಕೆಗೆ ತಿಳಿಸಿದನು. ಬಾಹ್ಯನೋಟಕ್ಕೆ ಇದು ಮಗುವನ್ನು ಕಳಕೊಳ್ಳುವ ಯೋಜನೆಯೆಂದು ತೋರಿದರೂ ಇದು ವಾಸ್ತವದಲ್ಲಿ ಈ ಮಗುವನ್ನು ತನ್ನ ಅಂತಿಮ ಗುರಿಯ ಕಡೆಗೆ ತಲುಪಿಸುವ ಮಾರ್ಗವಾಗಿದೆಯೆಂದು ಆಕೆಗೆ ಸಾಂತ್ವನ ನೀಡಿದನು.

ಅಲ್ಲಾಹನಿಗೆ ಮೂಸಾರಿಂದ ಯಾವ ಕೆಲಸವನ್ನು ಮಾಡಿಸಬೇಕಾಗಿತ್ತೋ ಅದಕ್ಕೆ ಅತ್ಯುತ್ಕೃಷ್ಟ ಪಾಲನೆ-ಪೋಷಣೆ ಹಾಗೂ ಆ ಕೆಲಸಕ್ಕೆ ಅಗತ್ಯವಾಗಿರುವ ಎಲ್ಲ ವಿದ್ಯೆ ಮತ್ತು ಗುಣಲಕ್ಷಣಗಳಿಂದ ಅವರು ಭೂಷಿತವಾಗಿರುವ ಅಗತ್ಯವಿತ್ತು. ಅದಕ್ಕೆ ಅರಮನೆಗಿಂತ ಉತ್ತಮ ಸ್ಥಳ ಅವರ ತರಬೇತಿಗೆ ಬೇರಾವುದಾದರೂ ಇರಲು ಸಾಧ್ಯ ಇರಲಿಲ್ಲ.

ಓರ್ವ ಇಸ್ರಾಈಲ್ ಜನಾಂಗದ ಮಗು ಆದರ ಬದ್ಧ ವೈರಿಯಾಗಿರುವ ಕಿಬ್ತಿ ವಂಶದ ಮನೆತನವೊಂದರಲ್ಲಿ, ಅದು ಕೂಡಾ ಅರಸು ಮನೆತನದಲ್ಲಿ ಬೆಳೆಯುವುದೆಂದರೆ ಅದು ಸಾಧ್ಯವೇ ಇಲ್ಲದ ಮಾತಾಗಿತ್ತು. ಅರಸು ಮನೆತನದಲ್ಲಿ ಬೆಳೆಯುವುದಂತಿರಲಿ ಅಲ್ಲಿಗೆ ತಲುಪುವಷ್ಟು ಪ್ರಭಾವ ಕೂಡಾ ಅವರಲ್ಲಿರಲಿಲ್ಲ. ಆದರೆ ಅಲ್ಲಾಹನ ವ್ಯವಸ್ಥೆ ನೋಡಿ! ಅವನು ಯಾವುದನ್ನು ಮಾಡಬಯಸುತ್ತಾನೋ ಅದನ್ನು ಮಾಡಿಯೇ ತೀರುವನು. ಆ ಕಾರ್ಯವನ್ನು ವಿರೋಧಿಸುವಲ್ಲಿ ಮುಂಚೂಣಿಯಲ್ಲಿರುವವರೇ ಅದನ್ನು ಪೂರ್ಣಗೊಳಿಸು ವಲ್ಲಿ ಅರಿತೋ ಅರಿಯದೆಯೋ ತಲ್ಲೀನರಾಗಿರುತ್ತಾರೆ. ಅದು ಪೂರ್ಣ ಗೊಂಡಾಗಲೇ ಅವರ ಗಮನಕ್ಕೆ ಅದು ಬರುತ್ತದೆ. ಬಾಹ್ಯ ನೋಟಕ್ಕೆ ಕಣ್ಣುಗಳು ಯಾವುದೋ ಒಂದು ಫಲಿತಾಂಶದ ನಿರೀಕ್ಷೆಯಲ್ಲಿರುತ್ತದೆ. ಆದರೆ ಕಟ್ಟಕಡೆಗೆ ಯಾವ ಫಲಿತಾಂಶ ಪ್ರಕಟ ವಾಗುತ್ತದೋ ಅದು ಅವರ ನಿರೀಕ್ಷೆಗೆ ಸಂಪೂರ್ಣ ವಿರುದ್ಧವಾಗಿರುತ್ತದೆ. ಆದುದರಿಂದಲೇ ಅಲ್ಲಾಹನು,

"ನನ್ನ ತಂತ್ರವು ಅತ್ಯಂತ ಅಭೇದ್ಯವಾದುದು." (ಪವಿತ್ರ ಕುರ್‌ಆನ್, 7:183) ಎಂದು ಹೇಳಿದ್ದಾನೆ.

ಮೂಸಾರನ್ನು ಪೆಟ್ಟಿಗೆಯಲ್ಲಿಟ್ಟು ನದಿಯಲ್ಲಿ ತೇಲಿ ಬಿಡಲಾಗುತ್ತದೆ. ಹೊರನೋಟಕ್ಕೆ ಇದೊಂದು ಭಯಾನಕ ಕೆಲಸವಾಗಿತ್ತು. ಇದು ತನ್ನ ಕೈಯಾರೆ ಅದನ್ನು ಮರಣದ ಬಾಯೊಳಗೆ ನೂಕಿ ಬಿಡುವುದಕ್ಕೆ ಸಮವಾಗಿತ್ತು. ಆದರೆ ನೈಜ ರಕ್ಷಕನು ಯಾರನ್ನು ರಕ್ಷಿಸುತ್ತಾನೋ ಅವನಿಗೆ ಯಾರು ತಾನೇ ಹಾನಿ ಮಾಡಬಲ್ಲರು? ನದಿಯಲ್ಲಿ ತೆರೆಗಳು ಮಗುವನ್ನು ಓಲಾಡಿಸುತ್ತಾ ಫಿರ್‌ಔನ್ ತನ್ನ ಪತ್ನಿ ಮತ್ತು ಪರಿಚಾರಕರೊಂದಿಗೆ ವಿಹಾರದಲ್ಲಿದ್ದ ಆ ಸ್ಥಳಕ್ಕೆ ತಂದು ಮುಟ್ಟಿಸುತ್ತವೆ. ಪೆಟ್ಟಿಗೆಯು ದಡದಲ್ಲಿ ಬಂದು ನಿಂತು ಬಿಡುತ್ತದೆ.

ಫಿರ್‌ಔನನ ವಶದಲ್ಲಿ

ಫಿರ್‌ಔನ್ ಅಥವಾ ಅವನ ಸೇವಕರ ಕಣ್ಣಿಗೆ ಈ ಮಗು ಬಿತ್ತು. ಸಾವಿರಾರು ಮಕ್ಕಳ ನೆತ್ತರಿನಿಂದ ತನ್ನ ಕೈಗಳನ್ನು ತೋಯಿಸಿದ್ದ ವ್ಯಕ್ತಿಗೆ ಇನ್ನೊಂದು ಮಗುವನ್ನು ವಧಿಸುವುದು

ಅಥವಾ ಮೀನುಗಳೋ ಕಡಲ ಪ್ರಾಣಿಗಳೋ ತಿನ್ನಲೆಂದು ಅದನ್ನು ನಿಷ್ಕರುಣ ಕಡಲ ಅಲೆಗಳಿಗೇ ಬಿಟ್ಟು ಬಿಡುವುದು ಕಷ್ಟವೇನಿರಲಿಲ್ಲ. ಆದರೆ ಅದು ಹೇಗೆ ಸಾಧ್ಯ? ಇಲ್ಲಿ ದೇವನ ಇಚ್ಛೆಯೇ ಬೇರೆಯಾಗಿತ್ತು. ಯಾವ ಅಪಾಯದಿಂದ (ತನ್ನ ಪ್ರಾಣ ಮತ್ತು ಗದ್ದುಗೆಗೆ ಎದುರಾರುವ ಅಪಾಯ) ಪಾರಾಗಲಿಕ್ಕಾಗಿ ಆತನು ಇಷ್ಟೆಲ್ಲ ಯೋಜನೆ ಹಾಕಿದ್ದನೋ ಅದನ್ನೇ ತನ್ನ ಕೈಯಾರೆ ತನ್ನ ಮಡಿಲಲ್ಲೇ ಪೋಷಿಸಿ ಬೆಳೆಸಬೇಕಾಗಿತ್ತು. ಈ ರೀತಿ ಅಲ್ಲಾಹನಿಗೆ ತನ್ನ ಯೋಜನೆಯನ್ನು ಪೂರ್ತಿಗೊಳಿಸಬೇಕಾಗಿದೆ ಎಂಬುದನ್ನು ತೋರಿಸಿ ಕೊಡಬೇಕಾಗಿತ್ತು. ಅದರ ಪ್ರಕಾರ ಮಗುವನ್ನು ನೀರಿನಿಂದ ಎತ್ತಿಕೊಳ್ಳಲಾಯಿತು ಮತ್ತು ಅದರ ವಿಧಿ ನಿರ್ಣಯಿಸಲಾಯಿತು. ಕುರ್‌ಆನ್ ಈ ಘಟನೆಯನ್ನು ಈ ರೀತಿ ವರ್ಣಿಸಿದೆ-

"ಕೊನೆಗೆ ಫಿರ್‌ಔನನ ಮನೆಯವರು- ತಮ್ಮ ಶತ್ರುವಾಗಲು ಮತ್ತು ತಮ್ಮ ವ್ಯಥೆಗೆ ಕಾರಣವಾಗಲು ಅದನ್ನು (ನದಿಯಿಂದ) ಎತ್ತಿಕೊಂಡರು. ನಿಜಕ್ಕೂ ಫಿರ್‌ಔನನೂ ಹಾಮಾನನೂ ಅವನ ಸೇನೆಗಳೂ (ತಮ್ಮ ತಂತ್ರದಲ್ಲಿ) ತಪ್ಪಿ ಬಿದ್ದಿದ್ದರು. ಫಿರ್‌ಔನನ ಪತ್ನಿಯು (ಅವನೊಡನೆ) 'ಇದು ನನಗೂ, ನಿನಗೂ ಕಣ್ಮನಗಳಿಗೆ ತಂಪಾಗಿದೆ. ಇದನ್ನು ವಧಿಸಬೇಡ. ಇದು ನಮಗೆ ಲಾಭದಾಯಕವಾಗಲೂಬಹುದು ಅಥವಾ ನಾವು ಇದನ್ನು ಮಗನಾಗಿ ಮಾಡಿಕೊಳ್ಳಲೂ ಬಹುದು' ಎಂದಳು. ಅವರು (ಪರಿಣಾಮದ ಬಗ್ಗೆ) ಅಜ್ಞರಾಗಿದ್ದರು."

(ಪವಿತ್ರ ಕುರ್‌ಆನ್, 28:8-9)

ಸಾಮಾನ್ಯವಾಗಿ ರಾಜಂದಿರಿಗೆ ಮತ್ತು ಚಕ್ರವರ್ತಿಗಳಿಗೆ ನಿಷ್ಠರಾಗಿರುವ ಆಸ್ಥಾನ ಸೇವಕರು ಮತ್ತು ಪರಿಚಾರಕರು ಮಗುವನ್ನು ಕೂಡಲೇ ವಧಿಸಿ ಬಿಡಿರೆಂದು ಸಲಹೆ ಕೊಟ್ಟಿರಬಹುದು. ಇದು ಅದೇ ವಧಿಸಲ್ಪಡುತ್ತಿದ್ದ ಇಸ್ರಾಈಲ್ ಜನಾಂಗದ ಯಾವುದೋ ಮನೆತನದ ಮಗುವಾಗಿದ್ದು ಮುಂದೆ ನಮಗೇ ಅಪಾಯಕಾರಿಯಾದರೆ! ಆದರೆ ಫಿರ್‌ಔನನ ಪತ್ನಿಯ ಎದೆಯಲ್ಲಿ ಒಂದು ಸ್ತ್ರೀಯ ಹೃದಯವಿತ್ತು. ಬಹುಶಃ ಸಂತಾನಭಾಗ್ಯದಿಂದ ವಂಚಿತಳಾಗಿದ್ದ ಆಕೆಗೆ ಮಕ್ಕಳೊಂದಿಗೆ ಸ್ವಲ್ಪ ಹೆಚ್ಚೇ ವಾತ್ಸಲ್ಯವಿದ್ದಿರಬೇಕು. ಆಕೆ ಅವರೆಲ್ಲರ ಸಲಹೆಯನ್ನು ತಿರಸ್ಕರಿಸಿದಳು. ಆ ಮಗುವಾದರೋ ಅತ್ಯಂತ ಮೋಹಕ ಸೌಂದರ್ಯವನ್ನು ಹೊಂದಿತ್ತು. ಎಂತಹ ಕಠೋರ ಹೃದಯಿಗೂ ಅದನ್ನು ಪ್ರೀತಿಸದಿರಲು ಸಾಧ್ಯವಿರಲಿಲ್ಲ. ಆದ್ದರಿಂದ ತನ್ನ ಕಣ್ಣ ಮುಂದೆಯೇ ವಧಿಸುವುದನ್ನು ಆಕೆ ಹೇಗೆ ಸಹಿಸಿಯಾಳು. ಆದ್ದರಿಂದ ಆಕೆ, ಇದನ್ನು ಕೊಲ್ಲಬೇಡಿರಿ... ಮಗು ತುಂಬಾ ಸುಂದರ ಮಾತ್ರವಲ್ಲ, ಬುದ್ಧಿವಂತನೆಂದು ತೋರುತ್ತದೆ. ಇದನ್ನು ಸಾಕೋಣ. ಇದು ನಮ್ಮ ಮನದಣಿಸುವ ಮತ್ತು ಕಣ್ತಂಪಿನ ಸಾಧನವಾಗಲೂ ಬಹುದು ಎಂದು ಹೇಳಿದಳು.

ಈ ರೀತಿ ಅಲ್ಲಾಹನು ಮೂಸಾರನ್ನು(ಅ) ಫಿರ್‌ಔನನ ಅರಮನೆಗೆ ತಲುಪಿಸುವ ಮತ್ತು ಅಲ್ಲಿ ಪೋಷಿಸುವ ವ್ಯವಸ್ಥೆಯನ್ನು ಮಾಡಿದನು. ಫಿರ್‌ಔನ್ ಮತ್ತು ಅವನ ಎಲ್ಲ ಪರಿವಾರದವರು ತಮ್ಮೆಲ್ಲ ಬುದ್ಧಿವಂತಿಕೆಯ ಹೊರತಾಗಿಯೂ ನಾಳೆ ತಮ್ಮ ಅಧಿಕಾರ

ಗದ್ದುಗೆಯನ್ನು ಉರುಳಿಸಲಿರುವ ಈ ಮಗುವನ್ನು ಪೋಷಿಸಿ ಬೆಳೆಸುವ ಕಾರ್ಯದಲ್ಲಿ ತಲ್ಲೀನರಾದರು. ನಾವು ನಮ್ಮ ಕೈಯಾರೆ ನಮ್ಮದೇ ನಾಶದ ಸಿದ್ಧತೆ ನಡೆಸುತ್ತಿದ್ದೇವೆಂಬ ಭಾವನೆ ಅವರ ಮನದಾಳದಲ್ಲೂ ಹೊಳೆಯಲಿಲ್ಲ, ಹೊಳೆಯುವುದಾದರೂ ಹೇಗೆ? ದೇವನ ಯೋಜನೆಯೇ ಹಾಗಿರುತ್ತದೆ. ದೇವಧಿಕ್ಕಾರಿಗಳು ಅದನ್ನು ತಮ್ಮ ಒಳ್ಳೆಯದಕ್ಕಾಗಿ ಬಳಸುತ್ತಾರೆ. ನಾವೆಲ್ಲ ಸಂಪೂರ್ಣ ಸುರಕ್ಷಿತರಾಗಿದ್ದೇವೆಂದು ಭಾವಿಸುತ್ತಾರೆ. ಆದರೆ ಸಮಯ ಕಳೆದಂತೆ ಅದರ ದುಷ್ಪರಿಣಾಮಗಳು ಗೋಚರವಾಗುವಾಗ ಅವರ ತೆರೆದ ಕಣ್ಣುಗಳು ಆಶ್ಚರ್ಯದಿಂದ ಎವೆಯಿಕ್ಕದೆ ತೆರೆದೇ ಇದ್ದು ಬಿಡುತ್ತವೆ.

ಮೂಸಾರ(ಅ) ತಾಯಿಯ ಕಳವಳ

ಒಂದೆಡೆ ಅಲ್ಲಾಹನು ಮೂಸಾರ ರಕ್ಷಣೆ, ಆರೈಕೆಯ ಮತ್ತು ಅವರನ್ನು ಕೀರ್ತಿಯ ಉನ್ನತ ಶಿಖರಕ್ಕೇರಿಸುವ ವ್ಯವಸ್ಥೆ ಮಾಡುತ್ತಿದ್ದರೆ, ಇನ್ನೊಂದೆಡೆ ಮೂಸಾರ ತಾಯಿಯ ಸ್ಥಿತಿಯು ಅತ್ಯಂತ ಚಿಂತಾಜನಕವಾಗಿತ್ತು. ಆಗದೆ ಇರುವುದಾದರೂ ಹೇಗೆ? ತನ್ನ ಕರುಳ ಕುಡಿಯನ್ನು ತನ್ನ ಕೈಯಾರೆ ಕಡಲಿಗೆಸೆದು ಅದರ ಅಬ್ಬರದ ಅಲೆಗಳಿಗೊಪ್ಪಿಸಿದ ಬಳಿಕ ಯಾವ ತಾಯಿ ತಾನೇ ಸಮಾಧಾನದಿಂದ ಕುಳಿತಾಳು? ಪುತ್ರ ವಾತ್ಸಲ್ಯವು ಆಕೆಯನ್ನು ಒಂದು ಕ್ಷಣದ ಮಟ್ಟಿಗಾದರೂ ನೆಮ್ಮದಿಯಿಂದ ಕುಳಿತುಕೊಳ್ಳಲು ಬಿಡಲಾರದು. ಹಾಗೆಯೇ ಆಯಿತು ಕೂಡಾ.

"ಅತ್ತ 'ಮೂಸಾ'ರ ತಾಯಿಯ ಹೃದಯ ತಳಮಳಿಸುತ್ತಿತ್ತು. ಅವಳು (ನಮ್ಮ ವಾಗ್ದಾನದ ಮೇಲೆ) ವಿಶ್ವಾಸವಿರಿಸುವವರಲ್ಲಾಗಲೆಂದು ನಾವು ಅವಳಿಗೆ ಸಾಂತ್ವನ ನೀಡದಿರುತ್ತಿದ್ದರೆ ಅವಳು ಗುಟ್ಟನ್ನು ರಟ್ಟುಮಾಡಿ ಬಿಡುತ್ತಿದ್ದಳು. ಅವಳು ಮಗುವಿನ ಸಹೋದರಿಯೊಡನೆ ಅದರ ಹಿಂದೆಯೇ ಹೋಗೆಂದಳು. ಆ ಪ್ರಕಾರ ಅವಳು (ಶತ್ರುಗಳಿಗೆ) ಅದರ ಸುಳಿವು ಸಿಗದ ರೀತಿಯಲ್ಲಿ ಬದಿಯಿಂದ ನೋಡುತ್ತಲೇ ಇದ್ದಳು- ಮತ್ತು ನಾವು ಆ ಮಗುವಿನ ಪಾಲಿಗೆ ಹಾಲುಣಿಸುವ ಸ್ತ್ರೀಯರ ಸ್ತನಗಳನ್ನು ಮೊದಲೇ ನಿಷಿದ್ಧಗೊಳಿಸಿ ಬಿಟ್ಟಿದ್ದೆವು. (ಇದನ್ನು ಕಂಡು) ಆ ಹುಡುಗಿಯು ಅವರೊಡನೆ, 'ಹಿತಾಕಾಂಕ್ಷೆಯೊಂದಿಗೆ ಇದರ ಪೋಷಣೆಯ ಹೊಣೆ ವಹಿಸತಕ್ಕಂತಹ ಮನೆಯವರನ್ನು ನಾನು ನಿಮಗೆ ತೋರಿಸಿ ಕೊಡಲೇ?' ಎಂದು ಕೇಳಿದಳು. ಈ ರೀತಿ ನಾವು ಮೂಸಾರನ್ನು ಅವರ ಮಾತೆಯ ಬಳಿಗೆ ಮರಳಿಸಿದೆವು. ಆಕೆಯ ಕಣ್ಣುಗಳು ತಂಪಾಗಲೆಂದು, ಆಕೆ ದುಃಖಿಸದಿರಲೆಂದು ಮತ್ತು ಅಲ್ಲಾಹನ ವಾಗ್ದಾನವು ಸತ್ಯವಾಗಿತ್ತೆಂಬುದನ್ನು ಆಕೆ ತಿಳಿಯಲೆಂದು. ಆದರೆ ಹೆಚ್ಚಿನವರು ಇದನ್ನು ತಿಳಿಯುವುದಿಲ್ಲ."

(ಪವಿತ್ರ ಕುರ್‌ಆನ್, 28:10-13)

ಮೂಸಾರ ತಾಯಿ ತನ್ನ ಕರುಳಕುಡಿಯನ್ನು ನದಿಯಲ್ಲಿ ಹಾಕಿ ನಿಶ್ಚಿಂತಳಾಗಿರುವುದು ಸಾಧ್ಯವಿರಲಿಲ್ಲ, ಆಕೆಯು ಆರ್ತನಾದದಿಂದ ಪರಿಸರದವರಿಗೆ ಈ ರಹಸ್ಯವನ್ನು

ಬಹಿರಂಗಪಡಿಸುವ ಸಾಧ್ಯತೆಯಿತ್ತು. ಆದರೆ ಮೂಸಾರ ರಕ್ಷಣೆಯ ಹೊಣೆ ಹೊತ್ತ ಆ ದೇವನಿಗೆ ಇದು ಸಹ್ಯವಾಗುವುದಾದರೂ ಹೇಗೆ? ಓರ್ವ ತಾಯಿಯ ಕಳವಳದ ಕಾರಣ ಒಂದಿಡೀ ಸಮುದಾಯವನ್ನು ವಿನಾಶಕ್ಕೊಡ್ಡುವುದಕ್ಕೆ ಅಲ್ಲಾಹನು ಒಡಂಬಡಲಿಲ್ಲ. ಮೂಸಾರಿಂದ ಅಲ್ಲಾಹನಿಗೆ ಅನೇಕ ಕಾರ್ಯಗಳನ್ನು ಮಾಡಿಸಬೇಕಾಗಿತ್ತು. ಇಡಿಯ ಮಾನವ ಕುಲಕ್ಕೆ ಸನ್ಮಾರ್ಗದರ್ಶನ ಮಾಡಿಸುವ ಹುದ್ದೆಗೆ (ಪ್ರವಾದಿತ್ವ ಪದವಿಗೆ) ಅವರನ್ನು ಏರಿಸಬೇಕಾಗಿತ್ತು. ಅವರ ಮೂಲಕ ಫಿರ್‌ಔನನ ದಬ್ಬಾಳಿಕೆಯನ್ನು ಕೊನೆಗೊಳಿಸಬೇಕಾಗಿತ್ತು. ಮುಂದಿನ ಪೀಳಿಗೆಗಳಿಗೆ ನಿರಾಶೆಯ ಅಂಧಕಾರದಲ್ಲಿ ಪ್ರಕಾಶದ ಮಾರ್ಗ ತೋರಿಸ ಬೇಕಾಗಿತ್ತು. ಅವರನ್ನು ಒಂದು ತುಳಿತಕ್ಕೊಳಗಾದ, ಮರ್ದಿತ, ಅಸಹಾಯಕ ಜನಾಂಗದ ವಿಮೋಚಕನಾಗಿ ಮಾಡ ಬೇಕಾಗಿತ್ತು. ಈ ಲೋಕ ಇರುವ ತನಕ ಎಲ್ಲ ಮರ್ದಿತರಿಗೆ ಫಿರ್‌ಔನನ ವಿರುದ್ಧ ಮೂಸಾ ಇದ್ದಾನೆ ಎಂಬ ಶುಭವಾರ್ತೆ ನೀಡಬೇಕಾಗಿತ್ತು.

ಆದ್ದರಿಂದ ಅಲ್ಲಾಹನು ಮೂಸಾರ ತಾಯಿಗೆ ಅತೀವ ಸಹನಶಕ್ತಿ ನೀಡಿದನು. ಮಾತ್ರವಲ್ಲ, ಈ ಮಗುವಿಗೆ ಯಾವುದೇ ಹಾನಿ ತಟ್ಟದು. ಅದು ಮುಂದೆ ಪ್ರವಾದಿಯಾಗಿ ಒಂದಲ್ಲ ಒಂದು ದಿನ ಒಂದಿಡೀ ಸಮುದಾಯದ ವಿಮೋಚಕನಾಗುವುದು ಎಂಬ ಸಾಂತ್ವನ ವನ್ನೂ ನೀಡಿದನು. ಆದರೂ ತಾಯಿಯು ತಾಯಿಯೇ ತಾನೇ. ಅವಳ ಪುತ್ರ ವಾತ್ಸಲ್ಯ ಆಕೆಯನ್ನು ಸುಮ್ಮನಿರಗೊಡುವುದೇ? ಕಳವಳ ತುಂಬಾ ಹೆಚ್ಚಾದಾಗ ತನ್ನ ಮಗಳನ್ನೇ ಕರೆದು, ನೋಡು ಮಗಳೇ! ಆ ಪೆಟ್ಟಿಗೆ ಎಲ್ಲಿಗೆ ಹೋಗುತ್ತದೆಂದು ದೂರದಿಂದಲೇ ನೋಡುತ್ತಾ ಸಾಗು ಎಂದು ಹೇಳಿ ಕಳಿಸಿದಳು.

ಸಹೋದರಿಯ ಜಾಣ್ಮೆ

ಹೆಣ್ಣು ಬಹಳ ಬುದ್ಧಿವಂತೆ ಹಾಗೂ ಚತುರಳಾಗಿದ್ದಳು. ಮಗುವಿನೊಂದಿಗೆ ಈ ಹುಡುಗಿಗೆ ಏನಾದರೂ ಸಂಬಂಧವಿದೆಯೋ ಎಂದು ಯಾರೂ ಊಹಿಸಲೂ ಸಾಧ್ಯವಿಲ್ಲದ ರೀತಿಯಲ್ಲಿ ಆಕೆ ಪೆಟ್ಟಿಗೆಯನ್ನು ಹಿಂಬಾಲಿಸಿದಳು. ಪೆಟ್ಟಿಗೆಯನ್ನು ಫಿರ್‌ಔನನ ಸೇವಕರು ಎತ್ತಿ ಆತನ ಮುಂದಿಟ್ಟದ್ದನ್ನು ಹುಡುಗಿ ನೋಡಿದಾಗ, ಅಬ್ಬಾ! ಎಂತಹ ಪ್ರಾಣ ಶತ್ರುವಿನ ಕೈಗೆ ತಲಪಿತು ಎಂದು ಆಕೆ ಹೌಹಾರಿರಬಹುದು. ಆ ಸಂದರ್ಭದಲ್ಲಿ ಆಕೆಯ ಮನಸ್ಸಿನ ಲ್ಲುಂಟಾದ ತಳಮಳವನ್ನು ಊಹಿಸುವುದು ಕಷ್ಟವೇನಲ್ಲ, ಆದರೆ ಹುಡುಗಿ ಬಹಳ ಜಾಣ್ಮೆ ಮತ್ತು ಸಮಾಧಾನಚಿತ್ತದೊಂದಿಗೆ ತನ್ನ ಕರ್ತವ್ಯ ನಿರ್ವಹಿಸಿದಳು. ತನ್ನ ಭಾವನೆಗಳನ್ನು ಯಾವ ರೀತಿಯಿಂದಲೂ ಹೊರಗೆಡಹಲಿಲ್ಲ, ಆಕೆ ಇನ್ನೇನು ನಡೆಯುತ್ತದೆ, ಯಾವ ತೀರ್ಮಾನ ವಾಗುತ್ತದೆ ಎಂಬುದನ್ನು ಕಾದು ನೋಡುತ್ತಿದ್ದಳು. ಫಿರ್‌ಔನನು ಮಗುವನ್ನು ಬದುಕಲು ಬಿಟ್ಟಿದ್ದು ಮಾತ್ರವಲ್ಲ, ಅದರ ಪೋಷಣೆಯ ಹೊಣೆಯನ್ನು ತಾನೇ ವಹಿಸಲು ತೀರ್ಮಾನಿಸಿ ದ್ದಾನೆಂದು ತಿಳಿದಾಗ ಆಕೆಗೆ ಎಷ್ಟೊಂದು ಸಮಾಧಾನವಾಗಿರಬಹುದು!

ಮೊಲೆಯುಣಿಸುವಿಕೆ

ಈಗ ನೋಡಿ. ಅಲ್ಲಾಹನು ಯಾವ ರೀತಿ ತಾಯಿ-ಮಗುವನ್ನು ಒಂದುಗೂಡಿಸಿದ್ದಾನೆ. ಅರಮನೆಗಳಲ್ಲಿ ಮತ್ತು ಶ್ರೀಮಂತ ಮನೆತನಗಳಲ್ಲಿ ಮಕ್ಕಳಿಗೆ ಮೊಲೆಯುಣಿಸುವ ಪದ್ಧತಿ ಹಿಂದೆಯೂ ಇತ್ತು. ಈಗಲೂ ಇದೆ. ದಾದಿಯರು ಈ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಎಷ್ಟೆಲ್ಲ ದಾದಿಯರು ಮೊಲೆಯುಣಿಸಲಿಕ್ಕೆ ಬಂದರೋ ಮಗು ಯಾವ ಹೆಂಗಸಿನ ಮೊಲೆ ಕುಡಿಯಲೂ ಸಮ್ಮತಿಸಲಿಲ್ಲ. ಸಮ್ಮತಿಸುವುದಾದರೂ ಹೇಗೆ? ಅಲ್ಲಾಹನು ಹೇಳುತ್ತಾನೆ, "ನಾವು ಮೊದಲೇ ಎಲ್ಲ ಮೊಲೆಯುಣಿಸುವ ಹೆಂಗಸರನ್ನು ಮಗುವಿಗೆ ನಿಷಿದ್ಧಗೊಳಿಸಿದ್ದೆವು." ಅರಮನೆಯಲ್ಲಿ ಕೋಲಾಹಲವೆದ್ದಿತು. ಮಗುವಿಗೆ ಹಾಲುಣಿಸಬಲ್ಲಂತಹ ದಾದಿಗಾಗಿ ಹುಡುಕಾಟ ನಡೆಯಿತು. ಮೂಸಾರ ಸಹೋದರಿ ಹೊಂಚಿನಲ್ಲೇ ಇದ್ದಳಷ್ಟೆ. ಮಗುವಿಗೆ ಹಾಲುಣಿಸಬಲ್ಲಂತಹ ಒಬ್ಬಳನ್ನು ನಾನು ತೋರಿಸಿ ಕೊಡುತ್ತೇನೆಂಬ ಮಾಹಿತಿಯನ್ನು ಅರಮನೆಗೆ ಕಳಿಸಿದಳು ಮತ್ತು ತನ್ನ ತಾಯಿಯ ಹೆಸರನ್ನೇ ಸೂಚಿಸಿದಳು. ಈ ಎಲ್ಲ ಮಾತುಕತೆಗಳ ನಡುವೆ ಮಗುವಿಗೂ ತಾಯಿಗೂ ಏನಾದರೂ ಸಂಬಂಧವಿದೆಯೆನ್ನುವುದು ಬಹಿರಂಗವಾಗದಂತೆ ಜಾಗ್ರತೆ ಪಾಲಿಸಿದಳು. ಆದರಂತೆ ಮೂಸಾರ ತಾಯಿಯನ್ನು ಕರೆಸಲಾಯಿತು. ಏನದ್ಭುತ! ಯಾವ ದಾದಿಯ ಮೊಲೆ ಹಾಲನ್ನೂ ಕುಡಿಯಲೊಪ್ಪದ ಮಗು ಈ ಮಹಿಳೆಯ ಮೊಲೆಯನ್ನು ಸಮಾಧಾನದೊಂದಿಗೆ ಚೀಪುವುದನ್ನು ಕಂಡ ಜನರು ಎವೆಯಿಕ್ಕದೆ ನೋಡಿ ನಿಂತರು. ಈ ರೀತಿ ಅಲ್ಲಾಹನು ಒಂದೇ ಉಪಾಯದ ಮೂಲಕ ತಾಯಿ ಮಗುವನ್ನು ಒಂದುಗೂಡಿಸಿದನು. ಮಗುವಿನ ಆರೈಕೆಯನ್ನು ಅರಮನೆಯಲ್ಲೇ ಮಾಡುವ ವ್ಯವಸ್ಥೆ ಮಾಡಿದನು. ಎಲ್ಲ ಅಪಾಯಗಳಿಂದಲೂ ಅದನ್ನು ರಕ್ಷಿಸಿದನು. ಈ ಮೂಲಕ ತಮ್ಮ ಶಕ್ತಿ-ಪ್ರತಾಪಗಳಿಗಾಗಿ ಹೆಮ್ಮೆ ಪಡುವಂತಹ ಎಲ್ಲ ಮೂರ್ಖರಿಗೂ ಅಲ್ಲಾಹನ ವಿರುದ್ಧ ನಿಮ್ಮ ಯಾವ ಬುದ್ಧಿವಂತಿಕೆಯೂ ನಡೆಯದು, ಅಲ್ಲಾಹ್, ಆತನ ಪ್ರವಾದಿ ಮತ್ತು ವಿಶ್ವಾಸಿಗಳ ವಿರುದ್ಧ ನಿಮ್ಮೆಲ್ಲ ಕುತಂತ್ರಗಳು ವಿಫಲವಾಗುವುದು ಎಂಬುದನ್ನು ತೋರಿಸಿ ಕೊಟ್ಟನು.

❖ ❖ ❖

ಒಂದು ಘಟನೆ ಮತ್ತು ಮದ್‌ಯನ್‌ಗೆ ಪಲಾಯನ

ಮೂಸಾ(ಅ) ಫಿರ್‌ಔನನ ಅರಮನೆಯಲ್ಲಿ ರಾಜ ವೈಭವದಲ್ಲಿ ಬೆಳೆಯುತ್ತಾ ಯೌವನಾವಸ್ಥೆಗೆ ತಲಪಿದರು. ಅಲ್ಲಿ ಓರ್ವ ಉನ್ನತ ನಾಯಕ ಮತ್ತು ಮಾರ್ಗದರ್ಶಕನಿಗೆ ಅಗತ್ಯವಾಗಿರುವಂತಹ ಗುಣಗಳನ್ನು ಮೈಗೂಡಿಸಿಕೊಂಡರು.

"ಮೂಸಾ ತಮ್ಮ ತುಂಬು ಯೌವನಕ್ಕೆ ತಲಪಿದಾಗ ಹಾಗೂ ಅವರ ಬೆಳವಣಿಗೆ ಪೂರ್ತಿಗೊಂಡಾಗ ನಾವು ಅವರಿಗೆ 'ನಿರ್ಧಾರಶಕ್ತಿ'ಯನ್ನೂ ಜ್ಞಾನವನ್ನೂ ನೀಡಿದೆವು. ನಾವು ಸಜ್ಜನರಿಗೆ ಇದೇ ರೀತಿ ಸತ್ಫಲವನ್ನು ದಯಪಾಲಿಸುತ್ತೇವೆ." (ಪವಿತ್ರ ಕುರ್‌ಆನ್, 28:14)

ಒಂದು ದಿನ, ನಗರದ ಬೀದಿ ಕೇರಿಗಳಲ್ಲಿ ಪ್ರಶಾಂತ ವಾತಾವರಣವಿತ್ತು. ಜನರು ನೆಮ್ಮದಿಯಿಂದ ವಿರಮಿಸುತ್ತಿದ್ದರು. ಮೂಸಾ(ಅ) ನಗರಕ್ಕೆ ಬಂದರು. ಅವರು ನಗರದ ಪರಿಶೀಲನೆಗೆ ಬಂದಿರಬಹುದು. ಅದಕ್ಕಾಗಿ ಶಾಂತ ವಾತಾವರಣವನ್ನು ಆರಿಸಿರಬೇಕು. ಏಕೆಂದರೆ ನಿಬಿಡತೆಯ ಸಮಯಗಳಲ್ಲಿ ಯುವರಾಜರ ಸವಾರಿ ನಗರಕ್ಕೆ ಬಂದರೆ ಜನ ಕಿಕ್ಕಿರಿದು ನೆರೆಯುತ್ತಾರೆ. ನಗರ ಪರಿಶೀಲನೆ ಸಾಧ್ಯವಾಗುವುದಿಲ್ಲ. ಅವರು ಬಹುಶಃ ಬನೀ ಇಸ್ರಾಈಲರ ಗ್ರಾಮಗಳ ದಯನೀಯಾವಸ್ಥೆಯನ್ನು ತಿಳಿಯಲು ಹೊರಟಿರಬೇಕು. ರಾಜವಂಶದ ಓರ್ವ ವ್ಯಕ್ತಿ ಗುಲಾಮರ ಗ್ರಾಮಗಳಲ್ಲಿ ಸುತ್ತಾಡುವುದನ್ನು ಕಂಡು ಫಿರ್‌ಔನ್ ಮತ್ತು ಅವನ ಪರಿವಾರದವರನ್ನು ಬೆಚ್ಚಿ ಬೀಳಿಸದಿರಲೆಂದು ಜಾಗ್ರತೆ ಪಾಲಿಸಿರಬಹುದು.

ಕಿಬ್ತಿಯ ಕೊಲೆ

ಕಾರಣ ಏನೇ ಇರಲಿ. ಅವರು ನಗರ ಪ್ರವೇಶಕ್ಕೆ ಶಾಂತ ಸಮಯವನ್ನೇ ಆರಿಸಿದರು. ಅಲ್ಲಿ ನೋಡುತ್ತಾರೆ. ಇಬ್ಬರು ಪರಸ್ಪರ ಜಗಳಾಡುತ್ತಿದ್ದರು. ಅವರಲ್ಲೊಬ್ಬ ಇಸ್ರಾಈಲಿಯಾಗಿದ್ದ. ಇನ್ನೊಬ್ಬ ಕಿಬ್ತಿ. ಒಂದು ಮರ್ದಿತ ಜನಾಂಗದವನಾಗಿದ್ದುದರಿಂದ ಇಸ್ರಾಈಲಿಯು ಮಾನಸಿಕ ವಾಗಿಯೂ ದೈಹಿಕವಾಗಿಯೂ ಕುಗ್ಗಿ ಹೋಗುತ್ತಿದ್ದ. ಅತ್ತ ಯುವರಾಜನ ಸವಾರಿ ಬರುವುದನ್ನು ಕಂಡಾಗ ಆತ ಸಹಾಯಕ್ಕೆ ಕೂಗಿ ಕರೆದ. ಬಹುಶಃ ಮೂಸಾ

ಯುವರಾಜನಾಗಿದ್ದು ಬಡವರ ಮತ್ತು ದುರ್ಬಲರ ಸಹಾಯ ಮಾಡುವವರೆಂದು ಪ್ರಸಿದ್ಧರಾಗಿದ್ದುದರಿಂದಲೋ ಅಥವಾ ಅವರು ಓರ್ವ ಇಸ್ರಾಈಲಿ ಯುವರಾಜನೆಂದು ಪರಿಚಿತನಾಗಿದ್ದುದರಿಂದಲೋ ಆತ ಮೂಸಾರನ್ನು ಸಹಾಯಕ್ಕಾಗಿ ಕೂಗಿರಬಹುದು. ಒಟ್ಟಿನಲ್ಲಿ ಓರ್ವ ಮರ್ದಿತ ವ್ಯಕ್ತಿ ಪೆಟ್ಟು ತಿನ್ನುವುದನ್ನು ಕಂಡಾಗ ಮತ್ತು ಆತ ಸಹಾಯಕ್ಕಾಗಿ ಮೊರೆಯಿಡುವುದನ್ನು ಕೇಳಿದಾಗ ಮರ್ದಿತರಿಗೆ ಸಹಾಯ ಮಾಡುವ ಅವರ ಅಂತರ್ ಪ್ರಜ್ಞೆ ಜಾಗೃತಗೊಂಡಿತು. ಒಂದು ಇಡೀ ಜನಾಂಗವನ್ನು ಅಕ್ರಮ ದಬ್ಬಾಳಿಕೆಯಿಂದ ಮುಕ್ತಿ ನೀಡಬೇಕಾಗಿದ್ದ ವ್ಯಕ್ತಿಯು ಓರ್ವ ಮರ್ದಿತನ ಕೂಗು ಕೇಳಿ ಅವನ ಸಹಾಯಕ್ಕೆ ಧಾವಿಸದಿರುವುದಾದರೂ ಹೇಗೆ? ಅಲ್ಲಿ ಅದೇ ನಡೆಯಿತು. ಮೂಸಾ(ಅ) ಅವನ ಸಹಾಯಕ್ಕೆ ತಲಪಿದರು. ಆ ಅಕ್ರಮಿಗೆ ಒಂದು ಗುದ್ದು ನೀಡಿದರು. ವಿಧಿ ವಿಪರೀತವೆಂಬಂತೆ ಆ ಗುದ್ದಿನ ರಭಸಕ್ಕೆ ನೆಲಕ್ಕುರುಳಿದಾತ ಮೇಲೇಳಲೇ ಇಲ್ಲ, ಈಗ ಮೂಸಾ ಗಾಬರಿಗೊಂಡರು. ವಧಿಸುವ ಉದ್ದೇಶವಿರಲಿಲ್ಲ, ಆದರೂ ಆತ ವಧಿಸಲ್ಪಟ್ಟ, ಆ ಕೂಡಲೇ ಅವರು ತನ್ನ ಪ್ರಭುವಿನೊಂದಿಗೆ ವಿನಯದೊಂದಿಗೆ ಕ್ಷಮೆಯಾಚಿಸಿದರು. ಇನ್ನೆಂದೂ ಇಂತಹ ಕೃತ್ಯಕ್ಕೆ ಕೈ ಹಾಕಲಾರೆನೆಂದು ಪ್ರಮಾಣ ಮಾಡಿದರು. ಅತ್ಯಂತ ಕ್ಷಮಾಶೀಲನೂ ಕರುಣಾಮಯಿಯೂ ಆದ ಅಲ್ಲಾಹನು ಅವರನ್ನು ಕ್ಷಮಿಸಿ ಬಿಟ್ಟನು. ಅವರ ಕೃತ್ಯವನ್ನು ಮರೆಮಾಚಿದನು. ಯಾರಿಗೂ ಗೊತ್ತಾಗಲಿಲ್ಲ.

ಮಾರನೆಯ ದಿನ ಬೆಳಿಗ್ಗೆ ಮೂಸಾ(ಅ) ಪುನಃ ನಗರದೊಳಗೆ ಪ್ರವೇಶಿಸಿದಾಗ, ಹಿಂದಿನ ದಿವಸ ಸಹಾಯ ಮಾಡಿ ಬಿಡಿಸಿದ್ದ ಅದೇ ಇಸ್ರಾಈಲ್ಯನು ಇಂದು ಪುನಃ ಜಗಳಾಡುತ್ತಿದ್ದಾನೆ. ಮೂಸಾರು ಅವನನ್ನೇ ಗದರಿಸಿದರು. "ನೀನು ಜಗಳಗಂಟ, ಯಾವಾಗಲೂ ಜಗಳಾಡುತ್ತಿರುವೆ" ಎಂದು ಜರೆದರು. ತರುವಾಯ ಅವರು ಆ ಕಿಬ್ತಿಯನ್ನು ವಿಚಾರಿಸಲಿಕ್ಕಾಗಿ ಆತನತ್ತ ನಡೆದರು. ಆದರೆ ಇವರು ತನ್ನನ್ನೇ ಹೊಡೆಯಲು ಬರುತ್ತಿದ್ದಾರೆಂದು ಭಾವಿಸಿದ. ಆತ ನಿನ್ನೆಯ ಘಟನೆಯನ್ನು ನೋಡಿದ್ದ, ಮೂಸಾರ ಶಕ್ತಿ ಸಾಮರ್ಥ್ಯಗಳನ್ನೂ ಅರಿತುಕೊಂಡಿದ್ದ, ಆತ ತನಗೆ ದುರ್ಗತಿ ಬಂತೆಂದು ಭಾವಿಸಿ, ಕೂಡಲೇ ಬೊಬ್ಬಿರಿಯ ತೊಡಗಿದ. "ಓ ಮೂಸಾ! ನಿನ್ನೆ ನೀನು ಒಬ್ಬನನ್ನು ಕೊಂದಂತೆ ಇಂದು ನನ್ನನ್ನೂ ಕೊಲ್ಲ ಬಯಸಿರುವೆಯಾ?" ಈ ರೀತಿ ಆ ಮೂರ್ಖ ತನ್ನದೇ ಹಿತಚಿಂತಕನ ರಹಸ್ಯವನ್ನು ಬಯಲು ಮಾಡಿಬಿಟ್ಟ, ಈ ಘಟನೆಯನ್ನು ಕುರ್‌ಆನ್ ಸಂಕ್ಷಿಪ್ತವಾಗಿ ಹೀಗೆ ವಿವರಿಸುತ್ತದೆ:

"(ಇದನ್ನೂ ಸ್ಮರಿಸಿರಿ) ನೀವು ಒಬ್ಬನನ್ನು ವಧಿಸಿ ಬಿಟ್ಟಿದ್ದಿರಿ. ನಾವು ನಿಮ್ಮನ್ನು ಈ ತೊಂದರೆಯಿಂದ ಪಾರುಗೊಳಿಸಿದೆವು ಮತ್ತು ನಿಮ್ಮನ್ನು ವಿವಿಧ ಸತ್ವಪರೀಕ್ಷೆಗಳಿಂದ ಪಾರುಗಾಣಿಸಿದೆವು." **(ಪವಿತ್ರ ಕುರ್‌ಆನ್, 20:40)**

ಅದರ ವಿವರಣೆಯನ್ನು ಕುರ್‌ಆನಿನಲ್ಲಿ ಇನ್ನೊಂದೆಡೆ ಹೀಗೆ ನೀಡಲಾಗಿದೆ:

"(ಒಂದು ದಿನ) ನಗರವಾಸಿಗಳು ಅಲಕ್ಷ್ಯರಾಗಿದ್ದಾಗ ಅವರು ನಗರದೊಳಗೆ ಪ್ರವೇಶಿಸಿದರು. ಅಲ್ಲಿ ಅವರು ಇಬ್ಬರು ಜಗಳಾಡುತ್ತಿರುವುದನ್ನು ಕಂಡರು. ಒಬ್ಬನು ಅವರ ಸ್ವಂತ ಜನಾಂಗದವನಾಗಿದ್ದನು. ಇನ್ನೊಬ್ಬನು ಅವರ ಶತ್ರು ಜನಾಂಗಕ್ಕೆ ಸೇರಿದವನಾಗಿದ್ದನು. ಅವರ ಜನಾಂಗದವನು ಶತ್ರು ಜನಾಂಗದವನ ವಿರುದ್ಧ ಅವರನ್ನು ಸಹಾಯಕ್ಕಾಗಿ ಕೂಗಿದನು. ಮೂಸಾ ಅವನಿಗೆ ಒಂದು ಗುದ್ದು ಕೊಟ್ಟರು ಮತ್ತು ಅವನನ್ನು ಕೊನೆಗಾಣಿಸಿ ಬಿಟ್ಟರು. (ಈ ಕೃತ್ಯ ಸಂಭವಿಸಿ ಬಿಟ್ಟೊಡನೆ) ಮೂಸಾ, 'ಇದು ಶೈತಾನನ ಕೆಲಸ. ಅವನು ಮಹಾ ಶತ್ರುವೂ ಸುಸ್ಪಷ್ಟ ದಾರಿಗೆಡಿಸುವವನೂ ಆಗಿರುತ್ತಾನೆ' ಎಂದರು. ತರುವಾಯ ಅವರು, 'ನನ್ನ ಪ್ರಭೂ, ನನ್ನ ಮೇಲೆ ನಾನೇ ಅಕ್ರಮವೆಸಗಿ ಬಿಟ್ಟೆ, ನನ್ನನ್ನು ಕ್ಷಮಿಸು' ಎಂದರು. ಆ ಪ್ರಕಾರ ಅಲ್ಲಾಹನು ಅವರನ್ನು ಕ್ಷಮಿಸಿದನು. ಅವನು ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ. ಮೂಸಾ ಹೀಗೆ ಪ್ರತಿಜ್ಞೆ ಮಾಡಿದರು, 'ನನ್ನ ಪ್ರಭೂ, ನೀನು ನನ್ನ ಮೇಲೆ ಈ ಉಪಕಾರವೆಸಗಿರುವೆ. ಇನ್ನು ಮುಂದೆ ನಾನೆಂದೂ ಅಪರಾಧಿಗಳ ಸಹಾಯಕನಾಗಲಾರೆ.' ಮರುದಿನ ಮುಂಜಾನೆ ಹೆದರುತ್ತ, ಎಲ್ಲೆಲ್ಲೂ ಅಪಾಯವನ್ನೇ ಅನುಮಾನಿಸುತ್ತ ನಗರದಲ್ಲಿ ಹೋಗುತ್ತಿದ್ದಾಗ, ನಿನ್ನೆ ಅವರನ್ನು ಸಹಾಯಕ್ಕಾಗಿ ಕೂಗಿದ್ದ ವ್ಯಕ್ತಿಯೇ ಇಂದು ಪುನಃ ಕೂಗುತ್ತಿರುವುದನ್ನು ಕಂಡರು. ಮೂಸಾ ಅವನೊಡನೆ, 'ನೀನು ಮಹಾ ದಾರಿಗೆಟ್ಟವ' ಎಂದರು. ಅನಂತರ ಮೂಸಾ ಶತ್ರು ಜನಾಂಗದವನ ಮೇಲೆ ಆಕ್ರಮಣ ಮಾಡಲಿಚ್ಛಿಸಿದಾಗ ಅವನು- 'ಮೂಸಾ, ನೀನು ನಿನ್ನೆ ಒಬ್ಬನನ್ನು ಕೊಲೆ ಮಾಡಿದಂತೆಯೇ ಇಂದು ನನ್ನನ್ನೂ ಕೊಲೆ ಮಾಡಲು ಹೊರಟಿರುವೆಯಾ? ನೀನು ಈ ದೇಶದಲ್ಲಿ ದೊಡ್ಡ ವಿಧ್ವಂಸಕನಾಗಲಿಚ್ಛಿಸುತ್ತೀ, ಸುಧಾರಕನಾಗ ಬಯಸುವುದಿಲ್ಲ' ಎಂದು ಕೂಗಿದನು." (ಪವಿತ್ರ ಕುರ್‌ಆನ್, 28:15-19)

ಆ ಮೂರ್ಖ ಇಷ್ಟಕ್ಕೇ ನಿಲ್ಲಿಸಲಿಲ್ಲ, ತನ್ನ ಜನಾಂಗದ ಹಿತಚಿಂತಕನನ್ನು ಸಿಲುಕಿಸಿ ಹಾಕಲು ಪೂರ್ಣ ವ್ಯವಸ್ಥೆ ಮಾಡಿದನು. ಮಾತ್ರವಲ್ಲ, ತಾನು ನಿರಪರಾಧಿಯೆಂದು ಬಿಂಬಿಸಲು ಮತ್ತು ಸುತ್ತಮುತ್ತಲಿನ ಜನರ ಸಹಾನುಭೂತಿಯನ್ನು ಗಳಿಸಲು ಮೂಸಾರನ್ನೇ ಹಳಿಯತೊಡಗಿದ.

ಹತ್ಯೆಯ ಸಂಚು

ಇನ್ನೇನು? ಕೊಲೆಯ ಪುರಾವೆ ಸಿಕ್ಕಿಬಿಟ್ಟಿತ್ತು. ಒಂದು ವೇಳೆ ಬನೀ ಇಸ್ರಾಈಲರ ಪೈಕಿ ಯಾರಾದರೂ ಕೊಲ್ಲಲ್ಪಟ್ಟಿದ್ದರೆ ಯಾವ ವಿಚಾರಣೆಯೂ ನಡೆಯುತ್ತಿರಲಿಲ್ಲ, ಏಕೆಂದರೆ ಅವರು ಹುಟ್ಟಿದ್ದೇ ವಧಿಸಲ್ಪಡಲಿಕ್ಕಾಗಿತ್ತು. ಇಲ್ಲಿ ಪ್ರಕರಣವು ಓರ್ವ ಮೇಲ್ವರ್ಗದ ವ್ಯಕ್ತಿಗೆ ಸಂಬಂಧಿಸಿದ್ದಾಗಿತ್ತು. ಅದೂ ಕೂಡಾ ಬನೀ ಇಸ್ರಾಈಲರ ಒಬ್ಬನ ಕೈಯಲ್ಲಿ. ಕೊಲೆಯ ಸುದ್ದಿ ಕೂಡಲೇ ಅರಮನೆಗೆ ಮುಟ್ಟಿತು. ಮೊದಲೇ ಮೂಸಾರಿಂದ ಕಿರಿಕಿರಿ ಅನುಭವಿಸುತ್ತಿದ್ದ ಈಜಿಪ್ಟ್‌ನ ಸರದಾರರು ಕೂಡಲೇ ಒಟ್ಟಾದರು. ಸಮಾಲೋಚನೆ ನಡೆಸಿದರು. ಇದೊಂದು ಸ್ವರ್ಣಾವಕಾಶ. ಮೂಸಾ ತಪ್ಪಿಸಿಕೊಳ್ಳಬಾರದು. ಅವನನ್ನು ಕೊಲ್ಲಲೇಬೇಕೆಂಬ ತೀರ್ಮಾನಕ್ಕೆ

ಬಂದರು. ಆದರೆ ಅಲ್ಲಾಹನ ರಕ್ಷಣೆಯಲ್ಲಿರುವವರನ್ನು ಯಾರಿಗೆ ಏನು ಮಾಡಲು ಸಾಧ್ಯ? ಹುಟ್ಟಿದ ಕೂಡಲೇ ಅಕ್ರಮಿಗಳ ಕಪಿಮುಷ್ಟಿಯಿಂದ ರಕ್ಷಿಸಿದ, ಇದೇ ಅಕ್ರಮಿಗಳ ಮೂಲಕ ಪೋಷಿಸಿದ ಮತ್ತು ಮುಂದೆ ಪ್ರವಾದಿತ್ವ ನೀಡಬೇಕಾಗಿದ್ದ ರಕ್ಷಕನು ಅವರನ್ನು ನಾಶ ಪಡಿಸಲು ಬಿಡುವುದಾದರೂ ಹೇಗೆ? ಆದ್ದರಿಂದ ಅಲ್ಲಾಹನು ಅವರಿಗೆ ಕಣ್ತಪ್ಪಿಸುವ ಮಾರ್ಗವನ್ನು ಸೃಷ್ಟಿಸಿದನು.

ಮದ್‌ಯನ್‌ನತ್ತ ಪಲಾಯನ

"ಅನಂತರ ಒಬ್ಬನು ನಗರದ ಆ ತುದಿಯಿಂದ ಓಡುತ್ತಾ ಬಂದನು ಮತ್ತು 'ಮೂಸಾ, ಸರದಾರರ ನಡುವೆ ನಿನ್ನನ್ನು ಕೊಲೆ ಮಾಡುವ ಸಮಾಲೋಚನೆ ನಡೆಯುತ್ತಿದೆ. ಇಲ್ಲಿಂದ ಹೊರಟು ಹೋಗಿ ಬಿಡು. ನಾನು ನಿನ್ನ ಹಿತಚಿಂತಕನಾಗಿದ್ದೇನೆ' ಎಂದು ಹೇಳಿದನು. ಈ ಸುದ್ದಿಯನ್ನು ಕೇಳಿದೊಡನೆ ಮೂಸಾ ಭಯಭೀತರಾಗಿ ಹೊರಟು ಬಿಟ್ಟರು ಮತ್ತು ಅವರು, 'ನನ್ನ ಪ್ರಭೂ, ನನ್ನನ್ನು ಅಕ್ರಮಿಗಳಿಂದ ರಕ್ಷಿಸು' ಎಂದು ಪ್ರಾರ್ಥಿಸಿದರು. ಮೂಸಾ (ಈಜಿಪ್ಟ್‌ನಿಂದ) ಮದ್‌ಯನಿನ ಕಡೆಗೆ ಹೊರಟರು ಮತ್ತು 'ನನ್ನ ಪ್ರಭು ನನ್ನನ್ನು ಸರಿಯಾದ ಮಾರ್ಗದಲ್ಲಿ ನಡೆಸುವನೆಂಬ ನಿರೀಕ್ಷೆ ಇದೆ' ಎಂದರು." (ಪವಿತ್ರ ಕುರ್‌ಆನ್, 28:20-22)

ಬಹುಶಃ ಆ ಓಡಿಕೊಂಡು ಬಂದ ವ್ಯಕ್ತಿ ಫಿರ್‌ಔನನ ಆಸ್ಥಾನಿಕರಲ್ಲಾಗಿರಬಹುದು. ಅಲ್ಲಿನ ವಿದ್ಯಮಾನಗಳನ್ನು ಬಲ್ಲವನಾಗಿದ್ದಿರಬಹುದು. ಆತನಿಗೆ ಮೂಸಾರ ಕೊಲೆಯ ಸಂಚು ನಡೆಯುತ್ತಿದೆಯೆಂದು ತಿಳಿದದ್ದೇ ತಡ, ಓಡಿಕೊಂಡು ಬಂದು ಮೂಸಾರಿಗೆ ಪ್ರಾಣಾಪಾಯದ ಮುನ್ಸೂಚನೆ ನೀಡಿದ.

ಮೂಸಾರಿಗೆ ಯಾವ ಆಂದೋಲನವನ್ನು ಮುನ್ನಡೆಸಬೇಕಾಗಿತ್ತೋ ಅದಕ್ಕಾಗಿ ಅಗತ್ಯವಿರುವ ಗುಣ ವೈಶಿಷ್ಟ್ಯಗಳು ಮೊದಲೇ ಅವರಲ್ಲಿ ಬೆಳೆದು ಬರುತ್ತಿತ್ತು. ಅಲ್ಲಾಹನು ಯಾರಿಗೆ ಪ್ರವಾದಿತ್ವವನ್ನು ನೀಡುತ್ತಾನೋ ಅಥವಾ ಸುಧಾರಣಾ ಕಾರ್ಯಗಳಿಗಾಗಿ ನೇಮಿಸುತ್ತಾನೋ ಅವರಲ್ಲಿ ಅತ್ಯುತ್ತಮ ಗುಣ ವೈಶಿಷ್ಟ್ಯಗಳನ್ನು ಮೊದಲೇ ಸೃಷ್ಟಿಸಿರುತ್ತಾನೆ. ಮೂಸಾರು ತಮ್ಮ ಬದುಕಿನ ಅತ್ಯುತ್ತಮ ಭಾಗವಾದ ಬಾಲ್ಯ ಮತ್ತು ಯೌವನವನ್ನು ಫಿರ್‌ಔನನ ಅರಮನೆಯಲ್ಲಿ ಕಳೆದಿದ್ದರು. ಇಷ್ಟು ದೀರ್ಘ ಕಾಲ ಅಲ್ಲಿ ಕಳೆದಿದ್ದಾಗ ಅವರ ಉತ್ತಮ ಚಾರಿತ್ರ್ಯಗಳಿಂದ ಯಾರಾದರೂ ಪ್ರಭಾವಿತರಾಗದೆ ಇರಲು ಸಾಧ್ಯವೇ? ಅಂತಹದೇ ವ್ಯಕ್ತಿಯೊಬ್ಬ ಬಂದು ಅವರಿಗೆ ಸುದ್ದಿ ಮುಟ್ಟಿಸಿದ್ದ. ಮೂಸಾರು ಫಿರ್‌ಔನ್ ಮತ್ತವನ ಆಸ್ಥಾನಿಕರ ಸ್ವಭಾವಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಇನ್ನು, ಈ ಸುದ್ದಿ ಮುಟ್ಟಿಸಿದವನೂ ಪ್ರಾಮಾಣಿಕ ವ್ಯಕ್ತಿಯೇ ಆಗಿದ್ದ. ಆದ್ದರಿಂದ ಅದನ್ನು ನಂಬದಿರುವುದಾದರೂ ಹೇಗೆ? ಹಾಗಾಗಿ ಕೂಡಲೇ ಅವರು ಅಪಾಯವನ್ನು ಮನಗಂಡರು. ಅವನ ಸಲಹೆಯಂತೆ ಈಜಿಪ್ಟ್‌ನಿಂದ ಹೋಗುವುದೆಂದೇ ನಿರ್ಧರಿಸಿದರು. ಇದೊಂದು ದೊಡ್ಡ ಸವಾಲಾಗಿತ್ತು.

ಎಲ್ಲೆಲ್ಲೂ ಸರಕಾರದ ಚೆಕ್‌ಪೋಸ್ಟ್‌ಗಳಿದ್ದುವು. ಅವುಗಳಿಂದ ತಪ್ಪಿಸಿ ಪಾರಾಗುವುದು ಸುಲಭ ಸಾಧ್ಯವಾಗಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಓರ್ವ ಸಾಮಾನ್ಯ ವ್ಯಕ್ತಿಯಾಗಿದ್ದರೆ ಗಾಬರಿಗೊಂಡು ದಿಕ್ಕಾಪಾಲಾಗಿ ಓಡುತ್ತಿದ್ದ. ಆದರೆ ಮೂಸಾ(ಅ) ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಶ್ರೇಷ್ಠ ವ್ಯಕ್ತಿಯಾಗಿದ್ದರು. ಅವರು ಕೂಡಲೇ ತಮ್ಮ ಪ್ರಭುವನ್ನು ಮಾರ್ಗದರ್ಶನಕ್ಕಾಗಿ ಕೂಗಿ ಕೊಂಡರು. ತನ್ನ ಪ್ರಭುವಿನತ್ತ ಮರಳುವವನು ಎಂದೂ ನಿರಾಶನಾಗುವುದಿಲ್ಲ. ಹಾಗೆಯೇ ಅವರಿಗೆ ಮಾರ್ಗದರ್ಶನ ಲಭಿಸಿತು. ಅವರು ಈಜಿಪ್ಟ್‌ನ ಪೂರ್ವಕ್ಕಿರುವ ಅತಿ ಸಮೀಪದ ಹಾಗೂ ಫಿರ್‌ಔನನ ಅಧಿಕಾರ ವ್ಯಾಪ್ತಿಯಿಂದ ಹೊರಗಿರುವ ಮದ್‌ಯನ್‌ನತ್ತ ಹೊರಟು ಹೋದರು.

❖ ❖ ❖

ನಿರಾಶ್ರಿತ ಜೀವನದ ಆರಂಭ

ಬಹಳ ದಿನಗಳ ಪಾದಯಾತ್ರೆಯ ಬಳಿಕ ಹೇಗೂ ಮದ್‌ಯನ್‌ಗೆ ತಲಪಿದರು. ಅಲ್ಲಿಗೆ ಹೋದಾಗ, ಅಲ್ಲಾಹನು ತನಗೆ ಆಶ್ರಯ ಮತ್ತು ಆಹಾರದ ವ್ಯವಸ್ಥೆಯನ್ನು ಮೊದಲೇ ಮಾಡಿಟ್ಟಿದ್ದಾನೆಂಬುದು ಅವರ ಗಮನಕ್ಕೆ ಬಂತು. ವಾಸ್ತವದಲ್ಲಿ ಅಲ್ಲಾಹನ ಮೇಲೆ ಅಚಂಚಲ ಭರವಸೆಯಿರಿಸುವವರಿಗೆ ಆತನು ಅದರ ವ್ಯವಸ್ಥೆ ಮಾಡುತ್ತಾನೆಂಬುದೇ ಸತ್ಯ. ಅನಂತರ ಏನೆಲ್ಲ ಸಂಭವಿಸಿತೋ ಅದನ್ನು ಕುರ್‌ಆನಿನ ಮಾತಿನಲ್ಲಿ ಕೇಳಿರಿ:

"ಅವರು ಮದ್‌ಯನಿನ ಬಾವಿಯ ಬಳಿಗೆ ತಲುಪಿದಾಗ ಅನೇಕ ಜನರು ತಮ್ಮ ಜಾನುವಾರುಗಳಿಗೆ ನೀರು ಕುಡಿಸುತ್ತಿರುವುದನ್ನೂ ಅವರಿಂದ ದೂರ ಒಂದೆಡೆ ಇಬ್ಬರು ಮಹಿಳೆಯರು ತಮ್ಮ ಜಾನುವಾರುಗಳನ್ನು ತಡೆಯುತ್ತಿರುವುದನ್ನೂ ಕಂಡರು. ಮೂಸಾ ಆ ಮಹಿಳೆಯರೊಡನೆ, 'ನಿಮಗೇನು ತೊಂದರೆಯಾಗಿದೆ?' ಎಂದು ಕೇಳಿದರು. ಆಗ ಅವರು, ಈ ಕುರುಬರು ತಮ್ಮ ಜಾನುವಾರುಗಳನ್ನು ಕೊಂಡು ಹೋಗುವ ವರೆಗೂ ನಾವು ನಮ್ಮ ಜಾನುವಾರುಗಳಿಗೆ ನೀರು ಕುಡಿಸುವಂತಿಲ್ಲ ಮತ್ತು ನಮ್ಮ ತಂದೆ ಓರ್ವ ಅತಿ ವೃದ್ಧರಾಗಿದ್ದಾರೆ ಎಂದರು.

ಇದನ್ನು ಕೇಳಿ ಮೂಸಾ, ಅವರ ಜಾನುವಾರುಗಳಿಗೆ ನೀರು ಕುಡಿಸಿದರು. ತರುವಾಯ ಒಂದು ನೆರಳಿರುವ ಜಾಗಕ್ಕೆ ಹೋಗಿ ಕುಳಿತರು ಮತ್ತು 'ಪ್ರಭೂ, ನೀನು ನನ್ನ ಮೇಲೆ ಯಾವ ಹಿತವನ್ನಿಳಿಸಿದರೂ ನಾನು ಅದರ ಅಪೇಕ್ಷಕನಾಗಿದ್ದೇನೆ' ಎಂದರು.

(ಸ್ವಲ್ಪ ಹೊತ್ತಿನಲ್ಲೇ) ಆ ಇಬ್ಬರು ಮಹಿಳೆಯರಲ್ಲಿ ಒಬ್ಬಳು ಲಜ್ಜೆಯೊಂದಿಗೆ ನಡೆಯುತ್ತಾ ಅವರ ಬಳಿಗೆ ಬಂದಳು ಮತ್ತು, 'ತಾವು ನಮಗಾಗಿ ಜಾನುವಾರುಗಳಿಗೆ ನೀರು ಕುಡಿಸಿದುದರ ಪ್ರತಿಫಲವನ್ನು ತಮಗೆ ಕೊಡಲಿಕ್ಕಾಗಿ ನನ್ನ ತಂದೆ ತಮ್ಮನ್ನು ಕರೆಯುತ್ತಿದ್ದಾರೆ' ಎಂದಳು. ಮೂಸಾ ಅವರ ಬಳಿಗೆ ತಲಪಿದಾಗ ಮತ್ತು ತಮ್ಮ ಸಂಪೂರ್ಣ ವೃತ್ತಾಂತವನ್ನು ಅವರಿಗೆ ಹೇಳಿ ತಿಳಿಸಿದಾಗ ಅವರು, 'ಕೊಂಚವೂ ಹೆದರಬೇಡಿರಿ. ಈಗ ನೀವು ಅಕ್ರಮಿಗಳಿಂದ ಪಾರಾಗಿ ಬಿಟ್ಟಿದ್ದೀರಿ' ಎಂದರು.

ಆ ಇಬ್ಬರು ಮಹಿಳೆಯರಲ್ಲಿ ಒಬ್ಬಳು ತನ್ನ ತಂದೆಯೊಡನೆ, 'ಅಪ್ಪಾ, ಇವರನ್ನು ನೌಕರನಾಗಿ ಇರಿಸಿಕೊಳ್ಳಿರಿ. ನೀವು ನೌಕರನಾಗಿ ಇರಿಸಿಕೊಳ್ಳುವವನು ಬಲಿಷ್ಠನೂ ಪ್ರಾಮಾಣಿಕನೂ ಆಗಿರಬೇಕಲ್ಲವೇ' ಎಂದಳು.

ಅವಳ ತಂದೆಯು (ಮೂಸಾರೊಡನೆ), 'ನೀವು ಎಂಟು ವರ್ಷಗಳ ವರೆಗೆ ನನ್ನಲ್ಲಿ ನೌಕರಿ ಮಾಡಬೇಕೆಂಬ ಶರತ್ತಿನ ಮೇಲೆ ನಾನು ನನ್ನ ಈ ಇಬ್ಬರು ಪುತ್ರಿಯರಲ್ಲಿ ಒಬ್ಬಳನ್ನು ನಿಮಗೆ ವಿವಾಹ ಮಾಡಿಸಲಿಚ್ಛಿಸುತ್ತೇನೆ. ಇನ್ನು ನೀವು ಹತ್ತು ವರ್ಷ ಪೂರ್ತಿಗೊಳಿಸಿ ಬಿಟ್ಟರೆ ಅದು ನಿಮ್ಮಿಷ್ಟ, ನಾನು ನಿಮಗೆ ಕಷ್ಟ ಕೊಡಲಿಚ್ಛಿಸುವುದಿಲ್ಲ. ಅಲ್ಲಾಹನಿಚ್ಛಿಸಿದರೆ ನೀವು ನನ್ನನ್ನು ಸಜ್ಜನನಾಗಿ ಕಾಣುವಿರಿ' ಎಂದರು.

ಆಗ ಮೂಸಾ, 'ಇದು ನನ್ನ ಮತ್ತು ನಿಮ್ಮ ನಡುವೆ ಇತ್ಯರ್ಥಗೊಂಡಿತು. ನಾನು ಈ ಎರಡು ಅವಧಿಗಳಲ್ಲಿ ಯಾವುದನ್ನೇ ಪೂರ್ತಿಗೊಳಿಸಿದರೂ ಆ ಬಳಿಕ ಬೇರೇನೂ ಅತಿರೇಕ ನನ್ನ ಮೇಲಾಗಬಾರದು. ನಾವು ಮಾಡುತ್ತಿರುವ ಈ ಎಲ್ಲ ಕರಾರುಗಳ ಬಗ್ಗೆ ಅಲ್ಲಾಹನು ಕಾವಲಾಗಿರುತ್ತಾನೆ' ಎಂದು ಉತ್ತರಿಸಿದರು." (ಪವಿತ್ರ ಕುರ್‌ಆನ್, 28:23-28)

ಮೂಸಾ(ಅ) ಹಸಿವು ಬಾಯಾರಿಕೆಯಿಂದ ಕಂಗಾಲಾಗಿದ್ದರು. ನಡೆದೂ ನಡೆದೂ ತುಂಬಾ ದಣಿದಿರಬಹುದು. ಯಾರೂ ಸಹಾಯಕರಿಲ್ಲ. ಒಬ್ಬನೇ ದಾರಿ ತಪ್ಪಿ ಎಲ್ಲಾದರೂ ಮರುಭೂಮಿಯಲ್ಲೇ ಅಡ್ಡಾಡಿ ಅಲ್ಲಿಯೇ ಸಾಯುವೆನೋ ಎಂಬ ಭೀತಿ ಅವರನ್ನು ಕಾಡುತ್ತಿತ್ತು. ಇಂತಹ ನಿರ್ಣಾಯಕ ಸಮಯದಲ್ಲಿ ಸಹಾಯಕ್ಕೆ ಅಲ್ಲಾಹನ ಹೊರತು ಯಾರೂ ಇರುವುದಿಲ್ಲ. ಇಂತಹ ದುಃಸ್ಥಿತಿಯಲ್ಲೇ ಅಲ್ಲಾಹನ ಸ್ಮರಣೆಯು ಮನಸ್ಸಿಗೆ ಶಾಂತಿ-ಸಮಾಧಾನ ನೀಡುತ್ತದೆ.

"ಇಂತಹವರೇ (ಈ ಪ್ರವಾದಿಯ ಆಹ್ವಾನವನ್ನು) ಸ್ವೀಕರಿಸಿದ್ದಾರೆ ಮತ್ತು ಅವರ ಹೃದಯಗಳಿಗೆ ಅಲ್ಲಾಹನ ಸ್ಮರಣೆಯಿಂದ ಶಾಂತಿಯೊದಗುತ್ತದೆ. ಕೇಳಿರಿ, ಮನಶ್ಶಾಂತಿ ಒದಗುವುದು ಅಲ್ಲಾಹನ ಸ್ಮರಣೆಯಿಂದಲೇ ಎಂಬುದು ಖಚಿತ."

(ಪವಿತ್ರ ಕುರ್‌ಆನ್, 13:28)

ಬಾಲ್ಯದಿಂದಲೇ ಅಲ್ಲಾಹನ ಅನುಗ್ರಹಗಳನ್ನು ಸದಾ ನೋಡುತ್ತಾ ಬಂದಿದ್ದ ಮೂಸಾ(ಅ) ಅವನ ಸ್ಮರಣೆಯಿಂದ ಅಲಕ್ಷ್ಯರಾಗುವುದಾದರೂ ಹೇಗೆ? ಅವರು ಕೂಡಲೇ ಅಲ್ಲಾಹನ ಮೊರೆ ಹೊಕ್ಕರು. ಅತ್ಯಂತ ದೈನ್ಯತೆಯೊಂದಿಗೆ ಅವನನ್ನು ಪ್ರಾರ್ಥಿಸಿದರು. ದೃಢ ನಂಬಿಕೆಯೊಂದಿಗೆ, "ನನ್ನ ಪ್ರಭು ನನ್ನನ್ನು ಸರಿಯಾದ ದಾರಿಯಲ್ಲೇ ಹಾಕುವನೆಂದು ನಿರೀಕ್ಷಿಸುತ್ತೇನೆ" ಎಂದು ಬಿನ್ನವಿಸಿದರು.

ಹಾಗೆಯೇ ಸಂಭವಿಸಿತು. ಅಲ್ಲಾಹನು ಅವರಿಗೆ ಸುರಕ್ಷಿತ ಮಾರ್ಗವನ್ನು ತೋರಿಸಿದನು. ಮಾತ್ರವಲ್ಲ, ಕ್ಷೇಮಕರವಾಗಿ ಅವರನ್ನು ಗುರಿಗೆ ತಲಪಿಸಿದನು. ಅಷ್ಟೇ ಅಲ್ಲ, ಅವರ ಮುಂದಿನ ಬದುಕಿನ ದಿಕ್ಕು ನಿರ್ಣಯಿಸಬಲ್ಲಂತಹ ಒಂದು ಸ್ಥಾನದಲ್ಲಿ ಅವರನ್ನು ತಂದು ನಿಲ್ಲಿಸಿದನು.

ಮೂಸಾರು ಮದ್‌ಯನ್‌ನ ಬಾವಿಯ ಹತ್ತಿರ ಬಂದಾಗ ಅಲ್ಲಿ ಜನರು ತಮ್ಮ ಜಾನುವಾರುಗಳಿಗೆ ನೀರು ಕುಡಿಸುತ್ತಿರುವುದನ್ನು ಕಂಡರು. ಒಬ್ಬೊಬ್ಬರಾಗಿ ಬಂದು ತಮ್ಮ

ಜಾನುವಾರುಗಳಿಗೆ ನೀರು ಕುಡಿಸಿ ಹೋಗುತ್ತಿದ್ದರು. ಅಲ್ಲೇ ಇಬ್ಬರು ಮಹಿಳೆಯರು ಅಸಹಾಯಕತೆಯೊಂದಿಗೆ ತಮ್ಮ ಸರದಿಗಾಗಿ ಕಾಯುತ್ತಿದ್ದರು. ಈ ದೃಶ್ಯ ಕಂಡು ಮೂಸಾರಿಗೆ ಸಹಿಸಲಾಗಲಿಲ್ಲ. ಒಂದು ಇಡೀ ಮರ್ದಿತ ಜನಾಂಗವನ್ನು ಮುಂದೆ ವಿಮೋಚಿಸಬೇಕಾಗಿದ್ದ ಅವರು ಇಬ್ಬರು ಅಸಹಾಯಕ ಹೆಣ್ಣು ಮಕ್ಕಳ ಮರ್ದಿತಾವಸ್ಥೆಯನ್ನು ಕಂಡು ಸಹಿಸುವುದು ಸಾಧ್ಯವೇ? ಅವರು ಎದ್ದು ನಿಂತರು. ನೇರವಾಗಿ ಮಹಿಳೆಯರ ಬಳಿಗೆ ಹೋಗಿ ಏನು ವಿಷಯವೆಂದು ಕೇಳಿದರು. ಓರ್ವ ಆರೋಗ್ಯವಂತ ವ್ಯಕ್ತಿ ತಮ್ಮ ಮೇಲೆ ಅನುಕಂಪ ವ್ಯಕ್ತ ಪಡಿಸುತ್ತಿರುವುದನ್ನು ಕಂಡಾಗ ಅವರು ತಮ್ಮ ಸಂಪೂರ್ಣ ಅಳಲನ್ನು ಅವರ ಮುಂದಿಟ್ಟರು. ಅವರು ಹೇಳಿದರು, "ಇಲ್ಲಿ ಬಲಾಢ್ಯರ ರಾಜ್ಯವಿದೆ. ಅವರು ಮೊದಲು ತಮ್ಮ ಜಾನುವಾರು ಗಳಿಗೆ ನೀರು ಕುಡಿಸುತ್ತಾರೆ. ಅವರು ಹೋದ ನಂತರ ನಾವು ನೀರು ಕುಡಿಸಬೇಕು. ನಮ್ಮ ಮನೆಯಲ್ಲಿ ಯಾರೂ ಇಲ್ಲ. ಒಬ್ಬ ತಂದೆ ಮಾತ್ರ ಇದ್ದಾರೆ. ಅವರು ತುಂಬಾ ವೃದ್ಧರು. ನಡೆಯಲಿಕ್ಕೂ ಶಕ್ತಿಯಿಲ್ಲ. ಇತರರ ಕರುಣೆಯ ಮೇಲೆ ಅವರು ಬದುಕುತ್ತಿದ್ದಾರೆ." ಮೂಸಾರಿಂದ(ಅ) ತಡೆಯಲಾಗಲಿಲ್ಲ. ಅವರು ಹೇಳಿದರು, "ತನ್ನಿ, ನಾನು ನಿಮ್ಮ ಜಾನುವಾರುಗಳಿಗೆ ನೀರು ಕುಡಿಸುತ್ತೇನೆ." ಈ ಮಹಿಳೆಯರ ಸರದಿಯ ಹಕ್ಕನ್ನು ಕಸಿದು ಮೊದಲೇ ಅಲ್ಲಿ ಸ್ಥಳ ಪಡೆದಿದ್ದವರು ಮೂಸಾರ ವ್ಯಕ್ತಿತ್ವ, ಶಕ್ತಿ ಸಾಮರ್ಥ್ಯ ಮತ್ತು ಧೈರ್ಯವನ್ನು ನೋಡಿ ಪ್ರಭಾವಿತರಾದರು. ಅವರು ಕೂಡಲೇ ದಾರಿ ಬಿಟ್ಟುಕೊಟ್ಟರು. ಮೂಸಾರು ಜಾನುವಾರುಗಳಿಗೆ ನೀರು ಕುಡಿಸಿ ಅವುಗಳನ್ನು ಮಹಿಳೆಯರ ವಶಕ್ಕೊಪ್ಪಿಸಿದರು. ತಾನು ಹೋಗಿ ಒಂದು ಮರದ ಕೆಳಗೆ ಕುಳಿತುಕೊಂಡರು.

ಈ ಇಬ್ಬರು ಯುವತಿಯರು ಮದ್‌ಯನಿನ ಪ್ರಸಿದ್ಧ ಸುಧಾರಕರಾಗಿದ್ದ ರವಾಯಿಲ್‌ರ ಪುತ್ರಿಯರಾಗಿದ್ದರು. ಅವರು ಮನೆಗೆ ತಲುಪುತ್ತಲೇ ಅಂದು ನಡೆದ ವೃತ್ತಾಂತವನ್ನು ತಂದೆಗೆ ತಿಳಿಸಿದರು. ಅವರ ಸಹಾನುಭೂತಿ, ಧೈರ್ಯ, ದೇಹಬಲ, ಸಾತ್ವಿಕತೆ ಹಾಗೂ ನಿರಪೇಕ್ಷತೆಯನ್ನು ಚೆನ್ನಾಗಿ ಕೊಂಡಾಡಿದರು. ತಂದೆಗೆ ಮಕ್ಕಳ ಬಾಯಿಯಿಂದ ವಿಷಯ ಕೇಳಿ ಅವರನ್ನು ಭೇಟಿಯಾಗುವ ಬಯಕೆಯುಂಟಾಯಿತು. ಅವರು ತನ್ನ ಓರ್ವ ಪುತ್ರಿಯೊಂದಿಗೆ ಹೇಳಿದರು, "ಆ ವ್ಯಕ್ತಿಯನ್ನು ಕರೆ ತಾ. ಆತನು ಮಾಡಿದ ಉಪಕಾರಕ್ಕೆ ಪ್ರತಿಫಲವಾಗಿ ಮತ್ತು ಆವನು ವಹಿಸಿದ ಶ್ರಮಕ್ಕಾಗಿ ನಾನು ಅವನಿಗೇನಾದರೂ ಮಜೂರಿ ಕೊಡುತ್ತೇನೆ." ಮಗಳು ತಂದೆಯ ಆದೇಶವನ್ನು ಶಿರಸಾ ಪಾಲಿಸಿದಳು. ಅತ್ಯಂತ ನಾಚಿಕೆ ಯಿಂದ ಅಳುಕುತ್ತಾ ತಲೆ ತಗ್ಗಿಸುತ್ತಾ, ಬಹಳ ಮರ್ಯಾದೆಯಿಂದ ಹೆಜ್ಜೆ ಹಾಕುತ್ತಾ, ಆಕೆ ಮೂಸಾರ ಬಳಿಗೆ ಬಂದಳು. ದೇಹದ ಉಬ್ಬು ತಗ್ಗುಗಳನ್ನು ಪ್ರದರ್ಶಿಸುತ್ತಾ ಪುರುಷರ ಮಧ್ಯೆ ತಿರುಗಾಡುವ ಇಂದಿನ ಮಾಡರ್ನ್ ಮಹಿಳೆಯರು ಈ ಘಟನೆಯಿಂದಾದರೂ ಪಾಠ ಕಲಿಯುವರೆ! ಇಂದಿಗೆ ಎರಡೂವರೆ ಸಾವಿರ ವರ್ಷಗಳ ಹಿಂದೆಯೂ ಸ್ತ್ರೀತ್ವವು ಎಷ್ಟು ಉನ್ನತ ಮಟ್ಟದಲ್ಲಿತ್ತೆಂಬುದನ್ನು ಅರಿಯುವರೆ! ಒಂದು ಮರುಭೂಮಿಯ ಪರಿಸರದಲ್ಲಿ

ಬೆಳೆಯುವ ಮಹಿಳೆ ತನ್ನ ಮಾನವನ್ನು ಹೇಗೆ ಕಾಪಾಡಿಕೊಂಡಿದ್ದಾಳೆ ನೋಡಿ. ಅಂದಿನ ಪರಿಸ್ಥಿತಿ ಮತ್ತು ಅಗತ್ಯಗಳಿಗೆ ತಕ್ಕಂತೆ ಆ ಹೆಣ್ಣು ಮಗಳು ಪುರುಷರಂತೆ ವರ್ತಿಸಬೇಕಾಗಿತ್ತು. ಆದರೆ ಆ 'ಅಂಧಕಾರಮಯ' ಯುಗದಲ್ಲೂ ಓರ್ವ ಸಭ್ಯ ಹೆಣ್ಣು ಹೆಣ್ತನ, ಲಜ್ಜೆ-ನಾಚಿಕೆ, ಮಾನ-ಮರ್ಯಾದೆ ಮತ್ತು ಸಭ್ಯತೆಯೆಂದರೇನೆಂಬುದನ್ನು ಅರಿತಿದ್ದಳು. ಓರ್ವ ಹೆಣ್ಣು ಈ ಗುಣಗಳಿಂದ ಬರಿದಾಗಿದ್ದರೆ ಬೇರೇನಾದರೂ ಆಗಬಹುದು, ಆದರೆ ಹೆಣ್ಣು ಮಾತ್ರ ಆಗಿರಲಾರಳು. ಎಂತಹ ಮಹಿಳೆ! ಮಾನವತೆಯು ಹೆಮ್ಮೆ ಪಡುವ ಹಾಗೂ ಲೋಕದ ಚಿತ್ರಣವನ್ನೇ ಬದಲಿಸಬಲ್ಲಂತಹ ಸಂತಾನವನ್ನು ತನ್ನ ಮಡಿಲಲ್ಲಿ ಪೋಷಿಸಿ ಬೆಳೆಸುವ ಹೆಣ್ಣು!

ಒಟ್ಟಿನಲ್ಲಿ ಹುಡುಗಿ ಮೂಸಾರ ಬಳಿ ತೆರಳಿ, "ನಮ್ಮ ತಂದೆ ನಿಮ್ಮನ್ನು ಕರೆಯುತ್ತಾರೆ. ನಿಮ್ಮೊಂದಿಗೆ ಮಾತನಾಡ ಬಯಸುತ್ತಾರೆ. ಅವರು ನಿಮ್ಮ ಸ್ಥಿತಿಗತಿಗಳನ್ನು ಅರಿತು ನೀವು ಮಾಡಿದಂತಹ ಉಪಕಾರಕ್ಕೆ ಪ್ರತಿಫಲ ನೀಡಬಯಸಿದ್ದಾರೆ" ಎಂದು ಹೇಳಿದರು. ಮೂಸಾ(ಅ) ಯಾವ ಪರಿಸರದಲ್ಲಿ ಬೆಳೆದಿದ್ದರೋ ಮತ್ತು ಎಂತಹ ಪ್ರಕೃತಿಯನ್ನು ಅಲ್ಲಾಹನು ಅವನಿಗೆ ನೀಡಿದ್ದನೋ ಅದರ ಪ್ರಕಾರ ಯಾರಿಗಾದರೂ ಸಹಾಯ ಮಾಡಿದರೆ ಅದಕ್ಕೆ ಪ್ರತಿಫಲ ಬಯಸುವುದು ಅವರ ಜಾಯಮಾನವಾಗಿರಲಿಲ್ಲ, ಆದರೆ ವಿವಶಾವಸ್ಥೆಯು ಮಾನವನನ್ನು ಅದಕ್ಕೂ ನಿರ್ಬಂಧಿಸುತ್ತದೆ. ಅಂದು ಅವರು ಸಿಲುಕಿದ್ದ ಸಂಕಷ್ಟದಲ್ಲಿ, ತನಗೆ ಯಾರಾದರೂ ಹಿತಚಿಂತಕರು ಸಿಕ್ಕಿದ್ದರೆ, ಅವರ ಬಳಿ ತನ್ನ ಪರಿಸ್ಥಿತಿಯನ್ನು ಹೇಳಿ ತನ್ನ ಭವಿಷ್ಯದ ಕುರಿತು ಅವರೊಂದಿಗೆ ಸಮಾಲೋಚಿಸಬಹುದಿತ್ತು ಎಂದು ಚಿಂತಿಸುತ್ತಿದ್ದರು. ಅತ್ತ ಫಿರ್‌ಔನನು ಬೆನ್ನಟ್ಟಬಹುದೆಂಬ ಭಯದಿಂದಾಗಿ ತನಗೆಲ್ಲಾದರೂ ಆಶ್ರಯ ಸಿಗುತ್ತಿದ್ದರೆ ನಿಶ್ಚಿಂತೆಯಿಂದ ಇರಬಹುದಿತ್ತೆಂದೂ ಬಯಸುತ್ತಿದ್ದರು. ಮೂಸಾರು ತನ್ನ ಪ್ರಭುವಿನಲ್ಲಿ ಮಾಡಿದ, 'ಪ್ರಭೂ, ನೀನು ಯಾವ ಒಳಿತನ್ನು ಇಳಿಸುವೆಯೋ ನಾನು ಅದರ ಅಪೇಕ್ಷಕನಾಗಿದ್ದೇನೆ' ಎಂಬ ಪ್ರಾರ್ಥನೆಯು ಈ ರೂಪದಲ್ಲಿ ಈಡೇರುವುದನ್ನು ಕಂಡು ಆ ಹಿರಿಯರ ಭೇಟಿಗಾಗಿ ಎದ್ದು ನಡೆದರು. ಅವರಲ್ಲಿ ತಮ್ಮ ವೃತ್ತಾಂತವನ್ನೆಲ್ಲಾ ಎಳೆಎಳೆಯಾಗಿ ವಿವರಿಸಿದರು. ಅವರ ಮಾತನ್ನು ಕೇಳಿ ಆ ಹಿರಿಯರು ಹೀಗೆಂದರು, "ಗಾಬರಿಗೊಳ್ಳುವುದು ಬೇಡ. ನೀವು ನಮ್ಮ ರಕ್ಷಣೆಯಲ್ಲಿರುವಿರಿ. ಈ ಪ್ರದೇಶವು ಫಿರ್‌ಔನನ ಆಡಳಿತ ಕ್ಷೇತ್ರದಿಂದ ಹೊರಗಿದೆ. ಅವನು ನಿಮ್ಮನ್ನು ಏನೂ ಮಾಡಲಾರ." ಆಗ ಹುಡುಗಿಯರು, ಆ ವ್ಯಕ್ತಿ ಒಬ್ಬಂಟಿಯಾಗಿದ್ದಾರೆ. ನಿರಾಶ್ರಿತನಾಗಿದ್ದಾರೆ, ಅಸಹಾಯಕನಾಗಿದ್ದಾರೆ. ಸಹಾಯಕ್ಕೆ ಅರ್ಹನಾಗಿದ್ದಾರೆ ಎಂದು ಗ್ರಹಿಸಿಕೊಂಡರು. ಅವರಿಗೂ ಅವರ ಸೇವೆಗೈಯುವ ಮತ್ತು ಕೆಲಸ ಕಾರ್ಯಗಳನ್ನು ನೋಡಿಕೊಳ್ಳುವ ಓರ್ವ ವ್ಯಕ್ತಿಯ ಅಗತ್ಯವಿತ್ತು. ಹಾಗೆ ಅವರು ತಂದೆಗೆ ಈ ರೀತಿ ಸಲಹೆ ನೀಡಿದರು, "ಅಪ್ಪಾ! ನಮಗೋರ್ವ ಸೇವಕನ ಅಗತ್ಯವಿದೆಯಷ್ಟೆ, ಇವರನ್ನೇ ನೌಕರನಾಗಿ ನೇಮಿಸಿದರೆ ಹೇಗೆ? ಇವರು ಗಟ್ಟಿಮುಟ್ಟಾಗಿದ್ದಾರೆ. ಆರೋಗ್ಯವಂತರಾಗಿದ್ದಾರೆ. ಧೀರ ಶೂರರಾಗಿದ್ದಾರೆ. ಪ್ರಾಮಾಣಿಕನೂ ಉತ್ತಮ ಚಾರಿತ್ರ್ಯವಂತನೂ ಆಗಿದ್ದಾರೆ." ಯಾವ

ವ್ಯಕ್ತಿಯನ್ನು ಅವರು ನೌಕರನಾಗಿ ನೇಮಿಸಬೇಕೆಂದು ಶಿಫಾರಸು ಮಾಡುತ್ತಿದ್ದರೋ ಅವರಲ್ಲೋರ್ವ ಸಹೋದರಿಯ ಭವಿಷ್ಯವು ಅವರೊಂದಿಗೇ ಜೋಡಿಸಲ್ಪಟ್ಟಿದೆಯೆಂಬ ವಿಚಾರ ಅವರಿಗೇನು ಗೊತ್ತು! ವಾಸ್ತವದಲ್ಲಿ ಅಲ್ಲಾಹನ ಯೋಜನೆಗಳನ್ನು ಅರಿತಿರುವವರು ಬಹಳ ಕಡಿಮೆ.

ಹಿರಿಯರಾದ ರವಾಈಲ್ ಓರ್ವ ಅನುಭವಿ ಹಾಗೂ ಜನರ ಸ್ವಭಾವವನ್ನು ಅರಿಯುವವರಾಗಿದ್ದರು. ಅವರು ಮೂಸಾರನ್ನು ನೋಡಿಯೇ ಈ ವ್ಯಕ್ತಿ ನೌಕರನಾಗಿ ನೇಮಿಸಲ್ಪಡಲು ಅರ್ಹನಲ್ಲ, ಇವನ ಗುಣ-ನಡತೆಗಳು, ರೀತಿ-ನೀತಿಗಳು ಹಾಗೂ ಚಾರಿತ್ರ್ಯ ಮತ್ತು ಉನ್ನತ ವ್ಯಕ್ತಿತ್ವವು ಬೇರೇನೋ ಒಂದನ್ನು ಸೂಚಿಸುವಂತಿತ್ತು. ಆದ್ದರಿಂದ ಅವರು ಚೆನ್ನಾಗಿ ಯೋಚಿಸಿದ ಬಳಿಕ, ಇವನನ್ನು ತನ್ನ ಮನೆಯ ಓರ್ವ ಸದಸ್ಯನಾಗಿ ಮಾಡುವುದೇ ಸೂಕ್ತ, ಅವನಿಗೆ ತನ್ನ ಪ್ರತಿಭೆ, ಸಾಮರ್ಥ್ಯಗಳನ್ನು ಉದ್ದೀಪನಗೊಳಿಸುವ ಅವಕಾಶವೂ ಸಿಗಬಹುದು ಎಂಬ ತೀರ್ಮಾನಕ್ಕೆ ಬಂದರು. ಆದ್ದರಿಂದ ಅವರು ಮೂಸಾರೊಡನೆ ಹೀಗೆ ಹೇಳಿದರು, "ನನ್ನ ಈ ಇಬ್ಬರು ಪುತ್ರಿಯರಲ್ಲೊಬ್ಬಳನ್ನು ನಿಮಗೆ ವಿವಾಹ ಮಾಡಿಕೊಡ ಬೇಕೆಂದು ಬಯಸುತ್ತೇನೆ. ಆದರೆ ನೀವು ಇಲ್ಲಿ ಎಂಟು ವರ್ಷಗಳ ಕಾಲ ನಮ್ಮಲ್ಲಿ ಚಾಕರಿ ಮಾಡಬೇಕಾದೀತು. ಹತ್ತು ವರ್ಷ ಮಾಡಿದರೆ ಅದು ನಿಮ್ಮಿಷ್ಟ. ನಾನು ನಿಮ್ಮ ಮೇಲೆ ಒತ್ತಡ ಹೇರಬಯಸುವುದಿಲ್ಲ, ಇನ್‌ಶಾ ಅಲ್ಲಾಹ್! ನಾನೋರ್ವ ಸಜ್ಜನನೆಂಬುದನ್ನು ನೀವು ಕಾಣುವಿರಿ."

ಮೂಸಾರಿಗೆ ಒಂದು ಆಶ್ರಯ ತಾಣದ ತೀವ್ರ ಅಗತ್ಯವಿತ್ತು. ಒಂದೆಡೆ ಜೀವನಾಧಾರದ ವ್ಯವಸ್ಥೆ, ಇನ್ನೊಂದೆಡೆ ಗೃಹ ಜೀವನದ ಏರ್ಪಾಟು, ಮತ್ತೊಂದೆಡೆ ಇಂತಹ ಸಜ್ಜನ ವ್ಯಕ್ತಿಯ ನೆರಳಾಶ್ರಯ. ಇನ್ನೇನು ಬೇಕು ಜೀವನಕ್ಕೆ. ಮೂಸಾರು ಕೂಡಲೇ ಹಿರಿಯರ ಪ್ರಸ್ತಾಪವನ್ನು ಒಪ್ಪಿಕೊಳ್ಳುತ್ತಾ ಹೀಗೆಂದರು, "ತಾವು ಸೂಚಿಸಿದ ಎರಡು ಅವಧಿಗಳಲ್ಲಿ ಯಾವುದನ್ನು ಪೂರ್ತಿಗೊಳಿಸಿದರೂ ಆ ಬಳಿಕ ನನ್ನ ಮೇಲೆ ಒತ್ತಡ ಹೇರಬಾರದು. ನಾವು ಮಾಡುತ್ತಿರುವಂತಹ ಈ ಕರಾರಿಗೆ ಅಲ್ಲಾಹನೇ ಸಾಕ್ಷಿಯಾಗಿದ್ದಾನೆ."

ಮಾತುಕತೆ ಪೂರ್ಣಗೊಂಡಿತು. ಮೂಸಾ(ಅ) ಮನೆಯ ವ್ಯವಹಾರಗಳನ್ನು ಕೈಗೆತ್ತಿಕೊಂಡರು. ಆ ಹಿರಿಯರ ಸೇವೆಗೈಯ ತೊಡಗಿದರು. ಅವಧಿ ಪೂರ್ಣಗೊಂಡಾಗ ವಿವಾಹವಾಗಿ ಗೃಹಸ್ಥ ಜೀವನ ಆರಂಭಿಸಿದರು. ಹೆಚ್ಚಿನ ವಿದ್ವಾಂಸರ ಅಭಿಪ್ರಾಯದಂತೆ, ಮೂಸಾ(ಅ) ಶ್ರಮಜೀವಿಯಾಗಿದ್ದ ಕಾರಣ 10 ವರ್ಷಗಳ ಅವಧಿ ಪೂರ್ಣಗೊಳಿಸಿದ ಬಳಿಕ ಆ ಹಿರಿಯರ ಮಗಳು ಸಫೂರಾರನ್ನು ವಿವಾಹವಾದರು.

❖ ❖ ❖

ಈಜಿಪ್ಟಿಗೆ ಮರು ಪ್ರಯಾಣ ಮತ್ತು ಪ್ರವಾದಿತ್ವ ಪ್ರಾಪ್ತಿ

ಮನೆಮಾರುಗಳನ್ನು ಬಿಟ್ಟು ಬಂದು ಹತ್ತು ವರ್ಷಗಳಾಗಿವೆ. ಈಗ ಸ್ವಯಂ ಗೃಹಸ್ಥರಾಗಿದ್ದಾರೆ. ಮನೆಮಂದಿಯ ನೆನಪು ಇನ್ನಷ್ಟು ಕಾಡುತ್ತಿದ್ದಿರಬಹುದು. ತಾಯಿ, ಸಹೋದರಿ, ಸಹೋದರ ಇವರೆಲ್ಲ ನೆನಪಾಗುತ್ತಿದ್ದಿರಬಹುದು. ಇನ್ನು ಅವರನ್ನೂ ನೋಡಿಕೊಳ್ಳಬೇಕಾಗಿದೆ. ಅವರೆಲ್ಲ ಯಾವ ಅವಸ್ಥೆಯಲ್ಲಿದ್ದಾರೋ! ಅಂತೂ ಮೂಸಾ(ಅ) ತನ್ನ ಮಾವನಿಂದ ಅನುಮತಿ ಪಡೆದು ತನ್ನ ಪತ್ನಿಯನ್ನೂ ಕರೆದುಕೊಂಡು ಈಜಿಪ್ಟಿಗೆ ತನ್ನ ಮನೆಯವರತ್ತ ಪ್ರಯಾಣ ಬೆಳೆಸಿದರು.

ಅಲ್ಲಾಹನು ಈ ಎಲ್ಲ ವ್ಯವಸ್ಥೆಗಳನ್ನು ಯಾಕಾಗಿ ಮಾಡಿದ್ದನೋ ಆ ಸಮಯ ಈಗ ಬಂದು ಬಿಟ್ಟಿದೆ. ಯಾವ ದೌತ್ಯ ನಿರ್ವಹಣೆಗಾಗಿ ಮೂಸಾರ ಆರೈಕೆ ಮತ್ತು ರಕ್ಷಣೆ ಮಾಡಲಾಗಿತ್ತೋ ಆ ದೌತ್ಯಕ್ಕಾಗಿ ಅಣಿಗೊಳಿಸುವ ಸಮಯ ಬಂದುಬಿಟ್ಟಿದೆ. ಪ್ರವಾದಿತ್ವವನ್ನು ವಹಿಸಿಕೊಳ್ಳಲಿಕ್ಕಾಗಿ ಯಾವ ತರಬೇತಿ ಮತ್ತು ಚಾರಿತ್ರ್ಯದ ಅಗತ್ಯವಿತ್ತೋ ಅದು ಮೂಸಾರಿಗೆ ಸಿಕ್ಕಿಬಿಟ್ಟಿತ್ತು. ಫಿರ್‌ಔನನ ಅರಮನೆಯಲ್ಲಿ ಬೆಳೆದು ಅಗತ್ಯವಾದ ಜ್ಞಾನ, ವಿದ್ಯೆಯನ್ನು ಅವರು ಗಳಿಸಿಕೊಂಡಿದ್ದರು. ಯಾವ ವ್ಯಕ್ತಿಯನ್ನು ಮುಂದೆ ಎದುರಿಸಬೇಕಾಗಿತ್ತೋ ಅದರ ನೀತಿ-ನಡವಳಿಕೆ, ಪರಿಸರ ಹಾಗೂ ಅವರ ಸಲಹೆಗಾರರ ಮನೋಭಾವವನ್ನು ಅವರು ಚೆನ್ನಾಗಿ ಅರಿತುಕೊಂಡಿದ್ದರು. ಅವರ ಕುತಂತ್ರಗಳನ್ನೂ ಉಪಾಯಗಳನ್ನೂ (Technique) ಸರಿಯಾಗಿ ತಿಳಿದುಕೊಂಡಿದ್ದರು. ಹತ್ತು ವರ್ಷಗಳ ಮರುಭೂಮಿಯ ಬದುಕು ಪ್ರವಾದಿತ್ವದ ಭಾರವನ್ನು ಎತ್ತಿಕೊಳ್ಳಲು ಅಗತ್ಯವಿರುವ ಪರಿಶ್ರಮ, ತ್ಯಾಗ ಮತ್ತು ಸಹನೆಯ ಅಭ್ಯಾಸವನ್ನು ಮಾಡಿಸಿ ಬಿಟ್ಟಿತ್ತು. ಈ ವಾಸ್ತವಿಕತೆಯನ್ನು ಕುರ್‌ಆನ್ ಈ ರೀತಿ ಪ್ರಸ್ತಾಪಿಸಿದೆ,

"(ಇದನ್ನೂ ಸ್ಮರಿಸಿರಿ) ನೀವು ಒಬ್ಬನನ್ನು ವಧಿಸಿ ಬಿಟ್ಟಿದ್ದಿರಿ. ನಾವು ನಿಮ್ಮನ್ನು ಈ ತೊಂದರೆಯಿಂದ ಪಾರುಗೊಳಿಸಿದೆವು ಮತ್ತು ನಿಮ್ಮನ್ನು ವಿವಿಧ ಸತ್ವಪರೀಕ್ಷೆಗಳಿಂದ ಪಾರುಗಾಣಿಸಿದೆವು ಮತ್ತು ನೀವು ಮದಯನಿನವರ ಜೊತೆ ಅನೇಕ ವರ್ಷ ವಾಸಿಸಿದಿರಿ.

ಅನಂತರ ನೀವೀಗ ಸಕಾಲದಲ್ಲಿ ಬಂದಿರುವಿರಿ. ಓ ಮೂಸಾ, ನಾನು ನಿಮ್ಮನ್ನು ನನ್ನ ಕಾರ್ಯಕ್ಕಾಗಿ ಆಯ್ದುಕೊಂಡಿರುತ್ತೇನೆ." (ಪವಿತ್ರ ಕುರ್‌ಆನ್, 20:40-41)

ಬೆಂಕಿಯ ದರ್ಶನ

ಚಳಿಗಾಲವಾಗಿತ್ತು. ಮೂಸಾ(ಅ) ತನ್ನ ಪತ್ನಿಯ ಜೊತೆ ಜನಸಂಚಾರವಿಲ್ಲದ ಕಾಡು ಮೇಡುಗಳನ್ನು ಹಾದು ಮುಂದೆ ಸಾಗುತ್ತಿದ್ದರು. ರಾತ್ರಿಯಾಯಿತು. ಚಳಿ ತೀವ್ರವಾಗ ತೊಡಗಿತು. ರಾತ್ರಿ ಹೇಗೆ ಕಳೆಯುವುದೆಂದು ಚಿಂತಿಸ ತೊಡಗಿದರು. ಎಲ್ಲೂ ಆಶ್ರಯ ಕಾಣುತ್ತಿಲ್ಲ, ಛಾವಣಿಯಾಗಲಿ, ಗೋಡೆಯಾಗಲಿ ಗೋಚರಿಸುತ್ತಿಲ್ಲ, ಅಷ್ಟರಲ್ಲಿ ದೂರದಲ್ಲಿ ಒಂದು ಬೆಂಕಿ ಕಾಣಿಸಿತು. ಅವರು ಪತ್ನಿಯೊಂದಿಗೆ ಹೇಳಿದರು, 'ಇಲ್ಲೇ ಸ್ವಲ್ಪ ಇರು. ನಾನು ಬೆಂಕಿ ತರುತ್ತೇನೆ. ಚಳಿ ಕಾಯುತ್ತಾ ಇಲ್ಲೇ ರಾತ್ರಿ ಕಳೆಯೋಣ.' ಯಾವ ಬೆಂಕಿಯನ್ನು ಅವರು ತರಲು ಹೊರಟಿದ್ದರೋ ಅದು ಅವರ ಹೃದಯವನ್ನು ಬೆಳಗಿಸಲಿದೆಯೆಂದು ಅವರಿಗೇನು ಗೊತ್ತು? ಈ ಸ್ವಾರಸ್ಯಕರ ಹುಡುಕಾಟದ ವರದಿಯನ್ನು ಕುರ್‌ಆನ್ ಈ ರೀತಿ ಪ್ರಸ್ತಾಪಿಸಿದೆ:

"ಮೂಸಾ, ಅವಧಿ ಪೂರ್ತಿಗೊಳಿಸಿದ ನಂತರ ತಮ್ಮ ಕುಟುಂಬವನ್ನು ಕರೆದುಕೊಂಡು ಹೊರಟಾಗ ತೂರ್ ಪರ್ವತದ ಕಡೆ, ಅವರಿಗೊಂದು ಬೆಂಕಿ ಕಂಡಿತು. ಅವರು ಮನೆಯವರೊಡನೆ, 'ನಿಲ್ಲಿರಿ, ನಾನೊಂದು ಬೆಂಕಿಯನ್ನು ಕಂಡಿದ್ದೇನೆ. ಪ್ರಾಯಶಃ ನಾನು ಅಲ್ಲಿಂದೇನಾದರೂ ಸುದ್ದಿ ತರಬಹುದು ಅಥವಾ ಆ ಬೆಂಕಿಯಿಂದ ಒಂದು ಕೆಂಡವನ್ನಾದರೂ ತರಬಹುದು. ಅದರಿಂದ ನೀವು ಚಳಿ ಕಾಯಿಸಿಕೊಳ್ಳಬಹುದು' ಎಂದರು. ಅಲ್ಲಿಗೆ ತಲಪಿದಾಗ ಕಣಿವೆಯ ಬಲ ಬದಿಯ ಮಂಗಳದಾಯಕ ಸ್ಥಳದಲ್ಲಿ ಒಂದು ಮರದಿಂದ ಹೀಗೆ ಕೂಗಲಾಯಿತು, ಮೂಸಾ! ನಾನೇ ಅಲ್ಲಾಹ್, ಸರ್ವ ಲೋಕಗಳ ಪ್ರಭು."

(ಪವಿತ್ರ ಕುರ್‌ಆನ್, 28:29-30)

ಈ ಪ್ರವಾದಿತ್ವದ ಕೊಡುಗೆ ಹಾಗೂ ಸಂಭಾಷಣೆಯ ವಿವರಗಳು ಕುರ್‌ಆನಿನ ಇತರ ಕಡೆಗಳಲ್ಲಿ ಹೀಗೆ ಬಂದಿವೆ;

"ಅವರು ಒಂದು ಬೆಂಕಿಯನ್ನು ಕಂಡಾಗ ತನ್ನ ಮನೆಯವರೊಡನೆ, 'ಸ್ವಲ್ಪ ತಡೆಯಿರಿ, ನಾನೊಂದು ಬೆಂಕಿಯನ್ನು ಕಂಡಿದ್ದೇನೆ. ನಾನು ನಿಮಗಾಗಿ ಕೆಂಡವೊಂದನ್ನು ತರಬಹುದು ಅಥವಾ ಆ ಬೆಂಕಿಯಿಂದ (ದಾರಿಯ ಕುರಿತು) ನನಗೆ ಮಾರ್ಗದರ್ಶನ ಸಿಗಲೂಬಹುದು' ಎಂದು ಹೇಳಿದ ಸಂದರ್ಭ. ಅಲ್ಲಿಗೆ ತಲಪಿದಾಗ (ಹೀಗೆ) ಕರೆಯಲಾಯಿತು: ಓ ಮೂಸಾ, ನಾನೇ ನಿಮ್ಮ ಪ್ರಭು. ನಿಮ್ಮ ಪಾದರಕ್ಷೆಗಳನ್ನು ಕಳಚಿ ಬಿಡಿರಿ. ನೀವು ಪವಿತ್ರ ಕಣಿವೆ 'ತುವಾ'ದಲ್ಲಿದ್ದೀರಿ ಮತ್ತು ನಾನು ನಿಮ್ಮನ್ನು ಆರಿಸಿಕೊಂಡಿದ್ದೇನೆ. ನಿಮಗೆ ಮಾಡಲಾಗುವ 'ದಿವ್ಯವಾಣಿ'ಯ ಅವತೀರ್ಣವನ್ನು ಆಲಿಸಿರಿ. ನಿಶ್ಚಯವಾಗಿಯೂ ನಾನೇ ಅಲ್ಲಾಹ್. ನನ್ನ ಹೊರತು ಇನ್ನಾವ ದೇವನೂ ಇಲ್ಲ. ಆದುದರಿಂದ ನೀವು ನನ್ನ ದಾಸ್ಯ-ಆರಾಧನೆ ಮಾಡಿರಿ

ಮತ್ತು ನನ್ನ ಸ್ಮರಣೆಗಾಗಿ ನಮಾಝುನ್ನು ಸಂಸ್ಥಾಪಿಸಿರಿ. ಪುನರುತ್ಥಾನದ ಘಳಿಗೆಯು ಖಂಡಿತ ವಾಗಿಯೂ ಬರಲಿದೆ. ಪ್ರತಿಯೊಬ್ಬ ಜೀವಿಯೂ ತನ್ನ ಪರಿಶ್ರಮಕ್ಕನುಸಾರ ಪ್ರತಿಫಲ ಪಡೆಯು ವಂತಾಗಲು ನಾನು ಆ ಸಮಯವನ್ನು ರಹಸ್ಯವಾಗಿಡಲಿಚ್ಛಿಸುತ್ತೇನೆ. ಆದುದರಿಂದ ಅದರ ಮೇಲೆ ವಿಶ್ವಾಸವಿರಿಸದವನು ಮತ್ತು ತನ್ನ ಸ್ವೇಚ್ಛೆಗಳ ದಾಸನಾಗಿ ಬಿಟ್ಟವನು ನಿಮ್ಮನ್ನು ಆ ಘಳಿಗೆಯ ಚಿಂತೆಯಿಂದ ತಡೆಯದಿರಲಿ. ಅನ್ಯಥಾ ನೀವು ವಿನಾಶದಲ್ಲಿ ಬೀಳುವಿರಿ."

(ಪವಿತ್ರ ಕುರ್‌ಆನ್, 20:10-16)

"ಮೂಸಾರು ತಮ್ಮ ಮನೆಯವರೊಡನೆ, 'ನನಗೆ ಒಂದು ಬೆಂಕಿ ಕಂಡಿದೆ. ನಾನು ಈಗಲೇ ಅಲ್ಲಿಂದೇನಾದರೂ ಸುದ್ದಿ ತರುತ್ತೇನೆ. ಇಲ್ಲವೇ ನೀವು ಚಳಿ ಕಾಯಿಸಿಕೊಳ್ಳು ವಂತಾಗಲು ಕೆಂಡವನ್ನಾದರೂ ಹೆಕ್ಕಿ ತರುತ್ತೇನೆ' ಎಂದು ಹೇಳಿದ ಸಂದರ್ಭ(ವನ್ನು ಇವರಿಗೆ ತಿಳಿಸಿರಿ). ಅಲ್ಲಿ ತಲಪಿದಾಗ ಹೀಗೆ ಕರೆ ಕೇಳಿಸಿತು, ಈ ಬೆಂಕಿಯಲ್ಲಿ ಇರುವವನು ಮತ್ತು ಇದರ ಪರಿಸರದಲ್ಲಿರುವವನು ಸುಮಂಗಲನು ಮತ್ತು ಸರ್ವಲೋಕಗಳ ಪಾಲಕ ಪ್ರಭು ವಾಗಿರುವ ಅಲ್ಲಾಹನು ಪರಮ ಪಾವನನು. ಮೂಸಾ, ಇದು ನಾನು! ಮಹಾ ಪ್ರಬಲನೂ ಧೀಮಂತನೂ ಆಗಿರುವ ಅಲ್ಲಾಹ್." (ಪವಿತ್ರ ಕುರ್‌ಆನ್, 27:7-9)

ಈ ಸೂಕ್ತಗಳಿಂದ ತಿಳಿದು ಬರುವ ಅಂಶವೆಂದರೆ ಮೂಸಾರಿಗೆ ಬೆಂಕಿಯ ಆವಶ್ಯಕತೆ ತಲೆದೋರಿದಾಗ ಹಠಾತ್ತನೆ ದೂರದಲ್ಲೊಂದು ಬೆಂಕಿ ಕಂಡಿತು. ಚಳಿಗಾಲದ ರಾತ್ರಿ, ಜನ ಸಂಚಾರವಿಲ್ಲ, ಊರು ಕೇರಿಗಳಿಲ್ಲ, ಹಠಾತ್ತನೆ ಬೆಂಕಿ ಸಿಗುವಾಗ ಆಗುವ ಆನಂದವನ್ನು ಎಂದಾದರೂ ಚಳಿಗಾಲದಲ್ಲಿ ಮರುಭೂಮಿ ಅಥವಾ ಕಾಡಿನಲ್ಲಿ ಕಳೆಯುವ ಸಂದರ್ಭ ದೊರೆತವರು ಮಾತ್ರ ಗ್ರಹಿಸಬಲ್ಲರು. ಬಯಸದೆ ಬಂದ ಈ ಭಾಗ್ಯವನ್ನು ಹಿಡಿದು ತರುತ್ತೇನೆಂದು ಕೂಡಲೇ ಅತ್ತ ಧಾವಿಸಿರಬಹುದು. ಹತ್ತಿರ ಹೋದಾಗ ನೋಡುವುದೇನು? ಒಂದು ಮರ ತನ್ನಷ್ಟಕ್ಕೇ ಪ್ರಜ್ವಲಿಸುತ್ತಿದೆ. ಬೆಂಕಿ ಹೊತ್ತಿಸಲು ಅಲ್ಲಿ ಯಾರೂ ಇಲ್ಲ, ಬಹಳ ಆಶ್ಚರ್ಯದಿಂದ 'ಇದೇನಾಗುತ್ತಿದೆ' ಎಂದು ಯೋಚಿಸುತ್ತಿರುವಷ್ಟರಲ್ಲೇ ಸ್ವರ ಕೇಳಿ ಬರುತ್ತದೆ.

ಅಲ್ಲಿ ತಲಪಿದಾಗ ಹೀಗೆ ಕರೆ ಕೇಳಿಸಿತು, "ಈ ಬೆಂಕಿಯಲ್ಲಿ ಇರುವವನು ಮತ್ತು ಇದರ ಪರಿಸರದಲ್ಲಿರುವವನು ಸುಮಂಗಲನು ಮತ್ತು ಸರ್ವಲೋಕಗಳ ಪಾಲಕ ಪ್ರಭು ವಾಗಿರುವ ಅಲ್ಲಾಹನು ಪರಮ ಪಾವನನು. ಮೂಸಾ, ಇದು ನಾನು! ಮಹಾ ಪ್ರಬಲನೂ ಧೀಮಂತನೂ ಆಗಿರುವ ಅಲ್ಲಾಹ್."

ಈಗಂತೂ ಆಶ್ಚರ್ಯಕ್ಕೆ ಮಿತಿ ಮೇರೆಯಿರಲಿಲ್ಲ, ಬೆಂಕಿ ತರಲು ಬಂದಿದ್ದ, ಬೆಂಕಿಯ ಸೃಷ್ಟಿಕರ್ತನೇ ಸಿಕ್ಕಿದ. ಆಹಾ! ಎಷ್ಟೊಂದು ಅನುಗ್ರಹದಾಯಕ ಕ್ಷಣಗಳು! ಎಷ್ಟೊಂದು ಉನ್ನತ ಸ್ಥಾನ. ಓರ್ವ ದಾಸನೊಡನೆ ಆತನ ಸೃಷ್ಟಿಕರ್ತ ಮಾತಾಡುತ್ತಿದ್ದಾನೆ. ಸಂತೋಷ ಹಾಗೂ ಅತ್ಯಾಶ್ಚರ್ಯದಿಂದ ನಿಂತಿರುವಂತೆಯೇ ಪುನಃ ಸ್ವರ ಕೇಳಿಸುತ್ತಿದೆ, "ಓ ಮೂಸಾ!

ನಿಮ್ಮ ಪಾದರಕ್ಷೆಗಳನ್ನು ಕಳಚು. ನೀವು ಪವಿತ್ರ ತುವಾ ಕಣಿವೆಯಲ್ಲಿರುವಿರಿ. ನಾನು ನಿಮ್ಮನ್ನು ಆರಿಸಿಕೊಂಡಿದ್ದೇನೆ. ಏನು ವಹೀ ಮಾಡಲಾಗುತ್ತದೋ ಅದನ್ನು ಆಲಿಸಿರಿ."

ಈ ರೀತಿ ಅಲ್ಲಾಹನು ಅವರಿಗೆ ಪ್ರವಾದಿತ್ವ ದಯಪಾಲಿಸಿದನು. ಪೂರ್ವ ಸೂಚನೆಯಾಗಲಿ, ಸಭೆ ಸಮಾರಂಭವಾಗಲಿ ಅಥವಾ ಸಿದ್ಧತೆಯೇ ಆಗಲಿ ಇರಲಿಲ್ಲ. ಹಠಾತ್ತನೆ ತನ್ನ ಓರ್ವ ದಾಸನ ತಲೆಗೆ 'ಪ್ರವಾದಿತ್ವ'ದ ಕಿರೀಟ ತೊಡಿಸಲಾಗುತ್ತದೆ. ಒಂದು ಕ್ಷಣ ಮುಂಚೆ ಅವರು ಮರುಭೂಮಿಯ ಯಾತ್ರಿಕರಾಗಿದ್ದರು. ಮರುಕ್ಷಣದಲ್ಲಿ ಒಂದು ಲೋಕದ ನಾಯಕ, ಮಾರ್ಗದರ್ಶಕ, ಗುರು! ಅಲ್ಲಾಹನ ಕಾರ್ಯವಿಧಾನವೇ ಹಾಗೆ. ಇದೇನೂ ಮನುಷ್ಯನಿಗೆ ಸಿದ್ಧತೆ ನಡೆಸಿ ಸಿಗುವಂತದ್ದಲ್ಲ, ಪ್ರಯತ್ನಿಸಿ ಪಡೆಯುವಂತಹದ್ದೂ ಅಲ್ಲ, ಇದು ಸರ್ವಲೋಕಗಳ ಒಡೆಯನ ಧರ್ಮವಾಗಿದೆ. ಅವನಿಗಿಷ್ಟ ಬಂದವನಿಗೆ ಇಷ್ಟ ಬಂದಾಗ ನೀಡುತ್ತಾನೆ. ಕೃತಕ ಮತ್ತು ನೈಜ ಪ್ರವಾದಿಯ ವ್ಯತ್ಯಾಸ ಇದುವೇ ಆಗಿದೆ. ಕೃತಕ ಪ್ರವಾದಿತ್ವವಾದಿಗಳು ಅದಕ್ಕಾಗಿ ಯೋಜನೆ ತಯಾರಿಸುತ್ತಾರೆ. ವಾತಾವರಣ ಸೃಷ್ಟಿಸುತ್ತಾರೆ. ಅನುಯಾಯಿಗಳನ್ನು ಸೇರಿಸುತ್ತಾರೆ. ತರುವಾಯ ಪ್ರವಾದಿತ್ವ ಘೋಷಣೆಯ ಸಮಾರಂಭಗಳನ್ನು ಏರ್ಪಡಿಸುತ್ತಾರೆ. ಆದರೆ ಓರ್ವ ನೈಜ ಪ್ರವಾದಿಗೆ ಇದಾವುದರ ಅಗತ್ಯವೂ ಇರುವುದಿಲ್ಲ. ಅವರಿಗೆ ಒಂದರೆ ಕ್ಷಣ ಮುಂಚೆ ಕೂಡಾ ಈ ವಿಷಯ ತಿಳಿದಿರುವುದಿಲ್ಲ. ಅಲ್ಲಾಹನ ಅಪ್ಪಣೆ ಬಂತು. ಹಠಾತ್ತನೆ ಪ್ರವಾದಿಯಾಗಿ ನೇಮಿಸಲ್ಪಟ್ಟರು.

ಅಲ್ಲಾಹನ ಪ್ರಥಮ ಸಂದೇಶ

ತರುವಾಯ ಸಂದೇಶ ನೀಡಲಾಯಿತು ಅದನ್ನು ಚೆನ್ನಾಗಿ ಆಲಿಸುವಂತೆ ಆದೇಶಿಸಲಾಯಿತು. ಏನಾಗಿತ್ತು ಆ ಸಂದೇಶ, ಕೇಳಿರಿ:

"ನಾನೇ ಅಲ್ಲಾಹ್. ನನ್ನ ಹೊರತು ಅನ್ಯ ಆರಾಧ್ಯರಿಲ್ಲ, ಆದ್ದರಿಂದ ನನಗೆ ಮಾತ್ರ ಇಬಾದತ್ (ದಾಸ್ಯ ಆರಾಧನೆ) ಮಾಡಿರಿ. ನನ್ನ ಸ್ಮರಣೆಗಾಗಿ ನಮಾಝ್ ಸಂಸ್ಥಾಪಿಸಿರಿ. ಕಿಯಾಮತ್‌ನ ಘಳಿಗೆ ಖಂಡಿತ ಬರಲಿದೆ. ಪ್ರತಿಯೊಂದು ಜೀವಿಗೂ ಅದರ ಶ್ರಮಕ್ಕೆ ತಕ್ಕ ಪ್ರತಿಫಲ ನೀಡುವಂತಾಗಲು ನಾನದನ್ನು ಮರೆಯಾಗಿರಿಸಿದ್ದೇನೆ. ಆದ್ದರಿಂದ ಅದನ್ನು ನಂಬದ ಹಾಗೂ ತನ್ನ ಚಿತ್ತದ ದಾಸನಾಗಿರುವ ಯಾರೂ ನಿಮ್ಮನ್ನು ಈ ಘಳಿಗೆಯ ಚಿಂತೆಯಿಂದ ಅಲಕ್ಷ್ಯನಾಗಿಸದಿರಲಿ. ಅನ್ಯಥಾ ನೀವು ನಾಶದಲ್ಲಿ ಬಿದ್ದು ಬಿಡುವಿರಿ."

ಈ ಮಹತ್ವದ ಆಜ್ಞೆಯ ಮೂಲಕ ಆರಂಭದಲ್ಲಿಯೇ ಪ್ರಪಂಚದ ವಾಸ್ತವಿಕತೆ, ಸೃಷ್ಟಿಕರ್ತ ಮತ್ತು ಸೃಷ್ಟಿಯ ಸಂಬಂಧ, ಆ ಸಂಬಂಧವನ್ನು ಸರಿಯಾದ ದಿಕ್ಕಿನಲ್ಲಿರಿಸುವ ಮಾರ್ಗೋಪಾಯ, ಜೀವನದ ಉದ್ದೇಶ ಮತ್ತು ಕಾರ್ಯಸೂಚಿಯನ್ನು ತಿಳಿಸಲಾಯಿತು. ಮುಂದೆ ಪ್ರವಾದಿತ್ವದ ಭಾರವನ್ನು ಎತ್ತಬೇಕಾಗಿತ್ತು. ಆದರಿಂದಾಗಿ ಮುಂದಾಗುವ ಪ್ರತಿರೋಧಗಳು ನೈಜ ಉದ್ದೇಶದಿಂದ ಎಂದೂ ಸರಿಸದಿರಲಿಕ್ಕಾಗಿ ಈ ಆದೇಶಗಳನ್ನು ನೀಡಲಾಯಿತು.

ಪ್ರಪ್ರಥಮವಾಗಿ ಈ ಪ್ರಪಂಚವು ದೇವನಿಲ್ಲದೆ ಉಂಟಾಗಿಲ್ಲ, ಆ ದೇವನು ನಾನೇ (ಅಲ್ಲಾಹ್) ಆಗಿದ್ದೇನೆ. ಈ ಪ್ರಪಂಚದ ವ್ಯವಸ್ಥೆಯನ್ನು ಪ್ರತಿಕ್ಷಣದಲ್ಲೂ ನೋಡಿಕೊಳ್ಳುವುದು ನನ್ನ ಕೆಲಸ. ನಾನಲ್ಲದೆ ಈ ಕೆಲಸವನ್ನು ವಹಿಸಿಕೊಳ್ಳಲು ಯಾರೂ ಇಲ್ಲ, ನನ್ನ ಕೆಲಸದಲ್ಲಿ ಯಾವ ಭಾಗೀದಾರನೂ ಇಲ್ಲ ಎಂದು ಹೇಳಲಾಯಿತು.

ತರುವಾಯ, ದಾಸನಾಗಿರುವುದೇ ಮಾನವನ ನೆಲೆಯಾಗಿದೆ. ತನ್ನಿಚ್ಛೆಯಂತೆ ಆತನಿಗೆ ಯಾವ ಕಾರ್ಯವನ್ನೂ ಮಾಡುವ ಅಧಿಕಾರವಿಲ್ಲ, ಯಜಮಾನನ ಆಜ್ಞೆಗಳನ್ನು ನಿಶ್ಶರ್ತವಾಗಿ ಪಾಲಿಸುವುದೇ ದಾಸ್ಯತನವಾಗಿದೆ. ಈ ದಾಸ್ಯದ ಹಾದಿಯಲ್ಲಿ ಸ್ಥಿರವಾಗಿ ನಿಲ್ಲಲು ನಮಾಝ್ ಅತ್ಯಗತ್ಯವಾಗಿದೆ. ಮಾನವನಿಗೆ ಅವನ ನೈಜ ಸ್ಥಾನ(ದಾಸ್ಯತನ)ವನ್ನು ಪದೇಪದೇ ನೆನಪಿಸುವ ಮತ್ತು ಅವನಲ್ಲಿ ದಾಸ್ಯ ಭಾವನೆಯನ್ನು ಹಚ್ಚಹಸಿರಾಗಿರಿಸುವ ವಸ್ತು ನಮಾಝ್ ಮಾತ್ರವಾಗಿದೆ. ನಮಾಝನ್ನು ಬಿಟ್ಟರೆ ಮಾನವನು ದಾಸ್ಯದ ಹಕ್ಕನ್ನು ಈಡೇರಿಸಲಾರ. ಈ ಮಾರ್ಗದಲ್ಲಿ ಸ್ಥಿರವಾಗಿರಲಾರ. ನಮಾಝ್ ಯಾವುದಾದರೊಂದು ರೂಪದಲ್ಲಿ ಎಲ್ಲ ಸಮುದಾಯಗಳ ಮೇಲೂ ಕಡ್ಡಾಯವಾಗಿತ್ತೆಂದು ಇದರಿಂದ ತಿಳಿದುಬರುತ್ತದೆ. ಪ್ರವಾದಿಗಳಿಗೇ ನಮಾಝ್ ಕಡ್ಡಾಯವಾಗಿರುವಾಗ ಅವರ ಅನುಯಾಯಿಗಳು ಅದರಿಂದ ಹೊರತಾಗುವುದು ಹೇಗೆ? ನಮಾಝ್ ಬಿಟ್ಟು ಮಾನವನು ಪಿಶಾಚಿಯೂ ಪಥಭ್ರಷ್ಟನೂ ಆಗಬಲ್ಲ, ಆದರೆ ಸನ್ಮಾರ್ಗಿಯಾಗಲು ಸಾಧ್ಯವಿಲ್ಲ.

ಆ ಬಳಿಕ, ಈ ಜೀವನದ ಅಂತಿಮ ಪರಿಣಾಮವೇನೆಂದು ತಿಳಿಸಲಾಗಿದೆ. ಈ ಜೀವನವು ಒಂದಲ್ಲ ಒಂದು ದಿನ ಕೊನೆಗೊಳ್ಳಲೇಬೇಕು. ತರುವಾಯ ಒಂದು ನಿರ್ದಿಷ್ಟ ದಿನದಂದು ಜೀವನದ ಎಲ್ಲ ಸಾಧನೆಗಳ ಕುರಿತು ಲೆಕ್ಕ ಸಮರ್ಪಿಸಲಿಕ್ಕಿದೆ. ಅಂದು ಪ್ರತಿಯೊಬ್ಬನೂ ತಾನು ಮಾಡಿದ್ದನ್ನು ಪಡೆಯುವನು. ಈ ಲೋಕದಲ್ಲಿ ಒಬ್ಬನ ಹಗ್ಗವು ಎಷ್ಟೇ ಸಡಿಲವಾಗಿರಲಿ, ಅಂದು ಅವನಿಗೆ ಯಾವುದೇ ಸಮಯಾವಕಾಶ ನೀಡಲಾಗದು. ಒಂದೆಡೆ, ಆ ದಿನವನ್ನು ನಂಬದವರು ಎಷ್ಟೇ ಧೈರ್ಯ ತೋರಲಿ. ತಮ್ಮಿಚ್ಛೆಯಂತೆ ಏನು ಬೇಕಾದರೂ ಮಾಡಲಿ ಎಂಬುದನ್ನು ನೋಡಲಿಕ್ಕಾಗಿ, ಇನ್ನೊಂದೆಡೆ ಕಾಣದ ದೇವನನ್ನು ಯಾರು ನಂಬುತ್ತಾರೆ ಮತ್ತು ಅವನ ಖಚಿತ ವಾಗ್ದಾನದ ನಿರೀಕ್ಷೆಯಲ್ಲಿ ಪಾಪಗಳಿಂದ ಯಾರು ದೂರವಿರುತ್ತಾರೆ ಎಂಬುದನ್ನು ಪರೀಕ್ಷಿಸಲಿಕ್ಕಾಗಿ ಅಲ್ಲಾಹನು ವಿಚಾರಣೆಯ ಆ ದಿನವನ್ನು ಮರೆಯಾಗಿರಿಸಿದ್ದಾನೆ. ತರುವಾಯ ಪ್ರತಿಯೊಬ್ಬನಿಗೂ ಅವನವನ ಕರ್ಮಗಳಿಗೆ ತಕ್ಕಂತೆ ಸಂಪೂರ್ಣ ಪ್ರತಿಫಲ ನೀಡಲಾಗುವುದು.

ಅದರೊಂದಿಗೇ ಅಲ್ಲಾಹನು, ಆ ದಿನದ ಸ್ಮರಣೆಯಿಂದ ಅಲಕ್ಷ್ಯರಾಗಿರುವವರು ಸನ್ಮಾರ್ಗದಲ್ಲಿ ನಿಲ್ಲಲಾರರು. ಕಟ್ಟಕಡೆಗೆ ಅವರು ವಿನಾಶದ ಕೂಪಕ್ಕೆ ಬಿದ್ದೇ ಬಿಡುವರು ಮತ್ತು ಸಂಪೂರ್ಣ ಸೋತು ಹೋಗುವವರು ಎಂದು ಎಚ್ಚರಿಸುತ್ತಾನೆ. ಆದರೆ ಆ ದಿನದ ಭಯವಿರುವವರು ಮತ್ತು ತಮ್ಮ ಚಿತ್ತದ ಕಡಿವಾಣವನ್ನು ಎಳೆದು ಹಿಡಿದವರು ಸನ್ಮಾರ್ಗ

ದಲ್ಲಿರುವರು ಮತ್ತು ಜಯಶೀಲರಾಗುವರು ಎಂದು ತಿಳಿಸುತ್ತಾನೆ. ಇದನ್ನೇ ಕುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ,

"ವಿದ್ರೋಹವೆಸಗಿದವನಿಗೆ- ಹಾಗೂ ಇಹಲೋಕ ಜೀವನಕ್ಕೆ ಆದ್ಯತೆ ಕೊಟ್ಟವನಿಗೆ- ನರಕವೇ ನಿವಾಸವಾಗುವುದು. ತನ್ನ ಪ್ರಭುವಿನ ಮುಂದೆ ಹಾಜರಾಗಲಿಕ್ಕಿದೆಯೆಂದು ಭಯ ಪಡುತ್ತಿದ್ದವನಿಗೆ ಮತ್ತು ತನ್ನ ಚಿತ್ತದ ದುಷ್ಟ ಅಪೇಕ್ಷೆಗಳಿಂದ ತನ್ನನ್ನು ತಡೆದಿಟ್ಟುಕೊಂಡಿದ್ದವನಿಗೆ- ಸ್ವರ್ಗವೇ ನಿವಾಸವಾಗುವುದು." (ಪವಿತ್ರ ಕುರ್‌ಆನ್, 79:37-41)

ಮೂಸಾ(ಅ) ಪ್ರವಾದಿತ್ವದ ಹೊಣೆಗಾರಿಕೆಯನ್ನು ಅರಿಯದವರಾಗಿರಲಿಲ್ಲ, ಅವರು ಕೂಡಾ ಪ್ರವಾದಿಗಳ ಸಮುದಾಯ ಮತ್ತು ಸಂತತಿಯವರೇ ಆಗಿದ್ದರಷ್ಟೆ, ಇದೆಂತಹ ಮುಳ್ಳಿನ ಕಿರೀಟ ತೊಡಿಸಲಾಗುತ್ತಿದೆ ಎಂದು ಅವರು ಭಾವಿಸುತ್ತಿದ್ದರು. ಇದು ಒಂದೆಡೆ ಮಾನವನ ಅತ್ಯುನ್ನತ ಸ್ಥಾನವಾಗಿದ್ದರೆ ಇನ್ನೊಂದೆಡೆ ಕಠಿಣತಮ ಸತ್ವಪರೀಕ್ಷೆಗಳ ನಿಲ್ಲದ ಪರಂಪರೆಯ ಆರಂಭವಾಗಿತ್ತು. ಈಗಿನ್ನೂ ಈ ಮಹಾನ್ ಹುದ್ದೆಯ ಭೀಕರತೆ ಮತ್ತು ಗಾಬರಿ ಮನಸ್ಸಿನಿಂದ ಹೋಗಿರಲಿಲ್ಲ, ಆಗಲೇ ಅಲ್ಲಾಹನ ವತಿಯಿಂದ ಪ್ರಶ್ನೆ,

"ಓ ಮೂಸಾ, ನಿಮ್ಮ ಬಲಗೈಯಲ್ಲಿರುವುದೇನು?" (ಪವಿತ್ರ ಕುರ್‌ಆನ್, 20:17)

ಪವಾಡಗಳು

ಮೂಸಾ(ಅ) ಎಷ್ಟು ದಿಗ್ಭ್ರಾಂತರಾಗಿ ಬಿಟ್ಟಿದ್ದರೆಂದರೆ ಅವರಿಗೆ ಪ್ರಶ್ನೆ ಕೇಳುವ ಪಾವನ ಅಸ್ತಿತ್ವವು ಎಲ್ಲವನ್ನೂ ಬಲ್ಲವನೂ ನೋಡುವವನೂ ಆಗಿರುವನೆಂಬ ಪ್ರಜ್ಞೆಯೇ ಇರಲಿಲ್ಲ, ಕೈಯಲ್ಲೇನಿದೆಯೆಂಬುದನ್ನೂ ಆತ ಬಲ್ಲವನಾಗಿದ್ದನು. ಈ ಪ್ರಶ್ನೆಯನ್ನು ಮಾಹಿತಿ ಪಡೆಯಲಿಕ್ಕಾಗಿ ಕೇಳಲಾಗಿರಲಿಲ್ಲ, ಬದಲಾಗಿ, ನಿನ್ನ ಕೈಯಲ್ಲಿರುವುದು ಒಂದು ನಿರ್ಜೀವ ಲಾಠಿಯೆಂಬುದರ ಕಡೆಗೆ ಗಮನ ಸೆಳೆಯಲಿಕ್ಕಾಗಿತ್ತು. ಕೂಡಲೇ ಉತ್ತರಿಸಿದರು. ಅದರ ಗುಣ ವೈಶಿಷ್ಟ್ಯಗಳನ್ನೆಲ್ಲಾ ವಿವರಿಸತೊಡಗಿದರು.

"ಮೂಸಾ (ಹೀಗೆ) ಉತ್ತರ ಕೊಟ್ಟರು- ಇದು ನನ್ನ ಲಾಠಿ. ನಾನು ಇದನ್ನು ಊರಿಕೊಂಡು ನಡೆಯುತ್ತೇನೆ. ಇದರಿಂದ ಆಡುಗಳಿಗಾಗಿ ಎಲೆಗಳನ್ನು ಝಾಡಿಸುತ್ತೇನೆ. ಇದರಿಂದ ನಾನು ಇನ್ನೂ ಅನೇಕ ಪ್ರಯೋಜನಗಳನ್ನು ಪಡೆಯುತ್ತೇನೆ." (ಪವಿತ್ರ ಕುರ್‌ಆನ್, 20:18)

"ಆಗ, 'ಓ ಮೂಸಾ, ಅದನ್ನು ಎಸೆದು ಬಿಡಿರಿ' ಎಂದನು."

(ಪವಿತ್ರ ಕುರ್‌ಆನ್, 20:19)

ಆಜ್ಞೆಯನ್ನು ಪಾಲಿಸುತ್ತಾ ಅದನ್ನು ನೆಲಕ್ಕೆಸೆದರು. ನೋಡುವುದೇನು? ನೆಲಕ್ಕೆ ಬಿದ್ದೊಡನೆ ಅಲ್ಲೊಂದು ವಿಚಿತ್ರ ನಡೆಯಿತು.

"ಅವರು ಎಸೆದು ಬಿಟ್ಟರು -ಹಠಾತ್ತನೆ ಅದೊಂದು ಓಡುತ್ತಿರುವ ಹಾವಾಗಿತ್ತು."

(ಪವಿತ್ರ ಕುರ್‌ಆನ್, 20:20)

ಈಗ, ಮೂಸಾ ಗಾಬರಿಗೊಂಡರು. ಇದೇನಾಯಿತೆಂದು ಕೂಡಲೇ ಭಯದಿಂದ ಓಡಲಾರಂಭಿಸಿದರು. ತಿರುಗಿಯೂ ನೋಡಲಿಲ್ಲ, ನಾನೆಲ್ಲಿದ್ದೇನೆ. ಯಾವ ಪಾವನ ಅಸ್ತಿತ್ವದ ಮುಂದೆ ನಿಂತಿದ್ದೇನೆ ಎಂಬುದನ್ನೂ ಮರೆತು ಬಿಟ್ಟರು. ಅಲ್ಲಾಹನಿಗೆ ಅವರ ಮುಗ್ಧತೆ ಮತ್ತು ಈ ವರ್ತನೆ ಇಷ್ಟವಾಗಿರಬೇಕು. ಬಹಳ ಪ್ರೀತಿಯೊಂದಿಗೆ ಕೂಗಿ ಕರೆದನು. ಸಾಂತ್ವನ ನೀಡಿದನು. ಸಮಾಧಾನಪಡಿಸುತ್ತಾ ಹೀಗೆಂದನು,

"ಅದನ್ನು ಹಿಡಿದುಕೊಳ್ಳಿರಿ. ಹೆದರಬೇಡಿರಿ. ನಾವು ಅದನ್ನು ಪೂರ್ವಸ್ಥಿತಿಗೇ ತರುವೆವು."

(ಪವಿತ್ರ ಕುರ್‌ಆನ್, 20:21)

ಅವರು ಹೆದರುತ್ತಾ ಅದನ್ನು ಹಿಡಿದಾಗ ಏನಾಶ್ಚರ್ಯ! ಅದು ಲಾಠಿಯಾಗಿಯೇ ಇತ್ತು. ಆಶ್ಚರ್ಯ, ದಿಗ್ಭ್ರಾಂತಿ ಹಾಗೂ ನಾಚಿಕೆಯ ಮಿಶ್ರ ಭಾವನೆಗಳಿಂದ ತಳಮಳ ಗೊಳ್ಳುತ್ತಿದ್ದಂತೆಯೇ ಇನ್ನೊಂದು ಆಜ್ಞೆ:

"ನಿಮ್ಮ ಕೈಯನ್ನು ಬಗಲಿನಲ್ಲಿಡಿರಿ. ಏನೊಂದೂ ಪ್ರಯಾಸವಿಲ್ಲದೆ ಹೊಳೆಯುತ್ತ ಹೊರಬರುವುದು. ಇದು ಎರಡನೆಯ ನಿದರ್ಶನ. ಏಕೆಂದರೆ ನಾವು ನಿಮಗೆ ನಮ್ಮ ದೊಡ್ಡ ನಿದರ್ಶನಗಳನ್ನು ತೋರಿಸುವವರಿದ್ದೇವೆ." (ಪವಿತ್ರ ಕುರ್‌ಆನ್, 20:22-23)

ಒಂದು ಸಾಲದ್ದಕ್ಕೆ ಇನ್ನೊಂದು. ಲಾಠಿಯು ಹೆಬ್ಬಾವಾದದ್ದು ಒಂದಾದರೆ, ಕೈಯು ಪ್ರಕಾಶಮಯವಾಗುತ್ತಿದೆ. ಏನೋ ವಿಶೇಷವಿರಬೇಕೆಂದು ಭಾವಿಸಿದರು. ಆದ್ದರಿಂದಲೇ ಅದನ್ನು ಸಂಕೇತಗಳೆನ್ನಲಾಗಿದೆ. ಈಗ ಅದರ ಮರ್ಮವೇನೆಂದು ತಿಳಿಯುವ ಮತ್ತು ಈ ಮಹಾನ್ ಕೊಡುಗೆಗಳನ್ನು ನೀಡಿದುದರ ಉದ್ದೇಶವನ್ನು ಅರಿಯುವ ಜಿಜ್ಞಾಸೆ ಅವರಲ್ಲಿ ಮೂಡಿತು.

ಮೂಸಾರಿಗೆ ನೀಡಲಾದ ಈ ಕೊಡುಗೆಗಳು, ತೋರಿಸಲಾದ ಪವಾಡಗಳು ಮತ್ತು ಮಹಾನ್ ದೌತ್ಯವನ್ನು ನೀಡಿದುದರಿಂದಾಗಿ ಅವರ ಪರಿಸ್ಥಿತಿ ಮತ್ತು ಪ್ರತಿಕ್ರಿಯೆಗಳು ಕುರ್‌ಆನಿನ ಇನ್ನಿತರ ಕಡೆಗಳಲ್ಲಿ ವಿವರವಾಗಿ ಬಂದಿವೆ.

ಪವಾಡಗಳ ಉದ್ದೇಶ

"ನಿಮ್ಮ ಲಾಠಿಯನ್ನು ಎಸೆದು ಬಿಡಿರಿ (ಎಂದು ಅಪ್ಪಣೆಯಾಯಿತು) ಆ ಲಾಠಿಯು ಹಾವಿನಂತೆ ತೆವಳುತ್ತಿರುವುದನ್ನು ಕಂಡೊಡನೆ ಮೂಸಾ ಬೆನ್ನು ತಿರುಗಿಸಿ ಓಟಕಿತ್ತರು ಮತ್ತು ಅವರು ತಿರುಗಿಯೂ ನೋಡಲಿಲ್ಲ, (ಅಪ್ಪಣೆಯಾಯಿತು) ಮೂಸಾ, ಮರಳಿ ಬನ್ನಿರಿ, ಹೆದರ ಬೇಡಿರಿ, ನೀವು ಸಂಪೂರ್ಣ ಸುರಕ್ಷಿತರಾಗಿದ್ದೀರಿ. ನಿಮ್ಮ ಕೈಯನ್ನು ಜೇಬಿನೊಳಗೆ ಹಾಕಿರಿ, ಅದು ಪ್ರಕಾಶಿಸುತ್ತಾ ನಿರಾಯಾಸವಾಗಿ ಹೊರಬರುವುದು ಮತ್ತು ಭೀತಿಯಿಂದ ಪಾರಾಗಲಿಕ್ಕಾಗಿ ನಿಮ್ಮ ಬಾಹುಗಳನ್ನು ಬಿಗಿದುಕೊಳ್ಳಿರಿ ನಿಮ್ಮ ಪ್ರಭುವಿನ ಕಡೆಯಿಂದ ಫಿರ್‌ಔನ್ ಮತ್ತು ಅವನ ಆಸ್ಥಾನಿಗರ ಮುಂದಿಡಲಿಕ್ಕಾಗಿ ಇವೆರಡು ಪ್ರತ್ಯಕ್ಷ ನಿದರ್ಶನಗಳಾಗಿವೆ. ಅವರು ಮಹಾ ಆಜ್ಞೋಲ್ಲಂಘಕರಾಗಿದ್ದಾರೆ." **(ಪವಿತ್ರ ಕುರ್‌ಆನ್, 28:31-32)**

"ನಿಮ್ಮ ಲಾಠಿಯನ್ನು ಎಸೆಯಿರಿ. ಲಾಠಿಯು ಹಾವಿನಂತೆ ತೆವಳುತ್ತಿರುವುದನ್ನು ಕಂಡೊಡನೆ ಮೂಸಾ ಬೆನ್ನು ತಿರುಗಿಸಿ ಓಟಕಿತ್ತರು ಮತ್ತು ಹಿಂದೆ ತಿರುಗಿಯೂ ನೋಡಲಿಲ್ಲ. ಮೂಸಾ, ಹೆದರಬೇಡಿರಿ. ನನ್ನ ಸನ್ನಿಧಿಯಲ್ಲಿ ಸಂದೇಶವಾಹಕರು ಅಂಜುವುದಿಲ್ಲ. ಆದರೆ ಅಪರಾಧ ಮಾಡಿದವನ ಹೊರತು. ಇನ್ನು ಅವನು ಕೆಡುಕಿನ ಬಳಿಕ (ತನ್ನ ಕರ್ಮವನ್ನು) ಒಳಿತಾಗಿ ಮಾರ್ಪಡಿಸಿ ಕೊಂಡರೆ ನಾನು ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತೇನೆ. ನಿಮ್ಮ ಕೈಯನ್ನು ನಿಮ್ಮ ಜೇಬಿನಲ್ಲಿ ಹಾಕಿರಿ. ಅದು ಯಾವ ತೊಂದರೆಯೂ ಇಲ್ಲದೆ ಪ್ರಕಾಶಿಸುತ್ತ ಹೊರ ಬರುವುದು. ಇವು ಫಿರ್‌ಔನ್ ಮತ್ತು ಅವನ ಜನಾಂಗದ ಕಡೆಗೆ (ಕೊಂಡು ಹೋಗಲಿಕ್ಕಾಗಿರುವ) ಒಂಭತ್ತು ನಿದರ್ಶನಗಳಲ್ಲಿ (ಎರಡು) ಆಗಿರುತ್ತವೆ. ಅವರು ಮಹಾ ದುಷ್ಕರ್ಮಿಗಳು." (ಪವಿತ್ರ ಕುರ್‌ಆನ್, 27:10-12)

ಈ ಸೂಕ್ತಗಳಿಂದ ತಿಳಿದು ಬರುವುದೇನೆಂದರೆ ಲಾಠಿಯ ಸ್ವರೂಪವನ್ನು ಕಂಡು ಮೂಸಾ ತುಂಬಾ ಗಾಬರಿಗೊಂಡು ಭಯದಿಂದ ಓಡತೊಡಗಿದರು. ಆದರೆ ಅಲ್ಲಾಹನು ಅವರಿಗೆ ಕೂಡಲೇ ಸಮಾಧಾನ ಹೇಳಿದನು. ಭಯ ದೂರವಾದಾಗ ನೀವೇನೂ ಹೆದರ ಬೇಕಾಗಿಲ್ಲ, ನಿಮಗೇನೂ ಅಪಾಯ ಎದುರಾಗದು ಎಂದು ಸಾಂತ್ವನ ನೀಡಿದನು. ನಿಮ್ಮ ಮೇಲೆ ಈ ದೊಡ್ಡ ಹೊಣೆಯನ್ನು ವಹಿಸಿಕೊಟ್ಟಿರುವ ಆ ಮಹಾನ್ ಅಸ್ತಿತ್ವವು ನಿಮ್ಮನ್ನು ಒಬ್ಬಂಟಿಯಾಗಿ ಬಿಡಲಾರನು. ಅಗತ್ಯ ಬಂದಾಗಲೆಲ್ಲ ನಿಮಗೆ ಸಹಾಯ ಮಾಡುವನು ಎಂದು ಹೇಳಿ ಅವರಿಗೆ ಅವನ ಸ್ಥಾನವನ್ನು ನೆನಪಿಸಿ, ತನ್ನನ್ನು ಭೇಟಿಯಾಗುವ ಶಿಷ್ಟಾಚಾರ ಗಳನ್ನು ಕಲಿಸಿದನು. ನೀವಂತೂ ಅಲ್ಲಾಹನ ಸಂದೇಶವಾಹಕರಾಗಿರುವಿರಿ. ಅಲ್ಲಾಹನ ಆಪ್ತ ದಾಸರ ಮೇಲೆ ಆತನ ಅನುಗ್ರಹಗಳು ವರ್ಷಿಸುತ್ತಲಿರುತ್ತದೆ. ಆದ್ದರಿಂದ ಹೆದರುವುದೇಕೆ? ಹೆದರ ಬೇಕಾದವರು ನೀವಲ್ಲ ಹೆದರಬೇಕಾದವರು, ಆತನ ಆಜ್ಞೋಲ್ಲಂಘನೆ ಮಾಡು ವವರು ಮತ್ತು ಅವನಿಂದ ತಿರಸ್ಕರಿಸಲ್ಪಟ್ಟವರು ಎಂದು ಹೇಳಿದನು. ಅನಂತರ ಅವರಿಂದ ಮುಂದಾಗಿ ಬರಲಿದ್ದ ಪ್ರಶ್ನೆಗೆ ಮೊದಲೇ ಉತ್ತರವನ್ನು ನೀಡುತ್ತಾನೆ. ಅಂದರೆ ದಾಸನಿಂದ ಏನಾದರೂ ತಪ್ಪಾದರೆ ಮತ್ತು ಅದಕ್ಕಾಗಿ ಅವನು ತೌಬಾ ಮಾಡಿದರೆ ಅವನನ್ನು ಪ್ರಭು ಶಿಕ್ಷಿಸುವುದಿಲ್ಲ, ಬದಲಾಗಿ ಕ್ಷಮಿಸಿ ಬಿಡುತ್ತಾನೆ. ಈ ರೀತಿ ಅವರು ಮನದಲ್ಲೇ ಹೆದರುತ್ತಿದ್ದ ತನ್ನ ತಪ್ಪಿಗೆ ಮುಂಗಡ ಕ್ಷಮೆಯ ಪರವಾನಿಗೆಯೂ ಲಭಿಸಿತು. ತರುವಾಯ ಅವರೊಂದಿಗೆ ಹೀಗೆ ಹೇಳಲಾಯಿತು, ನಿಮಗೆ ನೀಡಲಾಗಿರುವುದು ಕೇವಲ ಈ ಎರಡು ಪವಾಡಗಳಲ್ಲ, ನಿಮಗೆ ವಹಿಸಿಕೊಡಲಾದ ಈ ಮಹಾನ್ ಹೊಣೆಗಾರಿಕೆಯನ್ನು ಏನೊಂದೂ ಭಯವಿಲ್ಲದೆ ನಿರ್ವಹಿಸಲಿಕ್ಕಾಗಿ ಇನ್ನೂ ಏಳು ದೃಷ್ಟಾಂತಗಳನ್ನೂ ಸಂಕೇತಗಳನ್ನೂ ನೀಡಲಾಗುತ್ತದೆ.

ದೌತ್ಯ ನಿರ್ವಹಣೆಯ ಆಜ್ಞೆ

ಈ ಸಾಂತ್ವನ ಮತ್ತು ಸಮಾಧಾನ ನೀಡಿದ ಬಳಿಕ ಅವರು ನಿರ್ವಹಿಸಬೇಕಾದ ಹೊಣೆಗಾರಿಕೆಯನ್ನು ತಿಳಿಸಲಾಗುತ್ತದೆ.

"ಇನ್ನು ನೀವು ಫಿರ್‌ಔನನ ಬಳಿಗೆ ಹೋಗಿರಿ. ಅವನು ಅತಿಕ್ರಮಿಯಾಗಿದ್ದಾನೆ ಎನ್ನಲಾಯಿತು." (ಪವಿತ್ರ ಕುರ್‌ಆನ್, 20:24)

ಫಿರ್‌ಔನನ ಹೆಸರು ಕೇಳುತ್ತಲೇ ಮೂಸಾರಿಗೆ ಕಳೆದ ಅನೇಕ ವರ್ಷಗಳ ಘಟನೆಗಳೆಲ್ಲ ಸ್ಮೃತಿಪಟಲದಲ್ಲಿ ಮೂಡತೊಡಗಿದುವು. ಅವರಿಗೆ ಫಿರ್‌ಔನನ ದಬ್ಬಾಳಿಕೆ, ಅಕ್ರಮ, ಅತ್ಯಾಚಾರಗಳು, ತಮ್ಮ ಅಸಹಾಯಕತೆ ಮತ್ತು ಒಂಟಿತನ ಹಾಗೂ ಕಿಬ್ತಿಯೊಬ್ಬನ ಕೊಲೆಯ ಕಾರಣ ಅವರನ್ನು ಸೆರೆಹಿಡಿಯಲು ಫಿರ್‌ಔನೀಯರು ನಡೆಸಿದ ಬಿರುಸಿನ ಪ್ರಯತ್ನಗಳೆಲ್ಲ ನೆನಪಾದುವು. ತಮ್ಮ ವಾಕ್ಸಾಮರ್ಥ್ಯದ ಕೊರತೆಯೂ ಮನಸ್ಸನ್ನು ಕಾಡಿತು. ಫಿರ್‌ಔನನ ಪ್ರತೀಕಾರ ಭಾವನೆಯನ್ನು ಎಣಿಸಿಯೇ ಭಯಭೀತರಾದರು. ತನ್ನ ದೌತ್ಯದ ವೇಳೆ ಎದುರಾಗ ಬಹುದಾದ ಕಷ್ಟ-ಕೋಟಲೆಗಳನ್ನು ನೆನೆದು ಕಂಪಿಸತೊಡಗಿದರು. ಅಲ್ಲಾಹನೇ ಅಕ್ರಮಿಯ ದಬ್ಬಾಳಿಕೆ-ದುಷ್ಕೃತ್ಯಗಳ ಬಗ್ಗೆ ಸಾಕ್ಷಿ ಹೇಳುತ್ತಿರುವಾಗ, ಅವನಿಗಿಂತ ದೊಡ್ಡ ಅಕ್ರಮಿಯು ಇನ್ನಾರಿರಲು ಸಾಧ್ಯ? ಆದ್ದರಿಂದ ನಡುಗುತ್ತಾ ಕಂಪಿಸುತ್ತಾ ಪ್ರಾರ್ಥಿಸಿದರು,

"ಮೂಸಾ (ಹೀಗೆ) ಹೇಳಿದರು- ಓ ನನ್ನ ಪ್ರಭೂ, ನನ್ನ ಹೃದಯವನ್ನು ವಿಶಾಲ ಗೊಳಿಸು- ನನ್ನ ಕಾರ್ಯವನ್ನು ನನಗೆ ಸುಲಭಗೊಳಿಸು- ಜನರು ನನ್ನ ಮಾತನ್ನು ತಿಳಿಯು ವಂತಾಗಲು ನನ್ನ ನಾಲಗೆಯ ತೊಡಕನ್ನು ನೀಗಿಸು- ಮತ್ತು ನನಗಾಗಿ ನನ್ನದೇ ಕುಟುಂಬ ದಿಂದ ಒಬ್ಬ ಮಂತ್ರಿಯನ್ನು ನೇಮಿಸು. ನಾವು ನಿನ್ನ ಪಾವಿತ್ರ್ಯವನ್ನು ಬಹಳವಾಗಿ ಕೊಂಡಾಡಲು ಹಾಗೂ ಬಹಳವಾಗಿ ನಿನ್ನನ್ನು ಪ್ರಸ್ತಾಪಿಸಲು ನನ್ನ ಸಹೋದರರಾಗಿರುವ ಹಾರೂನರ ಮೂಲಕ ನನ್ನ ಕೈ ಬಲಪಡಿಸು ಮತ್ತು ಅವರನ್ನು ನನ್ನ ಕೆಲಸದಲ್ಲಿ ಸಹಭಾಗಿಯಾಗಿ ಮಾಡು. ನೀನು ಸದಾ ನಮ್ಮ ವೀಕ್ಷಕನಾಗಿರುತ್ತೀ." (ಪವಿತ್ರ ಕುರ್‌ಆನ್, 20:25-35)

ಇಲ್ಲಿ ಮೂಸಾ(ಅ) ತಮ್ಮ ಮಹಾನ್ ದೌತ್ಯದ ನಿರ್ವಹಣೆಗೆ ಅಗತ್ಯವೆಂದು ಭಾವಿಸುವ ಎಲ್ಲವನ್ನೂ ಬೇಡಿದರು. ಮಹಾ ಉದಾರಿಯೂ ಕರುಣಾಳುವೂ ಮುಂದಿರುವಾಗ ಏನು ಬೇಕೋ ಅದನ್ನು ಬೇಡಬೇಕೆಂದು ಅವರಿಗೆ ತೋಚಿತು. ಈ ಕಾರ್ಯದ ಘನತೆ, ಸಂಕಷ್ಟಗಳು ಮತ್ತು ಭಾರವನ್ನು ಅವರು ಚೆನ್ನಾಗಿ ಗ್ರಹಿಸಿದ್ದರು. ಆದ್ದರಿಂದ ಅದಕ್ಕೆ ಅಗತ್ಯವಾಗಿರುವ ಸಕಲವನ್ನೂ ಬೇಡಿದರು. ಮೂಸಾ(ಅ) ತಮ್ಮ ಪ್ರಭುವಿನಲ್ಲಿ ಏನೆಂದು ಪ್ರಾರ್ಥಿಸಿದರು? ನೋಡೋಣ:

ಪ್ರಪ್ರಥಮವಾಗಿ ಅವರು ಮನಸ್ಸನ್ನು ತೆರೆಯುವಂತೆ ಪ್ರಾರ್ಥಿಸಿದರು. ಎಲ್ಲಿಯ ವರೆಗೆ ಒಬ್ಬನಿಗೆ ಧ್ಯೇಯೋದ್ದೇಶದ ಕುರಿತು ಮನಸ್ಸಿಗೆ ತೃಪ್ತಿಯುಂಟಾಗುವುದಿಲ್ಲವೋ ಅಲ್ಲಿಯ ವರೆಗೆ ಅದಕ್ಕಾಗಿ ಅವನು ತನ್ನ ಶಕ್ತಿ-ಸಾಮರ್ಥ್ಯಗಳನ್ನು ವ್ಯಯಿಸಲಾರ. ಆದ್ದರಿಂದಲೇ ತನ್ನ ಮನಸ್ಸು ಸಂಪೂರ್ಣ ತೃಪ್ತವಾಗಿ ತನಗೆ ವಹಿಸಿಕೊಡಲಾಗಿರುವ ಪ್ರವಾದಿತ್ವದ ಘನ ಕರ್ತವ್ಯವನ್ನು ಏಕಾಗ್ರತೆಯೊಂದಿಗೆ ಈಡೇರಿಸಲು ಸಹಾಯಕವಾಗುವಂತೆ ಅವರು ಪ್ರಪ್ರಥಮವಾಗಿ ತನ್ನ ಮನಸ್ಸನ್ನು ತೆರೆಯಬೇಕೆಂದು ಪ್ರಾರ್ಥಿಸಿದರು. ಇದೇನೂ ಹೊಸತಾದ

ಪ್ರಾರ್ಥನೆಯಾಗಿರಲಿಲ್ಲ, ಇದಕ್ಕಿಂತ ಮುಂಚೆ ಅವರ ಪಿತಾಮಹರಾಗಿದ್ದ ಪ್ರವಾದಿ ಇಬ್ರಾಹೀಮ್(ಅ) ಇದೇ ಪ್ರಾರ್ಥನೆಯನ್ನು ಮಾಡಿದ್ದರು.

"ಆದರೆ ಮನಸ್ಸಂತೃಪ್ತಿ ಬಯಸುತ್ತೇನೆ." (ಪವಿತ್ರ ಕುರ್‌ಆನ್, 2:260)

ವಾಸ್ತವದಲ್ಲಿ ಲೋಕದಲ್ಲಿ ಯಾವುದೇ ಮಹಾನ್ ಕಾರ್ಯದ ಕುರಿತು ಸಂಪೂರ್ಣ ಮನಃಸಂತೃಪ್ತಿ ಮತ್ತು ಸಮಾಧಾನವಿಲ್ಲದೆ ಅದನ್ನು ಈಡೇರಿಸಲು ಸಾಧ್ಯವಿಲ್ಲ.

ಎರಡನೆಯದಾಗಿ, ಈ ಕಾರ್ಯವನ್ನು ನನಗೆ ಸುಲಭಗೊಳಿಸು ಎಂದವರು ಪ್ರಾರ್ಥಿಸಿದರು. ಗತ ಪ್ರವಾದಿಗಳ ಇತಿಹಾಸ ಅವರ ಮುಂದಿತ್ತು. ಅವರೆಲ್ಲ ಎದುರಿಸಿದ ಸಂಕಷ್ಟ-ಪೀಡನೆಗಳು ಅವರ ಮುಂದಿತ್ತು. ಅದನ್ನು ಅವರು ಚೆನ್ನಾಗಿ ಅರಿತಿದ್ದರು. ಮಾನವನ ಸಾಮರ್ಥ್ಯ ಎಷ್ಟು ಪರಿಮಿತ ಎಂಬುದನ್ನೂ ಅವರು ತಿಳಿದಿದ್ದರು. ಆದ್ದರಿಂದ ಯೋಚಿಸದೆ ಹೊರೆಯನ್ನು ಎತ್ತುವ ಬದಲು ತನ್ನ ಪ್ರಭುವಿನಿಂದ ಅವರು ಅದನ್ನು ಸುಲಭಗೊಳಿಸು ವಂತೆ ಪ್ರಾರ್ಥಿಸಿದರು. ಏಕೆಂದರೆ ಯಾವುದೇ ವ್ಯಕ್ತಿಯಾಗಲೀ ಸಮೂಹವಾಗಲೀ ಎಷ್ಟೇ ಶಕ್ತಿವಂತರಾದರೂ ಸಾಮರ್ಥ್ಯಗಳನ್ನು ಹೊಂದಿದವರಾದರೂ ಅಲ್ಲಾಹನ ಅನುಜ್ಞೆ ಮತ್ತು ಸಹಾಯವಿಲ್ಲದೆ ಯಾವುದೇ ಕಾರ್ಯವನ್ನು ಮಾಡಲು ಸಾಧ್ಯವಿಲ್ಲ. ಎಲ್ಲಿಯ ವರೆಗೆ ಅಲ್ಲಾಹನು ಒಬ್ಬನಿಗೆ ದಾರಿಯನ್ನು ಸುಲಭಗೊಳಿಸುವುದಿಲ್ಲವೋ ಅಲ್ಲಿಯ ವರೆಗೆ ಅವನು ಯಾವುದೇ ಕಾರ್ಯವನ್ನು ನಿರ್ವಹಿಸುವಲ್ಲಿ ಎರಡು ಹೆಜ್ಜೆಯೂ ಮುಂದೆ ಸಾಗಲಾರ.

ಮೂರನೆಯ ವಿನಂತಿಯನ್ನು ಅವರು ಉತ್ತಮ ವಾಕ್ಸಾಮರ್ಥ್ಯವನ್ನು ದಯ ಪಾಲಿಸಲಿಕ್ಕಾಗಿ ಮಾಡಿದರು. ಬದುಕಿನಲ್ಲಿ ಮಾತುಗಾರಿಕೆಗಿರುವ ಮಹತ್ವವನ್ನು ಯಾರೂ ನಿರಾಕರಿಸುವಂತಿಲ್ಲ. ಸವಿನುಡಿ, ಮನಮುಟ್ಟುವ ಆಧಾರಗಳು, ಆಕರ್ಷಕ ವಾಕ್‌ಶೈಲಿ, ಅತ್ಯುತ್ತಮ ಸಾಹಿತ್ಯ, ಸಂತುಲಿತ ಪದಗಳು ಮತ್ತು ವಾಕ್ಯಗಳು- ಇವೆಲ್ಲ ದೊಡ್ಡ ದೊಡ್ಡ ವರ್ಗಗಳಲ್ಲಿ ಕ್ರಾಂತಿಯನ್ನುಂಟು ಮಾಡುತ್ತವೆ. ಅವರ ಜೀವನದ ದಿಕ್ಕನ್ನು ಬದಲಾಯಿಸಿ ಬಿಡುತ್ತವೆ. ಅಭಿಸಂಬೋಧಿತರಲ್ಲಿ ಹೊಸ ಚೈತನ್ಯ, ಹೊಸ ಹುರುಪು ಮತ್ತು ದೃಢನಂಬಿಕೆ ಯನ್ನು ಮೂಡಿಸುತ್ತದೆ. ಹಾಗಿರುವಾಗ ತನ್ನ ಕಾರ್ಯಾರಂಭವನ್ನು ಬೋಧನೆ-ಪ್ರವಚನ ದಿಂದಲೇ ಆರಂಭಿಸಬೇಕಾದವರು ಇದರಿಂದ ಹೊರತಾಗುವುದು ಹೇಗೆ? ಆದ್ದರಿಂದ ಮೂಸಾ(ಅ) ಇದರ ಮಹತ್ವವನ್ನು ಮುಂದಿರಿಸಿಕೊಂಡು ಆರಂಭದಲ್ಲೇ ಅದನ್ನು ಬೇಡಿ ಕೊಂಡರು. ಇದೇ ಅನುಗ್ರಹವನ್ನು ಅಲ್ಲಾಹನು ಅಂತಿಮ ಪ್ರವಾದಿ ಮುಹಮ್ಮದ್‌ರಿಗೂ(ಸ) ನೀಡಿದ್ದನು. ಪ್ರವಾದಿಯವರು(ಸ) ಅದನ್ನು ಕೃತಜ್ಞತಾ ಭಾವದೊಂದಿಗೆ ಹೀಗೆ ಹೇಳಿದ್ದರು, "ನಾನು ಅರಬರ ಪೈಕಿ ಅತ್ಯುತ್ತಮ ವಾಕ್ಚಾತುರ್ಯವುಳ್ಳ ವ್ಯಕ್ತಿಯಾಗಿದ್ದೇನೆ."

ನಾಲ್ಕನೆಯದಾಗಿ, ಅವರು ತನ್ನ ಈ ಕಾರ್ಯಕ್ಕೆ ಒಬ್ಬ ಸಹಾಯಕನನ್ನು ದಯ ಪಾಲಿಸುವಂತೆ ಪ್ರಾರ್ಥಿಸಿದರು. ಅವರಿಗೆ ವಹಿಸಿಕೊಡಲಾದ ಈ ಮಹಾನ್ ಕಾರ್ಯದ ಕಷ್ಟವನ್ನು ಅವರು ತಿಳಿದಿದ್ದರು. ಅವರನ್ನು ಯಾರ ಬಳಿಗೆ ಕಳಿಸಲಾಗುತ್ತಿತ್ತೋ ಅವರು

ಅಕ್ರಮ-ಬರ್ಬರತೆಯಲ್ಲಿ ಹಸಿದ ತೋಳಗಳನ್ನೂ ಮೀರಿಸಿದ್ದರು. ತನ್ನನ್ನು ಒಂಟಿಯಾಗಿ ಕಂಡು ಎಲ್ಲಾದರೂ ಆ ಜನರು ಕೊಲೆ ಮಾಡಿ ತನಗೆ ವಹಿಸಿಕೊಡಲಾದ ಕೆಲಸವನ್ನೇ ಮುಗಿಸಿ ಬಿಡುವರೋ ಎಂಬ ಆಶಂಕೆಯುಂಟಾಗಿತ್ತು. ಆದ್ದರಿಂದ ತನ್ನ ಸಂಕಷ್ಟದ ವೇಳೆ ತನಗೆ ಸರಿಯಾದ ಸಲಹೆ ನೀಡುವ ಮತ್ತು ತನ್ನ ಸಹಾಯಕ್ಕೆ ಒದಗಬಲ್ಲ ಹಾಗೂ ತನ್ನ ಅನುಪಸ್ಥಿತಿಯಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಬಲ್ಲ ಮತ್ತು ಅಗತ್ಯ ಬಿದ್ದರೆ ತನಗಿಂತ ಉತ್ತಮ ರೀತಿಯಲ್ಲಿ ಮಾತಾಡಬಲ್ಲ ಓರ್ವನನ್ನು ನೀಡಬೇಕೆಂಬ ಇಚ್ಛೆ ವ್ಯಕ್ತಪಡಿಸಿದರು. ಅವರ ದೃಷ್ಟಿಯಲ್ಲಿ ಈ ಕಾರ್ಯಕ್ಕೆ ಅವರ ಹಿರಿಯ ಸಹೋದರ ಹಾರೂನರೇ ಸೂಕ್ತ ವ್ಯಕ್ತಿಯಾಗಿದ್ದರು. ಅವರ ನೀತಿ-ಚಾರಿತ್ರ್ಯ, ಅವರ ಮಾತುಗಾರಿಕೆ ಮತ್ತು ವಾಕ್ಚಾತುರ್ಯ, ಅವರ ಸಮಯ ಪ್ರಜ್ಞೆಯನ್ನು ಅವರು ಚೆನ್ನಾಗಿ ಅರಿತಿದ್ದರು. ಅಲ್ಲದೆ ಅವರು ಪ್ರವಾದಿಗಳ ಕುಟುಂಬದವರೇ ಆಗಿದ್ದುದರಿಂದ ಅವರ ಮೇಲೆ ಸಂಪೂರ್ಣ ನಂಬಿಕೆಯೂ ಇತ್ತು.

ಈ ಸಂದರ್ಭದಲ್ಲಿ ಮೂಸಾರು ಇನ್ನೂ ಕೆಲವು ಬೇಡಿಕೆಗಳು, ಕೆಲವು ನೆವನಗಳು ಹಾಗೂ ಕೆಲವು ಆಧಾರಗಳನ್ನೂ ಮುಂದಿಟ್ಟಿದ್ದರೆಂದು ಕುರ್‌ಆನಿನ ಇತರ ಕೆಲವು ಸೂಕ್ತಗಳಿಂದ ತಿಳಿದು ಬರುತ್ತದೆ. ಉದಾ:

"ಆಗ ಮೂಸಾ ಬಿನ್ನವಿಸಿದರು, ನನ್ನ ಪ್ರಭೂ, ನಾನು ಅವರ ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಿದ್ದೇನೆ. ಅವರು ನನ್ನನ್ನು ಕೊಂದು ಹಾಕುವರೆಂದು ನನಗೆ ಭಯವಿದೆ. ನನ್ನ ಸಹೋದರ ಹಾರೂನರು ನನಗಿಂತ ಉತ್ತಮ ಮಾತುಗಾರ. ಅವರು ನನ್ನನ್ನು ಸಮರ್ಥಿಸುವಂತೆ ಅವರನ್ನು ಸಹಾಯಕನಾಗಿ ನನ್ನ ಜೊತೆ ಕಳುಹಿಸು, ಆ ಜನರು ನನ್ನನ್ನು ಸುಳ್ಳಾಗಿಸುವರೆಂಬ ಆಶಂಕೆ ನನಗಿದೆ." (ಪವಿತ್ರ ಕುರ್‌ಆನ್, 28:33-34)

"ನಿನ್ನ ಪ್ರಭು ಮೂಸಾರನ್ನು ಕೂಗಿ ಕರೆದು, 'ಅಕ್ರಮಿ ಜನಾಂಗದ ಕಡೆಗೆ ಹೋಗು- ಫಿರ್‌ಔನನ ಜನಾಂಗದ ಕಡೆಗೆ- ಅವರು ಭಯಪಡುವುದಿಲ್ಲವೇ?' ಎಂದು ಹೇಳಿದ ವೃತ್ತಾಂತವನ್ನು ಇವರಿಗೆ ತಿಳಿಸಿರಿ. ಆಗ ಅವರು, 'ನನ್ನ ಪ್ರಭೂ, ಅವರು ನನ್ನನ್ನು ಸುಳ್ಳಾಗಿಸಿ ಬಿಡುವರೆಂಬ ಭಯ ನನಗಿದೆ. ನನ್ನ ಹೃದಯ ಮುದುಡುತ್ತಿದೆ. ನನ್ನ ನಾಲಿಗೆ ಚಲಿಸುವುದಿಲ್ಲ, ನೀನು ಹಾರೂನರ ಬಳಿಗೆ ಸಂದೇಶವಾಹಕತ್ವವನ್ನು ಕಳುಹಿಸು. ಅವರ ಬಳಿ ನನ್ನ ಮೇಲೆ ಒಂದು ಅಪರಾಧದ ಆರೋಪವೂ ಇದೆ. ಆದುದರಿಂದ ಅವರು ನನ್ನನ್ನು ವಧಿಸಿ ಬಿಡುವರೆಂದು ನಾನು ಹೆದರುತ್ತೇನೆ' ಎಂದು ಬಿನ್ನವಿಸಿದರು."

(ಪವಿತ್ರ ಕುರ್‌ಆನ್, 26:10-14)

ಈ ಸೂಕ್ತಗಳಿಂದ ತಿಳಿದು ಬರುವ ಅಂಶವೇನೆಂದರೆ ಮೂಸಾರಿಗೆ ಪ್ರವಾದಿತ್ವದ ಪರವಾನಿಗೆ ಸಿಕ್ಕಿದ ಕೂಡಲೇ ಆ ಮಹಾನ್ ದೌತ್ಯದ ನಿರ್ವಹಣೆಯ ಹಾದಿಯಲ್ಲಿ ತೊಡಕಾಗಬಹುದಾದಂತಹ ಎಲ್ಲ ಭೀತಿ ಹಾಗೂ ದೌರ್ಬಲ್ಯಗಳನ್ನು ಮುಂದಿಟ್ಟು ಅಲ್ಲಾಹನ ಸಹಾಯಕ್ಕಾಗಿ ಮೊರೆಯಿಟ್ಟರು. ಆ ಭೀತಿಗಳ ಪೈಕಿ ಪ್ರಥಮವಾದುದು, ಫಿರ್‌ಔನ್ ಮತ್ತವನ ಪರಿವಾರದವರ ದೃಷ್ಟಿಯಲ್ಲಿ ತಾನೋರ್ವ ಅಪರಾಧಿಯಾಗಿದ್ದೇನೆಂಬುದಾಗಿತ್ತು.

ತನ್ನ ಮಾತನ್ನು ಕೇಳುತ್ತಲೇ ಆತ ಪ್ರತೀಕಾರಕ್ಕಿಳಿದು ತನ್ನಿಂದ ಅಕಸ್ಮಾತ್ ಸಂಭವಿಸಿದ್ದ ಕೊಲೆಯ ಆರೋಪದಲ್ಲಿ ತನ್ನನ್ನು ಕೊಲೆ ಮಾಡಿ ಬಿಡುವನು ಎಂದಾಗಿತ್ತು.

ಫಿರ್‌ಔನನದ್ದು ಅತ್ಯಂತ ಕ್ರೂರ ಜನಾಂಗವಾಗಿದ್ದು, ಬಹಳ ಸಮಯದಿಂದಲೂ ಕೊಲೆ-ರಕ್ತಪಾತ ನಡೆಸುವುದರಲ್ಲಿ ನಿರತವಾಗಿದೆ. ತನ್ನ ಜನಾಂಗದ ಸಾವಿರಾರು ಹಸುಗೂಸುಗಳನ್ನು ಕೊಂದು ಹಾಕಿರುವಾಗ ತನ್ನನ್ನು ಹೇಗೆ ಸೈರಿಸಿಕೊಂಡಾರು. ತನ್ನ ಬಾಯಿಂದ ಮಾತು ಹೊರಡುತ್ತಲೇ ಸುಳ್ಳಾಗಿಸುವರು. ನಿಜವಾಗಿ 'ಅಕ್ರಮಿ ಜನಾಂಗವೆಂದು ಅಲ್ಲಾಹನೇ ಪರಿಚಯ ಪಡಿಸಿರುವ ಅಕ್ರಮಿಗಳಿಗಿಂತ ದೊಡ್ಡ ಅಕ್ರಮಿಗಳು ಇನ್ನಾರಿರಲು ಸಾಧ್ಯ?

ಅಷ್ಟೇ ಅಲ್ಲ, ನನ್ನ ಬಳಿ ಆ ಅಕ್ರಮಿಗಳ ಕೋಪ ಹಾಗೂ ನಿರಾಕರಣೆಯ ಗತಿಯನ್ನು ಬದಲಾಯಿಸತಕ್ಕ ಮಾತುಗಾರಿಕೆಯ ಸಾಮರ್ಥ್ಯವೂ ಇಲ್ಲ. ಆದ್ದರಿಂದ ಪ್ರಭೂ! ಒಂದೋ ನನ್ನ ಸಹೋದರ ಹಾರೂನರಿಗೆ ಈ ಪ್ರವಾದಿತ್ವವನ್ನು ವಹಿಸಿಕೊಡು, ಅಲ್ಲದಿದ್ದರೆ ಅವರನ್ನು ನನ್ನ ಸಹಾಯಕ ಪ್ರವಾದಿಯಾಗಿ ಮಾಡು. ಆ ಅಕ್ರಮಿ ಜನಾಂಗವು ನನ್ನನ್ನು ಸುಳ್ಳಾಗಿಸಿದರೆ ಅವರು ನನ್ನ ಬೆಂಬಲಕ್ಕೆ ನಿಲ್ಲಬಹುದು ಮತ್ತು ನನ್ನ ಸಂದೇಶವನ್ನು ಸಮರ್ಥಿಸಬಹುದು.

ಆದರೆ ಅಲ್ಲಾಹನ ತೀರ್ಮಾನಗಳು ನ್ಯೂನತೆಯಿಂದ ಕೂಡಿದ್ದೋ ಆಗಾಗ ಬದಲಾಯಿಸ ತಕ್ಕಂತಹದ್ದೋ ಆಗಿರುವಷ್ಟು ದುರ್ಬಲವಾಗಿರುವುದಿಲ್ಲ, ಅವನದು ಅತ್ಯಂತ ಯುಕ್ತಿಪೂರ್ಣವಾಗಿ ಆಲೋಚಿಸಿದ, ಬಲಿಷ್ಠವಾದ ತೀರ್ಮಾನಗಳಾಗಿರುತ್ತವೆ. ಏನೆಲ್ಲ ಸಂಭವಿಸಲಿದೆಯೆಂಬುದು ಅವನಿಗೆ ಮೊದಲೇ ತಿಳಿದಿತ್ತು. ಅದೆಲ್ಲದರ ವ್ಯವಸ್ಥೆಯನ್ನು ಅವನು ಮೊದಲೇ ಮಾಡಿಟ್ಟದ್ದನು.

ಮೂಸಾರ ಧೈರ್ಯ ಸ್ಥೈರ್ಯವನ್ನು ಹೆಚ್ಚಿಸಲಿಕ್ಕಾಗಿ ಮತ್ತು ಆ ಎಲ್ಲ ಆಶಂಕೆ ಮತ್ತು ಗೊಂದಲಗಳಿಂದ ಅವರನ್ನು ಪಾರುಗೊಳಿಸಲಿಕ್ಕಾಗಿ ಮೊದಲು ಅವರ ವಿನಂತಿಯನ್ನು ಅವನು ಅಂಗೀಕರಿಸಿದನು.

"ಆಗ (ಹೀಗೆ) ಹೇಳಲಾಯಿತು, ಓ ಮೂಸಾ, ನೀವು ಕೇಳಿಕೊಂಡದ್ದನ್ನು ನಿಮಗೆ ಕೊಡಲಾಗಿದೆ." **(ಪವಿತ್ರ ಕುರ್‌ಆನ್, 20:36)**

ಅಂದರೆ ಸಹೋದರ ಹಾರೂನ್‌ರನ್ನು ಸಹಾಯಕ ಪ್ರವಾದಿಯಾಗಿ ಮಾಡಿದನು. ವಾಕ್ಸಾಮರ್ಥ್ಯವನ್ನು ನೀಡಿದನು ಮತ್ತು ಅವರ ಹೃದಯವನ್ನು ತೆರೆದುಕೊಟ್ಟನು. ಈ ಎಲ್ಲ ವೃತ್ತಾಂತಗಳನ್ನು ಸಂಕ್ಷೇಪಿಸಿ ಕೆಲವೇ ವಾಕ್ಯಗಳಲ್ಲಿ ಅಲ್ಲಾಹನು ಹೀಗೆ ಹೇಳಿದನು:

"ಈ ಗ್ರಂಥದಲ್ಲಿ ಮೂಸಾರ ಕುರಿತು ಪ್ರಸ್ತಾಪಿಸಿರಿ. ಅವರೊಬ್ಬ ಆಯ್ದ ವ್ಯಕ್ತಿಯಾಗಿದ್ದರು ಮತ್ತು ರಸೂಲ್ (ಸಂದೇಶವಾಹಕ) ಹಾಗೂ ನಬೀ (ಪ್ರವಾದಿ) ಆಗಿದ್ದರು. ನಾವು ಅವರನ್ನು 'ತೂರ್' (ಪರ್ವತದ) ಬಲಗಡೆಯಿಂದ ಕರೆದೆವು. ರಹಸ್ಯ ಸಂಭಾಷಣೆಯ ಮೂಲಕ ಅವರಿಗೆ ಸಾಮೀಪ್ಯ ಪ್ರದಾನ ಮಾಡಿದೆವು ಮತ್ತು ನಮ್ಮ ಕೃಪೆಯಿಂದ ಅವರ ಸಹೋದರ ಹಾರೂನರನ್ನು ಪ್ರವಾದಿಯಾಗಿ ಮಾಡಿ ಅವರಿಗೆ (ಸಹಾಯಕನನ್ನಾಗಿ ಮಾಡಿ) ಕೊಟ್ಟೆವು."

(ಪವಿತ್ರ ಕುರ್‌ಆನ್, 19:51-53)

ಹಾರೂನ್‌ರಿಗೆ ಪ್ರವಾದಿತ್ವ

ಕೇವಲ ಅಷ್ಟನ್ನು ಹೇಳಿ ಸಾಕು ಮಾಡಲಿಲ್ಲ, ಅವರಿಗೆ ಸಾಂತ್ವನ ನೀಡುತ್ತಾ ಹೀಗೆಂದನು:

"ಆಗ, 'ನಿಮ್ಮ ಸಹೋದರನ ಮುಖಾಂತರ ನಾವು ನಿಮಗೆ ಬೆಂಬಲ ನೀಡುವೆವು ಮತ್ತು ಅವರು ನಿಮಗೇನೂ ಹಾನಿ ಮಾಡಲಾಗದಂತಹ ವರ್ಚಸ್ಸನ್ನು ನಿಮಗಿಬ್ಬರಿಗೂ ದಯಪಾಲಿಸುವೆವು. ನಮ್ಮ ನಿದರ್ಶನಗಳ ಬಲದಿಂದ ವಿಜಯವು ನಿಮ್ಮ ಹಾಗೂ ನಿಮ್ಮ ಅನುಯಾಯಿಗಳದ್ದೇ ಆಗಿರುವುದು' ಎಂದು (ಅಲ್ಲಾಹನು) ಹೇಳಿದನು."

(ಪವಿತ್ರ ಕುರ್‌ಆನ್, 28:35)

ಅಂದರೆ ಅವರು ನಿಮ್ಮನ್ನು ಸುಳ್ಳಾಗಿಸುವರು ಮತ್ತು ನಿಮ್ಮನ್ನು ವಧಿಸಿಬಿಡುವರು ಎಂಬ ಆತಂಕ ನಿಮಗಿದೆಯೆಂದಾದರೆ ಇದೋ ನಾವು ನಿಮಗೆ ಮೊದಲೇ ತಿಳಿಸುತ್ತಿದ್ದೇವೆ. ಅವರು ನಿಮಗೆ ಯಾವ ಹಾನಿಯನ್ನೂ ಉಂಟು ಮಾಡಲಾರರು. ಅವರಿಗೆ ಅದರ ಧೈರ್ಯವಿರಲಾರದು. ಏಕೆಂದರೆ ನಾವು ನಿಮ್ಮನ್ನು ಅವರ ಮೇಲೆ ಪ್ರಭಾವ ಬೀರುವಂತಹ ಪ್ರತಾಪವಂತರಾಗಿ ಮಾಡುವೆವು. ಜೊತೆಗೆ ಆ ಜನರು ನಿಮ್ಮ ಮಾತನ್ನು ಆಲಿಸುವರು, ಸ್ವೀಕರಿಸುವರು ಮತ್ತು ನಿಮ್ಮನ್ನು ಅನುಸರಿಸುವರು. ಕಟ್ಟಕಡೆಗೆ ನೀವು ಮತ್ತು ನಿಮ್ಮ ಅನುಯಾಯಿಗಳೇ ವಿಜಯಶಾಲಿಗಳಾಗುವಿರೆಂಬ ಶುಭವಾರ್ತೆಯನ್ನೂ ನೀಡುತ್ತೇವೆ.

ಅಲ್ಲಾಹನ ಅನುಗ್ರಹಗಳು ಮತ್ತು ಮೂಸಾರ ಪ್ರಾರ್ಥನೆಯ ಸ್ವೀಕೃತಿಯ ಕುರಿತು ಕುರ್‌ಆನಿನ ಇನ್ನೊಂದು ಕಡೆ ಹೀಗೆ ಹೇಳಲಾಗಿದೆ:

"ನಾವು ಮೂಸಾರಿಗೆ ಗ್ರಂಥ ನೀಡಿದೆವು ಮತ್ತು ಅವರ ಜೊತೆಗೆ ಅವರ ಸಹೋದರ ಹಾರೂನರನ್ನು ಸಹಾಯಕನಾಗಿ ನೇಮಿಸಿದೆವು. ನಮ್ಮ ಸೂಕ್ತಗಳನ್ನು ಸುಳ್ಳಾಗಿಸಿ ಬಿಟ್ಟಿರುವ ಆ ಜನಾಂಗದ ಕಡೆಗೆ ಹೋಗಿರೆಂದು ಅವರೊಡನೆ ಹೇಳಿದೆವು. ಕೊನೆಗೆ ನಾವು ಅವರನ್ನು ನಾಶಗೊಳಿಸಿ ಬಿಟ್ಟೆವು." **(ಪವಿತ್ರ ಕುರ್‌ಆನ್, 25:35-36)**

ಈ ಸೂಕ್ತಗಳಲ್ಲಿ ಅಲ್ಲಾಹನ ಧರ್ಮದ ಸೇವೆಗಾಗಿ ಅವನು ಆಯ್ಕೆ ಮಾಡಿರುವ ತನ್ನ ದಾಸರಿಗಾಗಿ ನಿಶ್ಚಯಿಸಿರುವ ಕಾನೂನು ಕಟ್ಟಳೆಗಳನ್ನು ವಿವರಿಸಿದ್ದಾನೆ. ಆತನ ಆಜ್ಞೆ ಕೇಳಿ ಅವನ ಆಜ್ಞಾಪಾಲನೆಗಾಗಿ ಟೊಂಕ ಕಟ್ಟುವವರನ್ನು ಅವನು ಒಂಟಿಯಾಗಿ ಮಾಡಿ ಬಿಡುವುದಿಲ್ಲ, ವಿರೋಧಿಗಳಿಂದಲೂ ವೈರಿಗಳಿಂದಲೂ ಅವರನ್ನು ರಕ್ಷಿಸುತ್ತಾನೆ. ಅವರನ್ನು ಕಂಡೊಡನೆ ಧರ್ಮದ ಶತ್ರುಗಳು ಬೆದರುವ ರೀತಿಯಲ್ಲಿ ಅವರಿಗೆ ವರ್ಚಸ್ಸನ್ನು ನೀಡುತ್ತಾನೆ. ಅವರನ್ನು ಅನುಸರಿಸುವವರು ಮತ್ತು ಅವರ ಸಂದೇಶವನ್ನು ಪ್ರಚಾರ ಮಾಡುವವರಿಗೆ, ಅವರು ಮತ್ತು ಅವರ ಸಂಗಾತಿಗಳು ಕಟ್ಟಕಡೆಗೆ ವೈರಿಗಳ ಮೇಲೆ ಪ್ರಾಬಲ್ಯ ಪಡೆದೇ ತೀರುವರೆಂಬ ಸುವಾರ್ತೆಯನ್ನು ನೀಡುತ್ತಾನೆ. ಇದನ್ನೇ ಕುರ್‌ಆನ್ ಇತರ ಕಡೆಗಳಲ್ಲಿ ಹೀಗೆ ವಿವರಿಸಿದೆ,

"ನಾನು ಮತ್ತು ನನ್ನ ಸಂದೇಶವಾಹಕರೇ ವಿಜಯಿಗಳಾಗುವೆವೆಂದು ಅಲ್ಲಾಹನು ವಿಧಿ ಬರೆದು ಬಿಟ್ಟಿರುವನು." (ಪವಿತ್ರ ಕುರ್‌ಆನ್, 58:21)

"ನಾವು ನಮ್ಮ ಸಂದೇಶವಾಹಕ ದಾಸರಿಗೆ ಮೊದಲೇ ವಾಗ್ದಾನವಿತ್ತಿದ್ದೇವೆ. ಖಂಡಿತ ವಾಗಿಯೂ ಅವರಿಗೆ ಸಹಾಯ ಮಾಡಲಾಗುವುದು ಮತ್ತು ನಮ್ಮ ಸೇನೆಯೇ ವಿಜಯಿ ಯಾಗುವುದು." (ಪವಿತ್ರ ಕುರ್‌ಆನ್, 37:171-173)

ಈಗ ಮೂಸಾರಿಗೆ ಅವರ ದೌತ್ಯವನ್ನು ತಿಳಿಸುವ, ಅದಕ್ಕಾಗಿ ಅವರಿಗೆ ಅಗತ್ಯವಾದ ಅಸ್ತ್ರಗಳನ್ನು ನೀಡುವ ಹಾಗೂ ಅವರಿಗೆ ಈ ಮಹಾನ್ ಕಾರ್ಯವನ್ನು ನಿರ್ವಹಿಸಲು ಬೇಕಾದ ನಿರ್ದೇಶನಗಳನ್ನು ನೀಡುವ ಕಾಲ ಕೂಡಿ ಬಂದಿತ್ತು. ಜೊತೆಗೆ ಈ ಕಾರ್ಯದ ಅಂತಿಮ ಪರಿಣಾಮವನ್ನೂ ತಿಳಿಸಬೇಕಿತ್ತು ಮತ್ತು ಎಲ್ಲಕ್ಕಿಂತಲೂ ಮಿಗಿಲಾಗಿ ಅವರಿಗೆ ತನ್ನ ಸಹಾಯದ ವಾಗ್ದಾನವನ್ನೂ ನೀಡಬೇಕಾಗಿತ್ತು.

ಈ ದೌತ್ಯದ ಕುರಿತು ಮೇಲೆ ಪ್ರಸ್ತಾಪಿಸಿದ ಸೂಕ್ತಗಳಲ್ಲಿ ಒಂದು ಲಘುವಾದ ಸೂಚನೆ ಮೊದಲೇ ಸಿಕ್ಕಿತ್ತು. ಈಗ ಅದನ್ನು ವಿವರವಾಗಿ ನೀಡಲಾಗುತ್ತದೆ.

"ಅವರ ಪ್ರಭು ಅವರನ್ನು 'ತುವಾ'ದ ಪವಿತ್ರ ಕಣಿವೆಯಲ್ಲಿ ಕರೆದಾಗ. ಫಿರ್‌ಔನನ ಬಳಿಗೆ ಹೋಗಿರಿ. ಅವನು ವಿದ್ರೋಹಿಯಾಗಿ ಬಿಟ್ಟಿದ್ದಾನೆ. ಅವನೊಡನೆ ಕೇಳಿರಿ- 'ನೀನು ಪರಿಶುದ್ಧನಾಗಲು ಸಿದ್ಧನಾಗಿರುವೆಯಾ? ಮತ್ತು ನಾನು ನಿನ್ನ ಪ್ರಭುವಿನ ಕಡೆಗೆ ನಿನಗೆ ಮಾರ್ಗದರ್ಶನ ಮಾಡಿದರೆ, (ಅವನ) ಭಯ ನಿನ್ನಲ್ಲಿ ಉಂಟಾದೀತೇ?' ತರುವಾಯ ಮೂಸಾರು (ಫಿರ್‌ಔನನ ಬಳಿಗೆ ಹೋಗಿ) ಅವನಿಗೆ ದೊಡ್ಡ ನಿದರ್ಶನವನ್ನು ತೋರಿಸಿದರು."

(ಪವಿತ್ರ ಕುರ್‌ಆನ್, 79:16-20)

"ಅವರ ನಂತರ ನಾವು ಮೂಸಾ ಮತ್ತು ಹಾರೂನರನ್ನು ನಮ್ಮ ನಿದರ್ಶನಗಳ ಸಹಿತ ಫಿರ್‌ಔನ್ ಮತ್ತು ಅವನ ಸರದಾರರ ಕಡೆಗೆ ಕಳುಹಿಸಿದೆವು. ಆದರೆ ಅವರು ತಮ್ಮ ಹಿರಿಮೆಯ ದರ್ಪವನ್ನು ತೋರಿದರು ಮತ್ತು ಅವರು ಅಪರಾಧಿಗಳಾಗಿದ್ದರು."

(ಪವಿತ್ರ ಕುರ್‌ಆನ್, 10:75)

"ಅನಂತರ ನಾವು ಮೂಸಾ ಮತ್ತು ಅವರ ಸಹೋದರ ಹಾರೂನರನ್ನು ನಮ್ಮ ನಿದರ್ಶನಗಳೊಂದಿಗೆ ಹಾಗೂ ಸುವ್ಯಕ್ತ ಪ್ರಮಾಣ ಸಹಿತ ಫಿರ್‌ಔನನ ಹಾಗೂ ಅವನ ಆಸ್ಥಾನಿಕರ ಕಡೆಗೆ ಕಳುಹಿಸಿದೆವು. ಆದರೆ ಅವರು ಅಹಂಕಾರ ತೋರಿದರು. ಅವರೊಂದು ಉದ್ಧಟ ಜನಾಂಗವಾಗಿದ್ದರು." (ಪವಿತ್ರ ಕುರ್‌ಆನ್, 23:45-46)

"ನಾವು ಮೂಸಾರನ್ನು ನಮ್ಮ ನಿದರ್ಶನಗಳೊಂದಿಗೆ ಫಿರ್‌ಔನ್ ಮತ್ತು ಅವನ ಆಸ್ಥಾನಿಕರ ಬಳಿಗೆ ರವಾನಿಸಿದೆವು. ಅವರು ಹೋಗಿ, ನಾನು ಸರ್ವಲೋಕ ಪಾಲಕ ಪ್ರಭುವಿನ ಸಂದೇಶವಾಹಕನಾಗಿದ್ದೇನೆಂದು ಹೇಳಿದರು."

(ಪವಿತ್ರ ಕುರ್‌ಆನ್, 43:46)

"ಆ ಬಳಿಕ (ಮೇಲೆ ಪ್ರಸ್ತಾಪಿಸಲಾದ) ಆ ಜನಾಂಗಗಳ ತರುವಾಯ ನಾವು ಮೂಸಾರನ್ನು ನಮ್ಮ ದೃಷ್ಟಾಂತಗಳ ಸಹಿತ ಫಿರ್‌ಔನ್ ಮತ್ತು ಅವನ ಜನಾಂಗದ ಸರದಾರರ ಬಳಿಗೆ ಕಳುಹಿಸಿದೆವು. ಆದರೆ ಅವರೂ ನಮ್ಮ ದೃಷ್ಟಾಂತಗಳಿಗೆ ಅಕ್ರಮವೆಸಗಿದರು. ಆ ಕಿಡಿಗೇಡಿಗಳ ಪರಿಣಾಮವೇನಾಯಿತೆಂದು ನೋಡಿರಿ." (ಪವಿತ್ರ ಕುರ್‌ಆನ್, 7:103)

ಇಲ್ಲಿ ಅಲ್ಲಾಹನು ಫಿರ್‌ಔನ್ ಮತ್ತು ಅವನ ಜನಾಂಗದ ಮನೋವೃತ್ತಿಯನ್ನು ವಿಶ್ಲೇಷಿಸಿದ್ದಾನೆ. ಸನ್ಮಾರ್ಗವನ್ನು ಸ್ವೀಕರಿಸುವ ಮತ್ತು ನಿರಾಕರಿಸುವ ಸಂಬಂಧವಾಗಿ ಮಹತ್ವದ ಕೆಲವು ಮೂಲಭೂತ ವಿಷಯಗಳನ್ನು ಪ್ರಸ್ತಾಪಿಸಿದ್ದಾನೆ.

ಅ) ಒಂದು ಜನಾಂಗವು ಅಹಂಕಾರದಲ್ಲಿ ಮುಳುಗಿದ್ದು ಅದರ ಸಾಮೂಹಿಕ ಪಾತ್ರವು ಧಿಕ್ಕಾರ ಮತ್ತು ಅಪರಾಧವೇ ಆಗಿ ಮಾರ್ಪಟ್ಟರೆ ಅದೆಂದೂ ಸನ್ಮಾರ್ಗ ಪಡೆಯಲಾರದು.

ಆ) ಒಂದು ಜನಾಂಗವು ದರ್ಪದಿಂದಿದ್ದು ಭೂಮಿಯ ಮೇಲೆ ಅಧಿಕಾರ ಹೊಂದಿ ದಬ್ಬಾಳಿಕೆ ನಡೆಸುತ್ತಿದ್ದರೆ ಅದು ಸತ್ಯದ ಕರೆಗೆ ಓಗೊಡುವುದಿಲ್ಲ, ಅದರ ಮುಂದೆ ಸನ್ಮಾರ್ಗದ ಎಷ್ಟೇ ಪುರಾವೆಗಳನ್ನು ಸ್ಪಷ್ಟಪಡಿಸಿದರೂ ಅದು ಅದನ್ನು ಸ್ವೀಕರಿಸಲು ಸಿದ್ಧವಿರುವುದಿಲ್ಲ.

ಇ) ಒಂದು ಜನಾಂಗವು ಕ್ಷೋಭೆ ಹರಡುವುದಾಗಿದ್ದರೆ ಅದೆಂದೂ ಸುಧಾರಣೆಯನ್ನು ಸ್ವೀಕರಿಸುವುದಿಲ್ಲ, ಒಂದು ಸುಧಾರಣೆಗೆ ಪ್ರಯತ್ನಿಸಿದರೆ, ಅದಕ್ಕೆ ವಿರುದ್ಧ ಇನ್ನೊಂದು ಕ್ಷೋಭೆಯನ್ನುಂಟು ಮಾಡಲು ಅದು ಪ್ರಯತ್ನಿಸುತ್ತದೆ.

"ನಾವು ಇದಕ್ಕಿಂತ ಮುಂಚೆ ಮೂಸಾರನ್ನು ನಮ್ಮ ನಿದರ್ಶನಗಳೊಂದಿಗೆ ರವಾನಿಸಿದ್ದೆವು. ನಿಮ್ಮ ಜನಾಂಗವನ್ನು ಅಂಧಕಾರಗಳಿಂದ ಹೊರತೆಗೆದು ಪ್ರಕಾಶಕ್ಕೆ ತರಬೇಕೆಂದೂ ಅವರಿಗೆ 'ಅಯ್ಯಾಮಿಲ್ಲಾಹ್' (ದಿವ್ಯದಿನ)ಗಳ ಬೋಧಪ್ರದ ಘಟನೆಗಳನ್ನು ಹೇಳಿ ತಿಳಿಸಿ ಉಪದೇಶಿಸಬೇಕೆಂದೂ ನಾವು ಅವರಿಗೂ ಅಪ್ಪಣೆ ಕೊಟ್ಟಿದ್ದೆವು. ಈ ಘಟನೆಗಳಲ್ಲಿ ನಿಶ್ಚಯವಾಗಿಯೂ ಪ್ರತಿಯೊಬ್ಬ ಸಹನಶೀಲನಿಗೂ ಕೃತಜ್ಞನಿಗೂ ದೊಡ್ಡ ನಿದರ್ಶನಗಳಿವೆ."

(ಪವಿತ್ರ ಕುರ್‌ಆನ್, 14:5)

"ಓ ಮೂಸಾ, ನಾನು ನಿಮ್ಮನ್ನು ನನ್ನ ಕಾರ್ಯಕ್ಕಾಗಿ ಆಯ್ದುಕೊಂಡಿರುತ್ತೇನೆ. ನೀವು ಮತ್ತು ನಿಮ್ಮ ಸಹೋದರ ನನ್ನ ನಿದರ್ಶನಗಳ ಸಹಿತ ಹೋಗಿರಿ ಮತ್ತು ನೀವು ನನ್ನ ಸ್ಮರಣೆಯಲ್ಲಿ ಲೋಪ ಮಾಡಬೇಡಿರಿ. ನೀವಿಬ್ಬರೂ ಫಿರ್‌ಔನನ ಬಳಿಗೆ ಹೋಗಿರಿ. ಅವನು ವಿದ್ರೋಹಿಯಾಗಿ ಬಿಟ್ಟಿದ್ದಾನೆ. ಅವನೊಡನೆ ನಯವಾಗಿ ಮಾತನಾಡಿರಿ. ಅವನು ಉಪದೇಶ ಸ್ವೀಕರಿಸಬಹುದು ಅಥವಾ ಭಯಪಡಬಹುದು. ಇಬ್ಬರೂ ಇಂತೆಂದರು, 'ಓ ನಮ್ಮ ಪ್ರಭೂ, ಅವನು ನಮ್ಮ ಮೇಲೆ ಅತಿರೇಕವೆಸಗಬಹುದು. ನಮ್ಮ ಮೇಲೆ ಮುಗಿಬೀಳಬಹುದೆಂಬ ಆತಂಕ ನಮಗಿದೆ.' ಆಗ, ಹೆದರಬೇಡಿರಿ, ನಾನು ನಿಮ್ಮ ಸಂಗಡವಿದ್ದೇನೆ. ಎಲ್ಲವನ್ನೂ

ಆಲಿಸುತ್ತಿದ್ದೇನೆ ಮತ್ತು ವೀಕ್ಷಿಸುತ್ತಿದ್ದೇನೆ. ಅವನ ಬಳಿಗೆ ಹೋಗಿರಿ ಮತ್ತು ನಾವು ನಿನ್ನ ಪ್ರಭುವಿನ ಕಡೆಯಿಂದ ಕಳುಹಿಸಲ್ಪಟ್ಟವರು. ಬನೀಇಸ್ರಾಈಲರನ್ನು ನಮ್ಮ ಸಂಗಡ ಕಳುಹಿಸಿ ಬಿಡು, ಅವರಿಗೆ ಕಾಟ ಕೊಡಬೇಡ. ನಾವು ನಿನ್ನ ಬಳಿಗೆ ನಿನ್ನ ಪ್ರಭುವಿನ ನಿದರ್ಶನವನ್ನು ತಂದಿರುತ್ತೇವೆ ಮತ್ತು ಸನ್ಮಾರ್ಗವನ್ನನುಸರಿಸುವವನಿಗೆ ರಕ್ಷಣೆಯಿದೆ. ಸುಳ್ಳಾಗಿಸುವವನಿಗೂ ವಿಮುಖನಾದವನಿಗೂ ಯಾತನೆ ಇದೆಯೆಂದು ನಮಗೆ 'ದಿವ್ಯವಾಣಿ'ಯ ಮೂಲಕ ತಿಳಿಸಿ ಕೊಡಲಾಗಿದೆ ಎಂದು ಹೇಳಿರಿ. ಎಂದು ಅಲ್ಲಾಹನು ಹೇಳಿದನು."

(ಪವಿತ್ರ ಕುರ್‌ಆನ್, 20:41-48)

"ಆಗ ಅಲ್ಲಾಹನು, 'ಖಂಡಿತ ಇಲ್ಲ, ನೀವಿಬ್ಬರೂ ನಮ್ಮ ನಿದರ್ಶನಗಳನ್ನು ತೆಗೆದು ಕೊಂಡು ಹೋಗಿರಿ. ನಾವು ನಿಮ್ಮೊಂದಿಗಿದ್ದು ಎಲ್ಲವನ್ನೂ ಆಲಿಸುತ್ತಿರುವೆವು. ಫಿರ್‌ಔನನ ಬಳಿಗೆ ಹೋಗಿರಿ ಮತ್ತು- ನೀನು ಬನೀಇಸ್ರಾಈಲರನ್ನು ನಮ್ಮ ಜೊತೆ ಕಳುಹಿಸಬೇಕೆಂದು ಸರ್ವಲೋಕಗಳ ಪ್ರಭು ನಮ್ಮನ್ನು ರವಾನಿಸಿದ್ದಾನೆ- ಎಂದು ಅವನೊಡನೆ ಹೇಳಿರಿ' ಎಂದನು."

(ಪವಿತ್ರ ಕುರ್‌ಆನ್, 26:15-17)

"ನಾವು ಮೂಸಾರಿಗೆ ಸ್ಪಷ್ಟವಾಗಿ ತೋರುವ ಒಂಭತ್ತು ನಿದರ್ಶನಗಳನ್ನು ದಯ ಪಾಲಿಸಿದ್ದೆವು." (ಪವಿತ್ರ ಕುರ್‌ಆನ್, 17:101)

ಮೊತ್ತಮೊದಲು ಅಲ್ಲಾಹನು ಮೂಸಾರಿಗೆ ಫಿರ್‌ಔನ್ ಮತ್ತವನ ಜನಾಂಗದ ದುಷ್ಕೃತ್ಯಗಳು ಮತ್ತು ಅನೈತಿಕತೆಯ ಕುರಿತು ತಿಳುವಳಿಕೆ ನೀಡಿದನು. ಆತ ಅತಿದೊಡ್ಡ ದುಷ್ಟ ಮತ್ತು ಬಂಡುಕೋರನೆಂದು ತಿಳಿಸಿದನು.

"ನಿಮಗೆ ಮೂಸಾರ ವೃತ್ತಾಂತ ತಲುಪಿದೆಯೇ?" (ಪವಿತ್ರ ಕುರ್‌ಆನ್, 79:15)

"ಏಕೆಂದರೆ ನಾವು ನಿಮಗೆ ನಮ್ಮ ದೊಡ್ಡ ನಿದರ್ಶನಗಳನ್ನು ತೋರಿಸುವವರಿದ್ದೇವೆ."

(ಪವಿತ್ರ ಕುರ್‌ಆನ್, 20:23)

"ನೀವಿಬ್ಬರೂ ಫಿರ್‌ಔನನ ಬಳಿಗೆ ಹೋಗಿರಿ. ಅವನು ವಿದ್ರೋಹಿಯಾಗಿ ಬಿಟ್ಟಿದ್ದಾನೆ."

(ಪವಿತ್ರ ಕುರ್‌ಆನ್, 20:43)

ಅವನ ಆಸ್ಥಾನಿಕರು ಅತ್ಯಂತ ನೀಚ ಅತಿಕ್ರಮಗಳ ಕೂಟವಾಗಿದ್ದು, ಅತಿದೊಡ್ಡ ದುರಹಂಕಾರಿಗಳು, ಗರ್ವಿಷ್ಠರು ಮತ್ತು ದೊಡ್ಡತನವನ್ನು ಮೆರೆಯುವವರಾಗಿದ್ದರು. ಅಕ್ರಮ-ಅತ್ಯಾಚಾರಗಳು ಅವರಿಗೆ ಅಭ್ಯಾಸವಾಗಿ ಬಿಟ್ಟಿವೆ. ಅವರ ಅಕ್ರಮ- ದೌರ್ಜನ್ಯಗಳು ಅವರನ್ನು ನಿತ್ಯ ಅಪರಾಧಿಗಳಾಗಿ ಮಾರ್ಪಡಿಸಿವೆ. ಕೊಲೆ, ರಕ್ತಪಾತ, ಗಲಭೆ, ಕ್ಷೋಭೆಗಳು ಅವರ ಹಣೆಬರೆಹಗಳಾಗಿವೆ.

ತರುವಾಯ ಮೂಸಾರಿಗೆ ಅವರ ದೌತ್ಯ ಮತ್ತು ಸ್ಥಾನವನ್ನು ತಿಳಿಸಿದನು. ಯಾವ ಸಂದೇಶದ ಅವರು ವಾಹಕರಾಗಿದ್ದರೋ ಅದನ್ನು ಪರಿಚಯಿಸಿ ಅದರ ಮೂಲ ಪರಿಚ್ಛೇದ ಗಳನ್ನು ತಿಳಿಯಪಡಿಸಿದನು. "ನೀವು ಸರ್ವಲೋಕಗಳ ಪಾಲಕನ ಸಂದೇಶವಾಹಕರಾಗಿ

ರುತ್ತೀರಿ. ಫಿರ್‌ಔನ್ ಮತ್ತವನ ಪರಿವಾರದವರ ಬಳಿಗೆ ಹೋಗಿ, ಮೊದಲು ನಿಮ್ಮ ಸಂದೇಶ ವಾಹಕತ್ವವನ್ನು ಒಪ್ಪಿಕೊಳ್ಳುವಂತೆ ಕರೆ ನೀಡಬೇಕು ಮತ್ತು ನಿಮ್ಮನ್ನು ಅನುಸರಿಸುವಂತೆ ಹೇಳಬೇಕು" ಎಂದು ಹೇಳಿದನು. ಎರಡನೆಯದಾಗಿ, ನಿಮ್ಮನ್ನು ಆ ಮರ್ದಿತ ಜನಾಂಗದ (ಬನೀ ಇಸ್ರಾಈಲ್) ವಿಮೋಚಕನಾಗಿ ಕಳಿಸಲಾಗುತ್ತದೆ. ಒಂದೆಡೆ ಬನೀ ಇಸ್ರಾಈಲರಿಗೆ ಅವರು ಮರೆತು ಹೋದಂತಹ ಪಾಠವನ್ನು ಜ್ಞಾಪಿಸಿಕೊಡಬೇಕು. ಅವರ ಕುಂದುಕೊರತೆಗಳು ಮತ್ತು ದೌರ್ಬಲ್ಯಗಳನ್ನು ದೂರೀಕರಿಸಬೇಕು. ಅವರ ಚಾರಿತ್ರ್ಯವನ್ನು ಸಂಸ್ಕರಿಸಬೇಕು. ಅವರನ್ನು ವಿಧೇಯರು, ವಿಶ್ವಾಸಿಗಳು ಮತ್ತು ಅನುಸರಣಶೀಲರನ್ನಾಗಿ ಮಾಡಬೇಕು. ಇನ್ನೊಂದೆಡೆ, ಅವರನ್ನು ಫಿರ್‌ಔನನ ದಬ್ಬಾಳಿಕೆಯ ಕಪಿಮುಷ್ಟಿಯಿಂದ ವಿಮೋಚಿಸಬೇಕು. ಆದ್ದರಿಂದ ಫಿರ್‌ಔನನಿಗೆ ನಿಮ್ಮ ಪ್ರವಾದಿತ್ವದ ಸಂದೇಶವನ್ನು ಕೊಡುವುದರ ಜೊತೆ ಜೊತೆಗೆ ಬನೀ ಇಸ್ರಾಈಲರನ್ನು ಬಿಟ್ಟುಕೊಟ್ಟು ಅವರನ್ನು ಸ್ವತಂತ್ರಗೊಳಿಸಬೇಕೆಂಬ ಬೇಡಿಕೆಯನ್ನೂ ಅವನ ಮುಂದಿಡಬೇಕೆಂದು ತಿಳಿಸಲಾಗುತ್ತದೆ.

ಕೆಲಸ ಮಾಡುವ ಯುಕ್ತಿಯನ್ನು ತಿಳಿಸುತ್ತಾ, ಫಿರ್‌ಔನನು ಎಷ್ಟೇ ಉದ್ಧಟತನ ತೋರಲಿ, ಪ್ರಚೋದಕ ಮಾತುಗಳನ್ನಾಡಲಿ, ನೀವು ಒರಟಾಗಿ ಮಾತಾಡಬಾರದು, ಸೌಮ್ಯವಾಗಿ ಮಾತಾಡಬೇಕು. ಕಠಿಣ ಮಾತು ಎಷ್ಟೇ ಸತ್ಯವಾಗಿರಲಿ, ಅದು ಪ್ರಭಾವ ಕಳಕೊಳ್ಳುತ್ತದೆ ಮತ್ತು ಅಭಿಸಂಬೋಧಿತನನ್ನು ಹಠಮಾರಿ ಮತ್ತು ಕುರುಡು ವಿರೋಧಿಯನ್ನಾಗಿ ಮಾಡುತ್ತದೆ. ಮೂಸಾ ಸ್ವಾಭಾವಿಕವಾಗಿಯೂ ಸ್ವಲ್ಪ ಮುಂಗೋಪಿಯಾಗಿದ್ದುದರಿಂದ ಅವರಿಗೆ ಈ ಉಪದೇಶ ನೀಡಬೇಕಾಯಿತು. ಫಿರ್‌ಔನನೂ ಅಷ್ಟೇ. ಅವನೊಡನೆ ಮಾತಿಗೆ ಮಾತು ಬೆಳೆಸಿದರೆ ಅವನ ಹೃದಯದ ಎಲ್ಲ ಕವಾಟಗಳೂ ಮುಚ್ಚಿಕೊಳ್ಳುವ ಸಾಧ್ಯತೆಯಿತ್ತು. ಆದ್ದರಿಂದ ಅವನಲ್ಲಿ ದೇವಭಯವುಂಟು ಮಾಡಿರಿ. ಧಿಕ್ಕಾರದ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಕೆ ನೀಡಿರಿ. ಅವನು ನಿಮ್ಮ ಪ್ರವಾದಿತ್ವದ ಪುರಾವೆ ಕೇಳಿದರೆ ನಾನು ನಿಮಗೆ ಕೊಟ್ಟಿರುವ ಪವಾಡಗಳನ್ನು ತೋರಿಸಿರಿ ಎಂದು ಹೇಳಲಾಯಿತು.

ತರುವಾಯ ಮೂಸಾರ ಭಯವನ್ನು ದೂರೀಕರಿಸುತ್ತಾ ಅವರಿಗೆ ಸಾಂತ್ವನ ನೀಡಲಾಯಿತು. ನಿಮ್ಮನ್ನು ಒಬ್ಬಂಟಿಯಾಗಿ ಬಿಟ್ಟು ಬಿಡಲಾಗುವುದಿಲ್ಲ, ನೀವು ಸದಾ ನನ್ನ ಕಣ್ಣ ಮುಂದೆ ಇರುವಿರಿ. ನಿಮ್ಮ ಪ್ರತಿಯೊಂದು ಮೊರೆಯನ್ನು ಕೇಳಲಾಗುವುದು. ಅಗತ್ಯ ಬಿದ್ದರೆ ನಿಮಗೆ ಸಹಾಯವನ್ನೂ ಮಾಡಲಾಗುವುದು. ಅವನ ದುಷ್ಟತನ ಮತ್ತು ಕುತಂತ್ರ ಗಳಿಂದ ನಿಮ್ಮನ್ನು ರಕ್ಷಿಸಲಾಗುವುದು. ತುರ್ತು ಪವಾಡವೆಂಬ ನೆಲೆಯಲ್ಲಿ ಎರಡು ಪವಾಡ ಗಳನ್ನು ನೀಡಲಾಗುತ್ತದೆ. ಒಂದು ಲಾಠಿ, ಮತ್ತೊಂದು ಪ್ರಕಾಶಮಯ ಹಸ್ತ. ಅಷ್ಟೇ ಅಲ್ಲ, ಇನ್ನೂ ಏಳು ಪವಾಡಗಳನ್ನು ನೀಡಲಾಗುವುದು. ಅವುಗಳಿಂದ ಸಮಯ ಬಂದಾಗ ನೀವು ನಿಮ್ಮನ್ನು ರಕ್ಷಿಸಿಕೊಳ್ಳಬಹುದು, ಫಿರ್‌ಔನನನ್ನು ಎದುರಿಸಲೂಬಹುದು ಎಂದು ಹೇಳಲಾಯಿತು.

ಇಲ್ಲಿ ಮೂಸಾರಿಗೆ ಸಾಂತ್ವನ ನೀಡಲಾಗುತ್ತದೆ. ಅವರಿಗೆ ತನ್ನ ಸಹಾಯದ ಭರವಸೆ ನೀಡಲಾಗುತ್ತದೆ. ಆದರೆ ವಾಸ್ತವದಲ್ಲಿ ಇದು ಈ ಮಾರ್ಗದಲ್ಲಿ ನಡೆಯಬಯಸುವ ಮತ್ತು ನಡೆಯುತ್ತಿರುವ ಎಲ್ಲ ವಿಶ್ವಾಸಿಗಳಿಗೂ ಇರುವ ಶುಭವಾರ್ತೆಗಳಾಗಿವೆ. ಮೂಸಾರ ಹಿನ್ನೆಲೆಯಲ್ಲಿ ಇಲ್ಲಿ ವಿಶ್ವಾಸಿಗಳೊಂದಿಗೆ ಹೇಳಲಾಗುತ್ತದೆ- ಮೂಸಾ ತನ್ನ ಪರಿಸರದಲ್ಲಿ ಒಂಟಿಯಾಗಿದ್ದರು ಮತ್ತು ಅವರ ವಿರೋಧಿಗಳು ಬಹಳ ಪ್ರಬಲರಾಗಿದ್ದರು. ಆದರೂ ಅಲ್ಲಾಹನು ಅವರಿಗೆ ತನ್ನ ಸಹಾಯ ಹಸ್ತವನ್ನು ನೀಡಿ ಅವರನ್ನು ವಿಜಯಶಾಲಿಯಾಗಿ ಮಾಡಿದನು. ಅದೇ ರೀತಿ ನೀವು ದುರ್ಬಲರಾಗಿದ್ದರೂ ನಿಮ್ಮ ಬಳಿ ಸಾಧನಾನುಕೂಲತೆಗಳಿಲ್ಲದಿದ್ದರೂ ನೀವೇ ಪ್ರಬಲರಾಗುವಿರಿ ಮತ್ತು ಪ್ರತಿ ಹೆಜ್ಜೆಯಲ್ಲೂ ನಿಮಗೆ ಅಲ್ಲಾಹನ ಸಹಾಯ ದೊರೆಯುತ್ತಲಿರುವುದು ಎಂದು ಹೇಳಲಾಗುತ್ತದೆ. ಒಟ್ಟಿನಲ್ಲಿ ಅಲ್ಲಾಹನು ಮೂಸಾರಿಗೆ ಅವರ ಸ್ಥಾನವನ್ನು ಚೆನ್ನಾಗಿ ತಿಳಿಸಿ, ಅವರ ಸಂದೇಶವನ್ನು ಚೆನ್ನಾಗಿ ಮನವರಿಕೆ ಮಾಡಿಸಿ, ಅವರ ದೌತ್ಯದ ಸ್ವರೂಪ ಮತ್ತು ಅದರ ಅಂತಿಮ ಪರಿಣಾಮವೇನಾಗುವುದೆಂದು ಸ್ಪಷ್ಟಪಡಿಸಿ ಫಿರ್‌ಔನ್ ಮತ್ತವನ ಪರಿವಾರದವರ ಕಡೆಗೆ ಕಳಿಸಿದನು. ಹಾಗೆ ಕಳಿಸುವಾಗ ಈ ಶುಭವಾರ್ತೆ ನೀಡಿದನು,

"ವಿಜಯವು ನಿಮ್ಮ ಹಾಗೂ ನಿಮ್ಮ ಅನುಯಾಯಿಗಳದ್ದೇ ಆಗಿರುವುದು."

(ಪವಿತ್ರ ಕುರ್‌ಆನ್, 28:35)

ಮೂಸಾ(ಅ) ತಮ್ಮ ಪತ್ನಿಯ ಜೊತೆಯಲ್ಲಿ ಅಲ್ಲಾಹನ ಬೆಂಬಲ ಮತ್ತು ಸಹಾಯದ ಶುಭವಾರ್ತೆಯೊಂದಿಗೆ ತಮ್ಮ ನಾಡು ಈಜಿಪ್ಟ್‌ಗೆ ತಲುಪಿದರು. ಈ ದೇಶವನ್ನು ಅತ್ಯಂತ ಕ್ರೂರಿಯಾದ, ಜನರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ಓರ್ವ ಚಕ್ರವರ್ತಿ ಆಳುತ್ತಿದ್ದನು. ಆತನ ಬೆಂಬಲಕ್ಕೆ ಅಪರಾಧಿಗಳು, ದುಷ್ಟರು ಮತ್ತು ಕಠೋರ ಹೃದಯಿಗಳಾದ ಸರದಾರರು ಮತ್ತು ಇಡೀ ಜನಾಂಗವೇ ಇತ್ತು. ಮೂಸಾ ತಮ್ಮ ಹಿರಿಯ ಸಹೋದರ ಹಾರೂನ್ ಮತ್ತು ತನ್ನ ಕುಟುಂಬ ಪರಿವಾರದವರನ್ನು ಕಂಡರು. ತರುವಾಯ ಹಾರೂನ್‌ರನ್ನು ಜೊತೆಗೆ ಕರೆದುಕೊಂಡು ಫಿರ್‌ಔನನ ಆಸ್ಥಾನಕ್ಕೆ ನಿರ್ಭೀತಿಯಿಂದ ನಡೆದರು. ಕೆಲವು ದಿವಸಗಳ ಮುಂಚೆ, ಫಿರ್‌ಔನನು ತನ್ನ ಮೇಲೆ ಪ್ರತೀಕಾರ ತೀರಿಸುವನೋ ತನ್ನನ್ನು ಕೊಲ್ಲಲು ಮುಂದಾಗುವನೋ ಎಂದು ಹೆದರಿದ್ದರು. ಆದರೆ ಸತ್ಯವು ಅವರಿಗೆ ಸಿಕ್ಕಿದಾಗ ಮತ್ತು ಅವರು ಸತ್ಯ ಸಂದೇಶದ ವಾಹಕರಾದಾಗ ಫಿರ್‌ಔನನ ಎಲ್ಲ ದರ್ಪ ಮತ್ತು ಶಕ್ತಿ ಅವರ ದೃಷ್ಟಿಯಲ್ಲಿ ತೃಣ ಸಮಾನವಾಯಿತು. ಎಲ್ಲ ರೀತಿಯ ಭಯ ಆತಂಕವನ್ನು ತೊರೆದು ಫಿರ್‌ಔನನ ತುಂಬಿದ ಆಸ್ಥಾನಕ್ಕೆ ತೆರಳಿ ತಮ್ಮ ಸಂದೇಶವನ್ನು ಅವನ ಮುಂದಿಟ್ಟರು.

❖ ❖ ❖

ಫಿರ್‌ಔನನ ಆಸ್ಥಾನದಲ್ಲಿ

ಪ್ರವಾದಿತ್ವ ಘೋಷಣೆ ಮತ್ತು ಇಸ್ರಾಈಲರ ಬಂಧಮುಕ್ತಿಯ ಬೇಡಿಕೆ

ಮೂಸಾರಿಗೆ ಪ್ರವಾದಿತ್ವವನ್ನು ನೀಡುವಾಗ ಅಲ್ಲಾಹನು ಅವರ ದೌತ್ಯದ ಎರಡು ಮುಖಗಳನ್ನು ವಿಶೇಷವಾಗಿ ಸ್ಪಷ್ಟಪಡಿಸಿದ್ದನು. 1. ಪ್ರವಾದಿತ್ವದ ಘೋಷಣೆ, 2. ಬನೀ ಇಸ್ರಾಈಲರನ್ನು ಬಿಟ್ಟು ಕೊಡಬೇಕೆಂಬ ಬೇಡಿಕೆ.

"ಫಿರ್‌ಔನನ ಬಳಿಗೆ ಹೋಗಿರಿ ಮತ್ತು 'ನೀನು ಬನೀಇಸ್ರಾಈಲರನ್ನು ನಮ್ಮ ಜೊತೆ ಕಳುಹಿಸಬೇಕೆಂದು ಸರ್ವಲೋಕಗಳ ಪ್ರಭು ನಮ್ಮನ್ನು ರವಾನಿಸಿದ್ದಾನೆ' ಎಂದು ಅವನೊಡನೆ ಹೇಳಿರಿ ಎಂದನು." **(ಪವಿತ್ರ ಕುರ್‌ಆನ್, 26:16-17)**

ಇದೇ ಆಜ್ಞೆಯನ್ನು ಪಾಲಿಸುವ ನಿಟ್ಟಿನಲ್ಲಿ ಮೂಸಾ ತಮ್ಮ ಸಹೋದರ ಹಾರೂನ್‌ರನ್ನು ಜತೆ ಸೇರಿಸಿ ಯಾವುದೇ ಅಳುಕಿಲ್ಲದೆ ಫಿರ್‌ಔನನ ಆಸ್ಥಾನಕ್ಕೆ ನೇರವಾಗಿ ಹೋಗಿ ಹೇಳಿದರು,

"ಓ ಫಿರ್‌ಔನ್, ನಾನು ಸರ್ವಲೋಕ ಪಾಲಕನ ಕಡೆಯಿಂದ ಕಳುಹಿಸಲ್ಪಟ್ಟಿದ್ದೇನೆ. ಅಲ್ಲಾಹನ ನಾಮವೆತ್ತಿ ಸತ್ಯದ ಹೊರತು ಇನ್ನೇನನ್ನೂ ಹೇಳದಿರಲಿಕ್ಕಾಗಿಯೇ ನನ್ನನ್ನು ನಿಯೋಜಿಸಲಾಗಿದೆ. ನಾನು ನಿಮ್ಮ ಬಳಿಗೆ ನನ್ನ ಪ್ರಭುವಿನ ಕಡೆಯಿಂದ ನೇಮಕದ ಸುವ್ಯಕ್ತ ಪ್ರಮಾಣ ಹೊಂದಿ ಬಂದಿರುತ್ತೇನೆ. ಆದುದರಿಂದ ನೀನು ಬನೀಇಸ್ರಾಈಲರನ್ನು ನನ್ನ ಸಂಗಡ ಕಳುಹಿಸಿಕೊಡು." **(ಪವಿತ್ರ ಕುರ್‌ಆನ್, 7:104-105)**

ಮೂಸಾರ ಈ ಘೋಷಣೆ ಮತ್ತು ಬೇಡಿಕೆಯು ಅವರನ್ನು ಪ್ರವಾದಿತ್ವ ಪದವಿಯಲ್ಲಿ ನೇಮಿಸಲಾದಾಗ ಸಿಕ್ಕಿದ್ದ ಮಾರ್ಗದರ್ಶನದ ಪ್ರಕಾರವೇ ಆಗಿತ್ತು. ಕುರ್‌ಆನಿನ ಈ ಕೆಳಗೆ ಸೂಚಿಸಿರುವ ಕಡೆಗಳಲ್ಲಿ ಈ ವಿಷಯದ ವಿವರಣೆಗಳಿವೆ,

ತಾಹಾ: 47-48, ಅಲ್‌ಬಕರ: 16-17, ಅಝ್ಝುಖ್ರುಫ್: 46, ಅನ್ನಾಝಿಆತ್: 15-20, ಅಲ್ ಅಅ್‌ರಾಫ್: 103-105.

ಮೂಸಾರ ಸಂದೇಶದ ವಿವರಗಳು ಈ ಕೆಳಗಿನ ಸೂಕ್ತದಲ್ಲಿ ಹೀಗೆ ವಿವರಿಸಲಾಗಿದೆ:

"ನಾವು ಇವರಿಗಿಂತ ಮುಂಚೆ ಫಿರ್‌ಔನನ ಜನಾಂಗವನ್ನು ಇದೇ ಪರೀಕ್ಷೆಗೆ ಒಳ ಪಡಿಸಿದ್ದೆವು. ಅವರ ಬಳಿಗೆ ಓರ್ವ ಸನ್ಮಾನ್ಯ ಸಂದೇಶವಾಹಕರು ಬಂದರು- (ಅವರು ಹೀಗೆ ಹೇಳಿದರು)- ಅಲ್ಲಾಹನ ದಾಸರನ್ನು ನನ್ನ ವಶಕ್ಕೆ ಒಪ್ಪಿಸಿ ಬಿಡಿರಿ. ನಾನು ನಿಮ್ಮ ಪಾಲಿಗೆ

ಓರ್ವ ಪ್ರಾಮಾಣಿಕ ಸಂದೇಶವಾಹಕನಾಗಿದ್ದೇನೆ- ಅಲ್ಲಾಹನ ವಿರುದ್ಧ ವಿದ್ರೋಹವೆಸಗಬೇಡಿ. ನಾನು (ನನ್ನ ಪ್ರವಾದಿತ್ವದ ಬಗ್ಗೆ) ಸುಸ್ಪಷ್ಟ ಪುರಾವೆಯನ್ನು ನಿಮ್ಮ ಮುಂದಿಡುತ್ತೇನೆ."

(ಪವಿತ್ರ ಕುರ್‌ಆನ್, 44:17-19)

ಇದರ ಇನ್ನೊಂದು ಮಗ್ಗುಲನ್ನು ಈ ಕೆಳಗಿನ ಸೂಕ್ತದಲ್ಲಿ ವಿವರಿಸಲಾಗಿದೆ,

"ಅವನ ಬಳಿಗೆ ಹೋಗಿರಿ ಮತ್ತು ನಾವು ನಿನ್ನ ಪ್ರಭುವಿನ ಕಡೆಯಿಂದ ಕಳುಹಿಸಲ್ಪಟ್ಟವರು. ಬನೀಇಸ್ರಾಈಲರನ್ನು ನಮ್ಮ ಸಂಗಡ ಕಳುಹಿಸಿ ಬಿಡು, ಅವರಿಗೆ ಕಾಟ ಕೊಡಬೇಡ. ನಾವು ನಿನ್ನ ಬಳಿಗೆ ನಿನ್ನ ಪ್ರಭುವಿನ ನಿದರ್ಶನವನ್ನು ತಂದಿರುತ್ತೇವೆ ಮತ್ತು ಸನ್ಮಾರ್ಗವನ್ನನುಸರಿಸುವವನಿಗೆ ರಕ್ಷಣೆಯಿದೆ. ಸುಳ್ಳಾಗಿಸುವವನಿಗೂ ವಿಮುಖನಾದವನಿಗೂ ಯಾತನೆ ಇದೆಯೆಂದು ನಮಗೆ 'ದಿವ್ಯವಾಣಿ'ಯ ಮೂಲಕ ತಿಳಿಸಿಕೊಡಲಾಗಿದೆ ಎಂದು ಹೇಳಿರಿ ಎಂದು ಅಲ್ಲಾಹನು ಹೇಳಿದನು." (ಪವಿತ್ರ ಕುರ್‌ಆನ್, 20:47-48)

ಈ ಸೂಕ್ತಗಳಿಂದ ತಿಳಿದು ಬರುವ ಪ್ರಕಾರ, ಮೂಸಾರು ತಮ್ಮ ಮಾತ್ರವಲ್ಲ, ತಮ್ಮ ಸಹೋದರನ ಪ್ರವಾದಿತ್ವವನ್ನೂ ಘೋಷಿಸಿದ್ದಾರೆ.

ಮೊದಲು ಫಿರ್‌ಔನನನ್ನು ಸನ್ಮಾರ್ಗದ ಕಡೆಗೆ ಬರುವಂತೆ ಆಹ್ವಾನಿಸಲಾಗಿದೆ. ಈ ಆಹ್ವಾನವನ್ನು ಸ್ವೀಕರಿಸಿದರೆ ಅವನಿಗೆ ರಕ್ಷಣೆಯಿದೆಯೆಂಬ ಸುವಾರ್ತೆಯನ್ನೂ ನೀಡಲಾಗಿದೆ.

ತರುವಾಯ, ಅಲ್ಲಾಹನ ವಿರುದ್ಧ ಬಂಡಾಯವೇಳಬೇಡ. ಈ ಆಹ್ವಾನವನ್ನು ತಿರಸ್ಕರಿಸಬೇಡ. ಏಕೆಂದರೆ ಇದನ್ನು ತಿರಸ್ಕರಿಸುವವರ ಮತ್ತು ಇದರಿಂದ ವಿಮುಖರಾಗುವವರ ದುಷ್ಪರಿಣಾಮಗಳನ್ನು ದಿವ್ಯವಾಣಿಯ ಮೂಲಕ ನಮಗೆ ತಿಳಿಸಲಾಗಿದೆಯೆಂದು ಎಚ್ಚರಿಸಲಾಗಿದೆ. ಆ ದುಷ್ಪರಿಣಾಮವೇನೆಂದರೆ ಅವರ ಮೇಲೆ ಅಲ್ಲಾಹನ ಯಾತನೆ ಎರಗುವುದು. ಈ ಲೋಕದಲ್ಲೂ ಪರಲೋಕದಲ್ಲೂ.

ಫಿರ್‌ಔನನ ತುಂಬಿದ ಆಸ್ಥಾನದಲ್ಲಿ ಮಾಡಲಾದ ಈ ಘೋಷಣೆಯು ಬಹಳ ಮಹತ್ವಪೂರ್ಣವಾಗಿತ್ತು. ಪ್ರವಾದಿತ್ವದ ಘೋಷಣೆಯ ಅರ್ಥವೇ ನೈಜ ಪರಮಾಧಿಕಾರವು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ ಮಾತ್ರ ಇರುವುದೆಂದಾಗಿತ್ತು. 'ನಾನು (ಮೂಸಾ) ಆ ಪರಮಾಧಿಕಾರ ಹೊಂದಿದವನ ಅಧಿಕೃತ ಪ್ರತಿನಿಧಿಯಾಗಿದ್ದೇನೆ. ಆದ್ದರಿಂದ ಅಲ್ಲಾಹನ ದಾಸರು ನನ್ನನ್ನು ಅನುಸರಿಸಬೇಕು. ನಾನು ತೋರಿಸಿದ ಮಾರ್ಗದಲ್ಲಿ ನಡೆಯಬೇಕು. ನಾನು ಹೇಳುವುದು ಸತ್ಯ. ಇದರ ಹೊರತಾದ ಬೇರೆ ಮೂಲಗಳಿಂದ ಬರುವ ಎಲ್ಲವೂ ಮಿಥ್ಯವಾಗಿದೆ.' ಇದರಿಂದಾಗಿ ದೇವಾಂಶ ಸಂಭೂತನೆಂಬ ಫಿರ್‌ಔನನ ವಾದವು ತನ್ನಿಂತಾನೇ ಕುಸಿದು ಬೀಳುತ್ತದೆ. ತಾನೇ ವಹಿಸಿಕೊಂಡಿರುವ ಫಿರ್‌ಔನನ ಸ್ಥಾನವು ಅನೂರ್ಜಿತಗೊಳ್ಳುತ್ತದೆ.

ಬನೀ ಇಸ್ರಾಈಲರನ್ನು ಬಿಟ್ಟುಕೊಡಬೇಕೆಂಬ ಬೇಡಿಕೆಯ ತಾತ್ಪರ್ಯ ಹೀಗಿದೆ:

1. ಬನೀ ಇಸ್ರಾಈಲರು ಮುಂಚಿನಿಂದಲೂ ಒಂದು ಮುಸ್ಲಿಮ್ ಜನಾಂಗವಾಗಿದ್ದರು. ಆದ್ದರಿಂದ ಅದರ ವಿಮೋಚನೆಯ ಏರ್ಪಾಡು ಮಾಡುವುದು, ಅದರ ಸುಧಾರಣೆಗೆ ಪ್ರಯತ್ನಿಸುವುದು ಅಲ್ಲಾಹನ ಪ್ರವಾದಿಯ ಪ್ರಥಮ ಕರ್ತವ್ಯವಾಗಿದೆ.

2. ಇದರ ರಾಜಕೀಯ ಪರಿಣಾಮವೇನಾಗಿತ್ತೆಂದರೆ, ಫಿರ್‌ಔನನ ದಬ್ಬಾಳಿಕೆಯಲ್ಲಿ ಜೀವಿಸುತ್ತಿದ್ದ ಒಂದು ದೊಡ್ಡ ಜನವಿಭಾಗದ ಮೇಲಿಂದ ಅವನ ಅಧಿಕಾರವು ಒಮ್ಮೆಲೇ ಕೊನೆಗೊಳ್ಳುವುದಾಗಿತ್ತು.

3. ಮೂಸಾರ ಈ ಬೇಡಿಕೆಯನ್ನು ಒಪ್ಪಿಕೊಳ್ಳುವುದರ ಪರಿಣಾಮವೇನಾಗಿತ್ತೆಂದರೆ, ಫಿರ್‌ಔನನ ದರ್ಪ, ಪ್ರಭಾವ ಮತ್ತು ಅಧಿಕಾರದ ಶವಯಾತ್ರೆ ತನ್ನಷ್ಟಕ್ಕೆ ಹೊರಡುವುದಾಗಿತ್ತು. ಬನೀ ಇಸ್ರಾಈಲರ ಇಷ್ಟು ದೊಡ್ಡ ಸಂಖ್ಯೆಯು ಫಿರ್‌ಔನನ ಹಿಡಿತದಿಂದ ಪ್ರತಿರೋಧ ವಿಲ್ಲದೆ ಹೊರಟು ಹೋಗುವುದೆಂದರೆ ಇತರ ಮರ್ದಿತ ಜನಾಂಗಗಳಿಗೆ ಸ್ವಾತಂತ್ರ್ಯದ ಕರೆಯಾಗಿತ್ತು. ಅವರೂ ಫಿರ್‌ಔನನಿಂದ ಮುಕ್ತಿ ಪಡೆಯಲು ಪ್ರಯತ್ನಿಸಬೇಕೆಂದಾಗಿತ್ತು.

ಫಿರ್‌ಔನನಿಗೆ ಮೂಸಾರನ್ನು ನೋಡಿ ಮೊದಲು ಬಹಳ ಆಶ್ಚರ್ಯವಾಯಿತು. ಅನಂತರ ಅವರ ದಿಟ್ಟ ಮಾತಿನ ಶೈಲಿಯನ್ನು ನೋಡಿ ಅದ್ಭುತವಾಯಿತು. ಅವರ ಧೈರ್ಯ ಪ್ರದರ್ಶನವನ್ನು ಕಂಡು ಆತ ಒಳಗಿಂದೊಳಗೇ ಭೀತಿಗೊಳಗಾದ. ಆದರೆ ತನ್ನ ವರ್ಚಸ್ಸಿಗೆ ಧಕ್ಕೆಯುಂಟಾದೀತೋ ಎಂದು ಭಾವಿಸಿ ಮಾತನ್ನು ಇತರೆಡೆಗೆ ಸರಿಸಲು ಪ್ರಯತ್ನಿಸಿದ. ತರುವಾಯ ಮೂಸಾರಿಗೆ ಅವರ ಕಳೆದು ಹೋದ ಘಟನೆಗಳನ್ನು ನೆನಪಿಸುವ ಮೂಲಕ ಮತ್ತು ಅವರಿಗೆ ತನ್ನ ಉಪಕಾರಗಳನ್ನು ಜ್ಞಾಪಿಸುವ ಮೂಲಕ ಅವರನ್ನು ಪ್ರಭಾವಿತ ಗೊಳಿಸಲು ಪ್ರಯತ್ನಿಸಿದ. ತನ್ನ ಆಸ್ಥಾನಿಕರು ಮತ್ತು ಪರಿಚಾರಕರಿಗೆ, ತಾನು ಇಂತಹ ಹೊಸ ಮಾತುಗಳಿಂದೇನೂ ಪ್ರಭಾವಿತಗೊಂಡಿಲ್ಲವೆಂದು ತೋರ್ಪಡಿಸಲು ವ್ಯರ್ಥ ಶ್ರಮ ನಡೆಸಿದ. ಅವನು ಹೀಗೆ ಹೇಳಿದ,

"ಫಿರ್‌ಔನನು, 'ನಾವು ನಿನ್ನನ್ನು ನಮ್ಮಲ್ಲಿ ಒಂದು ಮಗುವಿನಂತೆ ಸಾಕಿರಲಿಲ್ಲವೇ? ನೀನು ನಿನ್ನ ಜೀವಮಾನದ ಅನೇಕ ವರ್ಷಗಳನ್ನು ನಮ್ಮಲ್ಲಿ ಕಳೆದಿರುವೆ. ಅನಂತರ ನೀನು ಏನು ಮಾಡಿದೆಯೋ ಅದನ್ನು ಮಾಡಿದೆ. ನೀನು ಮಹಾ ಕೃತಘ್ನನಾಗಿರುವೆ' ಎಂದನು."

(ಪವಿತ್ರ ಕುರ್‌ಆನ್, 26:18-19)

ಮೂಸಾರೊಂದಿಗೆ ಇಲ್ಲಿ ಸಂಭಾಷಣೆ ನಡೆಸಿದ್ದು, ಅವರನ್ನು ಚಿಕ್ಕಂದಿನಲ್ಲಿ ಪೋಷಿಸಿ ಬೆಳೆಸಿದ ವ್ಯಕ್ತಿಯಾಗಿರಲಿಲ್ಲ, ಬದಲಾಗಿ ಬೇರೆಯೇ ವ್ಯಕ್ತಿಯಾಗಿದ್ದನು. ಆ ಕಾಲದಲ್ಲಿ ಈಜಿಪ್ಟ್‌ನ ಚಕ್ರವರ್ತಿಗಳನ್ನು 'ಫಿರ್‌ಔನ್' (Pharoah) ಎಂದು ಕರೆಯಲಾಗುತ್ತಿತ್ತು. ಸೂರ್ಯವಂಶಿ ಎಂಬುದು ಇದರ ಅರ್ಥ. ಮೊದಲ ವ್ಯಕ್ತಿಯ ಹೆಸರು ರಂಸೀಸ್ ಎಂದಾಗಿದ್ದರೆ, ಈ ಎರಡನೆಯ ಫಿರ್‌ಔನನ ಹೆಸರು ಮುನ್ಫಿತಃ ಅಥವಾ ಮುನ್‌ಫಿತಾಹ್ ಎಂದಾಗಿತ್ತು.

ಪ್ರಸ್ತುತ ಸಂಭಾಷಣೆಯಲ್ಲಿ ಒಂದೆಡೆ ಫಿರ್‌ಔನನು ಮೂಸಾರನ್ನು ಉಪಕಾರ ಸ್ಮರಿಸುವವರಾಗಿ ಮಾಡುವುದರ ಜೊತೆಗೆ ಅವರ ನೈತಿಕ ಸ್ಥಿತಿಯನ್ನು 'ನೀನು ದೊಡ್ಡ ಕೃತಘ್ನ' ಎಂದು ಹೇಳಿ ಹೊಡೆತ ನೀಡಲು ಪ್ರಯತ್ನಿಸಿದ. ತನ್ನ ಉಪಕಾರಿಯ ಉಪಕಾರಗಳನ್ನು ಮರೆತು ತನಗೇ ಉಪದೇಶ ನೀಡಲು ಹಾಗೂ ತನ್ನನ್ನು ಅನುಸರಿಸಲು ಹೇಳುವಂತಹ ಓರ್ವ ವ್ಯಕ್ತಿಯ-ಮೂಸಾರ ಬಗ್ಗೆ-ಮಾತು ಕೇಳಲಿಕ್ಕೇ ಅರ್ಹವಲ್ಲವೆಂದು ಆತನು ಸಭಿಕರಿಗೆ ಮೊದಲ ಹೆಜ್ಜೆಯಲ್ಲೇ ಕೆಟ್ಟ ಅಭಿಪ್ರಾಯ ತಾಳುವಂತೆ ಮಾಡಲು ಪ್ರಯತ್ನಿಸಿದ.

ಫಿರ್‌ಔನ್ ಮತ್ತು ಮೂಸಾರ(ಅ) ಸಂಭಾಷಣೆ

ಮೂಸಾರು ಅವನ ಮಾತಿನ ಎಲ್ಲ ಅಪಾಯಗಳನ್ನು ಗ್ರಹಿಸಿ ಅವನದೇ ಮಾತನ್ನು ಅವನ ಮುಖಕ್ಕೆ ಎಸೆದುಬಿಟ್ಟರು. ಅವನ ಮಾತಿಗೆ ಉತ್ತರವಾಗಿ ಅವರು ಹೇಳಿದರು,

"ಆಗ ಮೂಸಾ, 'ನಾನು ಆಗ ಆ ಕೃತ್ಯವನ್ನು ಗೊತ್ತಿಲ್ಲದೆ ಮಾಡಿಬಿಟ್ಟಿದ್ದೆ. ಅನಂತರ ನಾನು ನಿಮಗೆ ಹೆದರಿ ಓಡಿ ಹೋದೆ. ಆ ಬಳಿಕ ನನ್ನ ಪ್ರಭು ನನಗೆ ನಿರ್ದೇಶನವನ್ನು ದಯಪಾಲಿಸಿದನು ಮತ್ತು ನನ್ನನ್ನು ಸಂದೇಶವಾಹಕರಲ್ಲಿ ಸೇರಿಸಿಕೊಂಡನು. ಇನ್ನು ನೀನು ನನ್ನ ಮೇಲೆ ಉಪಕಾರ ಭಾರವನ್ನಿರಿಸುತ್ತಿರುವ ವಿಷಯ. ಅದರ ವಾಸ್ತವಿಕತೆಯೇನೆಂದರೆ, ನೀನು ಬನೀಇಸ್ರಾಈಲರನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದೆ' ಎಂದು ಉತ್ತರಿಸಿದರು."

(ಪವಿತ್ರ ಕುರ್‌ಆನ್, 26:20-22)

ಇಲ್ಲಿ ಪ್ರವಾದಿಗಳ ಮತ್ತು ಜನಸಾಮಾನ್ಯರ ಮಧ್ಯೆಯಿರುವ ವ್ಯತ್ಯಾಸವು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಸಂದರ್ಭದಲ್ಲಿ ಮೂಸಾರ ಬದಲು ಬೇರೆ ಯಾರಾದರೂ ಆಗಿರುತ್ತಿದ್ದರೆ ತನ್ನ ಅನುಪಸ್ಥಿತಿಯ ಕುರಿತು ನೂರು ಸಮರ್ಥನೆಗಳನ್ನು ನೀಡುತ್ತಿದ್ದ, ಅಷ್ಟೇ ಅಲ್ಲ, ನಾನು ಇಂತಿಂತಹ ಕೆಲಸ ಕಾರ್ಯಗಳಿಗಾಗಿ ಹೋಗಿದ್ದೆ ಎಂದು ಕೊಚ್ಚಿಕೊಳ್ಳುತ್ತಿದ್ದ, ಜೊತೆಗೆ ತನ್ನ ತಪ್ಪುಗಳನ್ನು ಮರೆಮಾಚಲಿಕ್ಕಾಗಿ ನೂರು ಸುಳ್ಳುಗಳನ್ನು ಮುಂದಿಡುತ್ತಿದ್ದ. ಆದರೆ ಮೂಸಾ(ಅ) ಅಲ್ಲಾಹನ ಪ್ರವಾದಿಯಾಗಿದ್ದಾರೆ. ಸತ್ಯದ ವಾಹಕರಾಗಿದ್ದಾರೆ. ಅವರು ಸತ್ಯ ನುಡಿಯದಿದ್ದರೆ, ಸತ್ಯ ನುಡಿಯುವವರು ಬೇರೆ ಯಾರಿರುತ್ತಾರೆ? ಅವರು ತನ್ನ ತಪ್ಪುಗಳನ್ನು ಬಹಿರಂಗವಾಗಿ ಒಪ್ಪಿಕೊಂಡರು. ನನ್ನಿಂದ ಕೊಲೆಯಾಗಿದೆ ನಿಜ. ಆದರೆ ಅದು ಅಚಾತುರ್ಯದಿಂದಾಗಿತ್ತು. ಉದ್ದೇಶಪೂರ್ವಕವಾಗಿರಲಿಲ್ಲ, ನೀವು ಪ್ರತೀಕಾರ ಪಡೆಯುವಿರೆಂಬ ಭಯದಿಂದ ನಾನು ಊರು ಬಿಟ್ಟು ಹೋಗಿದ್ದೆ ಎಂದು ಹೇಳಿದರು. ತರುವಾಯ ಅವರು ಮಗದೊಮ್ಮೆ ತಮ್ಮ ಪ್ರಸಕ್ತ ಸ್ಥಾನವನ್ನು ವಿವರಿಸುತ್ತಾ, ನಾನೀಗ ನಮ್ಮ ಪ್ರಭುವಿನ ವತಿಯಿಂದ ಸಂದೇಶವಾಹಕನಾಗಿ ನೇಮಿಸಲ್ಪಟ್ಟಿದ್ದೇನೆ. ನನ್ನ ಕೆಲಸವೇ ಜನರನ್ನು ಸನ್ಮಾರ್ಗದತ್ತ ಕರೆಯುವುದು ಮತ್ತು ಅವರಿಗೆ ಮಾರ್ಗದರ್ಶನ ನೀಡುವುದಾಗಿದೆ. ಅನಂತರ ಫಿರ್‌ಔನನ ಉಪಕಾರದ ಕೊಚ್ಚಿಕೊಳ್ಳುವಿಕೆಗೆ ಸರಿಯಾದ ಉತ್ತರ ನೀಡಿದರು. ಅವರು

ಹೇಳಿದರು, "ನೀನು ನನ್ನ ಮೇಲೆ ಬಹಳ ಉಪಕಾರ ಮಾಡಿದೆ ಎಂದು ಕೊಚ್ಚಿಕೊಳ್ಳುತ್ತಿರುವಿ. ಆದರೆ ಪರಿಸ್ಥಿತಿ ಇಲ್ಲಿಯ ವರೆಗೆ ಮುಟ್ಟಲು ಯಾರು ಕಾರಣರೆಂಬುದನ್ನು ಆಲೋಚಿಸಿ ದೆಯಾ? ನಿನ್ನ ತಂದೆ-ತಾತಂದಿರು ನನ್ನ ಜನಾಂಗದ ಮೇಲೆ ಹಿಂಸೆ-ದೌರ್ಜನ್ಯಗಳನ್ನೆಸಗಿ ಅವರನ್ನು ಗುಲಾಮರನ್ನಾಗಿ ಮಾಡಿದರು. ಅನಂತರ ಅವರಲ್ಲಿ ಪುರುಷರು ಉಳಿಯಲೇ ಬಾರದೆಂದು ಜನಾಂಗ ಹತ್ಯೆ ನಡೆಸಿದರು. ನೀನೂ ನಿನ್ನ ಜನಾಂಗದವರೂ ಈ ರೀತಿ ದೌರ್ಜನ್ಯವೆಸಗದಿರುತ್ತಿದ್ದರೆ ನನಗೆ ಇಲ್ಲಿಗೆ ಬರುವ ಅಗತ್ಯವೇ ಇರಲಿಲ್ಲ, ನನ್ನನ್ನು ಪೋಷಿಸಲು ನನ್ನ ಕುಟುಂಬವೇ ಸಾಕಾಗಿತ್ತು. ನಿನ್ನ ಭಯದಿಂದಲೇ ನನ್ನನ್ನು ಸಮುದ್ರದಲ್ಲಿ ತೇಲಿ ಬಿಡ ಲಾಯಿತು. ಈ ರೀತಿ ನಿನ್ನ ಮನೆಗೆ ತಲುಪುವಂತಾಯಿತು.

ಫಿರ್‌ಔನನು ಈ ಉತ್ತರ ಕೇಳಿ, ಇಲ್ಲಿ ನನ್ನ ಮಾತು ನಡೆಯುವ ಬದಲು ನನ್ನ ಕೊರಳಿಗೆ ಬಂದು ಬಿಟ್ಟಿತಲ್ಲ ಎಂದು ಯೋಚನೆಯಲ್ಲಿ ಮುಳುಗಿದ. ನನ್ನ ಮತ್ತು ನನ್ನ ಜನಾಂಗದ ಅಕ್ರಮ-ದೌರ್ಜನ್ಯಗಳು ಈ ರೀತಿ ಬಹಿರಂಗವಾಗಿ ಅನಾವರಣಗೊಳ್ಳುತ್ತಿರು ವುದನ್ನು ಕಂಡು, ಮಾತು ಬದಲಾಯಿಸಿ ದಿಕ್ಕು ತಪ್ಪಿಸಲು ಪ್ರಯತ್ನಿಸಿದ. ಅವನು ಹೇಳಿದ,

"ಆಗ ಫಿರ್‌ಔನನು, 'ಈ ಸರ್ವಲೋಕಗಳ ಪ್ರಭು ಎಂದರೇನು?' ಎಂದು ಕೇಳಿದನು."

(ಪವಿತ್ರ ಕುರ್‌ಆನ್, 26:23)

ಇನ್ನೊಂದು ಕಡೆ ಹೀಗಿದೆ,

"ಆಗ ಫಿರ್‌ಔನ್ ಇಂತೆಂದನು; ಸರಿ, ಹಾಗಾದರೆ ನಿಮ್ಮಿಬ್ಬರ ಪ್ರಭು ಯಾರು ಮೂಸಾ?"

(ಪವಿತ್ರ ಕುರ್‌ಆನ್, 20:49)

ಈ ಮಾತನ್ನು ಹೇಳಿ ಫಿರ್‌ಔನನು, "ನಾವು ಸರ್ವಲೋಕ ಪರಿಪಾಲಕನ ಸಂದೇಶ ವಾಹಕರಾಗಿದ್ದೇವೆ" ಎಂಬ ಮೂಸಾರ ವಾದಕ್ಕೆ ಪಂಥಾಹ್ವಾನ ನೀಡಿದ. ಅವನು ಹೇಳಿದ, ನಿಮ್ಮ ಪ್ರವಾದಿತ್ವದ ವಿಷಯ ಒತ್ತಟ್ಟಿಗಿರಲಿ. ಮೊದಲು ಸರ್ವಲೋಕಗಳ ಪ್ರಭುವೆಂದರೇನು? ಅವನು ಯಾರು ಎಂದು ಹೇಳು?

ಈ ಪ್ರಶ್ನೆಯು ಯಾವುದೇ ವಿಷಯ ತಿಳಿಯಲಿಕ್ಕಾಗಿರಲಿಲ್ಲ, ಇದು ವಾಸ್ತವದಲ್ಲಿ ಸಾಮಾನ್ಯವಾಗಿ ಎಲ್ಲ ಕಾಲದ ಬಹುದೇವಾರಾಧಕರು ಮತ್ತು ಅಜ್ಞಾನಿಗಳು ವಿಶೇಷವಾಗಿ ಉದ್ಧಟ ಹಾಗೂ ದೇವಧಿಕ್ಕಾರಿ ಆಡಳಿತಗಾರರು, ಸಿಲುಕಿಕೊಂಡಿರುವ ಮನೋಭಾವದ ಪ್ರತೀಕವಾಗಿತ್ತು.

ಇಲ್ಲೊಬ್ಬ ದೇವನಿದ್ದಾನೆ. ಅವನನ್ನು ಪೂಜಿಸಿರಿ. ಅವನ ಸನ್ನಿಧಿಯಲ್ಲಿ ಹರಕೆ, ಕಾಣಿಕೆ ಗಳನ್ನು ಸಲ್ಲಿಸಿರಿ ಎಂಬಷ್ಟಕ್ಕೆ ಮಾತ್ರ ಮೂಸಾರ ಕರೆಯಾಗಿದ್ದಿದ್ದರೆ ಬಹುಶಃ ಫಿರ್‌ಔನನಿಗೆ ಅರೋಚಕವಾಗುತ್ತಿರಲಿಲ್ಲ, ಅವರ ದೇವನ ಬಗೆಗಿನ ಕಲ್ಪನೆಯೇನೆಂದರೆ ಕೆಲವು ಧಾರ್ಮಿಕ ಆಚರಣೆಗಳು, ಸ್ವಲ್ಪ ಜಪತಪ ಮಾಡುವಷ್ಟರ ಮಟ್ಟಕ್ಕೆ ಮಾತ್ರ ಅವನಿರುವುದು. ಅದಕ್ಕಿಂತ ಹೆಚ್ಚಿಗೆ ಅವನಿಗೆ ಯಾವ ಹಕ್ಕುಗಳೂ ಇಲ್ಲ, ಯಾವ ಸ್ಥಾನವೂ ಇಲ್ಲ, ತಮ್ಮ ಲೌಕಿಕ

ವ್ಯವಹಾರಗಳಲ್ಲಿ, ದೇಶದ ಆಡಳಿತ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಈ ದೇವನು ಹಸ್ತಕ್ಷೇಪ ಮಾಡುವಂತಿಲ್ಲ, ಹಾಗೆ ಹಸ್ತಕ್ಷೇಪ ಮಾಡಲೂ ನಾವು ಬಿಡಲಾರೆವು. ನಾವು ನಮ್ಮ ವ್ಯವಹಾರಗಳನ್ನು ಹೇಗೆ ಬೇಕಾದರೂ ನಡೆಸಿಕೊಳ್ಳುವೆವು. ಅದನ್ನು ನಿರ್ಬಂಧಿಸುವ ಅಧಿಕಾರ ಯಾರಿಗಿದೆ?

ಆದರೆ ಪ್ರವಾದಿಗಳ ಕರೆಯು ಯಾವಾಗಲೂ ಮೂಲಭೂತವಾಗಿ, ಅವರ ಸೃಷ್ಟಿಕರ್ತನು ಕಾಲ್ಪನಿಕ, ಕೃತಕ, ದುರ್ಬಲನಲ್ಲ, ಬದಲಾಗಿ ಅವನು ಈ ಪ್ರಪಂಚದ ನೈಜ ಒಡೆಯನಾಗಿದ್ದು ಇದರಲ್ಲಿ ಅವನ ಆಜ್ಞೆ ಮಾತ್ರ ನಡೆಯುತ್ತದೆ ಎಂದಾಗಿರುತ್ತದೆ. ಅವನ ಹೊರತು ಎಷ್ಟೆಲ್ಲ ಸ್ವಯಂ ಘೋಷಿತ ಆಡಳಿತಗಾರರಿರುವರೋ ಅವರೆಲ್ಲ ಅವನ ಪ್ರಜೆಗಳಾಗಿದ್ದಾರೆ. ಆದ್ದರಿಂದ ಓರ್ವ ಪ್ರಜೆಯೆಂಬ ನೆಲೆಯಲ್ಲಿ ಅವರು ಅವನ ವಿಧೇಯ ದಾಸರಂತೆ ಜೀವಿಸಬೇಕು. ಜೀವನದ ಪ್ರತಿಯೊಂದು ರಂಗದಲ್ಲೂ ಆ ನೈಜ ಒಡೆಯನ ಅನುಸರಣೆಯಾಗಬೇಕು. ಅವನಾದರೋ ಇಡೀ ಪ್ರಪಂಚವನ್ನು ಮಾತ್ರವಲ್ಲ, ಈ ಸ್ವಯಂ ಘೋಷಿತ ಆಡಳಿತಾಧಿಕಾರಿಗಳನ್ನೂ ಸೃಷ್ಟಿಸಿದ್ದಾನೆ. ಆದ್ದರಿಂದಲೇ ಎಲ್ಲ ಪ್ರವಾದಿಗಳು ಒಂದೇ ಕರೆಯನ್ನು ಕೊಟ್ಟರು.

"ಅವರು ಹೇಳಿದರು, ಓ ನನ್ನ ಜನಾಂಗ ಬಾಂಧವರೇ, ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನ ಹೊರತು ನಿಮ್ಮ ಆರಾಧ್ಯನಾರೂ ಇಲ್ಲ." (ಪವಿತ್ರ ಕುರ್‌ಆನ್, 7:59)

"ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ."

(ಪವಿತ್ರ ಕುರ್‌ಆನ್, 26:108)

ಈ ವಿಧೇಯತೆಯನ್ನೇ ಬಹುದೇವಾರಾಧಕರು ಮತ್ತು ನಿರಂಕುಶ ಆಡಳಿತ ವರ್ಗದವರು ಯಾವ ರೀತಿಯಲ್ಲೂ ಒಪ್ಪಿಕೊಳ್ಳಲು ತಯಾರಿರುವುದಿಲ್ಲ.

ಮಾತು ಅಸ್ಪಷ್ಟವಾಗಿದ್ದಿದ್ದರೆ ಫಿರ್‌ಔನ್ ಅದನ್ನು ಕಡೆಗಣಿಸುತ್ತಿದ್ದ ಅಥವಾ ವಾಗ್ವಾದದಲ್ಲಿ ಸಿಲುಕಿಸಲು ಪ್ರಯತ್ನಿಸುತ್ತಿದ್ದ. ಆದರೆ ಇಲ್ಲಿ ಅವನ ನಿರಂಕುಶ ಅಧಿಕಾರವನ್ನು ಪ್ರಶ್ನಿಸಲಾಗಿದೆ ಮಾತ್ರವಲ್ಲ, ಅದರೊಟ್ಟಿಗೆ ಬನೀ ಇಸ್ರಾಈಲರನ್ನು ನನ್ನ ವಶಕ್ಕೊಪ್ಪಿಸಿರಿ ಎಂಬ ಬೇಡಿಕೆಯನ್ನು ಇಡಲಾಗಿದೆ. ಇದು ಒಂದು ಸ್ಪಷ್ಟ ರಾಜಕೀಯ ಪಂಥಾಹ್ವಾನವಾಗಿತ್ತು. ಫಿರ್‌ಔನನ ರಾಜಕೀಯ ಸಾರ್ವಭೌಮತೆ ಮತ್ತು ಪರಮಾಧಿಕಾರವನ್ನು ಪ್ರಶ್ನಿಸಲಾಗಿತ್ತು. ಅದನ್ನು ಅವನು ಯಾವ ರೀತಿಯಲ್ಲೂ ಒಪ್ಪಲು ತಯಾರಿರಲಿಲ್ಲ. ಆದ್ದರಿಂದ ಅವನು ಮೊತ್ತಮೊದಲು, "ನಾನು ಸರ್ವಲೋಕಗಳ ಪ್ರಭುವಿನ ಸಂದೇಶವಾಹಕನಾಗಿರುತ್ತೇನೆ" ಎಂಬ ಮೂಸಾರ ವಾದವನ್ನು ತೆಗೆದು ಈ 'ಸರ್ವಲೋಕಗಳ ಪ್ರಭು' ಎಂಬ ಕಲ್ಪನೆ ಮತ್ತು ಅದರ ಸ್ಥಾನಮಾನಕ್ಕೆ ಪಂಥಾಹ್ವಾನ ಒಡ್ಡಿದ.

ಮೂಸಾ(ಅ) ಅತ್ಯಂತ ಮನಮುಟ್ಟುವ ಹಾಗೂ ಆಕರ್ಷಕ ಶೈಲಿಯಲ್ಲಿ ಹೇಳಿದರು.

"(ಆಗ) ಮೂಸಾ, 'ಭೂಮಿ-ಆಕಾಶಗಳ ಪ್ರಭು ಮತ್ತು ಭೂಮಿ-ಆಕಾಶಗಳ ನಡುವೆ ಇರುವ ಸಕಲ ವಸ್ತುಗಳ ಪ್ರಭು- ನೀವು ದೃಢ ವಿಶ್ವಾಸವಿರಿಸುವವರಾಗಿದ್ದರೆ'- ಎಂದು ಹೇಳಿದರು." (ಪವಿತ್ರ ಕುರ್‌ಆನ್, 26:24)

ಅನಂತರ ಹೇಳಿದರು,

"ಮೂಸಾ ಉತ್ತರವಿತ್ತರು, ಪ್ರತಿಯೊಂದು ವಸ್ತುವಿಗೆ ಅದರ ಆಕೃತಿ ಪ್ರದಾನ ಮಾಡಿ ಆ ಬಳಿಕ ಅದಕ್ಕೆ ದಾರಿ ತೋರಿದವನೇ ನಮ್ಮ ಪ್ರಭು." (ಪವಿತ್ರ ಕುರ್‌ಆನ್, 20:50)

ಈ ಸಂಕ್ಷಿಪ್ತ ಮತ್ತು ಜಾಣ್ಮೆಯ ಉತ್ತರದಿಂದ ಮೂಸಾ(ಅ) ತನ್ನ ಪ್ರಭು ಯಾರೆಂದು ಹೇಳಿದುದು ಮಾತ್ರವಲ್ಲ, ಅವನು ಏಕಿದ್ದಾನೆ, ಏತಕ್ಕಾಗಿದ್ದಾನೆ ಎಂಬುದನ್ನೂ ಹೇಳಿದರು. ಈ ಸಣ್ಣ ವಾಕ್ಯದಲ್ಲಿ ಆ ಪ್ರಭುವಿನ ಪರಿಚಯ, ಅವನ ಗುಣವಿಶೇಷಗಳ ಸಮಗ್ರ ಕಲ್ಪನೆ ಮತ್ತು ಅವನ ಆದೇಶವನ್ನು ಪಾಲಿಸುವ ಕಡೆಗೆ ಲಘುವಾದ ಸೂಚನೆಯಿದೆ.

ಮೂಸಾ(ಅ) ಹೇಳಿದರು- ನನ್ನ ಪ್ರಭುವೆಂದರೆ ಈ ಭೂಮಿ–ಆಕಾಶಗಳನ್ನೂ ಅದರೊಳಗಿರುವ ಸಕಲವನ್ನೂ ಸೃಷ್ಟಿಸಿ ಪರಿಪಾಲಿಸುವವನಾಗಿದ್ದಾನೆ. ಯಾರೋ ಸೃಷ್ಟಿಸಿದ ಮತ್ತು ಯಾರೋ ಮಾಡಿದುದರಿಂದ ಪ್ರಭುವಾಗಿರುವವನು ನನ್ನ ಪ್ರಭುವಲ್ಲ, ಬದಲಾಗಿ, ಆತ ಸ್ವಯಂ ತನ್ನ ಅಸ್ತಿತ್ವ ಮತ್ತು ಶಕ್ತಿಯ ಮೇಲೆ ನಿಂತಿರುವ ಪ್ರಭುವಾಗಿದ್ದಾನೆ. ಅವನು ಕೇವಲ ನಿನ್ನನ್ನು ಮಾತ್ರವಲ್ಲ, ಇತರರ ಆಶ್ರಯದ ಮೇಲೆ ತನ್ನ ಪ್ರಭುತ್ವವನ್ನು ಮೆರೆಯುವ ನಿನ್ನಂತಹ ಇನ್ನೆಷ್ಟೋ ಪ್ರಭುತ್ವವಾದಿಗಳನ್ನು ಸೃಷ್ಟಿಸಿದ್ದಾನೆ. ನೀನು ನಿಜವಾಗಿಯೂ ಆ ಪ್ರಭುವನ್ನು ನಂಬುವುದಾದರೆ ಅವನು ಪ್ರಭುವೆಂಬ ಬಗ್ಗೆ ದೃಢನಂಬಿಕೆಯಿರಿಸಲು ಯಾವುದೂ ಅಡ್ಡಿಯಾಗಬಾರದು. ಇನ್ನು, ಅವನು ತನ್ನ ಸೃಷ್ಟಿಗಳನ್ನು ಸೃಷ್ಟಿಸಿರುವುದು ಮಾತ್ರವಲ್ಲ, ಅದರ ರಚನೆಗೆ ತಕ್ಕಂತೆ ಅದರ ಎಲ್ಲ ಬೇಡಿಕೆಗಳನ್ನೂ ಒದಗಿಸಿರುವನು. ಪಕ್ಷಿಗಳಿಗೆ ಹಾರಾಡಲು ರೆಕ್ಕೆಗಳು, ಮೀನಿಗೆ ಈಜಾಡಲು ನೀರು, ಮಾನವನಿಗೆ ನಡೆದಾಡಲು ಕೈಕಾಲುಗಳು ಮತ್ತಿತರ ಅನೇಕ ಶಕ್ತಿ ಸಾಮರ್ಥ್ಯಗಳನ್ನು ನೀಡಿದನು.

ಮಾನವರನ್ನು ಸೃಷ್ಟಿಸಿ, ಅವರಿಗೆ ಎಲ್ಲ ಅಗತ್ಯಗಳನ್ನೂ ಒದಗಿಸಿ ಅಲ್ಲಾಹನು ಹಾಗೆಯೇ ಬಿಟ್ಟು ಬಿಡಲಿಲ್ಲ, ಬದಲಾಗಿ ಅವರಿಗೆ ಸನ್ಮಾರ್ಗ ಮತ್ತು ಮಾರ್ಗದರ್ಶನವನ್ನೂ ದಯಪಾಲಿಸಿದನು. ಯಾವುದೇ ಒಂದು ಸೃಷ್ಟಿಯಾದರೂ ಅದು ನಿರ್ವಹಿಸಬೇಕಾದ ಕೆಲಸ ಮತ್ತು ಅದಕ್ಕೆ ಬೇಕಾದ ಶಕ್ತಿ-ಸಾಮರ್ಥ್ಯಗಳನ್ನು ನೀಡಿದನು. ಒಂದು ಸಣ್ಣ ಕ್ರಿಮಿಯಿಂದ ಹಿಡಿದು ಅಗಾಧ ಸಾಗರದ ವರೆಗಿನ ಸೃಷ್ಟಿಗಳಿಗೆ ಮಾರ್ಗದರ್ಶನ ಮಾಡಿದ ದೇವನು 'ಸೃಷ್ಟಿ ಶ್ರೇಷ್ಠನೆಂಬ ವಿಶೇಷಣವಿರುವ ಮಾನವನಿಗೆ ಯಾವುದೇ ಮಾರ್ಗದರ್ಶನ ಮಾಡದೆ ಹಾಗೆಯೇ ಬಿಟ್ಟುಬಿಟ್ಟಿರುವುದಾದರೂ ಹೇಗೆ? ಅದನ್ನು ಅವನು ಸಹಿಸುವುದಾದರೂ ಹೇಗೆ? ಅದೇ ಮಾರ್ಗದರ್ಶನಕ್ಕಾಗಿ ನನ್ನನ್ನು ನಿನ್ನ ಬಳಿಗೆ ಕಳಿಸಲಾಗಿದೆ.

"ಮತ್ತು ನಾನು ನಿನ್ನ ಪ್ರಭುವಿನ ಕಡೆಗೆ ನಿನಗೆ ಮಾರ್ಗದರ್ಶನ ಮಾಡಿದರೆ, (ಅವನ) ಭಯ ನಿನ್ನಲ್ಲಿ ಉಂಟಾದೀತೇ?" (ಪವಿತ್ರ ಕುರ್‌ಆನ್, 79:19)

ಆದರೆ ಫಿರ್‌ಔನನ ವಾಗ್ವಾದ ವಿಷಯ ತಿಳಿಯಲಿಕ್ಕೋ ತಿಳಿಸಲಿಕ್ಕೋ ಆಗಿರಲಿಲ್ಲ. ಅವನು ಒಂದೆಡೆ ಮೂಸಾರ ಆಧಾರ ಪ್ರಮಾಣಗಳನ್ನು ತಿರಸ್ಕರಿಸಿ ಅವರ ಪ್ರವಾದಿತ್ವವನ್ನು ನಿರಾಕರಿಸಬಯಸಿದ್ದರೆ, ಇನ್ನೊಂದೆಡೆ ತನ್ನ ಆಸ್ಥಾನಿಕರು ಅವರ ಸಂದೇಶದಿಂದ ಪ್ರಭಾವಿತ ಗೊಳ್ಳದಿರಲೆಂದು ಮೂಸಾರನ್ನು ವ್ಯರ್ಥ ಚರ್ಚೆಯಲ್ಲಿ ಸಿಲುಕಿಸಿ ಅವರನ್ನು ಅಪಹಾಸ್ಯ ಮಾಡಿ ಸುಮ್ಮನಿರುವಂತೆ ನಿರ್ಬಂಧಿಸ ಬಯಸಿದ್ದನು. ಮತ್ತೊಂದೆಡೆ ತನ್ನ 'ದೇವತ್ವದ ಮೇಲೆ ಯಾವುದೇ ಕಳಂಕವುಂಟಾಗದಂತಾಗಲು ಬನೀ ಇಸ್ರಾಈಲರ ಬಿಡುಗಡೆಯ ಬೇಡಿಕೆಯ ಬೇರನ್ನೇ ಕಡಿಯಬಯಸಿದ್ದನು. ಆದ್ದರಿಂದ ಅವನು ಮೂಸಾರ ಮಹತ್ವವನ್ನು ಕುಗ್ಗಿಸಲಿಕ್ಕಾಗಿ ತನ್ನ ಆಸ್ಥಾನಿಕರ ಕಡೆಗೆ ತಿರುಗಿ ಅವರೊಂದಿಗೆ ಹೀಗೆ ಹೇಳಿದನು,

"ಫಿರ್‌ಔನನು ತನ್ನ ಸುತ್ತಮುತ್ತಲಿದ್ದ ಜನರೊಡನೆ, 'ಕೇಳಿದಿರಾ?' ಎಂದನು."

(ಪವಿತ್ರ ಕುರ್‌ಆನ್, 26:25)

ಅಂದರೆ ಈ ಪ್ರವಾದಿತ್ವವಾದಿಯು ಎಂತೆಂತಹ ಹುಚ್ಚು ಮಾತನ್ನಾಡುತ್ತಿದ್ದಾನೆಂದು ನೋಡಿದಿರಾ? ಆದರೆ ಮೂಸಾ(ಅ) ಅವನ ಕುತಂತ್ರಗಳನ್ನು ಚೆನ್ನಾಗಿ ಗ್ರಹಿಸಿದ್ದರು. ಅದನ್ನು ಹೀಗೆಯೇ ಹಾರಿಸಿ ಬಿಡುವುದು ಸುಲಭವಾಗಿರಲಿಲ್ಲ. ಅವರು ಅವನನ್ನು ವಿಷಯವನ್ನು ತಿರುಗಿಸಲು ಮತ್ತು ಅದರಿಂದ ಪಲಾಯನ ಮಾಡಲು ಬಿಡಲಿಲ್ಲ. ಅವರು ಕೂಡಲೇ ಹೀಗೆ ಉತ್ತರಿಸಿದರು,

"(ಆಗ) ಮೂಸಾ- 'ನಿಮ್ಮ ಪ್ರಭುವೂ ಗತಿಸಿ ಹೋಗಿರುವ ನಿಮ್ಮ ಪೂರ್ವಿಕರ ಪ್ರಭುವೂ' ಎಂದರು." **(ಪವಿತ್ರ ಕುರ್‌ಆನ್, 26:26)**

ನಾನಂತೂ ಇಂದು ಇರುವ, ನಾಳೆ ಇಲ್ಲವಾಗುವ ಅಥವಾ ನಿನ್ನೆ ಇದ್ದ, ಇಂದು ಇಲ್ಲದ ಪ್ರಭುವನ್ನು ನಂಬುವವನಲ್ಲ. ಬದಲಾಗಿ ನನ್ನ ಪ್ರಭು ನಿನ್ನೆಯೂ ಪ್ರಭುವಾಗಿದ್ದ, ಇಂದೂ ಪ್ರಭುವಾಗಿರುವ ಮತ್ತು ನಾಳೆಯೂ ಪ್ರಭುವಾಗಿಯೇ ಉಳಿಯುವವನಾಗಿದ್ದಾನೆ. ಅವನು ಚಿರಂತನನೂ ಸ್ವಯಂಸ್ಥಿರನೂ ಆಗಿರುವನು. ಅವನಿಗೆ ಅಳಿವಾಗಲಿ ಅಸ್ತಮಾನ ವಾಗಲಿ ಇಲ್ಲ. ನಿನ್ನೆ ನೀನು ಇಲ್ಲದಿದ್ದಾಗ ಅವನು ಪ್ರಭುವಾಗಿದ್ದ, ನಿನ್ನ ತಾತಂದಿರು ಮತ್ತು ಅವರಿಗಿಂತ ಮುಂಚಿನವರಿಗಿಂತಲೂ ಮುಂಚೆ ಅವನು ಪ್ರಭುವಾಗಿದ್ದ, ಇನ್ನು ನೀನು ಸತ್ತು ಮಣ್ಣಾದ ಬಳಿಕವೂ ಅವನು ಪ್ರಭುವಾಗಿಯೇ ಇರುವನು.

ಫಿರ್‌ಔನನು ಮೂಸಾರನ್ನು ಸಿಲುಕಿಸಲು ನೋಡುತ್ತಿದ್ದ, ಈ ಉತ್ತರ ಕೇಳಿ ಅವನಿಗೆ ಬಹಳ ಸಂತೋಷವಾಗಿರಬಹುದು. ಈಗಂತೂ ಮೂಸಾ ನನ್ನ ಜಾಲದೊಳಗೆ ಸಿಲುಕಿಸಿಯೇ ಬಿಟ್ಟರೆಂದು ಭಾವಿಸಿರಬಹುದು. ಯಾವ ವಸ್ತುವನ್ನು ಹುಡುಕುತ್ತಿದ್ದೆನೋ ಅದು ಕೈಗೆ ಸಿಕ್ಕಿದಂತೆ ಬೀಗಿರಬಹುದು. ತಂದೆ ತಾತಂದಿರ ಪ್ರಸ್ತಾಪ ಕೇಳಿ ಮನಸ್ಸು ಕುಣಿದಾಡಿರ ಬಹುದು. ಇದು ಈ ಜನರನ್ನು, ಅವರ ಪಕ್ಷಪಾತವನ್ನು ಕೆರಳಿಸುವ ಸಮಯವಾಗಿದೆ.

ಈ ಮೂಸಾ ಏನು ಮಾಡುತ್ತಾನೆಂದು ನೋಡೋಣವೆಂದು ಭಾವಿಸಿರಬಹುದು. ಆತ ಕೂಡಲೇ ಕೇಳಿಬಿಟ್ಟ

"ಫಿರ್‌ಔನ್ ಹೇಳಿದನು- ಹಾಗಾದರೆ ಗತ ಪೀಳಿಗೆಗಳ ಸ್ಥಿತಿ ಏನಾಗಿತ್ತು?"

(ಪವಿತ್ರ ಕುರ್‌ಆನ್, 20:51)

ಅಂದರೆ ನೀನು ಹೇಳುತ್ತಿರುವಿ. ನಿನ್ನ ಪ್ರಭು ಎಲ್ಲರನ್ನೂ ಸೃಷ್ಟಿಸಿರುತ್ತಾನೆ. ಅವರ ಸನ್ಮಾರ್ಗದ ವ್ಯವಸ್ಥೆ ಮಾಡಿದ್ದಾನೆ. ಆದರೆ ಪರಂಪರಾಗತವಾಗಿ ನಿನ್ನ ಪ್ರಭುವನ್ನು ಬಿಟ್ಟು ಇತರ ದೇವರುಗಳನ್ನು ಪೂಜಿಸುತ್ತಿದ್ದ ಮಾತ್ರವಲ್ಲ, ಅವರೇ ದೇವರಾಗಿ ಮೆರೆಯುತ್ತಿದ್ದ ನಮ್ಮ ತಂದೆ ತಾತಂದಿರ ಸ್ಥಿತಿಯೇನಾದೀತು? ಅವರೆಲ್ಲರೂ ದಾರಿ ತಪ್ಪಿದವರೇ? ನಿನ್ನ ಲೆಕ್ಕದಲ್ಲಿ ನೀನು ನಮ್ಮನ್ನು ಹೆದರಿಸುತ್ತಿದ್ದ ಆ ಮಹಾ ಯಾತನೆಗೆ ಅವರೆಲ್ಲರೂ ಅರ್ಹರೇ?

ಆದರೆ ಪ್ರವಾದಿತ್ವದ ದೂರದೃಷ್ಟಿ ನೋಡಿರಿ. ಮೂಸಾ(ಅ) ಅವನ ಸಿಕ್ಕುಗಳಿಗೆ ಸಿಲುಕದೆ ಸುರಕ್ಷಿತವಾಗಿ ಪಾರಾದರು. ಅವರು ಎಂತಹ ಮುಖಕ್ಕೆ ಹೊಡೆಯುವಂತಹ ಉತ್ತರ ಕೊಟ್ಟರೆಂದರೆ ಆತ ಪೆಚ್ಚು ಮುಖದಿಂದ ನೋಡಿ ನಿಂತನು. ಮೂಸಾ ಹೇಳಿದರು,

"ಮೂಸಾ ಹೇಳಿದರು, ಅದರ ಜ್ಞಾನವು ನನ್ನ ಪ್ರಭುವಿನ ಬಳಿಯಿರುವ ಒಂದು ಗ್ರಂಥದಲ್ಲಿ ಸುರಕ್ಷಿತವಾಗಿದೆ. ನನ್ನ ಪ್ರಭು ತಪ್ಪುವುದೂ ಇಲ್ಲ, ಮರೆಯುವುದೂ ಇಲ್ಲ."

(ಪವಿತ್ರ ಕುರ್‌ಆನ್, 20:52)

ಈ ಜಾಣ್ಮೆಯ ಉತ್ತರದಿಂದ ನಮಗೆ ಸಂದೇಶ ಪ್ರಚಾರದ ಒಂದು ಪ್ರಮುಖ ತತ್ವ ಸಿಗುತ್ತದೆ. ಅಭಿಸಂಬೋಧಿತನು ಅಜ್ಞಾನ ಮತ್ತು ಕಿಡಿಗೇಡಿತನವನ್ನು ಪ್ರದರ್ಶಿಸಿದರೆ ಅವನ ಮಾತಿಗೆ ನೇರ ಉತ್ತರ ಕೊಟ್ಟು ಅವನನ್ನು ಇನ್ನಷ್ಟು ಕೆರಳಿಸುವುದನ್ನು ಮತ್ತು ಕಿಡಿಗೇಡಿತನಕ್ಕೆ ಅವಕಾಶ ನೀಡುವುದನ್ನು ತಪ್ಪಿಸಬೇಕು. ಮಾತು ಸತ್ಯವೂ ಆಗಿರಬೇಕು. ಆದರಿಂದ ನಮ್ಮ ಉದ್ದೇಶವೂ ಈಡೇರಬೇಕು ಮತ್ತು ಅವನಿಗೆ ಕಿಡಿಗೇಡಿತನಕ್ಕಿಳಿಯುವ ಅವಕಾಶವೂ ಸಿಗುವಂತಾಗಬಾರದು.

ಮೂಸಾ(ಅ) ಬಯಸಿದ್ದರೆ ಹಾಗೆಯೇ ಉತ್ತರಿಸಬಹುದಿತ್ತು. ಹೌದು, ನಿನ್ನ ತಂದೆ ತಾತಂದಿರೆಲ್ಲ ದಾರಿ ತಪ್ಪಿದವರಾಗಿದ್ದರು. ಅವರೆಲ್ಲ ನರಕದ ಇಂಧನವಾಗುವರು ಎಂದು ಹೇಳಿದ್ದರೆ ಅದು ತಪ್ಪೂ ಆಗುತ್ತಿರಲಿಲ್ಲ, ಇದು ಸತ್ಯ ಪ್ರಕಟನೆಯ ಎಷ್ಟೇ ಉಜ್ವಲ ಸಾಧನೆಯಾಗಿದ್ದರೂ ಅದು ಒಂದೇ ಕ್ಷಣ ಇಡೀ ಜನಾಂಗವು ಮೂಸಾರ ವಿರುದ್ಧ ಎದ್ದು ನಿಲ್ಲುವಷ್ಟರ ಮಟ್ಟಿಗೆ ಶತ್ರುಗಳಿಗೆ ಅಸ್ತ್ರವೊದಗಿಸುತ್ತಿತ್ತು. ಆದರೆ ತನ್ನ ಉತ್ತರದಿಂದ ಒಂದೆಡೆ ಫಿರ್‌ಔನನ ಬಾಯಿ ಮುಚ್ಚಿಸಿದರೆ, ಇನ್ನೊಂದೆಡೆ ತನ್ನ ಸಂದೇಶದ ಮೂಲವಾಗಿರುವ ದೇವಗುಣಗಳ ಸಮಗ್ರ ಕಲ್ಪನೆಯನ್ನು ಈ ರೀತಿ ಮುಂದಿಟ್ಟರು– 'ನನ್ನ ಪ್ರಭುವಿನ ಬಳಿ ಪ್ರತಿಯೊಬ್ಬನ ಕರ್ಮಗಳ ಸಂಪೂರ್ಣ ದಾಖಲೆಯಿದೆ. ಅದರಲ್ಲಿ ಯಾವುದೇ ಒಂದು ಮಾತೂ ನಮೂದಿಸದೆ ಬಿಟ್ಟಿಲ್ಲ, ತಪ್ಪು ವಿಷಯವೂ ದಾಖಲಿಸಲ್ಪಡುವುದಿಲ್ಲ, ಹಿಂದಿನವರ

ವಿಷಯ ದೇವನ ಕೈಯಲ್ಲಿದೆ. ಅವರೊಂದಿಗೆ ಯಾವ ರೀತಿ ವರ್ತಿಸಬೇಕೆಂದು ತೀರ್ಮಾನಿಸುವ ಅಧಿಕಾರ ಅವನಿಗೆ ಮಾತ್ರ ಇದೆ. ನೀನು ನಿನ್ನ ವಿಷಯದಲ್ಲಿ ನಿನ್ನ ಪರಿಣಾಮದ ಕುರಿತು ಮಾತ್ರ ಚಿಂತಿಸು.'

ಫಿರ್‌ಔನ್ ಈಗ ಸಂಪೂರ್ಣ ನಿರುತ್ತರನಾಗಿದ್ದ. ಆದರೆ ಅಧಿಕಾರವು ಕಿಡಿಗೇಡಿಯೂ ಅಹಂಕಾರಿಯೂ ಆಗಿದ್ದರೆ, ಅವನು ಅಷ್ಟು ಸುಲಭದಲ್ಲಿ ಸೋಲೊಪ್ಪಲು ತಯಾರಿರುವುದಿಲ್ಲ. ಅವನ ದರ್ಪ ಮತ್ತು ಒಣ ಪ್ರತಿಷ್ಠೆಯು ಸತ್ಯವನ್ನು ಸ್ವೀಕರಿಸಲು ಅವನನ್ನು ಬಿಡುವುದಿಲ್ಲ. ಅದು ಅವನನ್ನು ಹಠಮಾರಿತನ ಮತ್ತು ಅಜ್ಞಾನದಲ್ಲಿ ಸಿಲುಕಿಸಿ ಬಿಡುತ್ತದೆ. ಆದ್ದರಿಂದ ಫಿರ್‌ಔನ್ ಈಗ ಬಹಿರಂಗ ಅಜ್ಞಾನ ಪ್ರದರ್ಶನಕ್ಕಿಳಿದ.

ಅಪಹಾಸ್ಯ

ಅವನು ಹೇಳಿದ,

"ಫಿರ್‌ಔನನು(ನೆರೆದಿದ್ದ ಜನರೊಡನೆ)- 'ನಿಮ್ಮ ಕಡೆಗೆ ರವಾನಿಸಲ್ಪಟ್ಟಿರುವ ಈ ರಸೂಲರು ಸಂಪೂರ್ಣ ಹುಚ್ಚರಾಗಿರುವಂತೆ ತೋರುತ್ತದೆ' ಎಂದನು."

(ಪವಿತ್ರ ಕುರ್‌ಆನ್, 26:27)

ಇದು ಎಲ್ಲ ಕಾಲಗಳಲ್ಲೂ ಸತ್ಯದ ವಾಹಕರಿಗೆ ಅಜ್ಞಾನಿಗಳಾದ ಅಧಿಕಾರಶಾಹಿಗಳಿಂದ ಸಿಗುವ ವಿಶಿಷ್ಟ ಉತ್ತರವಾಗಿದೆ. ನೂಹ್, ಹೂದ್, ಇಬ್ರಾಹೀಮ್ ಹಾಗೂ ಪ್ರವಾದಿ ಮುಹಮ್ಮದ್(ಸ) ಅವರೆಲ್ಲರಿಗೂ ಹಠಮಾರಿಗಳಿಂದ ಸಿಕ್ಕಿದ ಉತ್ತರ ಇದೇ ಆಗಿತ್ತು. ಈ ಮಂದಿ ಪುರಾವೆಗಳ ಸ್ಪರ್ಧೆಯಲ್ಲಿ ಸೋತಾಗ ಬೈಗುಳ ಮತ್ತು ಆರೋಪಗಳ ಮೊರೆ ಹೋಗುತ್ತಾರೆ. ಈ ರೀತಿ ತಮ್ಮ ವಿರೋಧಿಗಳನ್ನು ಅವಮಾನಿಸುತ್ತೇವೆಂದು ಅವರು ಭಾವಿಸುತ್ತಾರೆ. ಆದರೆ ಈ ರೀತಿಯ ನೀಚ ಅಸ್ತ್ರಗಳನ್ನು ಬಳಸುವವರು ಸ್ವಯಂ ಅವಮಾನಿತರಾಗುತ್ತಾರೆಂಬುದಕ್ಕೆ ಇತಿಹಾಸ ಸಾಕ್ಷಿಯಾಗಿದೆ.

ಮೂಸಾ(ಅ) ಈ ನಿಂದನೆಯ ಮಾತುಗಳನ್ನು ಕೇಳಿ ತನ್ನ ಸಂದೇಶವನ್ನು ಕೈಬಿಡುವವರಾಗಿರಲಿಲ್ಲ. ಅವರು ತಮ್ಮ ಮಾತನ್ನು ಪೂರ್ತಿಗೊಳಿಸಲಿಕ್ಕಾಗಿ ಹೀಗೆ ಹೇಳಿದರು,

"(ಆಗ) ಮೂಸಾ, 'ಪೂರ್ವ-ಪಶ್ಚಿಮ ಮತ್ತು ಅವೆರಡರ ನಡುವೆ ಇರುವ ಎಲ್ಲವುಗಳ ಪ್ರಭು- ನೀವು ಒಂದಿಷ್ಟು ಬುದ್ಧಿಯುಳ್ಳವರಾಗಿದ್ದರೆ!' ಎಂದರು."

(ಪವಿತ್ರ ಕುರ್‌ಆನ್, 26:28)

ಅಂದರೆ ನನ್ನ ಪ್ರಭು ಇಡೀ ಪೂರ್ವ-ಪಶ್ಚಿಮಗಳಲ್ಲಿ ಪ್ರಪಂಚದ ಸಕಲ ವಸ್ತುಗಳ ಪ್ರಭುವಾಗಿದ್ದಾನೆ. ನೀನು ಭೂಮಿಯ ಒಂದು ತುಂಡು ನೆಲದಲ್ಲಿ ಸಿಕ್ಕಿರುವ ಅಧಿಕಾರಕ್ಕಾಗಿ ಅಹಂಕಾರ ಪಡುತ್ತಿರುವೆ. ಆದರೆ ನನ್ನ ಪ್ರಭುವಿನ ಅಧಿಕಾರವು ಪೂರ್ವ-ಪಶ್ಚಿಮಗಳಲ್ಲಿ ಹರಡಿಕೊಂಡಿದೆ. ಅವನ ಮುಂದೆ ನಿನ್ನ ಸ್ಥಾನವೇನು? ನಾನು ಯಾರನ್ನು ಪ್ರಭುವೆಂದು

ನಂಬಬೇಕು. ಆ ಮಹಾ ಪ್ರಭುವನ್ನೋ ಅಥವಾ ಅವನ ಸಾಮ್ರಾಜ್ಯದಲ್ಲಿ ಕ್ರಿಮಿಯಷ್ಟೂ ಬೆಲೆಯಿಲ್ಲದ ನಿನ್ನನ್ನೋ? ನೀವು ನನ್ನನ್ನು ಹುಚ್ಚನೆನ್ನುತ್ತೀರಿ. ಆದರೆ ನನಗೆ ನಿಮ್ಮ ಬುದ್ಧಿಯ ಮೇಲೆ ಕನಿಕರವಾಗುತ್ತಿದೆ. ನಿಜವಾಗಿಯೂ ನೀವು ಬುದ್ಧಿಯುಳ್ಳವರಾಗಿದ್ದರೆ ಇಂತಹ ವಾಸ್ತವಿಕತೆಗಳನ್ನು ನಿರಾಕರಿಸುತ್ತಿರಲಿಲ್ಲ.

ಮೂಸಾರ ಈ ಉತ್ತರ ಕೇಳಿ ಫಿರ್‌ಔನ್ ಕಕ್ಕಾಬಿಕ್ಕಿಯಾದನು. ಹೌದು, ಆಗದಿರುವುದಾದರೂ ಹೇಗೆ? ಮೂಸಾರು ಅವನಿಗೆ ನೀಡಿದ ಪುರಾವೆಯು ಅವರ ಪಿತಾಮಹ ಇಬ್ರಾಹೀಮರು(ಅ) ನಮ್ರೂದನಿಗೆ ನೀಡಿದಂತೆಯೇ ಇತ್ತು. ನಮ್ರೂದ್ ಹೇಳಿದ್ದ, ಪ್ರಭುತ್ವವು ನನ್ನದು, ಸಾಮ್ರಾಜ್ಯವೂ ನನ್ನದು. ಹಾಗಿರುವಾಗ ನನ್ನ ಹೊರತು ಬೇರಾರು ಪ್ರಭು ಆಗಲು ಸಾಧ್ಯ? ಇಬ್ರಾಹೀಮ್(ಅ) ಹೇಳಿದ್ದರು, ನನ್ನ ಪ್ರಭು ಜೀವನ-ಮರಣ ಕೊಡುವವನಾಗಿದ್ದಾನೆ. ಕೂಡಲೇ ನಮ್ರೂದ್ ಹೇಳಿದ, ಅದು ಬಹಳ ಸುಲಭದ ಕೆಲಸ. ಆಗ ಇಬ್ರಾಹೀಮ್(ಅ) ನೀಡಿದ ಉತ್ತರದಿಂದ ಆ ಪ್ರಭುತ್ವವಾದಿಯು ಮುಖ ನೋಡುತ್ತಾ ನಿಂತು ಬಿಟ್ಟ. ಕುರ್‌ಆನ್ ಹೇಳುತ್ತದೆ,

"ಇಬ್‌ರಾಹೀಮರು, 'ಸರಿ, ಹಾಗಾದರೆ ಅಲ್ಲಾಹನು ಸೂರ್ಯನನ್ನು ಪೂರ್ವ ದಿಕ್ಕಿನಿಂದ ಮೂಡಿಸುತ್ತಾನೆ. ನೀನು ಅದನ್ನು ಪಶ್ಚಿಮ ದಿಕ್ಕಿನಿಂದ ಮೂಡಿಸು' ಎಂದರು. ಇದನ್ನು ಕೇಳಿ ಆ ಸತ್ಯನಿಷೇಧಿ ದಿಙ್ಮೂಢನಾದನು." (ಪವಿತ್ರ ಕುರ್‌ಆನ್, 2:258)

ಅನಂತರ ಅವನು ಇಬ್ರಾಹೀಮರನ್ನು ಬೆಂಕಿಗೆಸೆಯುವ ಸನ್ನಾಹ ನಡೆಸಿದ. ಇಲ್ಲಿ ಮೂಸಾ(ಅ) ಇಬ್ರಾಹೀಮರ ವಿಧಾನವನ್ನು ಅನುಸರಿಸುವಾಗ ಫಿರ್‌ಔನನು ನಮ್ರೂದನ ಮಾರ್ಗವನ್ನು ಅನುಸರಿಸದಿರುವುದಾದರೂ ಹೇಗೆ? ವಿಶ್ವಾಸಿಗಳು ಸತ್ಯದ ಕುರಿತು ಅನಾದಿ ಕಾಲದಿಂದಲೂ ಒಂದೇ ಧೋರಣೆಯನ್ನು ತಳೆದಿರುವಾಗ ಮಿಥ್ಯವಾದಿಗಳೂ ಹಾಗೆಯೇ. ಅವರೂ ಸಾವಿರಾರು, ಲಕ್ಷಾವಧಿ ವರ್ಷಗಳಿಂದಲೂ ಪುರಾತನ ಅಜ್ಞಾನಜನ್ಯ ದಾರಿಯಲ್ಲೇ ನಡೆಯುತ್ತಾ ಬಂದಿದ್ದಾರೆ. ಮುಂದೆಯೂ ಅವರು ಹಾಗೆಯೇ ನಡೆಯುತ್ತಿರುವರು.

ಅಜ್ಞಾನಜನ್ಯ ವಿಧಾನ ಏನೆಂದರೆ ಪುರಾವೆಗಳಿಂದ ಉತ್ತರ ನೀಡಲಾಗದ ಸಂದರ್ಭದಲ್ಲಿ ಬೈಗುಳ, ಬೆದರಿಕೆಗಳನ್ನೊಡ್ಡುವುದು, ತರುವಾಯ ತನ್ನ ವಿರೋಧಿಗಳನ್ನು ಸೆರೆಮನೆಗೆ ತಳ್ಳುವುದು, ನೇಣುಗಂಭಕ್ಕೇರಿಸುವುದು ಅಥವಾ ಬೆಂಕಿಗೆಸೆದು ಬಿಡುವುದು.

ಫಿರ್‌ಔನನೂ ತನ್ನ ಆಧ್ಯಾತ್ಮಿಕ ಗುರು ನಮ್ರೂದನನ್ನು ಅನುಸರಿಸುತ್ತಾ ಬೆದರಿಕೆಗಳನ್ನೊಡ್ಡ ತೊಡಗಿದ.

ಫಿರ್‌ಔನನ ಬೆದರಿಕೆ

"ಆಗ ಫಿರ್‌ಔನನು, 'ನೀನು ನನ್ನ ಹೊರತು ಇತರ ಯಾರನ್ನಾದರೂ ಆರಾಧ್ಯನಾಗಿ ಒಪ್ಪಿಕೊಂಡರೆ ನಿನ್ನನ್ನೂ ಸೆರೆಮನೆಗಳಲ್ಲಿ ಕೊಳೆಯುತ್ತಿರುವವರೊಂದಿಗೆ ಸೇರಿಸಿ ಬಿಡುವೆನು' ಎಂದು ಹೇಳಿದನು." (ಪವಿತ್ರ ಕುರ್‌ಆನ್, 26:29)

ಮೂಸಾರಿಗೆ ಫಿರ್‌ಔನನು ಈಗ ಕೆರಳಿದ್ದಾನೆ, ಆತ ಹಠಮಾರಿತನ ಪ್ರದರ್ಶಿಸುತ್ತಿದ್ದಾನೆ, ಇನ್ನು ಯಾವುದೇ ಪುರಾವೆಯು ಅವನ ಮೇಲೆ ಪರಿಣಾಮ ಬೀರದು ಎಂದು ಮನವರಿಕೆಯಾಯಿತು. ಅವರು ಇನ್ನೊಂದು ವಿಧಾನವನ್ನು ಅನುಸರಿಸುವ ತೀರ್ಮಾನಕ್ಕೆ ಬಂದರು. ಇನ್ನು ಅವನು ನಿರಾಕರಿಸಲು ಸಾಧ್ಯವೇ ಇಲ್ಲದಂತಹ ಸ್ಪಷ್ಟ ಪ್ರಾಯೋಗಿಕ ಪುರಾವೆ 'ಆಯತುಲ್ ಕುಬ್ರಾ' (ದೊಡ್ಡ ದೃಷ್ಟಾಂತ) ತೋರಿಸುವುದು. ಹಾಗೆ ಅವರು ಹೇಳಿದರು,

"ಆಗ ಮೂಸಾ, 'ನಾನು ನಿನ್ನ ಮುಂದೆ ಒಂದು ಸುಸ್ಪಷ್ಟ ವಸ್ತುವನ್ನು ತಂದರೂ?' (ನಿರಾಕರಿಸುವೆಯಾ) ಎಂದು ಕೇಳಿದರು." (ಪವಿತ್ರ ಕುರ್‌ಆನ್, 26:30)

ಈಗ ಮೂಸಾರಲ್ಲಿ ಯಾವ ಬದಲಾವಣೆಯುಂಟಾಗಿದೆ ಎಂದು ಫಿರ್‌ಔನನಿಗೆ ತಿಳಿದೇ ಇರಲಿಲ್ಲ. ನಮ್ಮ ಆಶ್ರಯದಲ್ಲೇ ಬೆಳೆದವನೊಬ್ಬನು ನಮ್ಮ ವಿರುದ್ಧ ನಿಂತಿದ್ದಾನೆ ಎಂದೇ ಅವನು ಈ ವರೆಗೂ ಭಾವಿಸಿದ್ದ. ಇದು ಕೇವಲ ಫಿರ್‌ಔನ್ ಒಬ್ಬನಿಗೆ ಮಾತ್ರ ಸೀಮಿತವಾದ ವಿಚಾರವಲ್ಲ, ಮಿಥ್ಯಶಕ್ತಿಗಳು ಯಾವಾಗಲೂ ಸತ್ಯದ ವಾಹಕರ ಬಗ್ಗೆ ತಪ್ಪು ಲೆಕ್ಕಾಚಾರವನ್ನೇ ಮಾಡುತ್ತಾರೆ. ಮೂಸಾರ ಹಸ್ತ ಮತ್ತು ಅವರ ಲಾಠಿಯಲ್ಲಿ ಎಂತೆಂತಹ ಚಮತ್ಕಾರಗಳು ಅಡಗಿದೆಯೆಂಬುದು ಪಾಪ, ಅವನಿಗೇನು ಗೊತ್ತು? ಆತ ದೊಡ್ಡ ಪಂಥಾಹ್ವಾನದ ಶೈಲಿಯಲ್ಲಿ ಹೇಳಿದ,

"ಆಗ ಫಿರ್‌ಔನನು, 'ಸರಿ, ನೀನು ಸತ್ಯವಾದಿಯಾಗಿದ್ದರೆ ಅದನ್ನು ಮುಂದೆ ತಾ' ಎಂದನು." (ಪವಿತ್ರ ಕುರ್‌ಆನ್, 26:31)

"ಫಿರ್‌ಔನನು ಹೇಳಿದನು- ನೀನು ದೃಷ್ಟಾಂತವೇನಾದರೂ ತಂದಿದ್ದರೆ ಹಾಗೂ ನೀನು ಸತ್ಯವಂತನಾಗಿದ್ದರೆ ಅದನ್ನು ಮುಂದಿಡು." (ಪವಿತ್ರ ಕುರ್‌ಆನ್, 7:106)

ಆಸ್ಥಾನದಲ್ಲಿ ಪವಾಡಗಳ ಪ್ರದರ್ಶನ

ಮೂಸಾ(ಅ) ಅವನ ಪಂಥಾಹ್ವಾನವನ್ನು ಕೂಡಲೇ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಅಲ್ಲಾಹನು ಅವರಿಗೆ ವಿಶೇಷವಾಗಿ ದಯಪಾಲಿಸಿದ ಆ ಎರಡೂ ಪವಾಡಗಳನ್ನು ತೋರಿಸಿದರು. ಆ ಪವಾಡಗಳು ಯಾವುದು? ಪವಿತ್ರ ಕುರ್‌ಆನ್ ಅದನ್ನು ಈ ರೀತಿ ವಿವರಿಸುತ್ತದೆ,

"ಮೂಸಾ ತಮ್ಮ ಲಾಠಿಯನ್ನು ಎಸೆದರು ಮತ್ತು ಅದು ಹಠಾತ್ತನೆ ಒಂದು ಪ್ರತ್ಯಕ್ಷ ಹೆಬ್ಬಾವಾಗಿತ್ತು. ತರುವಾಯ ಅವರು ತಮ್ಮ ಹಸ್ತವನ್ನು (ಬಗಲಿನಿಂದ) ಹೊರಕ್ಕೆಳೆದರು ಮತ್ತು ಅದು ಪ್ರೇಕ್ಷಕರ ಮುಂದೆ ಪ್ರಜ್ವಲಿಸುತ್ತಿತ್ತು." (ಪವಿತ್ರ ಕುರ್‌ಆನ್, 26:32-33)

"ಮೂಸಾ ತಮ್ಮ ಲಾಠಿಯನ್ನು ಎಸೆದರು. ಹಠಾತ್ತನೆ ಅದೊಂದು ಜೀವಂತ ಹೆಬ್ಬಾವಾಗಿತ್ತು. ಅವರು ತಮ್ಮ ಜೇಬಿನಿಂದ ಕೈ ಹೊರ ತೆಗೆದರು ಮತ್ತು ಅದು ಪ್ರೇಕ್ಷಕರ ಮುಂದೆ ಜಗಜಗಿಸುತ್ತಿತ್ತು." (ಪವಿತ್ರ ಕುರ್‌ಆನ್, 7:107-108)

ತನ್ನ ತುಂಬಿದ ಸಭೆಯಲ್ಲಿ ಹೆಬ್ಬಾವೊಂದು ಆರ್ಭಟಿಸುತ್ತಾ ಬರುವುದನ್ನು ಮತ್ತು ಸೂರ್ಯನಂತೆ ಕೈ ಹೊಳೆಯುತ್ತಿರುವುದನ್ನು ಕಂಡಾಗ ಫಿರ್‌ಔನ್ ಭಯಭೀತನಾದ. ಆತ ಅದೇ ಸ್ಥಿತಿಯಲ್ಲಿ ತನ್ನ ಆಸ್ಥಾನಿಕರನ್ನು ಕರೆದು ಹೇಳಿದ,

"ಫಿರ್‌ಔನನು ತನ್ನ ಸುತ್ತಮುತ್ತಲಿದ್ದ ಸರದಾರರೊಡನೆ, 'ಈತನು ಖಂಡಿತವಾಗಿಯೂ ಒಬ್ಬ ನುರಿತ ಜಾದೂಗಾರ. ತನ್ನ ಜಾದುವಿನ ಬಲದಿಂದ ನಿಮ್ಮನ್ನು ನಿಮ್ಮ ದೇಶದಿಂದ ಹೊರಗಟ್ಟಬಯಸುತ್ತಾನೆ. ಈಗ ನಿಮ್ಮದೇನು ಅಪ್ಪಣೆ?' ಎಂದನು."

(ಪವಿತ್ರ ಕುರ್‌ಆನ್, 26:34-35)

ಸತ್ಯದ ಚಮತ್ಕಾರವೂ ಎಷ್ಟೊಂದು ವಿಚಿತ್ರ! ಈಗ ತಾನೇ ತನ್ನ ದೇವತ್ವವನ್ನು ಸಾರುತ್ತಿದ್ದ, ತನ್ನ ಅಭಿಸಂಬೋಧಿತನಿಗೆ ಜೈಲು ಶಿಕ್ಷೆಯ ಬೆದರಿಕೆ ಹಾಕುತ್ತಿದ್ದ, ಅವರನ್ನು ಹುಚ್ಚನೆನ್ನುತ್ತಿದ್ದ ಆ ಮಹಾನುಭಾವನಿಗೆ ಮೂಸಾರ ಲಾಠಿಯ ಒಂದೇ ಪೆಟ್ಟಿನಿಂದ ತಲೆ ತಿರುಗಿಬಿಟ್ಟಿತು. ಈಗ ತನ್ನ ಸರದಾರರೊಂದಿಗೆ ಈ ಗಂಡಾಂತರದಿಂದ ಪಾರಾಗುವುದು ಹೇಗೆಂದು ಸಮಾಲೋಚನೆ ಮಾಡತೊಡಗಿದ.

ಓರ್ವ ಸಾಮಾನ್ಯ ಬುದ್ಧಿಯ ವ್ಯಕ್ತಿಯ ಮಟ್ಟಿಗೆ ಮೂಸಾ(ಅ) ಫಿರ್‌ಔನನ ತುಂಬಿದ ಸಭೆಯಲ್ಲಿ ತೋರಿಸಿದ ಪವಾಡಗಳು ಸಾಕಾಗಿತ್ತು. ಆದರೆ ಓರ್ವ ಹಠಮಾರಿ, ಉದ್ಧಟ ವ್ಯಕ್ತಿಗೆ ಎಷ್ಟೇ ಸ್ಪಷ್ಟ ಪುರಾವೆ ತೋರಿಸಿದರೂ ದೃಷ್ಟಾಂತ ಕಂಡರೂ ಅದು ಅವನ ಮೇಲೆ ಪ್ರಭಾವ ಬೀರುವುದಿಲ್ಲ. ಇದೇ ಅವಸ್ಥೆ ಫಿರ್‌ಔನ್‌ನದ್ದೂ ಆಗಿತ್ತು. ಅವನ ಈ ಮನೋವೃತ್ತಿಯ ಚಿತ್ರಣವನ್ನು ಪವಿತ್ರ ಕುರ್‌ಆನ್ ಈ ರೀತಿ ವಿವರಿಸಿದೆ,

"ನಾವು ಫಿರ್‌ಔನನಿಗೆ ನಮ್ಮ ಎಲ್ಲ ನಿದರ್ಶನಗಳನ್ನೂ ತೋರಿಸಿದೆವು. ಆದರೆ ಅವನು ಸುಳ್ಳಾಗಿಸುತ್ತಲೇ ಹೋದನು ಮತ್ತು ನಿರಾಕರಿಸಿದನು." (ಪವಿತ್ರ ಕುರ್‌ಆನ್, 20:56)

ಈ ಸೂಕ್ತದಲ್ಲಿ ಫಿರ್‌ಔನನಂತಹವರ ನೈಜ ಕೊಂಕು ಮತ್ತು ಮೂಲಭೂತ ಕೆಡುಕನ್ನು ಬೆಟ್ಟು ಮಾಡಲಾಗಿದೆ. ಅಧಿಕಾರ ಮದದಿಂದ ಪ್ರಮತ್ತನಾಗಿರುವವನು, ಅವನ ಕೈಯಲ್ಲಿ ಸರ್ವ ಅಧಿಕಾರಗಳಿರುವಾಗ, ಅವನ ಎದುರು ಪಕ್ಷದವನು ಬಾಹ್ಯ ನೋಟಕ್ಕೆ ದುರ್ಬಲ, ಅಸಹಾಯಕನಾಗಿದ್ದರೆ, ಅಂತಹವನ ಮುಂದೆ ಪುರಾವೆಗಳ ರಾಶಿಯನ್ನೇ ಹಾಕಿ ಅವನ ಮನಪರಿವರ್ತನೆ ಮಾಡಲು ಪ್ರಯತ್ನಿಸಿದರೂ ಯಾವುದೇ ಮಾತು ಅವನನ್ನು ಪ್ರಭಾವಿತಗೊಳಿಸಲಾರದು. ಬದಲಾಗಿ ತೈಲಕ್ಕೆ ಪೆಟ್ರೋಲು ಸುರಿದಂತೆ ಅವನ ಕೋಪ ಇನ್ನಷ್ಟು ಪ್ರಜ್ವಲಿಸುತ್ತದೆ. ಮೂಸಾ(ಅ) ಫಿರ್‌ಔನನಿಗೆ ಮನಮುಟ್ಟುವ ಶೈಲಿಯಲ್ಲಿ ದೃಷ್ಟಾಂತಗಳು, ಲಾಠಿ ಮತ್ತು ಪ್ರಕಾಶ ಹಸ್ತಗಳಂತಹ ಪುರಾವೆಗಳು ಹಾಗೂ ಅವನ ಸಂಶಯಗಳಿಗೆ ಸೂಕ್ತ ಉತ್ತರದಿಂದ ಸತ್ಯವನ್ನು ಮನವರಿಕೆ ಮಾಡಿಸಲು ಪ್ರಯತ್ನಿಸಿದರು. ಆದರೆ ಚಿಕಿತ್ಸೆ ಹೆಚ್ಚಿದಂತೆ ರೋಗವೂ ಉಲ್ಬಣಗೊಳ್ಳುತ್ತಾ ಹೋಯಿತು.

ಫಿರ್‌ಔನನ ಆರೋಪಗಳು

ದೃಷ್ಟಾಂತಗಳು ನೋಡಿದಂತೆಲ್ಲ ಅವನ ಉದ್ಧಟತನ ಹೆಚ್ಚುತ್ತಲೇ ಸಾಗಿತು. ತನ್ನ ಅಪಪ್ರಚಾರದ ಬತ್ತಳಿಕೆಯಿಂದ ಸಕಲ ಅಸ್ತ್ರಗಳನ್ನೂ ಹೊರ ತೆಗೆದು ಹೇಳತೊಡಗಿದ.

ಈ ವ್ಯಕ್ತಿ ಖಂಡಿತ ಓರ್ವ ನುರಿತ ಜಾದೂಗಾರ. ತನ್ನ ಜಾದೂವಿನ ಬಲದಿಂದ ನಿಮ್ಮನ್ನು ನಿಮ್ಮ ನಾಡಿನಿಂದ ಹೊರಹಾಕ ಬಯಸಿದ್ದಾನೆ. ಪವಿತ್ರ ಕುರ್‌ಆನ್ ಅವನ ಈ ಮಾತನ್ನು ಈ ರೀತಿ ಹೇಳಿದೆ,

"ಅವನು ಹೀಗೆಂದನು- ಓ ಮೂಸಾ, ನೀನು ನಿನ್ನ ಜಾದೂವಿನ ಬಲದಿಂದ ನಮ್ಮನ್ನು ನಮ್ಮ ದೇಶದಿಂದ ಹೊರಕ್ಕಟ್ಟಲಿಕ್ಕಾಗಿ ಬಂದಿರುವೆಯಾ?" (ಪವಿತ್ರ ಕುರ್‌ಆನ್, 20:57)

ಈ ಒಂದು ವಾಕ್ಯದಲ್ಲಿ ಅವನು ತನ್ನ ಕುತಂತ್ರದ ಎಲ್ಲ ಅಸ್ತ್ರಗಳನ್ನೂ ಬಹಳ ಚಾಣಾಕ್ಷತನದಲ್ಲಿ ಪ್ರಯೋಗಿಸಿದ.

ಅವನು ಮೂಸಾರ ಮೇಲೆ, ನೀನು ಪ್ರವಾದಿಯಲ್ಲ, ಕೇವಲ ಓರ್ವ ಜಾದೂಗಾರ ಎಂದು ಆರೋಪ ಹೊರಿಸಿ ಅವರನ್ನು ಸುಳ್ಳುಗಾರನೆಂದು ಸಾಬೀತುಪಡಿಸಲು ಪ್ರಯತ್ನಿಸಿದನು. ಮಾತ್ರವಲ್ಲ, ಮೂಸಾರ ಸತ್ಯಪರತೆ, ಧೈರ್ಯ-ಸ್ಥೈರ್ಯ ಮತ್ತು ದಿಟ್ಟತನದಿಂದಾಗಿ ಮೂಡಿದ್ದ ನೈತಿಕ ಪ್ರಭಾವವನ್ನು ಅಳಿಸಿ ಹಾಕಲೂ ಪ್ರಯತ್ನಿಸಿದನು.

ಇನ್ನೊಂದೆಡೆ, ಈ ಎಲ್ಲ ತಂತ್ರಗಾರಿಕೆಯು ಅಧಿಕಾರವನ್ನು ಗಳಿಸುವ ಹುನ್ನಾರ ವಾಗಿದ್ದು ಈ ಜಾದೂವಿನ ಮರೆಯಲ್ಲಿ ಸ್ವಯಂ ಸಾಮ್ರಾಟನಾಗುವ ಅಭಿಲಾಷೆ ಅಡಗಿದೆ ಎಂಬ ಆರೋಪವನ್ನೂ ಹೊರಿಸಿದನು.

ಮತ್ತೊಂದೆಡೆ, ತನ್ನ ಆಸ್ಥಾನಿಕರು ಮತ್ತು ಸ್ವಜನಾಂಗದಲ್ಲಿ ಅಪಾಯದ ಪ್ರಜ್ಞೆ ಮತ್ತು ಭೀತಿ ಹುಟ್ಟಿಸಲು ಪ್ರಯತ್ನಿಸಿದನು. ಈ ವ್ಯಕ್ತಿ ಪ್ರಬಲನಾದರೆ ಮತ್ತೆ ನಮ್ಮ ಅಧಿಕಾರ ಹೋದಂತೆ. ಆದ್ದರಿಂದ ನೀವು ಮತ್ತು ನಿಮ್ಮ ಜನಾಂಗದವರ ಅಧಿಕಾರ ಉಳಿಯ ಬೇಕಾದರೆ ಮೊದಲು ಈ ಅಪಾಯವನ್ನು ನಿರ್ಮೂಲನ ಮಾಡಿರಿ ಎಂದು ಬಿಂಬಿಸಿದನು.

ಇದಕ್ಕಿಂತ ಮುಂಚೆ ಅವನು ತನ್ನ ಆಸ್ಥಾನಿಕರ ಮುಂದೆ, ಈ ವ್ಯಕ್ತಿ ನಿಮ್ಮ ತಂದೆ-ತಾತಂದಿರು ಮತ್ತು ಹಿರಿಯರನ್ನು ಪಥಭ್ರಷ್ಟರೆಂದು ಹೇಳುತ್ತಾನೆಂದು ಹೇಳಿ ಅಜ್ಞಾನಜನ್ಯ ಅಭಿಮಾನವನ್ನು ಮೂಡಿಸಲು ಪ್ರಯತ್ನಿಸಿದ್ದನು. ಇಲ್ಲೀಗ, ಯೂಸುಫ್‌ರವರ(ಅ) ಬಳಿಕ ಇನ್ನೊಮ್ಮೆ ಈ ಕಿಬ್ತಿಗಳ ಆಡಳಿತವನ್ನು ಕೊನೆಗೊಳಿಸಿ ಬನೀ ಇಸ್ರಾಈಲರ ಸರಕಾರವನ್ನು ಸ್ಥಾಪಿಸುವ ಹುನ್ನಾರ ನಡೆಯುತ್ತಿದೆಯೆಂದು ಹೇಳಿ ಜನಾಂಗೀಯ ಪಕ್ಷಪಾತವನ್ನು ಬಡಿದೆಬ್ಬಿಸುವ ಪ್ರಯತ್ನ ಮಾಡುತ್ತಿದ್ದಾನೆ.

ಆಸ್ಥಾನಿಕರ ವಿಧೇಯತೆ

ಈ ಸಂದರ್ಭದಲ್ಲಿ ಚಕ್ರವರ್ತಿಯ ಚೇಲಾಗಳಾಗಿರುವ ಆಸ್ಥಾನಿಕರು, ತಮ್ಮ ಯಜಮಾನನನ್ನು ಸಂತೋಷ ಪಡಿಸಲಿಕ್ಕಾಗಿ ಅವನೊಂದಿಗೆ ದನಿಗೂಡಿಸಿದರು. ಅವರು ಒಕ್ಕೊರಳಿನಿಂದ ಹೇಳಿದರು,

"ಈ ಕಾರಣಕ್ಕಾಗಿ ಫಿರ್‌ಔನನ ಸರದಾರರು ಪರಸ್ಪರ ಹೇಳಿದರು- ಖಂಡಿತವಾಗಿಯೂ ಇವನೊಬ್ಬ ನಿಪುಣ ಮಾಟಗಾರನಾಗಿರುತ್ತಾನೆ. ನಿಮ್ಮನ್ನು ನಿಮ್ಮ ಭೂಮಿಯಿಂದ ಹೊರ ಹಾಕಲಿಚ್ಛಿಸುತ್ತಾನೆ. ಈಗ ನೀವೇನು ಹೇಳುತ್ತೀರಿ?" (ಪವಿತ್ರ ಕುರ್‌ಆನ್, 7:109-110)

ಸ್ಪಷ್ಟ ಪವಾಡಗಳನ್ನು ಕಂಡ ಬಳಿಕವೂ ಫಿರ್‌ಔನ್ ಮತ್ತವನ ಆಸ್ಥಾನಿಕರು ತೋರಿದ ಉದ್ಧಟತನವನ್ನು ಕುರ್‌ಆನ್ ಹೀಗೆ ವಿವರಿಸಿದೆ,

"ಆ ಪ್ರಕಾರ ಅವರು ನಮ್ಮ ಕಡೆಯಿಂದ ಸತ್ಯವು ಅವರ ಮುಂದೆ ಬಂದಾಗ ಇದು ಸುವ್ಯಕ್ತ ಮಾಟವೆಂದು ಬಿಟ್ಟರು." (ಪವಿತ್ರ ಕುರ್‌ಆನ್, 10:76)

ಫಿರ್‌ಔನ್ ಮತ್ತು ಆಸ್ಥಾನಿಕರು ಕೇವಲ ಉದ್ಧಟತನ ಮತ್ತು ಹಠಮಾರಿತನವನ್ನು ಪ್ರದರ್ಶಿಸಿದ್ದಲ್ಲ, ಬದಲಾಗಿ ಬಹಿರಂಗವಾಗಿ ಗೇಲಿ ಮಾಡತೊಡಗಿದರು. ತುಂಬಿದ ಆಸ್ಥಾನದಲ್ಲಿ ಅವರು ಮೂಸಾರನ್ನು ಈ ರೀತಿ ಗೇಲಿ ಮಾಡಿದರು,

"ತರುವಾಯ ಮೂಸಾ ನಮ್ಮ ಸುವ್ಯಕ್ತ ನಿದರ್ಶನಗಳೊಂದಿಗೆ ಅವರ ಬಳಿಗೆ ತಲಪಿದರು. ಆಗ ಅವರು, 'ಇದು ಕೃತಕ ಜಾದುವೇ ಹೊರತು ಬೇರೇನೂ ಅಲ್ಲ ಮತ್ತು ನಾವು ಇಂತಹ ಮಾತುಗಳನ್ನು ನಮ್ಮ ಪೂರ್ವಿಕರ ಕಾಲದಲ್ಲಿ ಎಂದೂ ಕೇಳಿರಲಿಲ್ಲ' ಎಂದರು. ಮೂಸಾ ಹೀಗೆಂದರು, 'ನನ್ನ ಪ್ರಭು ತನ್ನ ವತಿಯಿಂದ ಮಾರ್ಗದರ್ಶನ ಪಡೆದು ಬಂದಿರುವವನನ್ನು ಚೆನ್ನಾಗಿ ಬಲ್ಲನು. ಯಾರ ಅಂತಿಮ ಪರಿಣಾಮವು ಉತ್ತಮವಾಗ ಬೇಕಾಗಿದೆ ಎಂಬುದನ್ನೂ ಅವನೇ ಚೆನ್ನಾಗಿ ತಿಳಿದಿರುವನು. ವಾಸ್ತವದಲ್ಲಿ ಅಕ್ರಮಿಗಳು ಎಂದೂ ಯಶಸ್ವಿಯಾಗುವುದಿಲ್ಲ.' ಫಿರ್‌ಔನನು, 'ಆಸ್ಥಾನಿಕರೇ ನನ್ನ ಹೊರತು ನಿಮಗೆ ಇನ್ನಾವ ದೇವನನ್ನೂ ನಾನರಿಯೆನು. ಹಾಮಾನ್! ಇಟ್ಟಿಗೆಗಳನ್ನು ಸುಟ್ಟು ನನಗಾಗಿ ಒಂದು ಎತ್ತರವಾದ ಕಟ್ಟಡವನ್ನು ನಿರ್ಮಿಸು. ಬಹುಶಃ ಅದರ ಮೇಲೇರಿದರೆ ನನಗೆ ಮೂಸಾರ ದೇವರು ಕಾಣಸಲೂಬಹುದು, ನಾನಂತೂ ಇವನನ್ನು ಸುಳ್ಳುಗಾರನೆಂದು ಭಾವಿಸುತ್ತೇನೆ ಎಂದನು." (ಪವಿತ್ರ ಕುರ್‌ಆನ್, 28:36-38)

ಅಂದರೆ ಮೂಸಾ(ಅ) ಅವನಿಗೆ ತಮ್ಮ ಪವಾಡಗಳನ್ನು- ಲಾಠಿ ಮತ್ತು ಪ್ರಕಾಶಮಯ ಹಸ್ತ- ತೋರಿಸಿದಾಗ ಮೊದಲು ಅವನು ಅದನ್ನು ಜಾದೂ ಎಂದು ಹೇಳಿ ಕಡೆಗಣಿಸಲು ಪ್ರಯತ್ನಿಸಿದನು. ತರುವಾಯ ಅವರ ಬಾಯಿಂದ ತನ್ನ ಪ್ರಭುತ್ವಕ್ಕೆ ಪಂಥಾಹ್ವಾನ ಒಡ್ಡುವುದನ್ನು ಕೇಳಿದಾಗ ಅದನ್ನು ತಿರಸ್ಕರಿಸುತ್ತಾ, ಈ ಜಗತ್ತಿಗೆ ಹೊಸ ಪ್ರಭುವನ್ನು ಎಲ್ಲಿಂದ ಹುಡುಕಿ ತಂದಿರುವೆಯೆಂದು ಹೇಳುತ್ತಾನೆ. ಈ ದೇಶದ ನಿರಂಕುಶ ಪ್ರಭು, ಪರಮಾಧಿಕಾರಿ

ಸಾರ್ವಭೌಮ ಮತ್ತು ಕಾನೂನು ರಚಿಸುವವ ನಾನಾಗಿರುವಾಗ ಇಲ್ಲಿ ನನ್ನ ಆಜ್ಞೆ, ಕಾನೂನುಗಳಲ್ಲದೆ ಇನ್ನಾರದು ನಡೆಯಲು ಸಾಧ್ಯ. ನಾನಂತೂ ಇಲ್ಲಿ ಪೀಳಿಗೆಗಳಿಂದಲೂ ಆಡಳಿತ ನಡೆಸುತ್ತಾ ಇದ್ದೇನೆ. ಈ ದೇಶದ ಜನತೆಗೆ ಕಾನೂನು ನೀಡುವವನು ಮತ್ತು ಅವರನ್ನು ತನ್ನಿಚ್ಛೆಯಂತೆ ನಡೆಸಲು ನಾನಲ್ಲದೆ ಬೇರೆ ಯಾರಿದ್ದಾರೆ? ಹಾಗಿರುವಾಗ ಇದೆಂತಹ ಹುಚ್ಚು ಮಾತುಗಳು ಎಂದು ಅವನು ಬಡಬಡಿಸುತ್ತಾನೆ.

ಮೂಸಾ(ಅ) ಉತ್ತರಿಸುತ್ತಾರೆ- ನನ್ನನ್ನು ಸಂದೇಶವಾಹಕನಾಗಿ ಯಾರು ಕಳಿಸಿರುವನೋ ಅವನೇ ಸನ್ಮಾರ್ಗದಲ್ಲಿ ಯಾರಿದ್ದಾರೆ ಮತ್ತು ಯಾರ ಅಂತಿಮ ಪರಿಣಾಮ ಉತ್ತಮ ವಾಗಿರುವುದೆಂಬುದನ್ನು ಚೆನ್ನಾಗಿ ಬಲ್ಲನು. ನಿನ್ನ ಈ ಅಕ್ರಮ, ಅಹಂಕಾರದ ಮಾರ್ಗವನ್ನು ಬಿಟ್ಟು ಬಿಡು. ಇದು ಯಶಸ್ಸಿನ ಮಾರ್ಗವಲ್ಲ, ಇದರಲ್ಲಿ ನಡೆದರೆ ವಿನಾಶವಲ್ಲದೆ ಇನ್ನೇನೂ ದಕ್ಕದು.

ಫಿರ್‌ಔನನು ಯಾವ ನೆಲೆಯಲ್ಲೂ ನಿಲ್ಲುವವನಾಗಿರಲಿಲ್ಲ, ಅವನು ಮುಂದು ವರಿದನು. ಈಗ ಅವನು ಮೂಸಾರನ್ನು ಬಿಟ್ಟು ಅವರ ದೇವನನ್ನು ಅಪಹಾಸ್ಯ ಮಾಡ ತೊಡಗಿದ. ಬುಡಕ್ಕೇ ಪೆಟ್ಟು ಕೊಡುವುದು ಅವನ ತಂತ್ರವಾಗಿತ್ತು.

ಅವನು ಹೇಳಿದನು, ಓ ಹಾಮಾನ್! ಒಂದು ಉನ್ನತ ಕಟ್ಟಡ ಅಥವಾ ಮಿನಾರ ನಿರ್ಮಿಸು. ಈ ಮೂಸಾನ ದೇವನು ಎಲ್ಲಿದ್ದಾನೆಂದು ನೋಡುತ್ತೇನೆ. ಈತ ಅಪ್ಪಟ ಸುಳ್ಳುಗಾರ. ಇವನನ್ನು ಮನೆಗೆ ಕಳಿಸಿ ಬಿಡುತ್ತೇನೆ.

ಆ ಮೂರ್ಖನು, ಈ ಮಾರ್ಗದರ್ಶನವು ಎಲ್ಲೋ ಮೇಲಿನಿಂದಲೇ ಇಳಿಯುತ್ತಿರ ಬಹುದೆಂದು ಭಾವಿಸಿದ್ದನು. ಈ ಮನೋಭಾವವು ಆ ಫಿರ್‌ಔನನಿಗೆ ಮಾತ್ರ ಸೀಮಿತ ವಾಗಿರಲಿಲ್ಲ, ಎಲ್ಲ ಕಾಲದ ಫಿರ್‌ಔನರು ಅಲ್ಲಾಹನ ಕುರಿತು ಇಂತಹದೇ ಮನೋವೃತ್ತಿ ಯನ್ನು ಪ್ರದರ್ಶಿಸುತ್ತಾರೆ. ಇಪ್ಪತ್ತನೆಯ ಶತಮಾನದ ಫಿರ್‌ಔನ್ ರಷ್ಯಾದ ಮಾಜಿ ಪ್ರಧಾನಿ (ಕ್ರುಶ್ಚೇವ್) ಇಂತಹದ್ದೇ ಮೂರ್ಖತನದ ಹೇಳಿಕೆ ಕೊಟ್ಟಿದ್ದ. ತನ್ನ ಸ್ಪುಟ್ನಿಕ್ ಅಂತರಿಕ್ಷದಲ್ಲಿ ಹಾರಾಟ ನಡೆಸಿ ಭೂಮಿಗೆ ಮರಳಿದಾಗ ನನಗೆಲ್ಲೂ ದೇವನು ಕಾಣಲಿಲ್ಲ ಎಂದು ಆತ ಹೇಳಿದ್ದ. ನೀನು ಅಂತರಿಕ್ಷದಲ್ಲಿ ಮತ್ತು ಆಕಾಶದಲ್ಲಿ ಹುಡುಕಾಡುತ್ತಿರುವ ದೇವನು ನಿನ್ನಲ್ಲೇ ಇದ್ದಾನೆಂದು ಆ ಮೂರ್ಖನಿಗೇನು ಗೊತ್ತು? ಆಕಾಶ-ಭೂಮಿಗಳನ್ನು ನೋಡುವುದಂತಿರಲಿ. ನಿನಗೆ ಕಣ್ಣುಗಳಿದ್ದರೆ ಸ್ವಲ್ಪ ನಿನ್ನ ಮನಸ್ಸನ್ನೇ ಇಣುಕಿ ನೋಡು. ಆದರೆ ದೃಷ್ಟಿಯನ್ನೇ ಕಳಕೊಂಡವನಿಗೆ ಯಾರು ತೋರಿಸುವುದು? ಹೌದು, ಅವನನ್ನು ಪ್ರಧಾನಿ ಪದದಿಂದ ಕಿತ್ತೆಸೆದಾಗ ಅವನಿಗೆ ದೇವನು ಕಾಣಿಸಿರಬಹುದು. ಏಕೆಂದರೆ ಆತ ಅನಂತರ ಅರಳಲೇ ಇಲ್ಲ.

ಫಿರ್‌ಔನ್ ಮತ್ತವನ ಪರಿವಾರದವರು ಸ್ಪಷ್ಟ ಮೋಸಗಾರಿಕೆ ಪ್ರದರ್ಶಿಸುವುದನ್ನು ಮತ್ತು ಅವರದೇ ಬೇಡಿಕೆಗನುಸಾರ ಸ್ಪಷ್ಟ ಪವಾಡಗಳನ್ನು ತೋರಿಸುವುದನ್ನು ಜಾದೂ

ಎಂದು ಹೇಳಿ ಸತ್ಯದಿಂದ ನುಣುಚಿಕೊಳ್ಳುವುದನ್ನೂ ತನ್ನ ಸಂದೇಶವನ್ನು ಸಂದೇಹಾಸ್ಪದ ಗೊಳಿಸಿರುವುದನ್ನೂ ಕಂಡಾಗ ಮೂಸಾ ಮಗದೊಮ್ಮೆ ದಿಟ್ಟ ಉತ್ತರ ನೀಡಿದರು.

'ಮೂಸಾ'ರು ಹೀಗೆಂದರು, **"ನಿಮ್ಮ ಮುಂದೆ ಸತ್ಯವು ಪ್ರತ್ಯಕ್ಷಗೊಂಡಾಗ ಅದನ್ನು ಹೀಗೆನ್ನುತ್ತೀರಾ? ಇದು ಮಾಟವೇ? ವಸ್ತುತಃ ಮಾಟಗಾರರು ಯಶಸ್ವಿಗಳಾಗುವುದಿಲ್ಲ.**

(ಪವಿತ್ರ ಕುರ್‌ಆನ್, 10:77)

ಅಂದರೆ ಮೊದಲು ನನ್ನ ನೇಮಕದ ಕುರಿತು ನೀನೇ ದಾಖಲೆ ಕೇಳಿದೆ. ಅದಕ್ಕೆ ಉತ್ತರವಾಗಿ ಸ್ಪಷ್ಟ ಪವಾಡಗಳನ್ನು ತೋರಿಸಿದಾಗ ಅದನ್ನು ಜಾದೂ ಎಂದು ಹೇಳಿ ಹಾರಿಸಿ ಬಿಡುವೆಯಾ? ಜಾದೂಗಾರರು ನಾನು ಅನುಸರಿಸಿದ ವಿಧಾನವನ್ನೇ ಅನುಸರಿಸುತ್ತಾರೆಯೇ? ಒಬ್ಬ ಅಸಹಾಯಕ ಮನುಷ್ಯ ಓರ್ವ ನಿರಂಕುಶ ಆಡಳಿತಗಾರನ ಮುಂದೆ ಧೈರ್ಯವಾಗಿ ಬಂದು ಯಾವುದೇ ಪ್ರತಿಫಲ ಅಥವಾ ಮಜೂರಿ ಕೇಳದೆ ತನ್ನ ಸಂದೇಶವನ್ನಿಡುತ್ತಾನೆ. ಸನ್ಮಾರ್ಗದ ಸಂದೇಶ. ಅಷ್ಟೇ ಅಲ್ಲ, ಯಾವುದೇ ಜಾದೂಗಾರನಿಗೆ ಸಾಧ್ಯವಿಲ್ಲದಂತಹ ಸ್ಪಷ್ಟ ದೃಷ್ಟಾಂತಗಳನ್ನು ತೋರಿಸುತ್ತಾನೆ. ಇಂತಹ ವ್ಯಕ್ತಿ ಜಾದೂಗಾರನಾಗಿರಲು ಸಾಧ್ಯವೇ? ಜಾದೂಗಾರರು ಯಾವುದೇ ಆಸ್ಥಾನದಲ್ಲಿ ತಮ್ಮ ಚಮತ್ಕಾರಗಳನ್ನು ತೋರಿಸಬಯಸು ವುದಾದರೆ ಮೊದಲು ಅನುಮತಿ ಪಡೆಯುತ್ತಾರೆ. ಅದಕ್ಕೆ ಬಹಳ ಜಾಗ್ರತೆ ವಹಿಸುತ್ತಾರೆ. ಅನಂತರ ತಮ್ಮ ಕಲೆಯ ಪ್ರದರ್ಶನ ಮಾಡಿ ಬಹುಮಾನವನ್ನು ಕೇಳುತ್ತಾರೆ. ನಾನೇನಾದರೂ ಅಂತಹ ಕೃತ್ಯ ಮಾಡಿರುವೆನೇ? ವಾಸ್ತವದಲ್ಲಿ ಜಾದೂಗಾರರು ಕೇವಲ ಚಪ್ಪಾಳೆ, ಬಹುಮಾನ ಗಳನ್ನು ಪಡೆಯಬಲ್ಲರು. ಆದರೆ ಅವರೆಂದೂ ವಿಜಯಿಗಳಾಗಲು ಸಾಧ್ಯವಿಲ್ಲ.

ಮೂಸಾರ ಸ್ಪಷ್ಟ ಉತ್ತರ ಕೇಳಿ ಎಲ್ಲ ಆಸ್ಥಾನಿಕರು ಓರ್ವ ತೋರಿಕೆಯ ಸ್ವರ್ಧಾಳುವಿ ನಂತೆ ಒಕ್ಕೊರಳಿನಿಂದ ಹೀಗೆ ಹೇಳತೊಡಗಿದರು,

"ಅವರು ಹೀಗೆ ಉತ್ತರಿಸಿದರು, ನಾವು ನಮ್ಮ ಪೂರ್ವಿಕರನ್ನು ಕಂಡಿದ್ದ ಪದ್ಧತಿ ಯಿಂದ ನಮ್ಮನ್ನು ತಿರುಗಿಸಲಿಕ್ಕಾಗಿಯೂ ಭೂಮಿಯಲ್ಲಿ ನಿಮ್ಮಿಬ್ಬರ ಹಿರಿಮೆ ಸಂಸ್ಥಾಪಿಸಲಿ ಕ್ಕಾಗಿಯೂ ನೀನು ಬಂದಿರುವೆಯಾ? ನಾವು ನಿಮ್ಮ ಮಾತನ್ನು ಸ್ವೀಕರಿಸುವವರಲ್ಲ."

(ಪವಿತ್ರ ಕುರ್‌ಆನ್, 10:78)

ಈ ಮಾತನ್ನು ಹೇಳುವ ಮೂಲಕ ಅವರು ತಮ್ಮ ತಂದೆ ತಾತಂದಿರ ಧರ್ಮದ ಗೌರವವನ್ನು ಕಾಪಾಡುವ ಮತ್ತು ಮೂಸಾರ ಸಂದೇಶವನ್ನು ಯಾರೂ ಸ್ವೀಕರಿಸುವ ಧೈರ್ಯ ತೋರಬಾರದೆಂದು ಅದನ್ನು ಯಾವ ಬೆಲೆ ತೆತ್ತಾದರೂ ಸ್ವೀಕರಿಸುವುದಿಲ್ಲವೆಂಬ ಫಿರ್‌ಔನನ ತಂತ್ರಗಾರಿಕೆಯನ್ನು ಪ್ರದರ್ಶಿಸಿದರು. ಜೊತೆಗೆ ತಮ್ಮ ಅಪಪ್ರಚಾರದ ನಳಿಗೆ ಯನ್ನು ಮೂಸಾರತ್ತ ತಿರುಗಿಸಿದರು. ಈ ಇಬ್ಬರು ಸಹೋದರರು ತಮ್ಮ ಅಧಿಕಾರ (ಕುರ್ಚಿ)ಕ್ಕಾಗಿ ಯುದ್ಧ ಹೂಡಲು ಬಂದಿದ್ದಾರೆಂದು ಬಿಂಬಿಸತೊಡಗಿದರು. ಅವರೆಲ್ಲರೂ ಒಟ್ಟು ಸೇರಿ ಫಿರ್‌ಔನಿಗೆ ಈ ರೀತಿ ಸಲಹೆ ನೀಡಿದರು,

"ಆಗ ಅವರು, 'ಇವನನ್ನೂ, ಇವನ ಸಹೋದರನನ್ನೂ ತಡೆದಿರಿಸಿ ಕೊಳ್ಳಿರಿ- ಮತ್ತು ಸಕಲ ನುರಿತ ಜಾದೂಗಾರರನ್ನು ತಮ್ಮ ಬಳಿಗೆ ಕರೆತರಲಿಕ್ಕಾಗಿ ನಗರಗಳಿಗೆ ಹರಿಕಾರರನ್ನು ಕಳುಹಿಸಿ ಬಿಡಿರಿ' ಎಂದರು." (ಪವಿತ್ರ ಕುರ್‌ಆನ್, 26:36-37)

ಇನ್ನೊಂದು ಕಡೆಯಲ್ಲೂ ಇದೇ ತರದ ಮಾತನ್ನು ಹೇಳಲಾಗಿದೆ,

"ಅನಂತರ ಅವರೆಲ್ಲರೂ, 'ಇವನಿಗೂ ಇವನ ಸಹೋದರನಿಗೂ ಕಾದಿರಲು ಹೇಳಿರಿ. ಎಲ್ಲಾ ತಜ್ಞ ಮಾಟಗಾರರನ್ನು ನಿಮ್ಮಲ್ಲಿಗೆ ತರಲಿಕ್ಕಾಗಿ ಎಲ್ಲಾ ಪಟ್ಟಣಗಳಲ್ಲಿ ಹರಿಕಾರರನ್ನು ಕಳುಹಿಸಿರಿ' ಎಂದು ಫಿರ್‌ಔನ್‌ನಿಗೆ ಸೂಚಿಸಿದರು. ಆ ಪ್ರಕಾರ ಮಾಟಗಾರರು ಫಿರ್‌ಔನನ ಬಳಿಗೆ ಬಂದರು." (ಪವಿತ್ರ ಕುರ್‌ಆನ್, 7:111-112)

ಫಿರ್‌ಔನನು ಆಸ್ಥಾನಿಕರ ಈ ಸಲಹೆಯನ್ನು ಕಾರ್ಯಗತಗೊಳಿಸಲು Preventive detention order ಅಥವಾ Safety Act ಜಾರಿಗೊಳಿಸಿದನೋ ಇಲ್ಲವೋ, ಚಕ್ರವರ್ತಿಯು ಮೂಸಾರ ಸ್ವಾತಂತ್ರ್ಯ ಕಸಿಯುವ ಫರಮಾನನ್ನು ಜಾರಿಗೊಳಿಸಿದನೋ ಇಲ್ಲವೋ ಎಂದು ತಿಳಿದಿಲ್ಲ, ಬಹುಶಃ ಅಂದು ನಾಗರಿಕತೆಯು ಅಷ್ಟೊಂದು ಬೆಳೆದಿರಲಿಲ್ಲ ಅಥವಾ ಆಗ ತಜ್ಞ ಕಾನೂನು ಸಲಹೆಗಾರರು (Legal Advisers) ಇದ್ದಿರಲಿಕ್ಕಿಲ್ಲ, ಆದ್ದರಿಂದ ಆತ Crude deplomacyಯ ರೂಪದಲ್ಲಿ ಅವರನ್ನು ಕೆಲವು ನೆಪಗಳನ್ನೊಡ್ಡಿ ಕಾಯುವಂತೆ ಮಾಡಿ ತನ್ನ ಕುಂದುತ್ತಿರುವ ವರ್ಚಸ್ಸನ್ನು ಮರಳಿ ಗಳಿಸಲು ಸಮಯಾವಕಾಶ ಪಡೆದ.

ಈ ಜನರ ಸಲಹೆಯಿಂದ ತಿಳಿದು ಬರುವುದೇನೆಂದರೆ ಸತ್ಯದ ಕರೆಯು ಪ್ರಾಬಲ್ಯ ಪಡೆದಾಗಲೆಲ್ಲ ಅಧಿಕಾರ ಗದ್ದುಗೆಯು ಅಲುಗಾಡ ತೊಡಗುತ್ತದೆ. ದಬ್ಬಾಳಿಕೆಯ ಮರಳ ಮೇಲೆ ಕಟ್ಟಲ್ಪಾದ ಅಧಿಕಾರ ಸೌಧವು ಕಂಪಿಸ ತೊಡಗುತ್ತದೆ. ಆಡಳಿತ ಪ್ರಭುಗಳು ಪ್ರಥಮ ನೋಟದಲ್ಲೇ ತಮ್ಮ ಪತನದ ಕುರುಹುಗಳನ್ನು ಕಾಣತೊಡಗುತ್ತಾರೆ ಮತ್ತು ಈ ಬೆಳೆಯುತ್ತಿರುವ ಸತ್ಯದ ಕರೆಯನ್ನು ಅಣಗಿಸಲು ಅವರು ನೀಚತಮ ಅಸ್ತ್ರಗಳನ್ನು ಪ್ರಯೋಗಿಸಲು ಹೇಸುವುದಿಲ್ಲ.

ಸಂದೇಶದ ಹಾನಿಯನ್ನು ಗ್ರಹಿಸುವುದರಲ್ಲಿ ಆಸ್ಥಾನಿಕರ ದೂರದರ್ಶಿತ್ವ

ಇಲ್ಲಿ ಫಿರ್‌ಔನ್ ಮತ್ತವನ ಆಸ್ಥಾನಿಕರ ಬುದ್ಧಿವಂತಿಕೆ ಮತ್ತು ದೂರದರ್ಶಿತ್ವವನ್ನು ಮೆಚ್ಚಲೇಬೇಕು. ಅವರು ಸಂದೇಶದ ಪರಿಣಾಮವನ್ನು ಚೆನ್ನಾಗಿ ಗ್ರಹಿಸಿಕೊಂಡರು ಎಂಬುದನ್ನು ಒಪ್ಪಲೇಬೇಕಾಗಿದೆ. ವಾಸ್ತವದಲ್ಲಿ ಧರ್ಮದ ಕರೆ ಮತ್ತು ಅಧಿಕಾರಕ್ಕೆ ಅಭೇದ್ಯ ನಂಟಿದೆ. ಅಧಿಕಾರವಿಲ್ಲದ ಧರ್ಮವು ಕೇವಲ ಉಪದೇಶ ಮಾತ್ರವಾಗಿದೆ. ಧರ್ಮ ಬಂದಿರುವುದೇ ಅಧೀನಗೊಳ್ಳಲಿಕ್ಕಲ್ಲ, ಪ್ರಾಬಲ್ಯ ಪಡೆಯಲಿಕ್ಕಾಗಿ. ಇದೇ ವಸ್ತುಸ್ಥಿತಿಯನ್ನು ಅಲ್ಲಾಹನು ಈ ರೀತಿ ಸ್ಪಷ್ಟಪಡಿಸಿರುವನು,

"ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ತನ್ನ ಸಂದೇಶವಾಹಕನನ್ನು ಕಳುಹಿಸಿರುವವನು ಅವನೇ. ಅದನ್ನು ಸಂಪೂರ್ಣ ಧರ್ಮದ ಮೇಲೆ ಪ್ರಬಲಗೊಳಿಸಲಿಕ್ಕಾಗಿ. ಬಹುದೇವ ವಿಶ್ವಾಸಿಗಳಿಗೆ ಇದು ಎಷ್ಟೇ ಅಪ್ರಿಯವಾದರೂ ಸರಿಯೆ."

(ಪವಿತ್ರ ಕುರ್‌ಆನ್, 61:9)

ಇದನ್ನೇ ಪ್ರವಾದಿ ಮುಹಮ್ಮದ್(ಸ) ಈ ರೀತಿ ವ್ಯಕ್ತಪಡಿಸಿದ್ದಾರೆ.

"ಕುರ್‌ಆನ್‌ನಿಂದ ಅಳಿಸಲಾಗದ್ದನ್ನು ಅಲ್ಲಾಹನು ಅಧಿಕಾರದ ಮೂಲಕ ಅಳಿಸಿ ಹಾಕುತ್ತಾನೆ."*

ಫಿರ್‌ಔನ್ ಮತ್ತವನ ಪರಿವಾರವು ಯಾವ ವಾಸ್ತವಿಕತೆಯನ್ನು ಗ್ರಹಿಸಿಕೊಂಡರೋ ಅದನ್ನು ನಮ್ಮ ಕಾಲದ ಕೆಲವು ಧಾರ್ಮಿಕ ವರ್ಗಗಳು ಒಪ್ಪಿಕೊಳ್ಳಲು ಸಿದ್ಧವಿಲ್ಲವೆಂಬುದು ವಿಷಾದನೀಯ.

ಜಾದೂಗಾರರಿಗೆ ಸ್ಪರ್ಧೆಯ ಪಂಥಾಹ್ವಾನ

ತನ್ನ ಕುಸಿಯುತ್ತಿರುವ ಅಧಿಕಾರವನ್ನು ನೆಲೆ ನಿಲ್ಲಿಸಲು ಫಿರ್‌ಔನ್ ಮೂಸಾರನ್ನು ಸ್ಪರ್ಧೆಗೆ ಆಹ್ವಾನಿಸುತ್ತಾನೆ.

"ಸರಿ, ನಾವೂ ನಿನಗೆದುರು ಅಂತಹದೇ ಜಾದೂವನ್ನು ತರುತ್ತೇವೆ. ಸ್ಪರ್ಧೆ ಎಲ್ಲಿ ಮತ್ತು ಯಾವಾಗ ನಡೆಯಬೇಕೆಂದು ನಿರ್ಧರಿಸಿಕೋ. ನಾವಾಗಲಿ, ನೀನಾಗಲಿ ಈ ಕರಾರನ್ನು ಉಲ್ಲಂಘಿಸಬಾರದು. ಬಹಿರಂಗ ಬಯಲಲ್ಲಿ ಮುಂದೆ ಬಾ." (ಪವಿತ್ರ ಕುರ್‌ಆನ್, 20:58)

ಇಲ್ಲಿ ಮೂಸಾರಂತಹ ಮಹಾನ್ ಪ್ರವಾದಿಯನ್ನು ಒಂದು ಇಡೀ ಜನಾಂಗದ ಮುಂದೆ ಓರ್ವ ಜಾದೂಗಾರನ ನೆಲೆಯಲ್ಲಿ ತಂದು ನಿಲ್ಲಿಸಿರುವುದು ಫಿರ್‌ಔನನ ಕಾರ್ಯ ತಂತ್ರದ ಪರಾಕಾಷ್ಠೆ (climax) ಆಗಿತ್ತು.

ಮೂಸಾ(ಅ) ಜಾದೂಗಾರನಾಗಿದ್ದಿದ್ದರೆ ಈ ಪಂಥಾಹ್ವಾನವನ್ನು ಸ್ವೀಕರಿಸಲು ಹಿಂಜರಿಯುತ್ತಿದ್ದರು. ಆದರೆ ಅವರು ಓರ್ವ ಸತ್ಯ ಪ್ರಚಾರಕನಾಗಿದ್ದರು. ಅವರಿಗೆ ಅಲ್ಲಾಹನೇ ಒಂದು ಸುಸಂದರ್ಭವನ್ನು ಒದಗಿಸಿಕೊಟ್ಟನು. ಇಡೀ ದೇಶದ ಮುಂದೆ ಸೂರ್ಯ ಪ್ರಕಾಶದಂತೆ ಸತ್ಯವು ಅನಾವರಣಗೊಳ್ಳಬೇಕಿತ್ತು. ಸತ್ಯದಲ್ಲಿ ಯಾರಿದ್ದಾರೆ ಮತ್ತು ಮೋಸದ ಅಸ್ತ್ರವನ್ನು ಯಾರು ಹೊಂದಿದ್ದಾರೆಂದು ಎಲ್ಲರೂ ತಿಳಿಯಬೇಕಾಗಿತ್ತು. ಆದ್ದರಿಂದ ಮೂಸಾ(ಅ) ಕೂಡಲೇ ಆ ಪಂಥಾಹ್ವಾನವನ್ನು ಸ್ವೀಕರಿಸಿದರು.

"ಮೂಸಾ ಹೇಳಿದರು, ಉತ್ಸವದ ದಿನವು ಸ್ಪರ್ಧೆಗೆ ನಿಶ್ಚಯವಾಯಿತು ಮತ್ತು ಹೊತ್ತೇರಿದಾಗ ಜನರು ಒಟ್ಟು ಸೇರಲಿ." (ಪವಿತ್ರ ಕುರ್‌ಆನ್, 20:59)

* ಅರ್ಥಾತ್ ಉಪದೇಶ, ಬೋಧನೆಗಳಿಂದ ಸಾಧಿಸಲಾಗದ್ದು ಪ್ರಾಯೋಗಿಕವಾಗಿ ಅಧಿಕಾರ ಬಲದಿಂದ ಸಾಧಿಸಬಹುದು -ಅನು

ಈ ಸ್ಪರ್ಧೆಯು ರಾತ್ರಿಯ ಅಂಧಕಾರದಲ್ಲೋ ಪ್ರಭಾತದ ಅಸ್ಪಷ್ಟ ಬೆಳಕಿನಲ್ಲೋ ನಡೆಯಬಾರದು. ಜನರನ್ನು ಮೋಸಗೊಳಿಸದಂತಾಗಲು ಮತ್ತು ಅವರು ಯಾವುದೇ ತಪ್ಪುಗ್ರಹಿಕೆಗೆ ಸಿಲುಕದಂತಿರಲು ಈ ಸ್ಪರ್ಧೆಯನ್ನು ಪ್ರಕಾಶಮಯ ಹಗಲಿನಲ್ಲಿ ನಡೆಸಲಾಗುವುದು. ಅಷ್ಟೇ ಅಲ್ಲ, ಅದು ಜನರು ಅತ್ಯಧಿಕ ಸಂಖ್ಯೆಯಲ್ಲಿ ಸೇರುವ ದಿನವೂ ಆಗಿರಬೇಕು. ಆದ್ದರಿಂದ ಅದಕ್ಕೆ ಅವರ ಉತ್ಸವದ ದಿನವನ್ನೇ ನಿಗದಿಪಡಿಸಲಾಯಿತು. ಮೂಸಾ(ಅ) ತಮ್ಮ ನಿವಾಸಕ್ಕೆ ಮರಳಿದರು.

ಮೂಸಾರು(ಅ) ಫಿರ್‌ಔನನ ಆಸ್ಥಾನದಿಂದ ಮರಳಿ ತಮ್ಮ ಸಂದೇಶ ಪ್ರಚಾರ ಕಾರ್ಯವನ್ನು ವ್ಯವಸ್ಥಿತವಾಗಿ ನಡೆಸುವುದರಲ್ಲಿ ತಲ್ಲೀನರಾದರು. ಅವರಿಗೆ ಫಿರ್‌ಔನ್ ಮತ್ತು ಅವನ ಪಂಥಾಹ್ವಾನದ ಕುರಿತು ಎಳ್ಳಷ್ಟೂ ಚಿಂತೆಯಿರಲಿಲ್ಲ. ತನ್ನ ಕಾರ್ಯವನ್ನು ಶಾಂತಚಿತ್ತದಿಂದ ನೆರವೇರಿಸುವಲ್ಲಿ ನಿರತರಾದರು. ಅನೇಕ ಕಾರಣಗಳಿಂದಾಗಿ ಅವರಿಗೆ ಈ ಶಾಂತಿ ಸಮಾಧಾನ ಲಭ್ಯವಾಗಿತ್ತು.

ಒಂದನೆಯದಾಗಿ, ಅವರಿಗೆ ತಮ್ಮ ಸಂದೇಶವು ಸಂಪೂರ್ಣ ಸತ್ಯವೆಂಬ ಬಗ್ಗೆ ದೃಢ ನಂಬಿಕೆಯಿತ್ತು. ಸತ್ಯವು ಎಂದೂ ಪರಾಜಯಗೊಳ್ಳದೆಂದೂ ಅವರು ನಂಬಿದ್ದರು. ಈ ಮಾರ್ಗದಲ್ಲಿ ತಾತ್ಕಾಲಿಕವಾಗಿ ಕೆಲವು ಸಂಕಷ್ಟಗಳು ಎದುರಾಗಬಲ್ಲುದು. ಆದರೆ ಕಟ್ಟಕಡೆಗೆ ಸತ್ಯವೇ ಗೆಲುವು ಸಾಧಿಸುವುದು ಎಂಬ ಬಗ್ಗೆಯೂ ಅವರಿಗೆ ಖಾತ್ರಿಯಿತ್ತು. ಈ ನಂಬಿಕೆಯನ್ನು ಅವರು ಮುಂದೆ ಹಲವು ಬಾರಿ ವ್ಯಕ್ತಪಡಿಸಿದರು. ಈ ಶಾಂತಿ ಸಮಾಧಾನವನ್ನು ಅಲ್ಲಾಹನು ಎಲ್ಲ ಸಂದೇಶ ಪ್ರಚಾರಕರಿಗೂ ನೀಡುತ್ತಾನೆ. ಆದ್ದರಿಂದ ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲೂ ಅವರು ಸಹನೆಯನ್ನು ಕೈಬಿಡುವುದಿಲ್ಲ.

ಎರಡನೆಯದಾಗಿ, ಅವರ ಯಶಸ್ಸಿನ ಕುರಿತು ಅಲ್ಲಾಹನು ಅವರಿಗೆ ನೀಡಿದ್ದ ಶುಭವಾರ್ತೆಯು ಅವರ ದೃಷ್ಟಿಯಲ್ಲಿತ್ತು. ವಿಶೇಷವಾಗಿ ಅವರಿಗೆ ಪ್ರವಾದಿತ್ವ ನೀಡುವಾಗ ಅಲ್ಲಾಹನು, ನೀನು ಒಬ್ಬನೇ ಅಲ್ಲ, ನಿನ್ನ ಜೊತೆಯಲ್ಲಿ ನಾನಿದ್ದೇನೆ ಮತ್ತು ನೀನೂ ನಿನ್ನ ಅನುಯಾಯಿಗಳೂ ಕೊನೆಗೆ ವಿಜಯ ಸಾಧಿಸುವರು ಎಂದು ಶುಭವಾರ್ತೆ ನೀಡಿದ್ದನು.

❖ ❖ ❖

ಸ್ಪರ್ಧೆಯ ಸಿದ್ಧತೆಗಳು

ಅತ್ತ ಫಿರ್‌ಔನ್ ಸ್ಪರ್ಧೆಗಾಗಿ ಪೂರ್ಣ ಸಿದ್ಧತೆ ನಡೆಸುವುದರಲ್ಲಿ ನಿರತನಾದ. ಪ್ರಪ್ರಥಮವಾಗಿ ಅವನು ತನ್ನ ಆಸ್ಥಾನಿಕರೊಂದಿಗೆ ಹೇಳಿದ.

"ಫಿರ್‌ಔನನು (ತನ್ನವರೊಡನೆ) ಹೇಳಿದನು, ಪ್ರತಿಯೊಬ್ಬ ತಜ್ಞ ಮಾಟಗಾರನನ್ನು ನನ್ನ ಮುಂದೆ ಹಾಜರುಪಡಿಸಿರಿ." (ಪವಿತ್ರ ಕುರ್‌ಆನ್, 10:79)

ಇಡೀ ದೇಶದಲ್ಲಿ ಹುಡುಕಿ ಹುಡುಕಿ ನಿಗದಿತ ದಿನದಂದು ಕರೆತರುವಂತೆ ಹರಿಕಾರರನ್ನು ಕಳಿಸಿದನು. "ಆ ಪ್ರಕಾರ ಒಂದು ದಿನ ನಿಶ್ಚಿತ ಸಮಯದಲ್ಲಿ ಜಾದೂಗಾರರು ಒಟ್ಟು ಗೂಡಿಸಲ್ಪಟ್ಟರು." (ಪವಿತ್ರ ಕುರ್‌ಆನ್, 26:38)

ತರುವಾಯ ತನ್ನ ಎಲ್ಲ ಸಿಬ್ಬಂದಿಗಳ ಮೂಲಕ ಆ ದಿನಕ್ಕಾಗಿ ಜನರನ್ನು ಸೇರಿಸಲಿಕ್ಕಾಗಿ ಅಭಿಯಾನ ನಡೆಸಿದನು. ಇನ್ನು ನಮ್ಮ ಧರ್ಮದ ಉಳಿವು ಈ ಸ್ಪರ್ಧೆಯ ಫಲಿತಾಂಶವನ್ನು ಅವಲಂಬಿಸಿದೆಯೆಂದು ವ್ಯಾಪಕ ಪ್ರಚಾರದ ಮೂಲಕ ಜನಮನದಲ್ಲಿ ಬಿಂಬಿಸಿದನು. ಜಾದೂಗಾರರು ವಿಜಯಶಾಲಿಗಳಾದರೆ ನಾವು ನಮ್ಮ ಧರ್ಮದಲ್ಲಿ ಉಳಿಯುವೆವು. ಅನ್ಯಥಾ ಈ ಮೂಸಾ ಮತ್ತವರ ಸಹೋದರ ಹಾರೂನ್ ನಮ್ಮ ಧರ್ಮವನ್ನು ಹಾರಿಸಿ ಕೊಂಡು ಹೋಗುವವರು ಎಂದು ಮನವರಿಕೆ ಮಾಡಿಸಿದನು.

ಫಿರ್‌ಔನನ ಆಸ್ಥಾನಿಕರು ತಮ್ಮ ಜನತೆಯಲ್ಲಿ ಜನಾಂಗೀಯ ಪಕ್ಷಪಾತವನ್ನು ಬಡಿದೆಬ್ಬಿಸಲಿಕ್ಕಾಗಿ ಈ ಪ್ರಚಾರ ನಡೆಸಿದ್ದರು. ಅವರ ಮೂಲೋದ್ದೇಶವು ಮೂಸಾರ ದಿಟ್ಟ ಆಹ್ವಾನ ಮತ್ತು ಪವಾಡಗಳಿಂದ ಪ್ರಭಾವಿತರಾಗಿದ್ದ ಆಸ್ಥಾನಿಕರು ಹಾಗೂ ಈ ಘಟನೆಯ ಬಗ್ಗೆ ನಡೆಯುತ್ತಿದ್ದ ಚರ್ಚೆಯಿಂದ ಪ್ರಭಾವಿತರಾಗುತ್ತಿರುವವರು ಈ ಪಕ್ಷಪಾತದ ಹರಿವಿನಲ್ಲಿ ಕೊಚ್ಚಿ ಹೋಗಬೇಕೆಂದೂ ಸತ್ಯಸ್ವೀಕಾರದಿಂದ ದೂರ ನಿಲ್ಲಬೇಕೆಂದೂ ಆಗಿತ್ತು. ಆದರೆ ಸತ್ಯವು ಎಷ್ಟು ವಿರೋಧಿಸಲ್ಪಡುತ್ತದೋ ಅಷ್ಟೇ ಅದು ಬೆಳಗುವುದೆಂದು ಆ ತಿಳಿಗೇಡಿ ಗಳಿಗೇನು ಗೊತ್ತು!

ಒಂದು ವೇಳೆ ಮೂಸಾ(ಅ) ತಮ್ಮ ಆಯುಷ್ಯದ ಒಂದು ದೊಡ್ಡ ಭಾಗವನ್ನೇ ಸವೆಸಿದ್ದರೂ ಬಹುಶಃ ಇಷ್ಟು ದೊಡ್ಡ ಪ್ರಮಾಣದಲ್ಲಿ ಅವರ ಮತ್ತು ಅವರ ಸಂದೇಶದ ಪರಿಚಯವಾಗುತ್ತಿರಲಿಲ್ಲ. ಇದರ ಖ್ಯಾತಿ (Credit) ನಿಜವಾಗಿ ಅವರ ವಿರೋಧಿಗಳಿಗೇ

ಸಲ್ಲುತ್ತದೆ. ಏಕೆಂದರೆ ಅವರೇ ಈ ಸಂದೇಶವನ್ನು ಇಷ್ಟು ತುರ್ತಾಗಿ ಹಬ್ಬುವಂತೆ ಮಾಡಿದ್ದರು. ಎಲ್ಲ ಕಾಲದ ಫಿರ್‌ಔನೀಯರ ಅವಸ್ಥೆಯೂ ಇದುವೇ. ಅವರು ತಮ್ಮಷ್ಟಕ್ಕೆ ಸತ್ಯದ ಹುಟ್ಟಡಗಿಸಲಿಕ್ಕಾಗಿ ಅಪಪ್ರಚಾರದ ಬಿರುಗಾಳಿಯನ್ನೇ ಎಬ್ಬಿಸುತ್ತಾರೆ. ಆದರೆ ಯಾವುದನ್ನು ಅಳಿಸಲು ಅವರು ಮುಂದಾಗುತ್ತಾರೋ ವಾಸ್ತವದಲ್ಲಿ ಅದು ಅವರ ಕೈಯಾರೆ ಹಬ್ಬಲು ಸಹಾಯಕವಾಗುತ್ತದೆಯೆಂದು ಅವರಿಗೇನು ಗೊತ್ತು!

ಫಿರ್‌ಔನನ ಈ ಎಲ್ಲ ಪ್ರಯತ್ನಗಳನ್ನು ಅಲ್ಲಾಹನು ಎರಡೇ ವಾಕ್ಯಗಳಲ್ಲಿ ಹೀಗೆ ವಿವರಿಸಿದನು,

"ಮತ್ತು ಜನರೊಡನೆ, ನೀವು ಸಮ್ಮೇಳನಕ್ಕೆ ಬರುತ್ತೀರಾ? ಜಾದೂಗಾರರು ವಿಜಯಿಗಳಾದರೆ ನಾವು ಅವರ ಧರ್ಮದಲ್ಲೇ ಉಳಿಯಬಹುದು ಎನ್ನಲಾಯಿತು."

(ಪವಿತ್ರ ಕುರ್‌ಆನ್, 26:39-40)

ಫಿರ್‌ಔನನು ಜಾದೂಗಾರರನ್ನು ಒಟ್ಟು ಸೇರಿಸಿದ್ದು ಮತ್ತು ಅಪಪ್ರಚಾರದ ಅಭಿಯಾನವನ್ನು ಕೈಗೊಂಡದ್ದು ಮಾತ್ರ ಮಾಡಿದ್ದಲ್ಲ, ಬದಲಾಗಿ ಅವನ ಬಳಿ ಏನೆಲ್ಲ ಶಕ್ತಿ-ಸಾಮರ್ಥ್ಯಗಳಿದ್ದುವೋ ಮತ್ತು ಯಾವೆಲ್ಲ ತಂತ್ರಗಳಿದ್ದುವೋ ಅವೆಲ್ಲವನ್ನೂ ಪ್ರಯೋಗಿಸಿದನು. ಅವನ ಈ ವರ್ತನೆಯನ್ನು ಕುರ್‌ಆನ್ ಹೀಗೆ ವಿವರಿಸಿದೆ,

"ಫಿರ್‌ಔನನು ಮರಳಿ ತನ್ನ ಎಲ್ಲ ತಂತ್ರಗಳನ್ನು ಒಟ್ಟುಗೂಡಿಸಿದನು ಮತ್ತು ಸ್ಪರ್ಧೆಗೆ ಬಂದು ಬಿಟ್ಟನು." **(ಪವಿತ್ರ ಕುರ್‌ಆನ್, 20:60)**

ಫಿರ್‌ಔನ್ ಪ್ರಯೋಗಿಸಿದ ತಂತ್ರಗಳು ಯಾವುದಾಗಿತ್ತು?

ಅವನು ಮೂಸಾ ಮತ್ತು ಹಾರೂನ್‌ರನ್ನು ಜಾದೂಗಾರರೆಂದು ಬಿಂಬಿಸಲು ದೇಶದಾದ್ಯಂತ ಒಂದು ಬಿರುಗಾಳಿಯನ್ನೇ ಎಬ್ಬಿಸಿದನು. ನಿಮ್ಮ ದೇಶ ಮತ್ತು ನಿಮ್ಮ ಧರ್ಮ ಅಪಾಯದಲ್ಲಿದೆ ಎಂದು ದೇಶದ ಆಡಳಿತ ವರ್ಗದಲ್ಲಿ ಪಕ್ಷಪಾತವನ್ನು ಬಡಿದೆಬ್ಬಿಸಿದನು. ಈ ಬನೀ ಇಸ್ರಾಈಲರು ನಿಮ್ಮ ಸಂಸ್ಕೃತಿಯನ್ನು ಅಳಿಸಿ ಹಾಕುವರು ಮತ್ತು ನಿಮ್ಮ ಅಧಿಕಾರವನ್ನು ಬುಡಮೇಲು ಗೊಳಿಸಿ ಸ್ವಯಂ ಅಧಿಕಾರವನ್ನು ಸ್ವಾಧೀನಪಡಿಸಬಯಸಿದ್ದಾರೆಂದು ಬಿಂಬಿಸಿದನು. ದೇಶದಾದ್ಯಂತ ತನ್ನ ಪ್ರತಿನಿಧಿಗಳನ್ನೂ ಹರಿಕಾರರನ್ನೂ ಕಳಿಸಿ ಎಲ್ಲ ನುರಿತ ಜಾದೂಗಾರರನ್ನು ಸೇರಿಸಿದನು ಮತ್ತು ದೇಶದ ಜನತೆಯನ್ನು ಒಂದು ಮಹಾ ಪ್ರದರ್ಶನಕ್ಕಾಗಿ ಕರೆಸಿದನು.

ಫಿರ್‌ಔನನ ಆಸ್ಥಾನದಲ್ಲಿ ಜಾದೂಗಾರರು

ದೇಶದ ಮೂಲೆ ಮೂಲೆಗಳಿಂದಲೂ ಜಾದೂಗಾರರು ರಾಜಧಾನಿಗೆ ತಲಪಿದರು. ಅವರಿಗೆ ಚಕ್ರವರ್ತಿಯ ಸಿಂಹಾಸನ ಮತ್ತು ಕಿರೀಟವು ಈಗ ತಮ್ಮನ್ನು ಅವಲಂಬಿಸಿದೆಯೆಂದು ಮನವರಿಕೆಯಾದಾಗ ವ್ಯವಹಾರ ಕುದುರಿಸಲು ಇದೇ ಸೂಕ್ತ ಸಂದರ್ಭವೆಂದು

ಬಗೆದರು. ಇಷ್ಟು ದೊಡ್ಡ ಸೇವೆಗೆ ಭಾರೀ ದೊಡ್ಡ ಮೊತ್ತದ ಹಣ ಕೇಳಬೇಕೆಂದು ನಿರ್ಧರಿಸಿದರು. ಅದನ್ನು ಕುರ್‌ಆನ್ ಹೀಗೆ ತಿಳಿಸಿದೆ,

"ಅವರು (ಹೀಗೆ) ಹೇಳಿದರು, ನಾವು ಗೆದ್ದರೆ ನಮಗೆ ಪ್ರತಿಫಲ ಖಂಡಿತವಾಗಿಯೂ ಸಿಗುವುದಲ್ಲವೇ?" (ಪವಿತ್ರ ಕುರ್‌ಆನ್, 7:113)

ಇನ್ನೊಂದು ಕಡೆ ಹೀಗಿದೆ:

"ಜಾದೂಗಾರರು ರಂಗಕ್ಕಿಳಿದು ಬಂದಾಗ ಅವರು ಫಿರ್‌ಔನನೊಡನೆ, 'ನಾವು ವಿಜಯಿಗಳಾದರೆ ನಮಗೆ ಬಹುಮಾನ ಸಿಗಬಹುದಲ್ಲವೇ?' ಎಂದು ಕೇಳಿದರು."

(ಪವಿತ್ರ ಕುರ್‌ಆನ್, 26:41)

ಇಲ್ಲಿ ನಮಗೆ ಓರ್ವ ಪ್ರವಾದಿ ಮತ್ತು ಜಾದೂಗಾರನ ನಡುವಿನ ಭಾರೀ ಅಂತರ ಸ್ಪಷ್ಟವಾಗಿ ಗೋಚರಿಸುತ್ತದೆ.

1. ಜಾದೂಗಾರರು ರಾಜಂದಿರಿಗೆ ಮತ್ತು ಊರ ಗಣ್ಯರಿಗೆ ಸಲಾಮ್ ಹೊಡೆಯುತ್ತಾ ತಮ್ಮ ಚಮತ್ಕಾರಗಳನ್ನು ಪ್ರದರ್ಶಿಸಿ ಕೆಲವು ಬಹುಮಾನಗಳನ್ನು ಗಳಿಸುವುದರ ಹೊರತು ಅವರ ಸಮಯ ಬೇರಾವುದಕ್ಕೂ ವ್ಯಯವಾಗುವುದಿಲ್ಲ, ಯಾವನೇ ಒಬ್ಬ ಜಾದೂಗಾರ ರಾಜನ ಮುಂದೆ ಬಂದು ಕಣ್ಣಿಗೆ ಕಣ್ಣಿಟ್ಟು ದಿಟ್ಟವಾಗಿ ಮಾತಾಡಿದ ಚರಿತ್ರೆಯಿಲ್ಲ, ಅವರು ರಾಜಂದಿರ ಚಾಕರಿ ಮಾಡುವುದನ್ನು ತಮ್ಮ ಸೌಭಾಗ್ಯವೆಂದು ಬಗೆಯುತ್ತಾರೆ.

2. ಪ್ರವಾದಿಗೆ ತನ್ನ ಸಂದೇಶವನ್ನು ತಲಪಿಸಲು ಮತ್ತು ಪ್ರಚಾರಪಡಿಸಲು ಯಾರದೇ ಅನುಮತಿಯ ಅಗತ್ಯವಿರುವುದಿಲ್ಲ, ಅವರಿಗೆ ಅಲ್ಲಾಹನಿಂದ ದೊರೆತ ನೇಮಕದ ಪರವಾನಿಗೆ ಸಾಕಾಗುತ್ತದೆ. ಅನಂತರ ಯಾರಾದರೂ ಸಂತುಷ್ಟರಾಗಲಿ, ಕೋಪಗೊಳ್ಳಲಿ ಅವರಿಗೆ ತಮ್ಮ ದೌತ್ಯವನ್ನು ಪೂರೈಸಲೇಬೇಕಾಗಿದೆ. ಆಡಳಿತಗಾರನೂ ಒಳಗೊಂಡಂತೆ ಎಲ್ಲರನ್ನೂ ತಮ್ಮ ಆಜ್ಞಾಧೀನಗೊಳಿಸಬೇಕಾಗಿದೆ.

3. ಪ್ರವಾದಿಗಳು ತಮ್ಮ ಕೆಲಸಗಳಿಗೆ ಯಾವುದೇ ಪ್ರತಿಫಲ ಅಥವಾ ಮಜೂರಿಯನ್ನು ಬಯಸುವುದಿಲ್ಲ, ಅವರು ಅದನ್ನು ತಮ್ಮ ಜೀವನೋದ್ದೇಶವೆಂಬ ನೆಲೆಯಲ್ಲಿ ಮಾಡುತ್ತಾರೆ. ಅವರ ಬಳಿಯಲ್ಲಿ ಏನಿರುತ್ತದೋ ಅದನ್ನು ಆ ಮಾರ್ಗದಲ್ಲಿ ಅರ್ಪಿಸಿ ಬಿಡುತ್ತಾರೆ.

4. ಜಾದೂಗಾರರು ತಾತ್ಕಾಲಿಕವಾಗಿ ಯಾರನ್ನಾದರೂ ಸಮ್ಮೋಹನಕ್ಕೊಳಪಡಿಸಬಹುದು. ಆದರೆ ಪ್ರವಾದಿಗಳು ತಮ್ಮ ಚಾರಿತ್ರ್ಯ, ಸಂದೇಶ ಮತ್ತು ಗುಣನಡತೆಯಿಂದ ಜನರನ್ನು ಆಕರ್ಷಿಸುತ್ತಾರೆ.

5. ಲೋಕದಲ್ಲಿ ಯಾವುದೇ ಕ್ರಾಂತಿ (ಅದು ರಾಜಕೀಯವಾಗಿರಲಿ, ನೈತಿಕವಾಗಿರಲಿ) ಜಾದೂವಿನ ಪ್ರಭಾವದಿಂದ ಉಂಟಾದ ಚರಿತ್ರೆಯಿಲ್ಲ, ಅದಕ್ಕೆ ವ್ಯತಿರಿಕ್ತವಾಗಿ ಪ್ರವಾದಿಗಳ ಕರೆಯ ಪ್ರಥಮ ಹೆಜ್ಜೆಯಲ್ಲೇ ರಾಜಕೀಯ ಮತ್ತು ನೈತಿಕ ಬದಲಾವಣೆಯ ಸೂಚನೆಗಳು ಕಂಡುಬರುತ್ತವೆ.

ಫಿರ್‌ಔನನು ಈ ವ್ಯತ್ಯಾಸವನ್ನು ಚೆನ್ನಾಗಿ ಗ್ರಹಿಸಿಕೊಂಡೇ ಎಲ್ಲ ಅಧಿಕಾರ ಮೋಹಿಗಳು ನೀಡುವಂತಹ ಉತ್ತರವನ್ನೇ ನೀಡಿದ. ಬಹುಮಾನದ ಆಸೆ, ಆಸ್ಥಾನದಲ್ಲಿ ಆಪ್ತರನ್ನಾಗಿಸುವ ಕೊಡುಗೆಯು ದೊಡ್ಡ ದೊಡ್ಡ ಆತ್ಮಸಾಕ್ಷಿಯುಳ್ಳವರನ್ನು ಅಲುಗಾಡಿಸುತ್ತದೆಂದು ಆತ ಚೆನ್ನಾಗಿ ಗ್ರಹಿಸಿದ್ದ, ಲೋಕದಲ್ಲಿ ಆತ್ಮಸಾಕ್ಷಿಯಿಲ್ಲದವರನ್ನು ಖರೀದಿಸಲು ಮತ್ತು ಸತ್ಯದೊಂದಿಗೆ ಸಂಘರ್ಷಿಸಲು ಅತ್ಯುತ್ತಮ ಮಾರ್ಗ ಅವರನ್ನು ಆಡಳಿತದಲ್ಲಿ ಪಾಲ್ಗೊಳಿಸುವ ಕರೆ ನೀಡುವುದು, ಕೆಲವು ಕಾಸುಗಳನ್ನು ಅವರ ಮುಂದೆ ಎಸೆದು ಅವರನ್ನು 'ಬೆಲೆಯಿಲ್ಲದ' ಗುಲಾಮರನ್ನಾಗಿ ಮಾಡುವುದು- ಇದಕ್ಕಿಂತ ಉತ್ತಮ ಉಪಾಯ ಲೋಕದಲ್ಲಿ ಕಂಡು ಹಿಡಿಯಲಾಗಿಲ್ಲವೆಂದು ಆತ ಚೆನ್ನಾಗಿ ತಿಳಿದಿದ್ದ. ಆದ್ದರಿಂದ ಆತ ಹೇಳಿದ,

"ಫಿರ್‌ಔನನು ಉತ್ತರ ಕೊಟ್ಟನು, ಹೌದು. ಜೊತೆಗೇ ನೀವು ಆಸ್ಥಾನದ ನಿಕಟವರ್ತಿಗಳೂ ಆಗುವಿರಿ." (ಪವಿತ್ರ ಕುರ್‌ಆನ್, 7:114)

"ಅದಕ್ಕೆ ಅವನು, 'ಹೌದು, ಆಗಂತೂ ನೀವು ಆಪ್ತರಲ್ಲಿ ಸೇರಿ ಬಿಡುವಿರಿ' ಎಂದನು." (ಪವಿತ್ರ ಕುರ್‌ಆನ್, 26:42)

ಅಂದರೆ ನೀವು ಬಹುಮಾನ, ಪ್ರತಿಷ್ಠೆಯ ಮಾತಾಡುತ್ತೀರಿ. ಅದಂತೂ ನಿಮಗೆ ಸಿಗದೆ ಇರಲಾರದು. ಅದರ ಬಗ್ಗೆ ಸಂದೇಹವೇಕೆ? ನಾನಾದರೋ ನಿಮಗೆ ಸಚಿವ ಪದ ಮತ್ತು ರಾಯಭಾರಿತ್ವವನ್ನು ನೀಡಿ ಅನುಗ್ರಹಿಸುವೆನು. ದೇಶದಲ್ಲಿ ನಿಮ್ಮದೇ ನಡೆಯುವುದು. ಯಾರ ಬಗ್ಗೆ ನೀವು ಶಿಫಾರಸು ಮಾಡುವಿರೋ ಅವರ ಕೆಲಸ ಆಗುವುದು. ಕೊಲೆಗಡುಕ, ಅಪರಾಧಿಗಳನ್ನು ನಿಮ್ಮ ಸೂಚನೆಯ ಮೇರೆಗೆ ಬಿಟ್ಟು ಬಿಡಲಾಗುವುದು ಮತ್ತು ನಿರಪರಾಧಿಗಳನ್ನು ನಿಮ್ಮ ಸೂಚನೆಯಂತೆ ಜೈಲಿಗೆ ತಳ್ಳಲಾಗುವುದು.

❖ ❖ ❖

ಜಾದೂಗಾರರೊಂದಿಗೆ ಸ್ಪರ್ಧೆ

ಜಾದೂಗಾರರಿಗೆ ಎಚ್ಚರಿಕೆ

ಈಗ ಜಾದೂಗಾರರು ಫಿರ್‌ಔನನ ವಾಗ್ದಾನ ಮತ್ತು ಆಶೀರ್ವಾದ ಪಡೆದು ಸ್ಪರ್ಧಾ ಕಣಕ್ಕಿಳಿದರು. ಮೂಸಾ(ಅ) ಇಸ್ಲಾಮೀ ಶಿಷ್ಟಾಚಾರದಂತೆ ಮತ್ತು ಮಾನವ ಸ್ವಭಾವವನ್ನು ಪರಿಗಣಿಸಿ ಎದುರು ಪಕ್ಷದವರ ಮುಂದೆ ಮತ್ತೊಮ್ಮೆ ಸತ್ಯದ ಸಂದೇಶವನ್ನಿಟ್ಟರು. ಏಕೆಂದರೆ ಕೆಲವೊಮ್ಮೆ ಮಾನವ ಕವಲು ದಾರಿಯಲ್ಲಿರುವಾಗ ಸತ್ಯದ ಕರೆಯನ್ನು ಕೇಳಿ ಓಗೊಡಲೂ ಬಹುದು.

"ಮೂಸಾರು (ತಕ್ಕ ಸಮಯದಲ್ಲಿ ವಿರೋಧಿ ಪಂಗಡವನ್ನು ಕರೆದು) ಇಂತೆಂದರು ಹತಭಾಗಿಗಳೇ, ಅಲ್ಲಾಹನ ಮೇಲೆ ಸುಳ್ಳಾರೋಪಗಳನ್ನು ಹೊರಿಸಬೇಡಿರಿ. ಅನ್ಯಥಾ ಅವನೊಂದು ಘೋರ ಯಾತನೆಯ ಮೂಲಕ ನಿಮ್ಮನ್ನು ಸರ್ವನಾಶಗೊಳಿಸಿ ಬಿಡುವನು. ಮಿಥ್ಯಾರೋಪವನ್ನು ಯಾರೇ ಹೊರಿಸಲಿ, ಅವನು ಭಗ್ನಾಶನಾದನು."

(ಪವಿತ್ರ ಕುರ್‌ಆನ್, 20:61)

ಎಚ್ಚರಿಕೆಯ ಪ್ರಭಾವ

ಮೂಸಾರ ಈ ದಿಟ್ಟ ಕರೆ ವ್ಯರ್ಥವಾಗಲಿಲ್ಲ, ಸಕಾಲದ ಎಚ್ಚರಿಕೆ ಫಲ ನೀಡದಿರಲಿಲ್ಲ. ಸ್ಪರ್ಧೆಗಿಳಿಯುವ ದೃಢ ನಿರ್ಧಾರದಿಂದ ಬಂದಿದ್ದ ಅದೇ ಆಸ್ಥಾನಿಕರು ಮತ್ತು ಜಾದೂಗಾರರು ಒಮ್ಮೆಗೇ ತತ್ತರಿಸುತ್ತಾ ಪರಸ್ಪರ ಪಿಸುಗುಟ್ಟ ತೊಡಗಿದರು. ಕುರ್‌ಆನ್ ಅವರ ಈ ಸ್ಥಿತಿಯನ್ನು ಈ ರೀತಿ ಚಿತ್ರಿಸಿದೆ,

"ಇದನ್ನು ಕೇಳಿದಾಗ ಅವರೊಳಗೆ ಭಿನ್ನಾಭಿಪ್ರಾಯ ಉಂಟಾಯಿತು ಮತ್ತು ಅವರು ರಹಸ್ಯವಾಗಿ ಪರಸ್ಪರ ಸಮಾಲೋಚಿಸಲಾರಂಭಿಸಿದರು." (ಪವಿತ್ರ ಕುರ್‌ಆನ್, 20:62)

ಅವರು ಮಾಡಿದ್ದಂತಹ ಸಮಾಲೋಚನೆ ಏನಾಗಿತ್ತು? ಅವರ ಕಿವಿಗೆ ಮೂಸಾರ ಆಹ್ವಾನವು ಬಿದ್ದಿತ್ತು. ಅವರ ಪವಾಡಗಳನ್ನೂ ಚಮತ್ಕಾರಗಳನ್ನೂ ಅವರು ತುಂಬಿದ ಸಭೆಯಲ್ಲಿ ಕಂಡಿದ್ದರು. ಮೂಸಾರ ಈ ಎಚ್ಚರಿಕೆಯು ಅವರನ್ನು ಯೋಚನೆಗೀಡು ಮಾಡಿತು. ಅವರು ಪರಸ್ಪರ ಸಮಾಲೋಚಿಸಿದರು. ಈ ವ್ಯಕ್ತಿ ಪ್ರವಾದಿಯಾಗಿದ್ದರೆ ನಾವೆಂದೂ

ಜಯಶಾಲಿಗಳಾಗಲಾರೆವು. ಒಂದು ವೇಳೆ ಈ ತುಂಬಿದ ಸಭೆಯಲ್ಲಿ ನಾವು ಸೋತು ಹೋದರೆ ನಮಗೆ ಸಿಗಲಿಕ್ಕಿರುವುದೆಲ್ಲ ಕೈತಪ್ಪಿ ಹೋಗಬಹುದು. ಆದ್ದರಿಂದ ಅವರೊಂದಿಗೆ ಸ್ಪರ್ಧೆಗಿಳಿಯುವುದೋ ಬೇಡವೋ ಎಂಬ ಗೊಂದಲದಲ್ಲಿ ಅವರು ಸಿಲುಕಿದರು.

ಅಲ್ಲಿದ್ದವರೆಲ್ಲರ ಆತ್ಮಸಾಕ್ಷಿ ಸತ್ತು ಹೋಗಿರಲಿಲ್ಲ, ಕೆಲವರಲ್ಲಿ ಆದರ ಕಿಡಿ ಇನ್ನೂ ಜೀವಂತವಾಗಿತ್ತೆಂದು ತೋರುತ್ತದೆ. ಆದರೆ ಫಿರ್‌ಔನನ ಆಸ್ಥಾನಿಕರಲ್ಲಿದ್ದ ದುಷ್ಟಬುದ್ಧಿಯ ಕಿಡಿಗೇಡಿಗಳು ಕೂಡಲೇ ಪರಿಸ್ಥಿತಿಯ ಗಂಭೀರತೆಯನ್ನು ಗ್ರಹಿಸಿಕೊಂಡರು. ಅವರು ಜಾದೂಗಾರರಿಗೆ ಈ ರೀತಿ ಎಚ್ಚರಿಕೆ ನೀಡಿದರು,

ಜಾದೂಗಾರರ ಕಿಡಿಗೇಡಿತನ

"ಕೊನೆಗೆ ಕೆಲವರು (ಹೀಗೆ) ಹೇಳಿದರು: ಇವರಿಬ್ಬರೂ ಕೇವಲ ಜಾದೂಗಾರರು. ಇವರ ಉದ್ದೇಶವು ತಮ್ಮ ಜಾದೂವಿನ ಬಲದಿಂದ ನಿಮ್ಮನ್ನು ನಿಮ್ಮ ನಾಡಿನಿಂದ ಹೊರ ಹಾಕುವುದು ಮತ್ತು ಆದರ್ಶಪ್ರಾಯವಾದ ನಿಮ್ಮ ಜೀವನ ಕ್ರಮವನ್ನು ಕೊನೆಗೊಳಿಸಿ ಬಿಡುವುದಾಗಿದೆ. ಆದುದರಿಂದ ನಿಮ್ಮ ಸಕಲ ತಂತ್ರಗಳನ್ನೂ ಇಂದು ಒಟ್ಟು ಗೂಡಿಸಿಕೊಳ್ಳಿರಿ ಮತ್ತು ಒಂದಾಗಿ ರಂಗಕ್ಕೆ ಇಳಿದು ಬಿಡಿರಿ. ಇಂದು ಯಾರ ಕೈ ಮೇಲಾಗುವುದೋ ಅವನೇ ವಿಜಯಿಯಾಗುವನೆಂದು ತಿಳಿದುಕೊಳ್ಳಿರಿ." (ಪವಿತ್ರ ಕುರ್‌ಆನ್, 20:63-64)

ನಿರಂಕುಶ ಆಡಳಿತಗಾರರ ಮುಂದೆ ಅವರ ಅತ್ಯಂತ ದುಷ್ಟ ಮತ್ತು ಕಿಡಿಗೇಡಿ ಸಂಗಾತಿಗಳ ಮಾತೇ ನಡೆಯುತ್ತದೆ. ಇದು ಲೋಕರೂಢಿ. ಹಾಗೆಯೇ ಇಲ್ಲೂ ದುಷ್ಟ ಸಂಗಾತಿಗಳ ಅಭಿಪ್ರಾಯ ಪ್ರಕಾರವೇ ನಡೆಯಿತು. ಸ್ಪರ್ಧೆ ನಡೆಸುವುದೆಂದೇ ತೀರ್ಮಾನ ವಾಯಿತು. ಮಾತ್ರವಲ್ಲ, ಈ ಇಬ್ಬರು (ಮೂಸಾ ಮತ್ತು ಹಾರೂನ್) ಅಧಿಕಾರ ಮೋಹಿ ಗಳಾಗಿದ್ದಾರೆಂಬ ಆರೋಪವನ್ನು ಜೊತೆಗೇ ಹರಿಬಿಡಲಾಯಿತು. ಬಹುಶಃ ಎಲ್ಲ ಕಾಲದ ನಿರಂಕುಶ ಆಡಳಿತಗಾರರು ಪ್ರಯೋಗಿಸುವ ತಂತ್ರ ಫಿರ್‌ಔನ್‌ನಿಂದಲೇ ಕಲಿತಿರಬೇಕು. ಎಂದಾದರೂ ಅಲ್ಲಾಹನ ಸಜ್ಜನ ದಾಸರು, ಸುಧಾರಕರು, ದೇವನಿಷ್ಠರು ಅಲ್ಲಾಹನ ವಚನವನ್ನು ಉನ್ನತಗೊಳಿಸಲಿಕ್ಕಾಗಿ ಇಂತಹ ನಿರಂಕುಶ ಪ್ರಭುಗಳ ಮುಂದೆ ನಿಂತು ಅವರೊಂದಿಗೆ ಮುಖಾಮುಖಿಯಾಗಿ ಮಾತಾಡುವ ಧೈರ್ಯ ತೋರಿದಾಗ ಕೂಡಲೇ, ಇವರು ಸ್ವತಃ ಅಧಿಕಾರ ಬಯಸುವವರಾಗಿದ್ದಾರೆಂಬ ಆರೋಪ ಹೊರಿಸಿ ಬಿಡಲಾಗುತ್ತದೆ. ಅವರ ಪೈಕಿ ಕೆಲವು ಸಭ್ಯ ಜನರು ಲಜ್ಜಿತರಾಗಿ ಅದರಿಂದ ದೂರವುಳಿಯುತ್ತಾರೆ. ಆದರೆ ಉಳಿದವರು ಇದೆಲ್ಲ 'ಕುರ್ಚಿಗಾಗಿ ಹೋರಾಟ' ಎಂದು ಅವರ ವಿರುದ್ಧ ಅಪಪ್ರಚಾರದ ಬಿರುಗಾಳಿಯನ್ನೇ ಎಬ್ಬಿಸಿ ಬಿಡುತ್ತಾರೆ. ಇಂದಿನ ಫಿರ್‌ಔನೀಯರೊಂದಿಗೆ, ನೀವು ಈ ಗದ್ದುಗೆಯಲ್ಲಿ ಕುಳಿತಿದ್ದೀರಲ್ಲ, "ಅದರ ಜನ್ಮಸಿದ್ಧ ಹಕ್ಕನ್ನು ನೀವು ಎಲ್ಲಿಂದ ಪಡೆದಿರಿ? ನಿಮಗೆ ಅದರ ದೈವಿಕ ಫರಮಾನು ಎಲ್ಲಿಂದ ಸಿಕ್ಕಿತು?" ಎಂದು ಕೇಳಬೇಕೆನಿಸುತ್ತದೆ.

ಇನ್ನು, ಅವರ ಹೃದಯದಲ್ಲಿ ಜನತೆಯ ಬಗ್ಗೆ ಸಹಾನುಭೂತಿಯೂ ಏಳುತ್ತದೆ. ನಮ್ಮ ಅಧಿಕಾರ ಪೀಠ ಅಪಾಯದಲ್ಲಿದೆಯೆಂದು ಅವರು ಹೇಳುವುದಿಲ್ಲ, ಬದಲಾಗಿ ಅವರು ಯಾವಾಗಲೂ ಜನತೆಯ ಜೀವನ ಅಪಾಯದಲ್ಲಿದೆಯೆಂದು ಹೇಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಅವರ ಹಿತಾಸಕ್ತಿಗಳು ಜನತೆಯ ಭದ್ರತೆ ಅಥವಾ ಜನತೆಯ ಹಿತಾಸಕ್ತಿಯಾಗಿ ಬಿಡುತ್ತದೆ. ಫಿರ್‌ಔನನ ಆಸ್ಥಾನಿಕರು ಹೇಳಿದ್ದೇನೆಂದು ನೋಡಿರಿ, "ನಿಮ್ಮನ್ನು ನಿಮ್ಮ ನಾಡಿನಿಂದ ಹೊರಕ್ಕಟ್ಟಿ ಬಿಡುವರು."

ಅಂದರೆ ನಮ್ಮ ಬಗ್ಗೆ ಚಿಂತಿಸಬೇಡಿ. ನಿಮ್ಮ ಗತಿಯೇನಾದೀತೆಂಬ ಚಿಂತೆ ನಮ್ಮನ್ನು ಕಾಡುತ್ತಿದೆ. ಅವರ ಹಿತಾಸಕ್ತಿಯ ಮರೆಯಲ್ಲಿ ಅವರನ್ನು ಪ್ರಚೋದಿಸಲು ಪ್ರಯತ್ನಿಸಿದ್ದು ಮಾತ್ರವಲ್ಲ, ನಿಮ್ಮ ಈ ವೈಭವ, ಆಡಂಬರ, ಪ್ರಭುತ್ವದ ಪ್ರಭಾವ ಎಲ್ಲವೂ ಮಣ್ಣು ಮುಕ್ಕುತ್ತದೆ ಎಂದು ಹೇಳಿ ಇನ್ನಷ್ಟು ಬೆಂಕಿಗೆ ಎಣ್ಣೆ ಸುರಿಯಲು ಪ್ರಯತ್ನಿಸಿದರು. ಈ ಪ್ರಚೋದನಕಾರಿ ಅಪಪ್ರಚಾರದ ತಂತ್ರವು ಸಂಪೂರ್ಣ ಫಲಿಸಿತು. ಕೆಲವೇ ಕ್ಷಣಗಳ ಹಿಂದೆ ಗೊಂದಲದಲ್ಲಿ ಸಿಲುಕಿದ್ದ ಅದೇ ಜಾದೂಗಾರರು ಸ್ಪರ್ಧೆಗೆ ಸಿದ್ಧರಾಗಿ ನಿಂತರು ಮತ್ತು ಈ ರೀತಿ ಹೇಳಿದರು,

"ಮೂಸಾ, ನೀವು ಮೊದಲು ಎಸೆಯುತ್ತೀರೋ ಅಥವಾ ನಾವು ಎಸೆಯಬೇಕೋ?"
(ಪವಿತ್ರ ಕುರ್‌ಆನ್, 20:65)

"ಅನಂತರ ಅವರು ಮೂಸಾರೊಡನೆ, 'ನೀವು ಎಸೆಯುತ್ತೀರಾ ಅಥವಾ ನಾವು ಎಸೆಯಬೇಕೇ?' ಎಂದು ಕೇಳಿದರು." (ಪವಿತ್ರ ಕುರ್‌ಆನ್, 7:115)

ಮೂಸಾರಿಗಂತೂ ತಾನು ಯಶಸ್ವಿಯಾಗುತ್ತೇನೆಂದು ಖಾತ್ರಿಯಿತ್ತು. ಆದ್ದರಿಂದ ಏನೂ ಅಳುಕಿಲ್ಲದೆ,

"ಇಲ್ಲ, ನೀವೇ ಎಸೆಯಿರಿ" ಎಂದರು. (ಪವಿತ್ರ ಕುರ್‌ಆನ್, 20:66)

"ಮಾಟಗಾರರು ಬಂದಾಗ (ಅವರೊಡನೆ) ಮೂಸಾ, 'ನೀವು ಎಸೆಯಬೇಕಾದುದನ್ನು ಎಸೆಯಿರಿ' ಎಂದರು." (ಪವಿತ್ರ ಕುರ್‌ಆನ್, 10:80)

"(ಆಗ) ಮೂಸಾ, 'ನೀವು ಎಸೆಯಬೇಕಾದುದನ್ನು ಎಸೆಯಿರಿ' ಎಂದರು."
(ಪವಿತ್ರ ಕುರ್‌ಆನ್, 26:43)

ಮೂಸಾ(ಅ) ಜಾದೂಗಾರರಿಗೆ ಮೊದಲು ಅವಕಾಶ ಕೊಡಲು ಕಾರಣವೇನು? ಅವರಿಗೆ ತಮ್ಮ ಚಮತ್ಕಾರಗಳನ್ನು ತೋರಿಸಿ ತಮ್ಮ ಮೇಲ್ಮೆಯನ್ನು ಪ್ರದರ್ಶಿಸುವ ಅವಕಾಶವೇ ಸಿಗಲಿಲ್ಲವೆಂಬ ಕೊರಗು ಅವರ ಮನಸ್ಸಿನಲ್ಲಿ ಮೂಡದಿರಲೆಂದೇ ಆಗಿತ್ತು. ಮೂಸಾರಿಗೆ ಈ ಜಾದೂಗಾರರು ಯಾವುದೇ ಚಮತ್ಕಾರ ಪ್ರದರ್ಶಿಸಿದರೂ ನಾನು ಎಲ್ಲವನ್ನೂ ಸೋಲಿಸಬಲ್ಲೆ, ಏಕೆಂದರೆ ಅಲ್ಲಾಹನ ಸಹಾಯ ನನ್ನೊಂದಿಗಿದೆಯೆಂಬ ಪೂರ್ಣ ಭರವಸೆಯಿತ್ತು.

ಆದ್ದರಿಂದಲೇ ಅವರು ಜಾದೂಗಾರರೊಂದಿಗೆ ನೀವೇ ಮೊದಲು ಎಸೆಯಿರಿ ಎಂದು ಹೇಳಿದರು. ಹಾಗೆ ಜಾದೂಗಾರರು ತಮ್ಮ ಅಸ್ತ್ರಗಳನ್ನು ಎಸೆದರು.

"ಅವರು ತಕ್ಷಣ ತಮ್ಮ ಹಗ್ಗಗಳನ್ನೂ ಲಾಠಿಗಳನ್ನೂ ಎಸೆದರು ಮತ್ತು 'ಫಿರ್‌ಔನನ ಪ್ರತಾಪದಿಂದ ನಾವೇ ವಿಜಯಿಗಳಾಗುವೆವು' ಎಂದು ಉದ್ಗರಿಸಿದರು."

(ಪವಿತ್ರ ಕುರ್‌ಆನ್, 26:44)

ಜಾದೂವಿನ ಪ್ರಭಾವ

ಆ ಲಾಠಿಗಳಲ್ಲೂ ಹಗ್ಗಗಳಲ್ಲೂ ಜಾದೂವಿನ ಪ್ರಬಲ ಶಕ್ತಿಯಿತ್ತು. ಅದನ್ನು ಕುರ್‌ಆನ್ ಈ ರೀತಿ ವರ್ಣಿಸಿದೆ:

"ಮೂಸಾರು, 'ನೀವೇ ಎಸೆಯಿರಿ' ಎಂದರು. ಅವರು ತಮ್ಮ ಮಂತ್ರ ದಂಡಗಳನ್ನೆಸೆದು ದೃಷ್ಟಿಗಳನ್ನು ವಶೀಕರಿಸಿ ಹೃದಯಗಳನ್ನು ಭಯಗ್ರಸ್ತಗೊಳಿಸಿದರು ಮತ್ತು ಅವರು ಭಾರೀ ದೊಡ್ಡ ಮಾಟವನ್ನೇ ತಂದಿದ್ದರು." (ಪವಿತ್ರ ಕುರ್‌ಆನ್, 7:116)

ಆ ಜಾದೂ ಎಂತಹ ಚಮತ್ಕಾರಗಳನ್ನು ಪ್ರದರ್ಶಿಸಿತೆಂಬುದನ್ನು ಕುರ್‌ಆನ್ ಹೀಗೆ ವರ್ಣಿಸುತ್ತದೆ:

"ಹಠಾತ್ತನೆ ಅವರ ಹಗ್ಗಗಳೂ ಲಾಠಿಗಳೂ ಅವರ ಇಂದ್ರಜಾಲದ ಬಲದಿಂದ ಓಡುತ್ತಿರುವಂತೆ ಮೂಸಾರಿಗೆ ಭಾಸವಾಯಿತು." (ಪವಿತ್ರ ಕುರ್‌ಆನ್, 20:76)

ಅಂದರೆ ಮೂಸಾ(ಅ) ನೀವು ಎಸೆಯಿರಿ ಎಂದದ್ದೇ ತಡ, ಎಲ್ಲ ಜಾದೂಗಾರರು ಒಟ್ಟಾಗಿ ತಮ್ಮ ಹಗ್ಗಗಳನ್ನೂ ಲಾಠಿಗಳನ್ನೂ ನೆಲಕ್ಕೆಸೆದರು. ಹಠಾತ್ತನೆ ತನ್ನ ನಾಲ್ಕೂ ಸುತ್ತ ನೂರಾರು ಹಾವುಗಳು ಹರಿದಾಡುವಂತೆ ಅವರಿಗೆ ಕಂಡಿತು.

ಈ ಭಯಾನಕ ದೃಶ್ಯವು ಮೂಸಾರ(ಅ) ಮೇಲೆ ಎಂತಹ ಪ್ರಭಾವ ಬೀರಿತೆಂಬುದನ್ನೂ ಕುರ್‌ಆನ್ ಹೀಗೆ ವರ್ಣಿಸಿದೆ:

"ಮತ್ತು ಮೂಸಾ ತನ್ನ ಮನದೊಳಗೇ ಹೆದರಿದರು. ಆಗ ನಾವು, 'ಹೆದರಬೇಡಿರಿ, ನೀವೇ ವಿಜಯಿಯಾಗುವಿರಿ. ನಿಮ್ಮ ಬಲ ಕೈಯಲ್ಲಿರುವುದನ್ನು ಎಸೆದುಬಿಡಿರಿ. ಈಗಲೇ ಅದು ಅವರ ಕೃತಕ ವಸ್ತುಗಳನ್ನೆಲ್ಲ ನುಂಗಿ ಬಿಡುವುದು. ಅವರು ಮಾಡಿ ತಂದಿರುವುದೆಲ್ಲಾ ಕೇವಲ ಜಾದೂಗಾರನ ಮಾಯೆ- ಜಾದೂಗಾರರು ಅದೆಷ್ಟೇ ಠೀವಿಯೊಂದಿಗೆ ಬರಲಿ, ಅವರೆಂದೂ ಯಶಸ್ವಿಯಾಗಲಾರರು' ಎಂದೆವು." (ಪವಿತ್ರ ಕುರ್‌ಆನ್, 20:67-69)

ಮಾನವ ಸಹಜ ದೌರ್ಬಲ್ಯವೆಂಬಂತೆ ಈ ಜಾದೂವನ್ನು ನೋಡಿ ಮೂಸಾ(ಅ) ಹೆದರಿಬಿಟ್ಟರು. ನೂರಾರು ಯೋಚನೆಗಳು ಮನಸ್ಸಿನಲ್ಲಿ ಮೂಡಿದುವು. ಆದರೆ ಆ ಕರುಣಾಮಯಿಯೂ ಉದಾರಿಯೂ ಆದ ಪ್ರಭು ತನ್ನ ನಿಷ್ಠ ದಾಸರನ್ನು ಹಾಗೆಯೇ ಬಿಟ್ಟು ಬಿಡುವುದಿಲ್ಲ, ಅವನಿಂದ ಬೇಡುವುದಕ್ಕೆ ಮುಂಚೆಯೇ ಅವನು ಕೊಟ್ಟು ಬಿಡುತ್ತಾನೆ.

ಮಾನವನು ತನ್ನನ್ನು ಒಂಟಿ, ಅಸಹಾಯಕನೆಂದು ಬಗೆದಾಗ ಅವನ ಪ್ರಭು ಅವನಿಗೆ, ನಿನ್ನ ಆಶ್ರಯದಾತ ಎಲ್ಲೂ ಹೋಗಿಲ್ಲ, ಪ್ರತಿಕ್ಷಣವೂ ನಿನ್ನೊಂದಿಗಿದ್ದಾನೆಂಬುದನ್ನು ನೆನಪಿಸಿ ಕೊಡುತ್ತಾನೆ. ಹಾಗೆಯೇ ಮೂಸಾರಿಗೆ ಭಯವುಂಟಾದಾಗ ಅವರಿಗೆ ಸಾಂತ್ವನ ನೀಡುತ್ತಾ ಕೈಯಲ್ಲಿರುವ ಲಾಠಿಯನ್ನು ಪ್ರಯೋಗಿಸಲು ಆದೇಶಿಸಿದನು.

ಮೂಸಾರ(ಅ) ವಿಜಯ

ಈ ದೈವಿಕ ಆದೇಶವನ್ನು ಕೇಳುತ್ತಲೇ ಮೂಸಾರ(ಅ) ಭಯ ಮಾಯವಾಯಿತು. ಚೇತರಿಸಿಕೊಂಡು ಜಾದೂಗಾರರಿಗೆ ಪಂಥಾಹ್ವಾನ ಒಡ್ಡಿದರು.

"ಅವರು ಮಂತ್ರ ದಂಡಗಳನ್ನು ಎಸೆದಾಗ ಮೂಸಾರು (ಹೀಗೆ) ಹೇಳಿದರು, ನೀವೀಗ ಎಸೆದುದು ಜಾದುವಾಗಿರುತ್ತದೆ. ಅಲ್ಲಾಹನು ಈಗಲೇ ಇದನ್ನು ನಿರರ್ಥಕಗೊಳಿಸಿ ಬಿಡುತ್ತಾನೆ. ಅಲ್ಲಾಹನು ಕಿಡಿಗೇಡಿಗಳ ಕಾರ್ಯವನ್ನು ಸರಿಯಾಗಲು ಬಿಡುವುದಿಲ್ಲ ಮತ್ತು ಅಲ್ಲಾಹ್ ತನ್ನ ಅಪ್ಪಣೆಯಿಂದ ಸತ್ಯವನ್ನು ಸತ್ಯವನ್ನಾಗಿಯೇ ಮಾಡಿ ತೋರಿಸುತ್ತಾನೆ. ಇದರಿಂದ ಅಪರಾಧಿಗಳಿಗೆ ಎಷ್ಟೇ ಅಸಂತುಷ್ಟಿಯುಂಟಾದರೂ ಸರಿಯೇ." (ಪವಿತ್ರ ಕುರ್‌ಆನ್, 10:81-82)

ಈ ಘೋಷಣೆಯನ್ನು ಮೂಸಾ ತೆರೆದ ಮೈದಾನದ ಮಧ್ಯದಲ್ಲಿ ನಿಂತು ಮಾಡಿದರು. ಇಲ್ಲಿ ಅವರು ಅಲ್ಲಾಹನ ಕಾರ್ಯವಿಧಾನವನ್ನು ತೋರಿಸಿಕೊಟ್ಟರು. ಅಂದರೆ ಮಿಥ್ಯವು ಎಷ್ಟೇ ಶಕ್ತಿ ಹೊಂದಿರಲಿ, ಬಾಹ್ಯನೋಟಕ್ಕೆ ಅದು ಎಂದೂ ಸೋಲಿಸಲಾಗದಷ್ಟು ಪ್ರಬಲ ವಾಗಿದೆಯೆಂದು ತೋರಲಿ. ಆದರೆ ಅಲ್ಲಾಹನು ಅದನ್ನು ಅಳಿಸಿಯೇ ಬಿಡುತ್ತಾನೆ. ಅದು ಮಿಥ್ಯವೆಂಬುದು ಬಹಿರಂಗವಾಗಿ ಸಾಬೀತಾಗುತ್ತದೆ. ಸತ್ಯವು ಎಷ್ಟೇ ದುರ್ಬಲವಾಗಿರಲಿ. ಅಲ್ಲಾಹನ ಅಪರಾಧಿಗಳೂ ಬಂಡುಕೋರರೂ ಆದ ವಿರೋಧಿಗಳು ಎಷ್ಟೇ ಬಲಶಾಲಿ ಗಳಾಗಿದ್ದರೂ ಅಲ್ಲಾಹನು ಸತ್ಯವನ್ನು ಸತ್ಯವೆಂದು ಸಾಬೀತು ಪಡಿಸುತ್ತಾನೆ. ಇನ್ನು ಈ ಮಂದಿ ಸತ್ಯವನ್ನು ಬೆಂಬಲಿಸುತ್ತಾರೋ ಇಲ್ಲವೋ ಎಂಬುದನ್ನು ಸಮರ್ಥನೆಗೆ ಅವಕಾಶವಿಲ್ಲದ ರೀತಿಯಲ್ಲಿ ಪ್ರಕಟಿಸುತ್ತಾನೆ. ಅನಂತರ ಅಲ್ಲಾಹನು ತೋರಿಸಿದ ಮಾರ್ಗವನ್ನು ಬಿಟ್ಟು ತಮ್ಮ ಮನ ಬಂದಂತೆ ವರ್ತಿಸುವ ದುಷ್ಟರು ಯಾವ ತಂತ್ರಗಾರಿಕೆಯನ್ನೇ ಮಾಡಲಿ, ಅದನ್ನು ಅಲ್ಲಾಹನು ಅವರಿಗೇ ತಿರುಗಿ ಹೊಡೆಯುತ್ತಾನೆ. ಅವರ ಪ್ರತಿಯೊಂದು ಕೆಲಸವು ಆಗುವ ಬದಲು ಕೆಡುತ್ತಲೇ ಹೋಗುತ್ತದೆ. ಕೊನೆಗೆ ಅವರು ಅವರಿಗೆ ಅರ್ಹವಾದ ಅಂತಿಮ ದುರ್ಗತಿಗೆ ತಲಪಿ ಬಿಡುತ್ತಾರೆ.

ಇಲ್ಲಿ ಒಬ್ಬ ವಿಶ್ವಾಸಿ ಮತ್ತು ಸತ್ಯನಿಷೇಧಿಯ ಚಿಂತನೆಗಳ ವ್ಯತ್ಯಾಸವು ಸ್ಪಷ್ಟವಾಗಿ ಗೋಚರಿಸುತ್ತದೆ. ಜಾದೂಗಾರರು ಬರುತ್ತಾರೆ. ತಮ್ಮ ಕಲ್ಪನೆಯ ದೇವರ (ಫಿರ್‌ಔನನ) ಆಣೆ ಹಾಕುತ್ತಾರೆ. ಅವನ ಒಪ್ಪಿಗೆ ಪಡೆಯುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಮೂಸಾ(ಅ) ಈ ಸಂದಿಗ್ಧ ಘಟ್ಟದಲ್ಲೂ ತಮ್ಮ ಉಪಾಯ ಅಥವಾ ಬೇರಾವುದೇ ಶಕ್ತಿಯನ್ನು ನಂಬುವುದರ

ಬದಲು ತಮ್ಮ ಸರ್ವಸ್ವವನ್ನೂ ಅಲ್ಲಾಹನಿಗೆ ಒಪ್ಪಿಸಿ ಬಿಡುತ್ತಾರೆ. ಒಂದು ಕ್ಷಣದ ಮಟ್ಟಿಗಾದರೂ ನಿರಾಶರಾಗುವುದಿಲ್ಲ. ಅಲ್ಲಾಹನ ಸಹಾಯದ ಮೇಲೆ ಅವರ ನಂಬಿಕೆ ಇನ್ನಷ್ಟು ಹೆಚ್ಚುತ್ತದೆ. ಅಲ್ಲಾಹನ ವಾಗ್ದಾನದ ಮೇಲೆ ಅವರಿಗೆ ಸಂಪೂರ್ಣ ಭರವಸೆಯುಂಟಾಗುತ್ತದೆ.

ಈ ಸತ್ಯ ಘೋಷಣೆಯ ಬಳಿಕ ಅಲ್ಲಾಹನ ಅಪ್ಪಣೆ ಪ್ರಕಾರ ಅವರು ತಮ್ಮ ಲಾಠಿಯನ್ನು ನೆಲದ ಮೇಲೆ ಎಸೆಯುತ್ತಾರೆ. ಅನಂತರ ಏನಾಯಿತು? ಕುರ್‌ಆನಿನ ಮಾತಿನಲ್ಲೇ ಕೇಳಿರಿ:

"ತರುವಾಯ ಮೂಸಾ ತಮ್ಮ ಲಾಠಿಯನ್ನು ಎಸೆದಾಗ ಹಠಾತ್ತನೆ ಅದು ಅವರ ಮಿಥ್ಯ ಚಮತ್ಕಾರಗಳನ್ನು ನುಂಗುತ್ತಾ ಸಾಗುತ್ತಿತ್ತು." (ಪವಿತ್ರ ಕುರ್‌ಆನ್, 26:45)

"ನಾವು ಮೂಸಾರಿಗೆ ಲಾಠಿಯನ್ನು ಎಸೆದು ಬಿಡಿರೆಂದು ಸೂಚನೆ ಕೊಟ್ಟೆವು. ಅದನ್ನು ಎಸೆದೊಡನೆ ಕ್ಷಣಾರ್ಧದಲ್ಲಿ ಅದು ಅವರ ಮೋಸದ ಮಾಟವನ್ನು ನುಂಗುತ್ತಾ ಸಾಗಿತು. ಹೀಗೆ ಸತ್ಯವಿದ್ದುದು ಸತ್ಯವಾಗಿಯೇ ಸ್ಥಿರವಟ್ಟಿತು. ಅವರು ಮಾಡಿಟ್ಟದ್ದೆಲ್ಲ ಮಿಥ್ಯವಾಯಿತು. ಫಿರ್‌ಔನ್ ಮತ್ತು ಅವನ ಸಂಗಡಿಗರು ಸ್ಪರ್ಧಾರಂಗದಲ್ಲಿ ಸೋತು ಹೋದರು (ಮತ್ತು ವಿಜಯಿಗಳಾಗುವ ಬದಲು)- ಅವಮಾನಿತರಾದರು." (ಪವಿತ್ರ ಕುರ್‌ಆನ್, 7:117-119)

ಈ ರೀತಿ ತನ್ನ ದಾಸನು ತುಂಬಿದ ಮೈದಾನದಲ್ಲಿ ಮಾಡಿದ ಸತ್ಯದ ಘೋಷಣೆಯನ್ನು ಅಲ್ಲಾಹನು ವಾಸ್ತವವಾಗಿ ತೋರಿಸಿದನು.

ಇನ್ನೇನು? ದೊಡ್ಡ ಸಮೂಹವೊಂದು ವೀಕ್ಷಿಸಲು ಬಂದಿದ್ದ ಆ ತಮಾಷೆ ಒಂದೇ ಕ್ಷಣದಲ್ಲಿ ಮುಗಿದು ಹೋಯಿತು. ಮಿಥ್ಯದ ಮೋಸವೆಲ್ಲ ಬಯಲಾಯಿತು. ತುಂಬಿದ ಸಭೆಯಲ್ಲಿ ಸತ್ಯವು ಜಯ ಗಳಿಸಿತು. ಜಾದೂಗಾರರ ಲಾಠಿ, ಹಗ್ಗಗಳು ನೆಲದಲ್ಲಿ ನಿರ್ಜೀವವಾಗಿ ಬಿದ್ದಿದ್ದುವು.

ಈಗ ಜನರ ಮುಂದೆ ಎರಡೇ ದಾರಿಗಳಿದ್ದುವು. ಒಂದೋ ಸ್ಪಷ್ಟವಾಗಿ ಅನಾವರಣಗೊಂಡ ಸತ್ಯವನ್ನು ಸ್ವೀಕರಿಸುವುದು, ನೆಪಗಳ ಸುಳಿಯಿಂದ ಹೊರಬಂದು ಪರಿಣಾಮವೇನಾದೀತೆಂದು ಪರಿಗಣಿಸದೆ ಈ ಸತ್ಯ ಸ್ವೀಕಾರವನ್ನು ಬಹಿರಂಗವಾಗಿ ಘೋಷಿಸುವುದು. ಇಲ್ಲವೇ, ಬಹಳ ಧೈರ್ಯವಾಗಿ ನಿರ್ಲಜ್ಜೆಯಿಂದ ಈ ಸತ್ಯವನ್ನು ಸ್ವೀಕರಿಸಲು ನಿರಾಕರಿಸುವುದು ಮತ್ತು ಅದನ್ನು ಅಳಿಸಲಿಕ್ಕಾಗಿ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡುವುದು. ಇದರ ಹೊರತು ಅನ್ಯ ಮಾರ್ಗವಿರಲಿಲ್ಲ. ಹಾಗೆಯೇ ಆಯಿತು ಕೂಡಾ.

ಜಾದೂಗಾರರ ಸತ್ಯ ಸ್ವೀಕಾರ

"ಆಗ ಎಲ್ಲ ಜಾದೂಗಾರರು ತಾವಾಗಿಯೇ ಸಾಷ್ಟಾಂಗವೆರಗಿಬಿಟ್ಟರು- ಮತ್ತು ಹೀಗೆ ಹೇಳಿದರು, ನಾವು ನಂಬಿದೆವು- ಸರ್ವಲೋಕಗಳ ಪಾಲಕ ಪ್ರಭುವನ್ನು, ಮೂಸಾ ಮತ್ತು ಹಾರೂನರ ಪ್ರಭುವನ್ನು." (ಪವಿತ್ರ ಕುರ್‌ಆನ್, 26:46-48)

ಇದೇ ಘಟನೆಯನ್ನು ಇನ್ನೊಂದು ರೀತಿಯಲ್ಲಿ ಹೀಗೆ ವಿವರಿಸಲಾಗಿದೆ,

"ಯಾವುದೋ ಒಂದು ವಸ್ತುವು ಮಾಟಗಾರರ ಅಂತರಂಗದಿಂದಲೇ ಅವರನ್ನು ಸಾಷ್ಟಾಂಗವೆರಗುವಂತೆ ಮಾಡಿತು. ಅವರು, 'ನಾವು ಸರ್ವಲೋಕಪಾಲಕನನ್ನು ನಂಬಿದೆವು-ಮೂಸಾ ಮತ್ತು ಹಾರೂನ್ ನಂಬುವ ಪ್ರಭುವನ್ನು' ಎಂದರು."

(ಪವಿತ್ರ ಕುರ್‌ಆನ್, 7:120-122)

"ಕೊನೆಗೆ ಎಲ್ಲ ಜಾದೂಗಾರರೂ ಸಾಷ್ಟಾಂಗವೆರಗುವಂತೆ ಮಾಡಲಾಯಿತು ಮತ್ತು 'ನಾವು ಹಾರೂನ್ ಮತ್ತು ಮೂಸಾರ ಪ್ರಭುವಿನ ಮೇಲೆ ವಿಶ್ವಾಸವಿಟ್ಟೆವು' ಎಂದು ಅವರು ಕೂಗಿ ಹೇಳಿದರು." (ಪವಿತ್ರ ಕುರ್‌ಆನ್, 20:70)

ಕೆಲವೇ ಕ್ಷಣಗಳ ಹಿಂದೆ ಮೂಸಾರೊಂದಿಗೆ ಸ್ಪರ್ಧೆಗಿಳಿದಿದ್ದ ಮತ್ತು ಅವರನ್ನು ಸೋಲಿಸಲು ತೀವ್ರ ಪ್ರಯತ್ನಪಟ್ಟಿದ್ದ ಅದೇ ಜಾದೂಗಾರರು ಈಗ ಸತ್ಯವನ್ನು ಕಂಡು ಕೊಂಡರು. ಸತ್ಯವು ಅವರ ಮುಂದೆ ಸ್ಪಷ್ಟವಾಗಿ ಅನಾವರಣಗೊಂಡಿತ್ತು. ಜಾದೂ ಏನೆಂದು ಅವರಿಗೆ ತಿಳಿದಿದೆ ತಾನೇ? ಇದಂತೂ ಜಾದೂ ಅಲ್ಲ, 'ಪ್ರವಾದಿತ್ವದ ಚಮತ್ಕಾರ'ವೆಂಬುದನ್ನು ಅವರು ಗುರುತಿಸಿಕೊಂಡರು.

ಸತ್ಯವನ್ನು ಕಂಡುಕೊಂಡ ಬಳಿಕ ಅವರಿಗೆ ಯಾವುದೇ ಲೌಕಿಕ ನೆವನ ಅಥವಾ ಭೌತಿಕ ಲಾಭ ಅಡ್ಡಿಯಾಗಲಿಲ್ಲ, ಅವರು ಹೇಡಿಗಳಂತೆ ಅಥವಾ ನೆಪ ಹುಡುಕುವವರಂತೆ ಮೌನವಾಗಿ ಕುಳಿತುಕೊಳ್ಳಲಿಲ್ಲ, ಬದಲಾಗಿ, ಅಲ್ಲಾಹನು ಪ್ರತಿಯೊಬ್ಬ ವಿಶ್ವಾಸಿಯಲ್ಲಿ ನೋಡ ಬಯಸುವಂತಹ ಪೌರುಷವನ್ನು ಪ್ರದರ್ಶಿಸಿದರು. ಅವರು ಸತ್ಯವನ್ನು ಸ್ವೀಕರಿಸಿ, ಅದನ್ನು ಬಹಿರಂಗವಾಗಿ ಘೋಷಿಸಿಯೇ ಬಿಟ್ಟರು. ಅವರು ಬಯಸಿದ್ದರೆ ತಮ್ಮ ಈಮಾನನ್ನು ಬಚ್ಚಿಟ್ಟು ಗುಪ್ತವಾಗಿ ಮೂಸಾರ ಮುಂದೆ ಹೇಳಬಹುದಾಗಿತ್ತು. ಆದರೆ ಅವರು ವಿಶ್ವಾಸ ವಿರಿಸಲು ಕಾರಣವಾಗಿದ್ದ ಸ್ವಾತಂತ್ರ್ಯ ಮತ್ತು ಸ್ಥೈರ್ಯದ ಭಾವನೆಗಳಿಗೆ ಅದು ವಿರುದ್ಧ ವಾಗುತ್ತಿತ್ತು. ಮನಸಾರೆ ಸತ್ಯಸಂದೇಶಕ್ಕೆ ಓಗೊಡುವವರು ಎಂದೂ ಅಪಾಯ ಮತ್ತು ಭೀತಿಯ ಕಾರಣದಿಂದ ಹಿಂದೆ ಸರಿಯುವುದಿಲ್ಲ, ಆದ್ದರಿಂದ ಅವರು ನೈಜ ಸತ್ಯವಿಶ್ವಾಸಿ ಗಳಂತಹ ಕೆಲಸವನ್ನೇ ಮಾಡಿದರು. ಸತ್ಯದ ಸಂದೇಶವನ್ನು ಸ್ವೀಕರಿಸಿ, ಇನ್ನೇನಾಗುವುದೋ ಆಗಲಿ ಎಂದು ಅದನ್ನು ಬಹಿರಂಗವಾಗಿಯೇ ಘೋಷಿಸಿದರು.

ಈ ತುಂಬಿದ ಸಭೆಯಲ್ಲಿ ಜಾದೂಗಾರರು ಸತ್ಯಸ್ವೀಕಾರ ಮಾಡಿದ್ದರಿಂದ ಫಿರ್‌ಔನನ ಎಲ್ಲ ನಿರೀಕ್ಷೆಗಳಿಗೂ ತಣ್ಣೀರೆರಚಿದಂತಾಯಿತು. ಮಾತ್ರವಲ್ಲ, ಅವನ ದೇವತ್ವ ವಾದಕ್ಕೂ ಬಲವಾದ ಪೆಟ್ಟು ಬಿತ್ತು. ಅಲ್ಲಾಹನ ತಂತ್ರವು ಅವನ ತಂತ್ರವನ್ನು ಅವನ ಮುಖಕ್ಕೇ ಹೊಡೆಯುವಂತೆ ಮಾಡಿತು, ಮೂಸಾರಿಗೆ ಸೋಲುಣಿಸಿ ಅವರ ಪ್ರವಾದಿತ್ವವಾದವು ಮಣ್ಣು ಮುಕ್ಕುವಂತೆ ಮಾಡುತ್ತೇನೆ, ಈಜಿಪ್ಟ್‌ನಲ್ಲಿ ಅವರ ಸಂದೇಶ ಸಮಾಧಿಯಾಗುವುದು, ಈ ಹೊಸ ಧರ್ಮ ಮತ್ತು ಅದರ ವಾಹಕನು ಅಳಿದೇ ಹೋಗುವರು ಎಂದು ಭಾವಿಸಿ

ಕೊಂಡಿದ್ದ ಫಿರ್‌ಔನ್ ಈಗ ಎಲ್ಲವನ್ನೂ ಕಳೆದುಕೊಂಡಂತಾಗಿ ತನ್ನ ಗದ್ದುಗೆ ಮತ್ತು ದೇವತ್ವವನ್ನು ಉಳಿಸಲು ಹೆಣಗಾಡ ತೊಡಗಿದ.

ಧರ್ಮದ ಶತ್ರುಗಳು ಈ ಧರ್ಮವನ್ನು ಅಳಿಸಿ ಹಾಕಲು ಯಾವೆಲ್ಲ ತಂತ್ರಗಳನ್ನು ಪ್ರಯೋಗಿಸುತ್ತಾರೋ ಆ ಎಲ್ಲ ತಂತ್ರಗಳು ಅವರದೇ ಗೋರಿಗಳನ್ನು ತೋಡುತ್ತದೆಂಬುದು ಅಲ್ಲಾಹನ ಮಹಿಮೆಯಾಗಿದೆ. (ಬಾಹ್ಯ ದೃಷ್ಟಿಯ ಹೆಚ್ಚಿನ ಜನರು ಇದನ್ನು ಅರಿತಿರುವುದಿಲ್ಲ) ಹಗಲಿನ ಬೆಳಕಿನಲ್ಲಿ ವಿಶಾಲವಾದ ತೆರೆದ ಮೈದಾನದಲ್ಲಿ ಮೂಸಾರಿಗೆ ಸಿಕ್ಕಿದ ಈ ವಿಜಯವು ಫಿರ್‌ಔನನ ದೇವತ್ವದ ಗೋಪುರವನ್ನು ಒಂದೇ ಕ್ಷಣದಲ್ಲಿ ನೆಲಸಮ ಮಾಡಿಬಿಟ್ಟಿತು. ಸತ್ಯವು ಮೂಸಾರ ಬಳಿಯಲ್ಲೇ ಇದೆ, ಫಿರ್‌ಔನನ ಬಳಿಯಲ್ಲಾದರೋ ದಬ್ಬಾಳಿಕೆ, ಕ್ರೌರ್ಯ, ಮೋಸ, ವಂಚನೆಯಲ್ಲದೆ ಇನ್ನೇನೂ ಇಲ್ಲವೆಂಬುದನ್ನು ಜನರು ತಿಳಿದುಕೊಂಡರು. ಇಡೀ ದೇಶದಲ್ಲಿ ಮೂಸಾರ ಸಂದೇಶವು ಒಂದು ವಿಜಯೀ ತತ್ವಸಿದ್ಧಾಂತವೆಂಬ ನೆಲೆಯಲ್ಲಿ ಪರಿಚಯಿಸಲ್ಪಟ್ಟಿತು. ಜನರಲ್ಲಿ ಹೆಚ್ಚಿನವರು ಇದನ್ನು ಬಹಿರಂಗಪಡಿಸದಿದ್ದರೂ ಮನಸ್ಸಿನಲ್ಲಿ ಈ ಸಿದ್ಧಾಂತದ ಸತ್ಯತೆಯನ್ನು ಒಪ್ಪಿಕೊಂಡರು.

ಈ ವಿದ್ಯಮಾನಗಳು ಫಿರ್‌ಔನನ ಮಟ್ಟಿಗೆ ಅನಿರೀಕ್ಷಿತ, ಕಳವಳಕಾರಿ ಮತ್ತು ಆತಂಕಕಾರಿಯಾಗಿತ್ತು. ಆತ ಈ ಸ್ಪಷ್ಟ ಸೋಲಿನಿಂದ ಕೆರಳಿ ಕೆಂಡಾಮಂಡಲನಾದ. ಕೇವಲ ಕೋಪ ಮತ್ತು ಆತಂಕದಿಂದ ಏನೂ ಸಾಧಿಸಿದಂತಾಗಿರಲಿಲ್ಲ. ಅವನು ತನ್ನ ಮೋಸದ ಜಾಲವನ್ನು ಪುನಃ ಬಿಚ್ಚಿದ. ಹೊಸ ತಂತ್ರವನ್ನು ಪ್ರಯೋಗಿಸಿದ. ಜನಸಾಮಾನ್ಯರ ಗಮನವನ್ನು ನೈಜ ಸಮಸ್ಯೆಯಿಂದ ಸರಿಸಿ ಬೇರೆ ಚರ್ಚೆಯಲ್ಲಿ ಅವರು ಸಿಲುಕಲೆಂದು ಮೂಸಾ ಮತ್ತು ಜಾದೂಗಾರರ ಮೇಲೆ ಕೂಡಲೇ ಕುತಂತ್ರದ ಭೀಕರ ಆರೋಪವನ್ನು ಹೊರಿಸಿಬಿಟ್ಟ.

ಫಿರ್‌ಔನನ ಬೆದರಿಕೆ ಮತ್ತು ಸುಳ್ಳಾರೋಪಗಳು

"ಫಿರ್‌ಔನ್ (ಹೀಗೆ) ಹೇಳಿದನು, ನಾನು ನಿಮಗೆ ಅನುಮತಿ ಕೊಡುವುದಕ್ಕೆ ಮುಂಚೆಯೇ ನೀವು ಅವನ ಮೇಲೆ ವಿಶ್ವಾಸವಿಟ್ಟಿರಾ? ಇವನು ನಿಮಗೆ ಇಂದ್ರಜಾಲ ವಿದ್ಯೆಯನ್ನು ಕಲಿಸಿದ ಗುರು ಎಂದು ತಿಳಿಯಿತು. ಸರಿ. ಇನ್ನು ನಾನು ನಿಮ್ಮ ಕೈಕಾಲುಗಳನ್ನು ವಿರುದ್ಧ ದಿಕ್ಕುಗಳಿಂದ ಕತ್ತರಿಸಿ ಹಾಕುತ್ತೇನೆ ಮತ್ತು ಖರ್ಜೂರ ವೃಕ್ಷದ ಕಾಂಡಗಳ ಮೇಲೆ ನಿಮ್ಮನ್ನು ಶಿಲುಬೆಗೇರಿಸುತ್ತೇನೆ. ಆಗ ನಮ್ಮಿಬ್ಬರ ಪೈಕಿ ಯಾರ ಯಾತನೆ ಕಠಿಣ ಹಾಗೂ ದೀರ್ಘವಾದುದೆಂದು (ಅರ್ಥಾತ್ ನಿಮಗೆ ಕಠಿಣ ಶಿಕ್ಷೆ ನೀಡಲು ಶಕ್ತನು ನಾನೋ ಅಥವಾ ಮೂಸಾರೋ ಎಂದು) ನಿಮಗೆ ಚೆನ್ನಾಗಿ ತಿಳಿಯುವುದು." (ಪವಿತ್ರ ಕುರ್‌ಆನ್, 20:71)

"ಆಗ ಫಿರ್‌ಔನನು, 'ನಾನು ನಿಮಗೆ ಅನುಮತಿ ಕೊಡುವುದಕ್ಕೆ ಮುಂಚೆ ನೀವು ಮೂಸಾನ ಮಾತನ್ನು ನಂಬಿದಿರಾ? ಖಂಡಿತವಾಗಿಯೂ ಇವನು ನಿಮಗೆ ಜಾದುಗಾರಿಕೆಯನ್ನು ಕಲಿಸಿದ ನಿಮ್ಮ ಹಿರಿಯನಾಗಿದ್ದಾನೆ. ಸರಿ, ನಿಮಗೆ ಈಗಲೇ ತಿಳಿಯಲಿದೆ. ನಾನು ನಿಮ್ಮ ಕೈ

ಕಾಲುಗಳನ್ನು ವಿರುದ್ಧ ದಿಕ್ಕುಗಳಿಂದ ಕಡಿಸುವೆನು ಮತ್ತು ನಿಮ್ಮೆಲ್ಲರನ್ನೂ ಶಿಲುಬೆಗೇರಿಸಿ ಬಿಡುವೆನು' ಎಂದನು." (ಪವಿತ್ರ ಕುರ್‌ಆನ್, 26:49)

ಅಲ್‌ಆಅ್‌ರಾಫ್ ಅಧ್ಯಾಯದಲ್ಲಿ ಬೆದರಿಕೆ ಮತ್ತು ಆರೋಪಗಳ ಇನ್ನೊಂದು ಮುಖವನ್ನು ನೋಡಿರಿ:

"ಫಿರ್‌ಔನನು ಹೇಳಿದನು- ನಾನು ನಿಮಗೆ ಅಪ್ಪಣೆ ಕೊಡುವುದಕ್ಕಿಂತ ಮುಂಚೆ ನೀವು ಅವನ ಮೇಲೆ ವಿಶ್ವಾಸವಿಟ್ಟಿರಾ? ನಿಶ್ಚಯವಾಗಿಯೂ ಇದು ಈ ರಾಜಧಾನಿಯಲ್ಲಿ ಇದರ ಮಾಲಿಕರನ್ನು ಅಧಿಕಾರಚ್ಯುತರಾಗಿ ಮಾಡಲಿಕ್ಕಾಗಿ ನೀವು ಹೂಡಿದ ಒಳಸಂಚಾಗಿತ್ತು. ಇದರ ಪರಿಣಾಮವು ಸದ್ಯದಲ್ಲೇ ನಿಮಗೆ ತಿಳಿಯಲಿದೆ. ನಾನು ನಿಮ್ಮ ಕೈಕಾಲುಗಳನ್ನು ವಿರುದ್ಧ ದಿಕ್ಕುಗಳಿಂದ ಕಡಿಸಿ ಬಿಡುವೆನು. ಅನಂತರ ನಿಮ್ಮೆಲ್ಲರನ್ನು ಶಿಲುಬೆಗೇರಿಸುವೆನು."

(ಪವಿತ್ರ ಕುರ್‌ಆನ್, 7:123-124)

ಫಿರ್‌ಔನನ ಈ ಬೆದರಿಕೆ ಮತ್ತು ಆರೋಪಗಳು ಒಂದು ದುಷ್ಟ ಮತ್ತು ಮತಿಗೆಟ್ಟ ಆಡಳಿತವನ್ನು ಪ್ರತಿಬಿಂಬಿಸುತ್ತದೆ. ಅಧಿಕಾರದ ಕತ್ತಿಯು ಅಕ್ರಮಿ, ನಿರಂಕುಶ, ದುಷ್ಟ ಹಾಗೂ ಸಂಕುಚಿತ ಮನಸ್ಸಿನ ಆಡಳಿತಗಾರರ ಕೈಯಲ್ಲಿರುವಾಗ ಮತ್ತು ಅವರು ಹತಾಶ ಗೊಂಡಿರುವಾಗ, ಅನಂತರ ಅವರು ಏನು ಮಾಡಿದರೂ ಕಡಿಮೆಯೇ. ಮೊದಲು ವಿರೋಧಿಗಳ ಮೇಲೆ ಭೀಕರ ಆರೋಪ ಹೊರಿಸಿ ಜನಸಾಮಾನ್ಯರ ಕಣ್ಣಿಗೆ ಮಣ್ಣೆರಚು ವುದು, ತರುವಾಯ ಹಿಂಸೆ-ದೌರ್ಜನ್ಯಗಳ ಬೆದರಿಕೆ ಹಾಕಿ ಹೆದರಿಸಲು ನೋಡುವುದು, ಇದರಿಂದ ಏನೂ ನಡೆಯದಿದ್ದರೆ ಅತ್ಯಂತ ಕೆಟ್ಟ ರೀತಿಯಲ್ಲಿ ಹಿಂಸೆ, ಅತ್ಯಾಚಾರಗಳನ್ನೆಸಗು ವುದು. ಇದು ಅವರು ಯಾವಾಗಲೂ ಅನುಸರಿಸುತ್ತಾ ಬಂದಿರುವ ನೀತಿಯಾಗಿದೆ.

ಫಿರ್‌ಔನನೂ ಇದೇ ಅಸ್ತ್ರವನ್ನು ಪ್ರಯೋಗಿಸಿದನು. ಮೊದಲು ನಿಗೂಢ ಸಂಚಿನ ಆರೋಪ ಹೊರಿಸಿದ. ಅನಂತರ ಭೀಕರ ಹಿಂಸೆ-ದೌರ್ಜನ್ಯಗಳ ಬೆದರಿಕೆಯೊಡ್ಡಿದ. ಆದರೆ ಈ ಬೆದರಿಕೆಗಳಿಂದ "ಅವರ ಹುಚ್ಚು ಪ್ರೇಮದ ಹುಟ್ಟಡಗುವುದೇ?" ಬನ್ನಿ, ಆತನ ಆರೋಪ ಪಟ್ಟಿ ಮತ್ತು ಬೆದರಿಕೆಗಳನ್ನು ಅವಲೋಕಿಸೋಣ.

1. ಆತನ ಪ್ರಥಮ ಆರೋಪ- ಈ ಸ್ಪರ್ಧೆ ಬರೇ ಮೋಸ. ಈ ಮಾಂತ್ರಿಕರು ಮತ್ತು ಮೂಸಾ ಮೊದಲೇ ಒಟ್ಟಾಗಿದ್ದಾರೆ. ಈ ಮಾಂತ್ರಿಕರೆಲ್ಲ ಮೂಸಾನ ಶಿಷ್ಯರು. ಹಾಗಿರುವಾಗ ತಮ್ಮ ಗುರುವನ್ನು ಅವರು ಎದುರಿಸುವುದಾದರೂ ಹೇಗೆ?

2. ಇದು ಅವರ ಅಪವಿತ್ರ ಮೈತ್ರಿಯ ಒಳಸಂಚಾಗಿದೆ. ಆದ್ದರಿಂದ ಇದನ್ನು ಸತ್ಯಾ ಸತ್ಯದ ಮಾನದಂಡವೆಂದು ಪರಿಗಣಿಸುವಂತಿಲ್ಲ, ಮೊದಲು ಇದು ಸತ್ಯಾಸತ್ಯದ ಹೋರಾಟ. ಇದರಿಂದ ನಮ್ಮ ಧರ್ಮ ಬಹುಶಃ ಉಳಿಯಬಹುದೆಂದು ಹೇಳುತ್ತಿದ್ದ. ಈ ಆರೋಪವು ಆ ಪಂಥಾಹ್ವಾನದಿಂದ ನುಣುಚಿಕೊಳ್ಳುವ ದಾರಿಯಾಗಿತ್ತು.

3. ಈ ಮಾಂತ್ರಿಕರು ಮತ್ತು ಮೂಸಾ ನಡೆಸಿದ ಒಳಸಂಚು, ಈ ದೇಶದ ಮಣ್ಣಿನ ಮಕ್ಕಳಾದ ಕಿಬ್ತಿಗಳನ್ನು ಅಧಿಕಾರದಿಂದ ಕಿತ್ತೆಸೆಯುವುದಕ್ಕಾಗಿತ್ತು. ಈ ರೀತಿ ಅವನು ಜನಾಂಗೀಯ ಪಕ್ಷಪಾತವನ್ನು ಹೊತ್ತಿಸಿ ಉರಿಸುವ ಪ್ರಯತ್ನ ಮಾಡಿದನು. ಅದೇ ಆರೋಪದ ಮೂಲಕ ಮೂಸಾರ ಈ ಎಲ್ಲ 'ಆಟ', ಅಧಿಕಾರವನ್ನು ಗಳಿಸಲಿಕ್ಕಾಗಿದೆಯೆಂದು ಸಾಬೀತು ಪಡಿಸಲು ಪ್ರಯತ್ನಿಸಿದನು. ದುಷ್ಟ ಆಡಳಿತಗಾರರು ಯಾವಾಗಲೂ ಸುಧಾರಕರ ಮೇಲೆ, ಅವರ ಎಲ್ಲ ಪ್ರಯತ್ನಗಳೂ ಅಧಿಕಾರ ಗಳಿಸಲಿಕ್ಕಾಗಿದೆಯೆಂದು ಆರೋಪಿಸುತ್ತಾರೆ.

4. ಅವನು ಪ್ರಜೆಗಳಿಗೆ ಧರ್ಮದ ಪ್ರಕಾರ ನಡೆಯಲು ಅಥವಾ ಧರ್ಮಾಂತರ ಗೊಳ್ಳಲು ತನ್ನ ಅಧಿಕಾರಕ್ಕೆ ಕುತ್ತುಂಟಾಗದ ವರೆಗೆ ಮಾತ್ರ ಅನುಮತಿಯಿದೆಯೆಂದು ಬಿಂಬಿಸಲು ಪ್ರಯತ್ನಿಸಿದರು. ತನ್ನ ಇಚ್ಛೆಗೆ ವಿರುದ್ಧವಾಗಿ ಧರ್ಮದಲ್ಲಿ ನಡೆಯುವ ಮಾತಂತಿರಲಿ, ಹಾಗೇ ಯೋಚಿಸುವುದೂ ಸಾಧ್ಯವಿಲ್ಲ.

5. ತೀವ್ರ ಹಿಂಸೆಯ ಬೆದರಿಕೆಯೊಡ್ಡಿ ಒಂದೆಡೆ ಮಾಂತ್ರಿಕರನ್ನು ಸತ್ಯಸ್ವೀಕಾರ ಮಾಡು ವುದರಿಂದ ತಡೆಯಲು ಪ್ರಯತ್ನಿಸಿದರೆ, ಇನ್ನೊಂದೆಡೆ ಈ ಹೊಸ ಧರ್ಮವನ್ನು ಸ್ವೀಕರಿಸಲು ಸಿದ್ಧರಾಗಿದ್ದ ಎಲ್ಲ ಜನರಿಗೂ ಹಾಗೆ ಮಾಡಿದರೆ ಇದೇ ಕಠಿಣ ಶಿಕ್ಷೆ ದೊರೆಯುವುದೆಂದು ಎಚ್ಚರಿಸಿದನು.

6. ಹಿಂಸೆಯ ಬೆದರಿಕೆಯೊಡ್ಡಿ ಫಿರ್‌ಔನನು ಮಾಂತ್ರಿಕರಿಂದ ಸಂಚಿನ ಬಗ್ಗೆ ತಪ್ಪೊಪ್ಪಿ ಕೊಳ್ಳುವಂತೆ ಮಾಡಬಯಸಿದ್ದನು. ಏಕೆಂದರೆ ಅವನಿಗೆ ಈ ಸೋಲಿನಿಂದಾಗಿ ಉಂಟಾಗಿರುವ ಪರಿಣಾಮಗಳು ತೊಳೆದು ಹೋಗಿ, ಈ ಹೊಸ ಸಂದೇಶದ ನೈತಿಕ ಪ್ರತಿಷ್ಠೆಯು ಅಳಿದು ಹೋಗಬೇಕಾಗಿತ್ತು.

ಮಾಂತ್ರಿಕರ ದೃಢಚಿತ್ತತೆ

ಫಿರ್‌ಔನನ ಈ ಬೆದರಿಕೆಯನ್ನು ಕೇಳಿ ಆ ನವಮುಸ್ಲಿಮರು (ಮಂತ್ರವಾದಿಗಳು) ನೀಡಿದ ಉತ್ತರದಿಂದ ಅವರು ಎಂತಹ ದಿಟ್ಟತನ ಪ್ರದರ್ಶಿಸಿದರೆಂದು ವ್ಯಕ್ತವಾಗುತ್ತದೆ. ಈ ಕಿಕ್ಕಿರಿದು ತುಂಬಿದ ಜನಸಂದಣಿಯ ಮುಂದೆ ಅವರು ಫಿರ್‌ಔನನಿಗೆ ಹೀಗೆ ಉತ್ತರ ಕೊಟ್ಟರು,

"ಜಾದೂಗಾರರು ಹೀಗೆ ಉತ್ತರಕೊಟ್ಟರು, ನಮ್ಮನ್ನು ಸೃಷ್ಟಿಸಿದವನಾಣೆ! ಪ್ರತ್ಯಕ್ಷ ಪ್ರಮಾಣಗಳು ಮುಂದೆ ಬಂದ ಬಳಿಕವೂ (ಸತ್ಯಕ್ಕಿಂತ ಹೆಚ್ಚು) ನಿನಗೆ ಪ್ರಾಶಸ್ತ್ಯ ಕೊಡಲು ನಮ್ಮಿಂದ ಎಷ್ಟು ಮಾತ್ರಕ್ಕೂ ಆಗದು. ನೀನು ಮಾಡಲಿಚ್ಛಿಸಿದ್ದೆಲ್ಲವನ್ನೂ ಮಾಡು. ಅತಿ ಹೆಚ್ಚೆಂದರೆ ನೀನು ಇಹಲೋಕ ಜೀವನದ ತೀರ್ಮಾನ ಮಾತ್ರ ಮಾಡಬಲ್ಲೆ."

(ಪವಿತ್ರ ಕುರ್‌ಆನ್, 20:72)

ಆತನ ಬೆದರಿಕೆಗೆ ಇದು ಮುಖಕ್ಕೆ ಹೊಡೆಯುವಂತಹ ಉತ್ತರ ಮಾತ್ರವಲ್ಲ, ಪ್ರತಿ ಪಂಥಾಹ್ವಾನವಾಗಿತ್ತು. ಅವರು ಹೇಳಿದರು, ನೀನು ನಮಗೆ ಈ ಲೌಕಿಕ ಜೀವನದ ಪರಿಣಾಮದ ಬಗ್ಗೆ ಹೆದರಿಸುತ್ತೀಯಾ? ಹಾಗಾದರೆ ಕೇಳು,

"ಅವರು ಉತ್ತರಿಸಿದರು- ನಮಗಂತು ನಮ್ಮ ಪ್ರಭುವಿನ ಕಡೆಗೇ ಮರಳಲಿಕ್ಕಿದೆ. ನಮ್ಮ ಪ್ರಭುವಿನ ದೃಷ್ಟಾಂತಗಳು ನಮ್ಮ ಮುಂದೆ ಬಂದಾಗ ನಾವು ಅವುಗಳ ಮೇಲೆ ವಿಶ್ವಾಸ ವಿರಿಸಿದೆವೆಂಬ ಕಾರಣಕ್ಕಾಗಿಯೇ ವಿನಾ ಇನ್ನಾವುದಕ್ಕೂ ನೀನು ನಮ್ಮ ವಿರುದ್ಧ ಪ್ರತೀಕಾರ ಕ್ಕಿಳಿಯುವುದಿಲ್ಲ, ಓ ನಮ್ಮ ಪ್ರಭೂ, ನಮಗೆ ಸಹನೆಯನ್ನು ಅನುಗ್ರಹಿಸು. ನಾವು ನಿನ್ನ ಮುಸ್ಲಿಮ(ವಿಧೇಯ ಆಜ್ಞಾಪಾಲಕ)ರಾಗಿರುವ ಸ್ಥಿತಿಯಲ್ಲಿ ನೀನು ನಮ್ಮನ್ನು ಈ ಲೋಕದಿಂದ ಎತ್ತಿಕೋ." (ಪವಿತ್ರ ಕುರ್‌ಆನ್, 7:125-126)

ಇಲ್ಲಿ ಅವರು ಲೌಕಿಕ ಜೀವನದ ಬಗ್ಗೆ ತಮ್ಮ ವಿಶ್ವಾಸವನ್ನು ಘೋಷಿಸಿದ್ದು ಮಾತ್ರವಲ್ಲ, ಮೂಸಾರ ಪ್ರವಾದಿತ್ವ ಘೋಷಣೆಯನ್ನೂ ಬಲವಾಗಿ ಸಮರ್ಥಿಸಿದರು. ಜೊತೆಗೆ ಮೂಸಾ(ಅ) ಮಂತ್ರವಾದಿಯೆಂಬ ಅವನ ಅಪಪ್ರಚಾರದ ಪೊಳ್ಳುತನವನ್ನೂ ಅನಾವರಣಗೊಳಿಸಿದರು. ತರುವಾಯ ತಾವು ಯಾಕೆ ವಿಶ್ವಾಸ ತಾಳಿದೆವು ಎಂಬುದರ ಕಾರಣವನ್ನೂ ತಿಳಿಸಿದರು.

"ಅದಕ್ಕೆ ಅವರು ಹೀಗೆ ಉತ್ತರಿಸಿದರು, ಪರವಾಗಿಲ್ಲ, ನಾವು ನಮ್ಮ ಪ್ರಭುವಿನ ಸನ್ನಿಧಿಗೆ ತಲುಪಿ ಬಿಡುವೆವು. ನಮ್ಮ ಪ್ರಭು ಪಾಪಗಳನ್ನು ಕ್ಷಮಿಸಿ ಬಿಡುವನೆಂದು ನಮಗೆ ನಿರೀಕ್ಷೆ ಇದೆ. ಏಕೆಂದರೆ ನಾವು ಎಲ್ಲರಿಗಿಂತಲೂ ಮೊದಲು ಸತ್ಯವಿಶ್ವಾಸ ಸ್ವೀಕರಿಸಿದವ ರಾಗಿದ್ದೇವೆ." (ಪವಿತ್ರ ಕುರ್‌ಆನ್, 26:50-51)

"ನಮ್ಮ ಪ್ರಭು ನಮ್ಮ ಅಪರಾಧಗಳನ್ನೂ ನೀನು ನಮ್ಮ ಮೇಲೆ ನಿರ್ಬಂಧಗೊಳಿಸಿದ ಇಂದ್ರಜಾಲವನ್ನೂ ಕ್ಷಮಿಸಲಿಕ್ಕಾಗಿ ನಾವು ನಮ್ಮ ಪ್ರಭುವಿನ ಮೇಲೆ ವಿಶ್ವಾಸವಿರಿಸಿದ್ದೇವೆ. ಅಲ್ಲಾಹನೇ ಶುಭಕರನು ಮತ್ತು ಅವನೇ ಚಿರಂತನನೂ ಆಗಿರುತ್ತಾನೆ."

(ಪವಿತ್ರ ಕುರ್‌ಆನ್, 20:73)

ಮಂತ್ರವಾದಿಗಳ ಈ ಉತ್ತರದಿಂದ ಅಲ್ಲಾಹನು ಪ್ರತಿಯೊಬ್ಬ ಮೂಮಿನ್ ಮತ್ತು ಮುಸ್ಲಿಮ್ (ವಿಶ್ವಾಸಿ ಮತ್ತು ಆಜ್ಞಾನುಸಾರಿ) ದಾಸನಲ್ಲಿ ಕಾಣಬಯಸುವ ನೈಜ ಮಾನ ದಂಡವೇನೆಂದು ನಮಗೆ ತಿಳಿದು ಬರುತ್ತದೆ. ಪ್ರತಿಯೊಬ್ಬ ವಿಶ್ವಾಸಿಯೂ ಬದುಕಿನಲ್ಲಿ ಇಂತಹದೇ ಪಾತ್ರವನ್ನು ವಹಿಸಬೇಕಾಗಿದೆ. ಫಿರ್‌ಔನ್ ಮತ್ತು ಮೂಸಾರ ಸಂಘರ್ಷದ ಈ ಚರಿತ್ರೆಯಲ್ಲಿ ಅಡಕವಾಗಿರುವ ಈ ಪಾಠಬೋಧಕ ಅಂಶದಿಂದಾಗಿಯೇ ಈ ಘಟನೆಯನ್ನು ಪದೇಪದೇ ವಿವರಿಸಲಾಗುತ್ತದೆ. ಇಲ್ಲಿ ಪ್ರಾಮಾಣಿಕ ವಿಶ್ವಾಸಿಗಳೊಂದಿಗೆ, ಅಲ್ಲಾಹನು ಎಂತಹ ಚಾರಿತ್ರ್ಯವನ್ನು ಬಯಸುತ್ತಾನೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಎಲ್ಲ ಕಾಲದ ಮತ್ತು ಎಲ್ಲ ಪ್ರದೇಶಗಳ ಮುಸ್ಲಿಮರೊಂದಿಗೆ ಹೀಗೆ ಹೇಳಲಾಗುತ್ತದೆ, 'ಅಕ್ರಮ-ಹಿಂಸೆಗಳ ಬಿರುಗಾಳಿಯೇ ಏಳಲಿ, ಅಧಿಕಾರ ಮದದಿಂದ ಪ್ರಮತ್ತರಾದ ಆಡಳಿತಗಾರರು

ಅಕ್ರಮ-ದೌರ್ಜನ್ಯಗಳ ಅತ್ಯಂತ ನೀಚ ಅಸ್ತ್ರಗಳನ್ನೇ ಪ್ರಯೋಗಿಸಲಿ, ಜೀವದಾನದ ಬದಲಿಗೆ ನಿಮ್ಮ ನಿಷ್ಠೆ ಮತ್ತು ನಿಮ್ಮ ವಿಶ್ವಾಸವನ್ನು ಖರೀದಿಸಲು ಎಷ್ಟೇ ಪ್ರಯತ್ನಿಸಲಿ. ನೀವು ಅವರನ್ನು ಧೈರ್ಯವಾಗಿ ಎದುರಿಸಿರಿ. ಜೀವ ಬೇಕಾದರೆ ಕೊಡಲು ಸಿದ್ಧರಾಗಿರಿ. ಆದರೆ ಅವರೊಂದಿಗೆ ಮೈತ್ರಿ ಮಾಡಿಕೊಳ್ಳುವುದನ್ನು ಸಹಿಸದಿರಿ.'

ಮಂತ್ರವಾದಿಗಳು ನೀಡಿದ ಉತ್ತರವು ಮಾನವ ಚರಿತ್ರೆಯಲ್ಲಿ ವಿಶ್ವಾಸಿಗಳ ಪಾಠ ಬೋಧಕ ಪಾತ್ರದ ಅತ್ಯುತ್ತಮ ಉದಾಹರಣೆಯಾಗಿದೆ. ಮರ್ಯಾದಸ್ಥ, ಆತ್ಮಸಾಕ್ಷಿಯುಳ್ಳ ಮತ್ತು ಶಿಸ್ತುಬದ್ಧವಾದ ವ್ಯಕ್ತಿಗೆ (ಇದು ವಿಶ್ವಾಸಿಯಿಂದ ಮಾತ್ರ ಸಾಧ್ಯ) ಮರಣವನ್ನು ಸ್ವೀಕರಿಸುವುದು ಸುಲಭ. ಆದರೆ ಸತ್ಯವನ್ನು ಕಂಡುಕೊಂಡ ಬಳಿಕ ಕೇವಲ ಭೌತಿಕ ಲಾಭಗಳಿಗಾಗಿ ಅಥವಾ ಸತ್ವಪರೀಕ್ಷೆ ಮತ್ತು ಸಂಕಷ್ಟಗಳಿಗೆ ಹೆದರಿ ಆ ಸತ್ಯವನ್ನು ಕೈಬಿಡುವುದು ಸಾಧ್ಯವಿಲ್ಲವೆಂಬುದನ್ನು ಅವರು ತೋರಿಸಿಕೊಟ್ಟರು. ನಿರಂಕುಶರಲ್ಲಿ ನಿರಂಕುಶನಾದ ಆಡಳಿತ ಗಾರನ ಹಿಂಸೆ-ದೌರ್ಜನ್ಯಗಳು ನಶ್ವರ ಮಾನವನ ದೇಹದಲ್ಲಿ ಜೀವ ಇರುವ ವರೆಗೆ ಮಾತ್ರ ನಡೆಯುತ್ತದೆ. ಯಾವ ಕ್ಷಣದಲ್ಲಿ ಶರೀರದಿಂದ ಪ್ರಾಣಪಕ್ಷಿ ಹಾರಿ ಹೋಯಿತೋ ಅನಂತರ ಅವನದೇನೂ ನಡೆಯುವುದಿಲ್ಲ, ಈ ಲೌಕಿಕ ಜೀವನವು ಕೇವಲ ಕೆಲವು ದಿನಗಳದ್ದಾಗಿದೆ. ಹೆಚ್ಚೆಂದರೆ ಮಾನವ 100-150 ವರ್ಷಗಳ ಕಾಲ ಬದುಕಿರ ಬಲ್ಲ, ಈ ಅಲ್ಪಕಾಲದಲ್ಲಿ ಎಷ್ಟೇ ದೌರ್ಜನ್ಯವೆಸಗಲಿ (ವಸ್ತುತಃ ಅಲ್ಲಾಹನಿಚ್ಛೆಯಿಲ್ಲದೆ ಅದೂ ಮನುಷ್ಯನಿಗೆ ಸಾಧ್ಯವಿಲ್ಲ) ಅನಂತರ ಎಷ್ಟು ದೊಡ್ಡ ಶಕ್ತಿಗೂ ಏನೂ ಮಾಡಲಾಗದು. ತನ್ನ ನಶ್ವರ ಜೀವನವನ್ನು ಉಳಿಸಲಿಕ್ಕಾಗಿ ಅನಶ್ವರವಾದ ಜೀವನವನ್ನು ಹಾಳು ಮಾಡುವವನು ಮಹಾ ಮೂರ್ಖ ನಾಗಿದ್ದಾನೆ. ಆದ್ದರಿಂದಲೇ ಮಂತ್ರವಾದಿಗಳು "ನಿನಗೇನು ಮಾಡಬೇಕೋ ಮಾಡಿ ನೋಡು. ಇದು ಅಪರಾಧವಾಗಿದ್ದರೆ ಇಂತಹ ಅಪರಾಧವನ್ನು ನೂರಾರು ಬಾರಿ ಮಾಡುವೆವು" ಎಂಬ ಪಂಥಾಹ್ವಾನ ನೀಡಿದರು.

ಈ ವಿಶ್ವಾಸದ ಪ್ರಕಟನೆಯು ಯಾವುದೇ ಸಂಚಿನಿಂದಾಗಿರಲಿಲ್ಲ, ಇದು ಸತ್ಯವನ್ನು ವಿರೋಧಿಸಿದ್ದ ಮತ್ತು ಸತ್ಯಕ್ಕೆದುರಾಗಿ ಸ್ಪರ್ಧೆಗೆ ಬಂದುದರ ಪ್ರಾಯಶ್ಚಿತ್ತವಾಗಿತ್ತು. ಅಲ್ಲಾಹನು ಮಾತ್ರ ಚಿರಂತನನು, ಅಮರನು. ಅವನ ಅಸ್ತಿತ್ವಕ್ಕೆ ಅಳಿವೇ ಇಲ್ಲ, ಅವನ ಶಿಕ್ಷೆ ಮತ್ತು ಪುರಸ್ಕಾರಗಳು ಶಾಶ್ವತವಾಗಿದೆ. ಈ ವಾಸ್ತವಿಕತೆಯನ್ನು ಅಲ್ಲಾಹನು ಈ ರೀತಿ ಸ್ಪಷ್ಟ ಪಡಿಸಿರುವನು,

"ವಾಸ್ತವದಲ್ಲಿ ಅಪರಾಧಿಯಾಗಿ ತನ್ನ ಪ್ರಭುವಿನ ಸನ್ನಿಧಿಯಲ್ಲಿ ಹಾಜರಾದವನಿಗೆ ನರಕವಿದೆ. ಅದರಲ್ಲಿ ಅವನು ಸಾಯಲಿಕ್ಕೂ ಇಲ್ಲ ಬದುಕಲಿಕ್ಕೂ ಇಲ್ಲ, ಅವನ ಸನ್ನಿಧಿಯಲ್ಲಿ ಯಾರು ಸತ್ಯವಿಶ್ವಾಸಿಯ ನೆಲೆಯಲ್ಲಿ ಹಾಜರಾದನೋ ಯಾರು ಸತ್ಕರ್ಮವೆಸಗಿದನೋ ಇಂತಹವರಿಗೆ ಉನ್ನತ ಸ್ಥಾನಗಳಿವೆ. ಸದಾ ಹಸಿರಾಗಿರುವ ಉದ್ಯಾನಗಳು. ಅವುಗಳ

ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವುವು. ಅವರು ಅವುಗಳಲ್ಲಿ ಸದಾಕಾಲ ವಾಸಿಸುತ್ತಿರುವರು. ತನ್ನನ್ನು ಪರಿಶುದ್ಧಗೊಳಿಸುವವನಿಗೆ ಪ್ರತಿಫಲವಿದು."

(ಪವಿತ್ರ ಕುರ್‌ಆನ್, 20:74-76)

ಅಂದರೆ ಪರಿಶುದ್ಧ ಜೀವನ ಸಾಗಿಸಿ ತನ್ನ ಪ್ರಭುವಿನ ಸಂಪ್ರೀತಿಯನ್ನು ಗಳಿಸುವ ಪ್ರಯತ್ನದ ವೇಳೆ ಆಡಳಿತ ವರ್ಗದ ಕೋಪ ತಾಪಗಳಿಗೆ ಗುರಿಯಾಗಿ ಅವರಿಂದ ಅಪರಾಧಿಯೆಂದು ಕರೆಸಿಕೊಂಡವನು ನಿಜವಾದ ಅಪರಾಧಿಯಲ್ಲ, ಬದಲಾಗಿ, ಜನರನ್ನು ಸಂತುಷ್ಟಗೊಳಿಸಲಿಕ್ಕಾಗಿ ಅಥವಾ ಅವರಿಂದ ಭಯಪಟ್ಟು ತನ್ನ ನೈಜ ಒಡೆಯ-ಸರ್ವಲೋಕಗಳ ಪ್ರಭುವಾದ ಅಲ್ಲಾಹನ ಆಜ್ಞೋಲ್ಲಂಘನೆ ಮಾಡುವವನು ನೈಜ ಅಪರಾಧಿಯಾಗಿದ್ದಾನೆ. ಇಂತಹ ವ್ಯಕ್ತಿ ಈ ಲೋಕದಲ್ಲಿ ಕೆಲವು ದಿನಗಳ ಮಟ್ಟಿಗೆ ಜೀವನದ ಸುಖಾಡಂಬರಗಳನ್ನು ಅನುಭವಿಸಿದರೂ ಕೊನೆಗೊಂದು ದಿನ ತನ್ನ ನೈಜ ಒಡೆಯನ ಮುಂದೆ ವಿಚಾರಣೆಗೆ ನಿಲ್ಲಲೇಬೇಕಾಗಿದೆ. ಅಂದು ಅವನು ಯಾವುದೇ ಸಹಾಯ ದೊರೆಯದ, ಶಿಫಾರಸು ನಡೆಯದ ಮತ್ತು ಬಿಡುಗಡೆಯ ಯಾವುದೇ ದಾರಿಯನ್ನು ಕಾಣದ ಅಪರಾಧಿಯಾಗಿ ಪರಿಗಣಿಸಲ್ಪಡುವನು. ಸತ್ಯವನ್ನು ಕಂಡುಕೊಂಡ ಬಳಿಕವೂ ಕೇವಲ ಭೌತಿಕ ಲಾಭ ಗಳಿಕೆಗಾಗಿ ಅಥವಾ ಜನರಿಗೆ ಹೆದರಿ ಅದನ್ನು ಸ್ವೀಕರಿಸದೆ, ಅದನ್ನು ದಮನಿಸಲು ಮತ್ತು ಹತ್ತಿಕ್ಕಲು ಪ್ರಯತ್ನಿಸುವುದರಲ್ಲಿ ಭಾಗಿಯಾಗುವವರಿಗೆ ಮುಕ್ತಿಯೇ ಇಲ್ಲದಂತಹ ಭಯಾನಕ ನರಕ ಶಿಕ್ಷೆಯನ್ನು ಅಲ್ಲಾಹನು ಕಾದಿರಿಸಿದ್ ದಾನೆ,

'ಅಲ್ಲಾಹನ ಪಾಪಿಗಳಿಗೆ ಇರುವುದು ಬೇರೆಯೇ ಶಿಕ್ಷೆ
ಎಂದೆಂದಿಗೂ ದೊರಕದು ಅವರಿಗೆ ಯಾವುದೇ ರಕ್ಷೆ'

ಭುಗಿಲೇಳುವ ಜ್ವಾಲೆಗಳು ಅವನನ್ನು ಸ್ವಾಗತಿಸುವುದು. ಅವನ ಚರ್ಮ ಕರಗಿ ನೀರಾಗುವುದು. ಅವನಿಗೆ ನೀಡಲಾದ ಶಿಕ್ಷೆಯಲ್ಲಿ ಕಡಿತವುಂಟಾಗದಿರಲು ಅವನಿಗೆ ಹೊಸ ಚರ್ಮವನ್ನು ಹೊದಿಸಲಾಗುವುದು. ಅವನು ಉರಿಯುತ್ತಲೇ ಇರುವಂತಾಗಲು ಅವನಿಗೆ ಟಾರು ಮತ್ತು ಗಂಧಕದ ಉಡುಪು ತೊಡಿಸಲಾಗುವುದು. ಯಾವ ಜೀವನವನ್ನು ಉಳಿಸಲಿಕ್ಕಾಗಿ ಅವನು ಇಷ್ಟೆಲ್ಲ ಶ್ರಮ ಪಟ್ಟನೋ ಅದೇ ಜೀವನವು ಅವನಿಗೆ ಪ್ರಾಣ ಕಂಟಕವಾಗುವುದು. ಶಿಕ್ಷೆಯ ಭೀಕರತೆಯಿಂದ ಪಾರಾಗಲು ಅವನು ಸಾಯಲಿಚ್ಛಿಸುವನು. ಆದರೆ ಅವನ ಜೀವ ಎಂದಿಗೂ ಕೊನೆಗೊಳ್ಳದು. ಅವನಿಗೆ ಅಲ್ಲಿ ಸಿಗುವ ಬದುಕು ಮರಣಕ್ಕಿಂತ ಕೆಟ್ಟದಾಗಿರುವುದು. ಅವನು ಚಡಪಡಿಸುವನು. ಆರ್ತನಾದ ಹಾಕುವನು, ತಲೆ ಚಚ್ಚುವನು. ಆದರೆ ಓಡಿ ಹೋಗಲು ಅವನಿಗೆ ಯಾವುದೇ ದಾರಿ ಸಿಗಲಾರದು. (ಅಲ್ಲಾಹನು ನಮ್ಮನ್ನು ಅದರಿಂದ ರಕ್ಷಿಸಲಿ.)

ಇನ್ನು, ಈ ಭಯಾನಕ ದುಷ್ಪರಿಣಾಮದಿಂದ ಯಾರಾದರೂ ಪಾರಾಗಬಯಸುವುದಾದರೆ ಅವನಿಗಿರುವ ಒಂದೇ ದಾರಿ- ಅವನಿಗೆ ಈ ಲೋಕದಲ್ಲಿ ಸಿಕ್ಕಿರುವ ಜೀವನಾ

ವಧಿಯನ್ನು ಅತ್ಯುತ್ತಮ ಕರ್ಮಗಳ ಮೂಲಕ ಬೆಳಗಿಸಬೇಕು. ಸತ್ಯದ ಮಾರ್ಗದಲ್ಲಿ ತನ್ನ ಪ್ರಾಣ ಹೋದರೂ ಸರಿ. ಆದರೆ ಅಸತ್ಯದ ಮಾರ್ಗದಲ್ಲಿ ಒಂದು ಹೆಜ್ಜೆಯೂ ಮುಂದೆ ಹೋಗಬಾರದು. ಲೋಕದಾದ್ಯಂತವಿರುವ ಸರಕಾರಗಳು ಅವನನ್ನು ಬಂಡುಕೋರನೆಂದು ಸಾರಿದರೂ ಅವರ ಆರೋಪವನ್ನು ಸಸಂತೋಷ ಸ್ವೀಕರಿಸಿಕೊಳ್ಳಬೇಕು. ಆದರೆ ಅಲ್ಲಾಹನ ವಿಧೇಯತೆಯಿಂದ ಎಂದೂ ಸರಿಯಬಾರದು. ಅವನ ವಿಧೇಯತೆಯ ಮಾರ್ಗವನ್ನ ವಲಂಬಿಸಿದವನಿಗೆ ಶಾಶ್ವತವಾದ ಸುಖಾಡಂಬರಗಳು ಲಭ್ಯವಾಗುವುದು. ಅದು ಎಂದೆಂದಿಗೂ ಕೊನೆಗೊಳ್ಳಲಾರದು.

ಈ ಸೂಕ್ತಗಳ ಬಗ್ಗೆ ಚಿಂತನೆ ನಡೆಸಿದಾಗ ನಮಗೆ ತಿಳಿದು ಬರುವ ವಿಚಾರವೇನೆಂದರೆ,

1. ಸತ್ಯ-ಅಸತ್ಯಗಳ ನಡುವಿನ ಜಗಳವು ಇಂದು ಹೊಸತೇನೂ ಅಲ್ಲ. ಒಳಿತು-ಕೆಡುಕುಗಳ ಈ ಸಂಘರ್ಷವು ಆದಿಯಿಂದಲೇ ನಡೆಯುತ್ತಾ ಬಂದಿದೆ. ಇನ್ನೂ ನಡೆಯುತ್ತಲೇ ಇರುವುದು.

2. ಸತ್ಯ-ಅಸತ್ಯಗಳ ಸಂಘರ್ಷ ಯಾವಾಗಲೆಲ್ಲ ನಡೆಯುವುದೋ ಅಲ್ಲಿ ಸತ್ಯವೇ ಮೇಲುಗೈ ಸಾಧಿಸುವುದು. ಅದುವೇ ವಿಜಯ ಹೊಂದುವುದು.

3. ಸತ್ಯದ ವಾಹಕರ ಮೇಲೆ ಯಾವಾಗಲೂ 'ಅಧಿಕಾರ ದಾಹಿ'ಗಳೆಂಬ ಆರೋಪ ಹೊರಿಸಲಾಗುತ್ತದೆ. ಅಧಿಕಾರ ಗದ್ದುಗೆಯಲ್ಲಿರುವ ವರ್ಗವು ತಮ್ಮನ್ನು ತಾವೇ ಅಧಿಕಾರದ ಹಕ್ಕುದಾರರೆಂದು ಭಾವಿಸುತ್ತಾರೆ ಮತ್ತು ಸತ್ಯದ ವಾಹಕರ ಮೇಲೆ ಅಪಪ್ರಚಾರದ ಅಸ್ತ್ರ ಪ್ರಯೋಗಿಸುತ್ತಾರೆ.

4. ಮಿಥ್ಯದ ಆಡಳಿತವು ಯಾವಾಗಲೂ ಸತ್ಯದ ವಾಹಕರನ್ನು ಹಿಂಸಿಸುತ್ತಲೇ ಇರುತ್ತದೆ.

5. ಸತ್ಯದ ಮಾರ್ಗದಲ್ಲಿ ಏನೇ ಅಡ್ಡ ಬಂದರೂ ಅದನ್ನು ಧೈರ್ಯವಾಗಿ ಎದುರಿಸುವುದು ಮತ್ತು ಸತ್ಯವನ್ನು ಎಂದೂ ಕೈಬಿಡದಿರುವುದು ಸತ್ಯವಿಶ್ವಾಸಿಗಳ ಉದ್ದೇಶಿತ ಮಾನದಂಡವಾಗಿರಬೇಕು.

6. ಅಲ್ಲಾಹನ ಆಜ್ಞೋಲ್ಲಂಘನೆ ಮಾಡುವವನೇ ನಿಜವಾದ ಅಪರಾಧಿ. ಅವನ ಲೌಕಿಕ ಜೀವನ ಎಷ್ಟೇ ಸುಖಾಡಂಬರದಿಂದ ಕೂಡಿರಲಿ. ಕಟ್ಟಕಡೆಗೆ ಅವರ ಪರಿಣಾಮ ಅತ್ಯಂತ ಕೆಟ್ಟದಾಗಿರುವುದು. ಆದರಿಂದ ಪ್ರತಿಯೊಬ್ಬನೂ ಅಭಯ ಯಾಚಿಸಬೇಕು.

❖ ❖ ❖

ಪ್ರತೀಕಾರ ಕ್ರಮಗಳು

ಸಾವಿರಾರು, ಲಕ್ಷಾವಧಿ ಬರುವ ಜನಸಂದಣಿಯ ಮುಂದೆ ಮೂಸಾರ ಕೈಯಲ್ಲಿ ದಯನೀಯವಾಗಿ ಸೋಲುಂಡ ಹಾಗೂ ಮಂತ್ರವಾದಿಗಳ ಅನುಪಮ ಧೈರ್ಯ ಸ್ಥೈರ್ಯವನ್ನು ನೋಡಿದ ಬಳಿಕ ಫಿರ್‌ಔನ್ ಕೋಪದಿಂದ ಕೆಂಡಾಮಂಡಲನಾದ. ಅವನಿಗೆ ಈಗ ಈ ಸಂದೇಶದ ವಿಜಯವು ಸ್ಪಷ್ಟವಾಗಿ ಒಂದು ಭಾರೀ 'ಅಪಾಯ'ವಾಗಿ ಕಂಡಿತು. 'ಅಪಾಯ'ವನ್ನು ಕಡೆಗಣಿಸುವುದು ಹಾಗೂ ತನ್ನ ಪ್ರಜೆಗಳನ್ನೂ ತನ್ನ ಅಧಿಕಾರವನ್ನೂ ಈ ನೆರೆಯಲ್ಲಿ ಕೊಚ್ಚಿ ಹೋಗುವುದನ್ನು ತೆಪ್ಪಗೆ ನೋಡಿ ಕುಳಿತಿರುವುದು ಸಾಧ್ಯವಿರಲಿಲ್ಲ. ಆದ್ದರಿಂದ ಅವನು ಕೂಡಲೇ ತನ್ನ ಸಚಿವ ಸಂಪುಟದ (cabinet) ಸಭೆಯನ್ನು ಕರೆದು ಈ 'ಅಪಾಯ'ವನ್ನು ನೀಗಿಸುವ ಉಪಾಯದ ಬಗ್ಗೆ ಸಮಾಲೋಚನೆ ನಡೆಸಿದನು.

ಆಸ್ಥಾನಿಕರ ಸಲಹೆ

ಯಾವ ವ್ಯಕ್ತಿಯಿಂದ ತಮ್ಮ 'ಪ್ರಭು'ವಿನ ಪ್ರತಿಷ್ಠೆ ಅಪಾಯವನ್ನೆದುರಿಸುತ್ತಿದೆಯೋ ಅದನ್ನು ಕಂಡೂ ಅವನನ್ನು ಜೀವಂತ ಬಿಟ್ಟು ಬಿಡುವುದನ್ನು ಈ ಮಂತ್ರಿ ಮಾಗಧರು ಸಹಿಸುವುದಾದರೂ ಹೇಗೆ? ತಮ್ಮ 'ಪ್ರಭು'ವಿನ ಜೊತೆ ತಮ್ಮ ಸರ್ವಸ್ವವೂ ಹರಿದು ಹೋಗುವುದೆಂದು ಅವರಿಗೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಆದ್ದರಿಂದ ಈ ಅಪಾಯವನ್ನು ಹತ್ತಿಕ್ಕಲು ಅವರೆಲ್ಲ ಒಕ್ಕೊರಳಿನಿಂದ ಫಿರ್‌ಔನನನ್ನು ಹುರಿದುಂಬಿಸಿದರು.

"ಫಿರ್‌ಔನನೊಡನೆ ಅವನ ಜನಾಂಗದ ಸರದಾರರು ಹೀಗೆಂದರು: ನೀನು ಮೂಸಾ ಮತ್ತು ಅವನ ಜನಾಂಗವನ್ನು ದೇಶದಲ್ಲಿ ಗೊಂದಲಗಳನ್ನು ಹಬ್ಬಿಸುತ್ತಿರಲಿಕ್ಕೂ ನಿನ್ನ ಹಾಗೂ ನಿನ್ನ ಆರಾಧ್ಯರ ಆರಾಧನೆಯನ್ನು ತೊರೆದು ಬಿಟ್ಟಿರಲಿಕ್ಕೂ ಹೀಗೆಯೇ ಬಿಟ್ಟು ಬಿಡುವೆಯಾ?"

(ಪವಿತ್ರ ಕುರ್‌ಆನ್, 7:127)

ಅಧಿಕಾರ ಮದದಿಂದ ಪ್ರಮತ್ತನಾಗಿದ್ದ ಹಾಗೂ ಎಲ್ಲ ವಿರೋಧ, ಭಿನ್ನಾಭಿಪ್ರಾಯ ಗಳಿಗೂ ಒಂದೇ ಚಿಕಿತ್ಸೆಯನ್ನು ತಿಳಿದಿದ್ದ ಫಿರ್‌ಔನನು ಅವರನ್ನು ಎದುರಿಸಲು ತನ್ನ ಬಳಿ ಅನೇಕ ಉಪಾಯಗಳಿವೆ ಎಂದು ಹೇಳುತ್ತಾ, ತನ್ನ ಮೋಸ ಮತ್ತು ಹಿಂಸೆ-ದೌರ್ಜನ್ಯಗಳ ಪೆಟ್ಟಿಗೆಯನ್ನು ತೆರೆದನು. ತರುವಾಯ ಹೀಗೆಂದನು,

"ಫಿರ್‌ಔನನು ಹೇಳಿದನು: ನಾನು ಅವರ ಗಂಡು ಮಕ್ಕಳನ್ನು ಕೊಲೆ ಮಾಡಿಸುವೆನು ಮತ್ತು ಅವರ ಹೆಣ್ಮಕ್ಕಳನ್ನು ಜೀವಂತವಿರಲು ಬಿಡುವೆನು. ಅವರ ಮೇಲೆ ನಮ್ಮ ಅಧಿಕಾರದ ಹಿಡಿತ ಬಿಗಿಯಾಗಿದೆ." (ಪವಿತ್ರ ಕುರ್‌ಆನ್, 7:127)

ಆತ ಮೂಸಾ(ಅ) ಹುಟ್ಟುವ ಸಮಯದಲ್ಲಿ ಕೊಲೆಪಾತಕಗಳನ್ನು ನಡೆಸುತ್ತಿದ್ದ ಅದೇ ತಂದೆಯ ಮಗನಲ್ಲವೇ? ತನ್ನ ತಂದೆಯ ವಿಧಾನವನ್ನು ಕೈಬಿಡುವುದಾದರೂ ಹೇಗೆ? ಹಿಂಸೆ-ದೌರ್ಜನ್ಯಗಳ ಅಸ್ತ್ರವು ಎಷ್ಟು ನಿಷ್ಪ್ರಯೋಜಕವೆಂಬುದನ್ನು ಆತ ಕಣ್ಣಾರೆ ಕಂಡಿದ್ದ. ಅವನ ಎಲ್ಲ ಉಪಾಯಗಳ ಹೊರತಾಗಿಯೂ ಮೂಸಾ ಹುಟ್ಟಿದ್ದರು, ಮಾತ್ರವಲ್ಲ ಅವರನ್ನು ಆತನೇ ಪೋಷಿಸಿ ಬೆಳೆಸಿದ್ದ. ಆದರೆ ಅಕ್ರಮಿಗಳ ಕಣ್ಣು ತೆರೆಯುವುದಿಲ್ಲ. ಅವರು ಯಾವುದೇ ವಿಷಯದಿಂದ ಪಾಠ ಕಲಿಯುವುದಿಲ್ಲ. ಸತ್ಯವನ್ನು ಹಿಂಸೆ-ದೌರ್ಜನ್ಯಗಳ ನೀಚ ಅಸ್ತ್ರಗಳಿಂದ ಸೋಲಿಸಲಾಗುವುದಿಲ್ಲವೆಂಬ ಸತ್ಯ ಅವರ ತಲೆಗೆ ಹೊಳೆಯುವುದೇ ಇಲ್ಲ.

ಒಟ್ಟಿನಲ್ಲಿ, ಅಕ್ರಮದ ಗಾಣ ಇನ್ನೊಮ್ಮೆ ತಿರುಗತೊಡಗಿತು. ಬನೀ ಇಸ್ರಾಈಲರು ಅದರಲ್ಲಿ ಅರೆಯಲ್ಪಟ್ಟರು. ನಾಲ್ಕೂ ಸುತ್ತ ಬಂಧನಗಳಾಗುತ್ತಿದ್ದವು. ಸತ್ಯವಿಶ್ವಾಸಿಗಳಿಗಾಗಿ ವಧಾಗೃಹ, ನೇಣುಗಂಭಗಳನ್ನು ಸಜ್ಜುಗೊಳಿಸಲಾಗುತ್ತಿದ್ದ ಹಿಂಸಾತ್ಮಕ ವಾತಾವರಣದಲ್ಲಿ ಎಲ್ಲೆಲ್ಲೂ ಭಯ-ಆತಂಕ ತುಂಬಿಕೊಂಡಿರುವಾಗ ಸತ್ಯವಿಶ್ವಾಸ ಸ್ವೀಕರಿಸುವುದು ಮತ್ತು ಅದನ್ನು ಪ್ರಕಟಿಸುವುದೆಂದರೆ ಮರಣವನ್ನು ಆಹ್ವಾನಿಸಿದಂತೆ. ಮೂಸಾರೊಂದಿಗೆ ಸೇರಿ ಕೊಳ್ಳುವುದು ಎಲ್ಲರಿಗೂ ಸಾಧ್ಯವಿರುವ ಕಾರ್ಯವಾಗಿರಲಿಲ್ಲ. ಅನುಭವಿಗಳು ಮತ್ತು ಮುದುಕರು ಮೂಲೆಗಳಲ್ಲಿ ಅಡಗಿಕೊಂಡರು. ಮೂಸಾ(ಅ) ಯಾವ ಸಂದೇಶವನ್ನು ಮುಂದಿಡುತ್ತಿದ್ದಾರೋ ಅದು ಸಂಪೂರ್ಣ ಸತ್ಯವಾಗಿದೆ. ಅವರು ತಮ್ಮ ಹಿತಚಿಂತಕ ರಾಗಿದ್ದಾರೆ. ತಮ್ಮ ಮೋಕ್ಷವನ್ನು ಬಯಸುವವರಾಗಿದ್ದಾರೆ ಎಂದು ತಿಳಿದೂ ಕೂಡಾ ಅವರದೇ ಜನಾಂಗ ಬನೀ ಇಸ್ರಾಈಲರು ಅವರ ಸಂದೇಶವನ್ನು ಸ್ವೀಕರಿಸಲು ಮತ್ತು ಅವರಿಗೆ ಬೆಂಬಲವಾಗಿ ನಿಲ್ಲಲು ಸಿದ್ಧರಾಗಲಿಲ್ಲ. ಈ ರೀತಿ ಒಂದು ಜನಾಂಗವು ಹಿಂಸೆ-ದಬ್ಬಾಳಿಕೆಗಳ ಭಯದಿಂದ ತಮ್ಮ ಉಪಕಾರಿಗಳಿಂದ ಮುಖ ತಿರುಗಿಸುವ ಮತ್ತು ನಿರಂಕುಶ-ಅತಿಕ್ರಮಿ ಪ್ರಭುಗಳ ಮುಂದೆ ತಲೆಬಾಗುವ ಪ್ರಕ್ರಿಯೆಗಳು ಹಿಂದೆಯೂ ಅನೇಕ ಬಾರಿ ನಡೆದಿದ್ದುವು. ಇನ್ನೂ ನಡೆಯುತ್ತಿರುವುದು.

ಯುವಕರ ವಿಶ್ವಾಸದಾರ್ಢ್ಯ

ಫಿರ್‌ಔನ್ ತನ್ನ ಕಾರ್ಯವನ್ನು ಮುಂದುವರಿಸಿದರೆ, ಮೂಸಾ(ಅ) ತಮ್ಮ ಸಂದೇಶ ಪ್ರಚಾರ ಕಾರ್ಯದಲ್ಲಿ ತಲ್ಲೀನರಾದರು. ಅವರ ಸಂದೇಶವು ಹೃದಯಗಳನ್ನು ಅಧೀನ ಗೊಳಿಸುತ್ತಿತ್ತು. ಆದರೆ ಈ ಅಪಾಯಕಾರಿ ವಾತಾವರಣದಲ್ಲಿ ತನ್ನ ಈಮಾನನ್ನು (ಸತ್ಯ ವಿಶ್ವಾಸವನ್ನು) ಘೋಷಿಸುವ ಧೈರ್ಯ ಯಾರಿಗಿತ್ತು? ಆದರೆ ಮೂಸಾರ ಜನಾಂಗದ ಕೆಲವು

ಧೈರ್ಯಶಾಲಿ ಯುವಕರು ಮುಂದೆ ಬಂದು ಧರ್ಮದ ಧ್ವಜವನ್ನು ವಹಿಸಿಕೊಂಡರು. ಅಲ್ಲಾಹನು ಅವರ ಈ ಆತ್ಮಸ್ಥೈರ್ಯವನ್ನು ಈ ರೀತಿ ವರ್ಣಿಸಿದ್ದಾನೆ,

"ಮೂಸಾರವರ ಮೇಲೆ ಆ ಜನಾಂಗದ ಕೆಲವು ಮಂದಿ ಯುವಕರ ವಿನಾ ಇನ್ನಾರೂ ವಿಶ್ವಾಸವಿರಿಸಲಿಲ್ಲ, (ಇದು) ಫಿರ್‌ಔನನ ಭಯದಿಂದ ಹಾಗೂ ತಮ್ಮ ಜನಾಂಗದ ಮುಖಂಡರ ಭಯದಿಂದ. ಫಿರ್‌ಔನ್ ಅವರನ್ನು ಯಾತನೆಗೊಳಪಡಿಸುವನೆಂದು (ಅವರಿಗೆ ಭಯವಿತ್ತು.) ವಾಸ್ತವದಲ್ಲಿ ಫಿರ್‌ಔನನು ಭೂಮಿಯ ಮೇಲೆ ಪ್ರಾಬಲ್ಯ ಹೊಂದಿದವನೂ ಹದಮೀರಿದವನೂ ಆಗಿದ್ದನು." (ಪವಿತ್ರ ಕುರ್‌ಆನ್, 10:83)

ವಾಸ್ತವದಲ್ಲಿ ಯಾವುದೇ ಒಂದು ಜನಾಂಗದ ಸಂಪತ್ತು ಅದರ ಯುವಕರೇ ಆಗಿರುತ್ತಾರೆ. ಒಂದು ಸಮಾಜದ ಯುವಕರು ಯಾವುದೇ ಔಚಿತ್ಯಕ್ಕೆ ಮಣಿಯುವುದಿಲ್ಲ. ಯಾವುದು ಅವರಿಗೆ ಸರಿ ಕಾಣುತ್ತದೋ ಅದಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧರಿರುತ್ತಾರೆ. ಅವರಿಗೆ ಊಟ, ಉಡುಪು, ಮನೆ, ಕುಟುಂಬ ಯಾವುದರ ಚಿಂತೆಯೂ ಇರುವುದಿಲ್ಲ, ರಕ್ತ ಬಿಸಿಯಾಗಿರುತ್ತದೆ. ತ್ಯಾಗ ಬಲಿದಾನದ ಹಂಬಲವಿರುತ್ತದೆ. ಯಾರನ್ನಾದರೂ ಬೆಂಬಲಿಸಿದರೆ ಅದಕ್ಕಾಗಿ ಸಾಯಲಿಕ್ಕೂ ಸಿದ್ಧರಾಗುತ್ತಾರೆ. ಆದ್ದರಿಂದಲೇ ಈ ಯುವಕರು ಫಿರ್‌ಔನನ ಪ್ರತಾಪದ ಹೊರತಾಗಿಯೂ ತಮ್ಮ ಸತ್ಯಸ್ವೀಕಾರವನ್ನು ಬಚ್ಚಿಡಲು ಸಿದ್ಧರಾಗಲಿಲ್ಲ, ಅವರ ಹಿರಿಯರು, ವೃದ್ಧರು ಅವರಿಗೆ ಸಲಹೆ ನೀಡಿದರು. ತಮ್ಮ ಜೀವ-ಸೊತ್ತುಗಳನ್ನು ತೋರಿಸಿ ನಮ್ಮನ್ನೇಕೆ ಕೊಲ್ಲಿಸುತ್ತೀರಿ ಎಂದು ಪ್ರಶ್ನಿಸಿದರು. ಆದರೆ ಅವರು ಯಾವುದರ ಪರಿವೆಯನ್ನೂ ಮಾಡಲಿಲ್ಲ. ಈ ಹಿರಿಯರು ಯಾವಾಗಲೂ ಯುವಕರನ್ನು ಸತ್ಯದ ಮಾರ್ಗದಿಂದ ತಡೆಯಲು ಪ್ರಯತ್ನಿಸುತ್ತಾರೆ. ನೂರು ತರದ ಆಶಂಕೆಗಳನ್ನು ಮುಂದಿಡುತ್ತಾರೆ. ಉಚ್ಚ-ನೀಚತೆಯನ್ನು ತೋರಿಸುತ್ತಾರೆ. ಕಾಲದ ಔಚಿತ್ಯವನ್ನು ಹೇಳುತ್ತಾರೆ. ಸತ್ಯವನ್ನು ಸತ್ಯವೆಂದು ಒಪ್ಪಿದ ಬಳಿಕವೂ ಅದನ್ನು ಸ್ವೀಕರಿಸಲು ಸಿದ್ಧರಾಗುವುದಿಲ್ಲ, ಅದಕ್ಕಾಗಿ ಅಪಾಯಗಳನ್ನು ಎದುರಿಸಲು ಸಿದ್ಧರಿರುವುದಿಲ್ಲ, ಸತ್ಯವನ್ನು ಸ್ವಯಂ ಸ್ವೀಕರಿಸುವುದಿಲ್ಲ, ಅದನ್ನು ಬೆಂಬಲಿಸುವುದಿಲ್ಲ, ಮೇಲಾಗಿ ಈ ಯುವಕರನ್ನೇ ಸತ್ಯ ಮಾರ್ಗದಿಂದ ದೂರ ವಿರಿಸಲು ಪ್ರಯತ್ನಿಸುತ್ತಾರೆ.

ಇದೇ ಪರಿಸ್ಥಿತಿ ಪ್ರವಾದಿ ಮುಹಮ್ಮದ್‌ರ(ಸ) ಕಾಲದಲ್ಲೂ ಇತ್ತು. ಅವರ ಮೇಲೆ ವಿಶ್ವಾಸ ತಾಳಿದವರಲ್ಲಿ ಹೆಚ್ಚಿನವರು ಯುವಕರೇ ಆಗಿದ್ದರು. ಇಂತಹ ಪರಿಸ್ಥಿತಿ ಮೂಸಾರ(ಅ) ಕಾಲದಲ್ಲೂ ಇತ್ತು. ಈಗಲೂ ಇದೆ. ಮುಂದೆಯೂ ಇದು ಜಾರಿಯಲ್ಲಿರುವುದು.

ಇಲ್ಲಿ ಸತ್ಯದ ವಾಹಕರು ತಮ್ಮ ಆಹ್ವಾನವನ್ನು ಯಾರ ಕಡೆಗಿರಿಸಬೇಕೆಂಬುದರ ಸ್ಪಷ್ಟ ಸೂಚನೆ ಲಭಿಸುತ್ತದೆ. ಯಾವುದೇ ಆಂದೋಲನ, ಯಾವುದೇ ತತ್ವ ಸಿದ್ಧಾಂತ, ಯಾವುದೇ ವಿಚಾರಧಾರೆಯು ಯುವ ಜನತೆಯನ್ನು ಕಡೆಗಣಿಸಿ ಪ್ರಗತಿ ಸಾಧಿಸುವಂತಿಲ್ಲ, ಸರ್ವಸ್ವವನ್ನೂ ಅರ್ಪಿಸಬಲ್ಲವರು, ಆತ್ಮಾರ್ಪಣೆ ಮಾಡಬಲ್ಲವರು ಹಾಗೂ ನಮ್ರೂದನ ಬೆಂಕಿಗೆ ಹಾರ

ಬಲ್ಲಂತಹ ಆವೇಶಗಾರರು ಇಲ್ಲಿಂದಲೇ ಸಿಗಬಲ್ಲರು. ಆದ್ದರಿಂದ ಸತ್ಯದ ಕಡೆಗೆ ಕರೆಯುವವರು ವಿಶೇಷವಾಗಿ ತಮ್ಮ ಗಮನವನ್ನು ಯುವಜನರ ಮೇಲೆ ಕೇಂದ್ರೀಕರಿಸಬೇಕು. ಇವರೇ ಸತ್ಯದ ಧ್ವಜವನ್ನು ಎತ್ತಿ ಹಿಡಿಯುವವರು. ಸತ್ಯದ ಸ್ಥಾಪನೆಗಾಗಿ ಒಂದೋ ಅವರು ಹೋರಾಡಿ ಮಡಿಯುವರು ಅಥವಾ ಅದನ್ನು ಯಶಸ್ವಿಗೊಳಿಸಿಯೇ ತೀರುವರು.

ಮೂಸಾರ(ಅ) ಉಪದೇಶ

ಫಿರ್‌ಔನನ ದಬ್ಬಾಳಿಕೆಯು ಇನ್ನಷ್ಟು ಬಲ ಪಡೆಯಿತು. ಈ ಯುವಕರೂ ಆ ವೃದ್ಧರೂ ಅಪ್ಪಚ್ಚಿಯಾಗ ತೊಡಗಿದರು. ಯುವಕರನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲಲು, ವೃದ್ಧರನ್ನು ಕಠಿಣವಾಗಿ ಶಿಕ್ಷಿಸಲು ಮತ್ತು ಸ್ತ್ರೀಯರನ್ನು ದಾಸಿಯರನ್ನಾಗಿ ಮಾಡಲು ಆರಂಭಿಸಲಾಯಿತು. ಈ ಭಯಾನಕ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬರೂ ಫಿರ್‌ಔನನ ಭೀತಿಯಿಂದ ನಡುಗುತ್ತಿದ್ದರು. ಈ ಸಂದರ್ಭದಲ್ಲಿ ಮೂಸಾ(ಅ) ತಮ್ಮ ಜನಾಂಗಕ್ಕೆ ವಿಶೇಷವಾಗಿ ಅದರ ಯುವಕರಿಗೆ ಉಪದೇಶಿಸಿದರು, ಸಾಂತ್ವನ ನೀಡಿದರು, ಅವರಲ್ಲಿ ಧೈರ್ಯ ತುಂಬಿದರು. ಫಿರ್‌ಔನನ ದಬ್ಬಾಳಿಕೆಯನ್ನು ಎದುರಿಸುವುದು ಹೇಗೆಂಬುದನ್ನು ತೋರಿಸಿಕೊಟ್ಟರು.

"ಮೂಸಾ ತಮ್ಮ ಜನಾಂಗದೊಡನೆ, 'ಜನರೇ, ನೀವು ನಿಜಕ್ಕೂ ಅಲ್ಲಾಹನ ಮೇಲೆ ವಿಶ್ವಾಸವಿಡುತ್ತೀರಾದರೆ- ಅವನ ಮೇಲೆ ಭರವಸೆಯನ್ನಿರಿಸಿರಿ- ನೀವು ನಿಜಕ್ಕೂ ಮುಸ್ಲಿಮರಾಗಿದ್ದರೆ' (ಹಾಗೆ ಮಾಡಿರಿ) ಎಂದು ಹೇಳಿದರು." (ಪವಿತ್ರ ಕುರ್‌ಆನ್, 10:84)

ಅಂದರೆ ಓರ್ವ ಆಜ್ಞಾನುಸಾರಿ ಮತ್ತು ವಿಧೇಯ ವಿಶ್ವಾಸಿಯು ಸಂಕಷ್ಟ ಬಂದಾಗ ಕೈ ಚೆಲ್ಲುವುದಲ್ಲ, ಸತ್ಯವನ್ನು ಕೈಬಿಟ್ಟು ಅಕ್ರಮಿಗಳ ಮುಂದೆ ಮಂಡಿಯೂರುವುದಲ್ಲ, ಬದಲಾಗಿ ಅಲ್ಲಾಹನು ತನ್ನ ದಾಸರಿಗೆ ಸಹಾಯ ಮಾಡಲು ಸದಾ ಸಿದ್ಧನಿದ್ದಾನೆಂಬುದನ್ನು ದೃಢವಾಗಿ ನಂಬಿಕೊಂಡು ಅಕ್ರಮಿಯನ್ನು ದಿಟ್ಟವಾಗಿ ಎದುರಿಸಬೇಕು. ತನ್ನ ತತ್ವಸಿದ್ಧಾಂತ ಮತ್ತು ಧ್ಯೇಯದಲ್ಲಿ ಸ್ಥಿರವಾಗಿರಬೇಕು. ಯುವಕರು ಮೂಸಾರ ಉಪದೇಶವನ್ನು ಮನಸಾರೆ ಒಪ್ಪಿಕೊಂಡು ಧೈರ್ಯ-ಸ್ಥೈರ್ಯವನ್ನು ಪ್ರದರ್ಶಿಸಿದರು.

"ಅವರು ಉತ್ತರವಿತ್ತರು: ನಾವು ಅಲ್ಲಾಹನ ಮೇಲೆಯೇ ಭರವಸೆಯನ್ನಿರಿಸಿದೆವು. ಓ ನಮ್ಮ ಪ್ರಭೂ, ನಮ್ಮನ್ನು ಅಕ್ರಮಿಗಳಿಗೆ ಪರೀಕ್ಷಾ ಸಾಧನವನ್ನಾಗಿ ಮಾಡದಿರು- ಮತ್ತು ನಿನ್ನ ಕೃಪೆಯಿಂದ ನಮ್ಮನ್ನು ಸತ್ಯನಿಷೇಧಿಗಳಿಂದ ರಕ್ಷಿಸು." (ಪವಿತ್ರ ಕುರ್‌ಆನ್, 10:85-86)

ಈ ಪ್ರಾರ್ಥನೆಯಲ್ಲಿ, ಸಂಕಷ್ಟದ ವೇಳೆ ಸತ್ಯವಿಶ್ವಾಸಿಯ ಪಾತ್ರವೇನಾಗಿರಬೇಕೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಅಲ್ಲಾಹನ ಮಾರ್ಗದಲ್ಲಿ, ಅಲ್ಲಾಹನ ಧರ್ಮಕ್ಕಾಗಿ ಕೆಲಸ ಮಾಡುವವರಿಗೆ ಸಹಾಯಕರಾಗಿ ಅಲ್ಲಾಹನ ಹೊರತು ಬೇರಾರೂ ಇಲ್ಲ. ಅತ್ಯಂತ ಕಠಿಣ ಪರಿಸ್ಥಿತಿಯಲ್ಲೂ ಸತ್ಯವಿಶ್ವಾಸಿಯು ಅಲ್ಲಾಹನ ಮೇಲೆ ಪೂರ್ಣ ಭರವಸೆಯಿಡಬೇಕು. ಎಲ್ಲ ಕಡೆಯಿಂದ ಮುಖ ತಿರುಗಿಸಿ ಕೇವಲ ಅಲ್ಲಾಹನೊಂದಿಗೆ ಸಂಬಂಧವಿರಿಸಬೇಕು. ಸತ್ಯವಿಶ್ವಾಸಿಗೆ

ಶಸ್ತ್ರಾಸ್ತ್ರಗಳೋ ಜನಬಲವೋ ಅವಲಂಬನೀಯವಲ್ಲ, ಅವನು ಸಂಪೂರ್ಣವಾಗಿ ಅಲ್ಲಾಹನನ್ನೇ ಆಶ್ರಯಿಸಿರುತ್ತಾನೆ.

ನೀಡಿದೆ ನೀ ಎನಗೆ ಕೇವಲ ಒಂದು ಹಣೆ

ಅದು ನಿನಗೇ, ಇತರರಿಗಲ್ಲ ಎರಗಲು ಆ ಹಣೆ.

ಅವರೆಲ್ಲರೂ ಏಕಾಗ್ರತೆಯೊಂದಿಗೆ ಅಲ್ಲಾಹನ ಆಶ್ರಯವನ್ನು ಭದ್ರವಾಗಿ ಹಿಡಿದರು. ಅವನ ಅಭಯ ಪಡೆಯಲಿಕ್ಕಾಗಿ ನಿಸ್ಪೃಹ ಹೃದಯದೊಂದಿಗೆ ಹೀಗೆ ಪ್ರಾರ್ಥಿಸಿದರು, "ನಮ್ಮ ಪ್ರಭೂ! ನಮ್ಮನ್ನು ಅಕ್ರಮಿಗಳಿಗೆ ಪರೀಕ್ಷಾ ಸಾಧನವಾಗಿ ಮಾಡಬೇಡ." ಅತ್ಯಂತ ಸಂದಿಗ್ಧ ಘಟ್ಟದಲ್ಲಿ ಮಾಡುವಂತಹ ಸಮಗ್ರ ಪ್ರಾರ್ಥನೆಯಿದು. ಎಲ್ಲೆಲ್ಲೂ ಕೆಡುಕು ತುಂಬಿರುವಾಗ, ಅಕ್ರಮ-ದೌರ್ಜನ್ಯಗಳು ತಾಂಡವವಾಡುತ್ತಿರುವಾಗ ವಿಶ್ವಾಸ ಸ್ವೀಕರಿಸು ವುದು ಮತ್ತು ಅದನ್ನು ಪ್ರಕಟಿಸುವುದೆಂದರೆ ಮರಣವನ್ನು ಆಹ್ವಾನಿಸಿದಂತೆ. ಇಂತಹ ಸಂದರ್ಭದಲ್ಲಿ ಈ ಪ್ರಾರ್ಥನೆಯು ಮನಸ್ಸಿಗೆ ಸಾಂತ್ವನ ನೀಡುತ್ತದೆ.

ಒಂದು ವರ್ಗವು ಅಧಿಕಾರದ ಎಲ್ಲ ಸಂಪನ್ಮೂಲಗಳ ಮೇಲೆ ಹಿಡಿತ ಹೊಂದಿರುವ ವಿರೋಧಿಗಳದ್ದಾಗಿದೆ. ಅವರು ತಮ್ಮ ಸರ್ವ ಶಕ್ತಿಯನ್ನು ಉಪಯೋಗಿಸಿ ತಮ್ಮ ವಿರೋಧಿ ಗಳನ್ನು ಅಳಿಸಲು ಪ್ರಯತ್ನಿಸುತ್ತಿದ್ದಾರೆ. ಆದಕ್ಕಾಗಿ ಎಂತಹ ನೀಚ ಕೃತ್ಯಕ್ಕೂ ಅತ್ಯಂತ ವಿನಾಶಕಾರಿ ಅಸ್ತ್ರಗಳನ್ನು ಬಳಸಲಿಕ್ಕೂ ಹೇಸುವುದಿಲ್ಲ.

ಇನ್ನೊಂದು ವರ್ಗವು 'ಸತ್ಯಪ್ರಿಯ'ರೆಂದು ವಾದಿಸುವವರದ್ದಾಗಿದೆ. ಅವರ ಸತ್ಯಪ್ರಿಯತೆ ಯೆಲ್ಲವೂ ಅಧಿಕಾರಿ ವರ್ಗದ ಕೋಪವಿಲ್ಲದಾಗ ಮಾತ್ರ. ಮಿಥ್ಯ ಶಕ್ತಿಯ ವಿರುದ್ಧ ಹೋರಾಡುವ ಧೈರ್ಯ ತೋರುವುದು ಅವರ ದೃಷ್ಟಿಯಲ್ಲಿ ಹುಂಬತನವಾಗಿದೆ.

ಮೂರನೆಯ ವರ್ಗವು ತಿಳುವಳಿಕೆಯಿಲ್ಲದ ಜನಸಾಮಾನ್ಯರದ್ದಾಗಿದೆ. ಅವರು ಬದಿಯಲ್ಲಿ ನಿಂತು ತಮಾಷೆ ನೋಡುತ್ತಿರುತ್ತಾರೆ. ಪ್ರತಿಯೊಂದು ಆಟದ ವೇಳೆಯೂ ಚಪ್ಪಾಳೆ ತಟ್ಟುತ್ತಾರೆ. ಕೊನೆಗೆ ಯಾರು ಜಯಿಸುತ್ತಾರೋ ಅವರನ್ನು ಹಿಂಬಾಲಿಸುತ್ತಾರೆ. ಅವರ ಗುಣಗಾನ ಮಾಡುತ್ತಾರೆ.

ಈ ಸಂಘರ್ಷದಲ್ಲಿ ಎಲ್ಲಾದರೂ ಸತ್ಯವಿಶ್ವಾಸಿಗಳಿಗೆ ಸೋಲುಂಟಾದರೆ ಅಥವಾ ಅವರನ್ನು ದಮನಿಸಲಾದರೆ ಈ ಪ್ರಥಮ ವರ್ಗವು ವಿಜಯೋತ್ಸವವನ್ನು ಆಚರಿಸುತ್ತದೆ. ಅವರ ಅಹಂಕಾರ, ಮದ ಎಲ್ಲವೂ ಇನ್ನಷ್ಟು ಹೆಚ್ಚುತ್ತದೆ. ತಮ್ಮ ಹಿರಿಮೆಗಾಗಿ ಬೀಗುತ್ತಾರೆ. ತಾತ್ಕಾಲಿಕ ವಿಜಯವನ್ನು ತಾವು ಸತ್ಯಮಾರ್ಗದಲ್ಲಿದ್ದೇವೆಂಬುದಕ್ಕೆ ಪುರಾವೆಯೆಂದು ಭಾವಿಸುತ್ತಾರೆ.

ಎರಡನೆಯ ವರ್ಗವು ಚುಚ್ಚು ನುಡಿ ಆರಂಭಿಸುತ್ತದೆ. ಅವರೊಂದಿಗೆ ಸಂಘರ್ಷ ಕ್ಕಿಳಿಯಬೇಡಿರೆಂದು ಹೇಳಿಲ್ಲವೇ? ನಮ್ಮ ಯಾವ ಮಾತನ್ನೂ ಕೇಳದೆ ತಮ್ಮ ದುರ್ಗತಿ ಯನ್ನು ತಾವೇ ಆಹ್ವಾನಿಸಿದ್ದಾರೆಂದು ಹೇಳುತ್ತಾರೆ. ಅವರು ಬಹಳ ಸೊಬಗರಾಗಿ ಕೊಂಡು

ಈ ದೇವನಿಷ್ಠ ವರ್ಗದ ಪ್ರತಿಯೊಂದು ಕೆಲಸದಲ್ಲೂ ಹುಳುಕು ಹುಡುಕುತ್ತಾರೆ ಮತ್ತು ತಮ್ಮ ಆತ್ಮಸಾಕ್ಷಿ ಸತ್ತು ಹೋಗಿದೆಯೆಂಬುದಕ್ಕೆ ಸ್ವಯಂ ಸಾಕ್ಷ್ಯ ಒದಗಿಸುತ್ತಾರೆ. ಈ ಮೂಲಕ ಅವರು ಈ 'ಅಪಾಯಕಾರಿ' ಮಾರ್ಗಕ್ಕೆ ಬರುವುದರಿಂದ ತಡೆಯುವ 'ಪವಿತ್ರ ಕರ್ತವ್ಯ'ವನ್ನು ನಿರ್ವಹಿಸುತ್ತಾರೆ.

ಜನಸಾಮಾನ್ಯರಾದರೋ ತಮ್ಮ ದುರಾಚಾರಗಳನ್ನು ಅಡಗಿಸುವುದಕ್ಕಾಗಿ ಮತ್ತು ತಮ್ಮ ಕ್ಷೇಮವನ್ನು ಕಾಪಾಡುವುದಕ್ಕಾಗಿ ಸತ್ಯವಿಶ್ವಾಸಿಗಳ ಈ ಸೋಲನ್ನು ಸತ್ಯದಿಂದ ದೂರ ಓಡಲು ಒಂದು ಕಾರಣವಾಗಿ ತೆಗೆದುಕೊಳ್ಳುತ್ತಾರೆ. ತಾವು ಪಾರಾದೆವೆಂದು ಸಂತೋಷದಿಂದ ಬೀಗುತ್ತಾರೆ. ಈ ಮೂರೂ ಸ್ಥಿತಿಗಳು ಅತ್ಯಂತ ಅಪಾಯಕಾರಿಯಾಗಿವೆ. ಇದರಿಂದ ವಿಶ್ವಾಸಿಗಳ ಬಲ ಮುರಿಯುತ್ತದೆ. ಮಾತ್ರವಲ್ಲ, ಅಸಂಖ್ಯಾತ ಜನರು ಸನ್ಮಾರ್ಗಕ್ಕೆ ಬರುವುದಕ್ಕೆ ತಡೆಯಾಗಿ ಪರಿಣಮಿಸುತ್ತದೆ.

ಆದ್ದರಿಂದ ಪ್ರಾಮಾಣಿಕ ಹಾಗೂ ಸಜ್ಜನರಾದ ಈ ವಿಶ್ವಾಸಿಗಳ 'ನಮ್ಮ ಪ್ರಭೂ! ನಮ್ಮನ್ನು ಅಕ್ರಮಿಗಳ ಪಾಲಿಗೆ ಪರೀಕ್ಷಾ ಸಾಧನವಾಗಿ ಮಾಡಬೇಡ' ಎಂಬ ಪ್ರಾರ್ಥನೆಯು ಅರ್ಥಗರ್ಭಿತವಾಗಿದೆ.

ಈ ಯುವಕರು ಇಷ್ಟೇ ಹೇಳಿದ್ದಲ್ಲ, ಬದಲಾಗಿ ಅವರು, 'ನಮ್ಮ ಪ್ರಭೂ! ನೀನು ನಿನ್ನ ಅಪಾರ ಕರುಣೆಯಿಂದ ನಮ್ಮನ್ನು ಈ ಸತ್ಯನಿಷೇಧಿ ಜನಾಂಗದಿಂದ ಪಾರುಗೊಳಿಸು' ಎಂದೂ ಪ್ರಾರ್ಥಿಸಿದರು. ಏಕೆಂದರೆ ಈ ದುಷ್ಟರ ಪ್ರಾಬಲ್ಯದಿಂದ ಅವರಿಗೆ ಸತ್ಯದ ಮಾರ್ಗದಲ್ಲಿ ಸ್ಥಿರವಾಗಿ ನಿಲ್ಲಲು ಸಾಧ್ಯವಾಗದು ಮತ್ತು ತಮ್ಮ ವಿಶ್ವಾಸದ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗದು.

❖ ❖ ❖

ಬನೀ ಇಸ್ರಾಈಲರ ಹೇಡಿತನ

ಆ ಯುವಕರು ಪ್ರದರ್ಶಿಸಿದ ಧೈರ್ಯವನ್ನು ಬನೀ ಇಸ್ರಾಈಲರ ಬಹುಸಂಖ್ಯಾತ ವರ್ಗಕ್ಕೆ ಪ್ರದರ್ಶಿಸಲಾಗಲಿಲ್ಲ. ಅವರು ಫಿರ್‌ಔನನ ಹಿಂಸೆ-ದೌರ್ಜನ್ಯವನ್ನು ನೋಡಿ ಕಂಗೆಟ್ಟರು. ಅವರ ಅಧಿಕಾರವು ಶಾಶ್ವತವಾಗಿರುವುದೆಂದು ಬಗೆದು ಭವಿಷ್ಯದ ಕುರಿತು ಹತಾಶರಾಗಿ ಮೂಸಾರವರ(ಅ) ಬಳಿಗೆ ಓಡೋಡಿ ಬಂದರು. ಮೂಸಾರು(ಅ) ಇನ್ನೊಮ್ಮೆ ಅವರಿಗೆ ಸಾಂತ್ವನ ನೀಡುತ್ತಾ ಈ ರೀತಿ ಮನವರಿಕೆ ಮಾಡಿಸಿದರು,

"ಮೂಸಾ ತಮ್ಮ ಜನಾಂಗದೊಡನೆ ಹೀಗೆಂದರು: ಅಲ್ಲಾಹನೊಡನೆ ಸಹಾಯ ಯಾಚಿಸಿರಿ ಮತ್ತು ತಾಳ್ಮೆ ವಹಿಸಿರಿ. ಭೂಮಿ ಅಲ್ಲಾಹನದು. ಅವನು ತನ್ನ ದಾಸರಲ್ಲಿ ತನಗಿಷ್ಟ ಬಂದವರನ್ನು ಅದರ ಉತ್ತರಾಧಿಕಾರಿಗಳಾಗಿ ಮಾಡುತ್ತಾನೆ. ಅಂತಿಮ ವಿಜಯವು ಅವನನ್ನು ಭಯಪಟ್ಟು ವರ್ತಿಸುವವರಿಗಾಗಿದೆ." (ಪವಿತ್ರ ಕುರ್‌ಆನ್, 7:128)

ಅಂದರೆ ಈ ಸಂಕಷ್ಟದಿಂದ ಅಲ್ಲಾಹನೇ ಪಾರು ಮಾಡಿಯಾನು. ಆದ್ದರಿಂದ ನೀವು ಅವನಲ್ಲೇ ಸಹಾಯ ಯಾಚಿಸಿರಿ. ಈ ಮಾರ್ಗದಲ್ಲಿ ಎದುರಾಗುವ ತೊಂದರೆಗಳಿಗಾಗಿ ಸಹನೆ ವಹಿಸಿ. ಅದರ ವಿರುದ್ಧ ಹೋರಾಡಿರಿ. ಅಲ್ಲಾಹನೊಂದಿಗೆ ಸಂಬಂಧ ಸುದೃಢಗೊಳಿಸಿರಿ. ನೀವು ಅತ್ತಿತ್ತ ಹರಿದಾಡುವ ನೆರಳಿನಂತಿರುವ ಅಧಿಕಾರದಿಂದ ಭೀತರಾಗಿದ್ದೀರಾ ತಿಳಿಗೇಡಿಗಳೇ! ಅದು ಕ್ಷಣಾರ್ಧದಲ್ಲಿ ಉರುಳುವಂತಹದ್ದು, ಅಲ್ಲಾಹನು ಯಾರಿಗೆ ಬಯಸುತ್ತಾನೋ ಅವರಿಗೆ ಅಧಿಕಾರ ಪ್ರದಾನ ಮಾಡುತ್ತಾನೆ. ಇಂದು ಅದು ಫಿರ್‌ಔನನ ಕೈಯಲ್ಲಿದ್ದರೆ ನಾಳೆ ನಿಮ್ಮ ಕೈಗೂ ಬರಬಹುದು. ಈ ಭೂಮಿಯ ನೈಜ ಒಡೆಯನಾದ ಅಲ್ಲಾಹನನ್ನು ಭಯಪಡಿರಿ. ಅಲ್ಲಾಹನ ಭಯವಿರಿಸುವವರು ಮಾತ್ರ ಕಟ್ಟಕಡೆಗೆ ವಿಜಯ ಹೊಂದುವರೆಂದು ನಾನು ನಿಮಗೆ ತಿಳಿಸುತ್ತೇನೆ.

ಆದರೆ ಶತಮಾನಗಳಿಂದ ಗುಲಾಮಗಿರಿಯನ್ನು ಅಭ್ಯಾಸ ಮಾಡಿಕೊಂಡು ಅದರಲ್ಲೇ ತೃಪ್ತವಾಗಿರುವ ಒಂದು ಜನಾಂಗದಲ್ಲಿ ಅಲ್ಲಾಹನ ಮಾರ್ಗದಲ್ಲಿ ಹೋರಾಡಲು ಅಗತ್ಯವಿರುವ ಧೈರ್ಯವಂತರು ಎಲ್ಲಿ ಸಿಗುತ್ತಾರೆ? ಅವರಿಗೆ ಅಲ್ಲಾಹನ ಮೇಲೆ ಮಾತ್ರ ಭರವಸೆಯಿರುತ್ತಿದ್ದರೆ ಮೂಸಾರನ್ನು ಬೆಂಬಲಿಸುತ್ತಿರಲಿಲ್ಲವೇ? ಈ ಅಪಮಾನದ ಬದುಕಿನಿಂದ ಪಾರುಗೊಳಿಸಲು ಬಂದಿದ್ದ ಧರ್ಮದ ಧ್ವಜವನ್ನು ಎತ್ತಿ ಹಿಡಿಯುತ್ತಿರಲಿಲ್ಲವೇ?

ಮರಣಕ್ಕೆ ಹೆದರುವ, ಹೇಡಿತನವನ್ನೇ ನೆಚ್ಚಿಕೊಂಡಿರುವ ಮತ್ತು ಅಪಮಾನದ ಬದುಕಿನಲ್ಲೇ ಸಂತೃಪ್ತವಾಗಿರುವ ಒಂದು ಜನಾಂಗಕ್ಕೆ ಧೈರ್ಯ ತುಂಬಲು ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲ, ಅದೂ ಕೂಡಾ ಅದರ ಮುಂದೆ ಒಂದು ರಕ್ತಪಿಪಾಸು ಅಕ್ರಮಿ ಆಡಳಿತವಿರುವಾಗ. ಆದ್ದರಿಂದ ಮೂಸಾರ ಜನಾಂಗವು ಅವರ ಸಾಂತ್ವನಗಳಿಂದೇನೂ ಎದ್ದು ನಿಲ್ಲುವ ಜನಾಂಗವಾಗಿರಲಿಲ್ಲ. ಅವರು ರೋದಿಸಲು, ನಡುಗಲು ಮತ್ತು ವಿನಂತಿಸಲು ಆರಂಭಿಸಿದರು.

"ನೀವು ಬರುವುದಕ್ಕೆ ಮುಂಚೆಯೂ ನಾವು ಸತಾಯಿಸಲ್ಪಡುತ್ತಿದ್ದೆವು. ಈಗ ನೀವು ಬಂದ ಬಳಿಕವೂ ಸತಾಯಿಸಲ್ಪಡುತ್ತಿದ್ದೇವೆ..." (ಪವಿತ್ರ ಕುರ್‌ಆನ್, 7:129)

ತಮ್ಮ ಉಪಕಾರಿಯನ್ನು ತಮಗೆ ಅಪಶಕುನವೆಂದು ಭಾವಿಸುವ ಜನಾಂಗಕ್ಕೆ ಶಾಪ. ಮೂಸಾ(ಅ) ತಮ್ಮ ಜನಾಂಗದ ಈ ಸ್ಥಿತಿಯನ್ನು ಕಂಡು ಮಗದೊಮ್ಮೆ ಸಂದೇಶ ಪ್ರಚಾರದ ಮಹತ್ವ ಮತ್ತದರ ಬೇಡಿಕೆಗಳನ್ನು ತಿಳಿಯಪಡಿಸಿದರು. ಅದರ ಸ್ವಭಾವ ಮತ್ತು ಪರಿಣಾಮಗಳನ್ನು ತಿಳಿಸಿದರು ಮತ್ತು ಎಲ್ಲ ಕಾಲದ ಸತ್ಯವಿಶ್ವಾಸಿಗಳಿಗೆ ವಿಶಿಷ್ಟವಾಗಿರುವ ಆ ಶುಭವಾರ್ತೆಯನ್ನು ನೀಡಿದರು.

"...ನಿಮ್ಮ ಪ್ರಭು ನಿಮ್ಮ ಶತ್ರುವನ್ನು ನಾಶಗೊಳಿಸುವ ಹಾಗೂ ನಿಮ್ಮನ್ನು ಭೂಮಿಯಲ್ಲಿ ಪ್ರತಿನಿಧಿಗಳನ್ನಾಗಿ ಮಾಡುವ ಸಮಯ ಸನ್ನಿಹಿತವಾಗಿದೆ. ಆಮೇಲೆ ಅವನು ನೀವು ಹೇಗೆ ವರ್ತಿಸುತ್ತೀರೆಂದು ನೋಡುವನು." (ಪವಿತ್ರ ಕುರ್‌ಆನ್, 7:129)

ಈ ಸೂಕ್ತಗಳಲ್ಲಿ ನೀಡಲಾಗಿರುವ ಶುಭವಾರ್ತೆಯು ಕೇವಲ ಬನೀ ಇಸ್ರಾಈಲರಿಗೆ ಸೀಮಿತವಾಗಿರಲಿಲ್ಲ. ಲೋಕಾರಂಭದಿಂದ ಇಂದಿನ ವರೆಗೂ, ಇನ್ನು ಲೋಕಾಂತ್ಯದವರೆಗೂ ಇರುವ ಸತ್ಯವಿಶ್ವಾಸಿಗಳಿಗೆ ಇದು ಸಾರ್ವತ್ರಿಕವಾಗಿದೆ. ಅಂದರೆ ಅವರ ಮೇಲೆ ಅಕ್ರಮ, ಹಿಂಸೆ, ದೌರ್ಜನ್ಯಗಳಾದಾಗಲೆಲ್ಲ, ಅವರು ದಬ್ಬಾಳಿಕೆಯಿಂದ ದಮನಿಸಲ್ಪಟ್ಟಾಗಲೆಲ್ಲ ಅಲ್ಲಾಹನು ಅವರನ್ನು ನಿಸ್ಸಹಾಯಕರಾಗಿ ಬಿಟ್ಟು ಬಿಡುವುದಿಲ್ಲ, ಎಂತಹ ಪ್ರತಿಕೂಲ ಪರಿಸ್ಥಿತಿಯಿದ್ದರೂ ಈ ಅಕ್ರಮಿಗಳನ್ನು ಬಹುಬೇಗನೆ ವಿಚಾರಿಸಲಾಗುವುದು. ತರುವಾಯ ಇದೇ ದಮನಿಸಲ್ಪಟ್ಟ, ಕೊಳ್ಳೆ ಹೊಡೆಯಲ್ಪಟ್ಟ ಮತ್ತು ತುಳಿಯಲ್ಪಟ್ಟ ಈ ಸತ್ಯವಿಶ್ವಾಸಿಗಳೇ ಅಧಿಕಾರ ಗದ್ದುಗೆಯ ವಾರೀಸು ಪಡೆಯುವರು. ಅಲ್ಲಾಹನ ಈ ಭವಿಷ್ಯವಾಣಿಗೆ ಇತಿಹಾಸವು ಎಷ್ಟೋ ಬಾರಿ ಸಾಕ್ಷ್ಯ ವಹಿಸಿದೆ. ಇನ್ನೂ ಪದೇ ಪದೇ ವಹಿಸುವುದು. ವಿಜಯ ಗಳಿಸಿದ ಬಳಿಕ ಪುನಃ ಈ ಸತ್ಯವಿಶ್ವಾಸಿಗಳ ಸತ್ವಪರೀಕ್ಷೆ ಆರಂಭವಾಗುತ್ತದೆ. ಅಲ್ಲಾಹನಿಗೆ ಕೃತಜ್ಞತೆಯನ್ನರ್ಪಿಸಿ ಅವನ ಮಾರ್ಗದಲ್ಲೇ ಮುಂದುವರಿಯುತ್ತಾರೋ ಅಥವಾ ಯಾರಿಂದ ಅಧಿಕಾರ ಕಿತ್ತು ಇವರಿಗೆ ನೀಡಲಾಗಿತ್ತೋ ಅದೇ ಅಕ್ರಮಿಗಳ ಮಾರ್ಗವನ್ನು ಇವರೂ ತುಳಿಯುತ್ತಾರೋ ಎಂಬುದನ್ನು ನೋಡಲಾಗುತ್ತದೆ.

❖ ❖ ❖

ಫಿರ್‌ಔನೀಯರ ಮೇಲೆ ಶಿಕ್ಷೆ

ಈಗ ಪ್ರಸ್ತುತ ಶುಭವಾರ್ತೆಯು ಸಾಕ್ಷಾತ್ಕಾರಗೊಳ್ಳುವ ಕಾಲ ಸನ್ನಿಹಿತವಾಗಿತ್ತು. ಫಿರ್‌ಔನ್ ಮತ್ತವನ ಜನಾಂಗದ ಕಣ್ಣು ತೆರೆಸಲು ಮತ್ತು ಅವರ ಉದ್ಧಟತನದ ವರ್ತನೆಗಾಗಿ ಅವರನ್ನು ಎಚ್ಚರಿಸಲು ಅಲ್ಲಾಹನು ಅವರಿಗೆ ನಿರಂತರ ಅವಕಾಶ ನೀಡಿದನು. ಸಣ್ಣ ಸಣ್ಣ ಯಾತನೆಗಳನ್ನು ನೀಡಿ ಅವರನ್ನು ಪರೀಕ್ಷಿಸಿದನು. ಅವುಗಳ ವಿವರವನ್ನು ಈ ರೀತಿ ಪ್ರಸ್ತಾಪಿಸಲಾಗಿದೆ,

"ಫಿರ್‌ಔನನ ಜನರಿಗೆ ಬುದ್ಧಿ ಬರಬಹುದೆಂದು ನಾವು ಅವರನ್ನು ಅನೇಕ ವರ್ಷಗಳ ವರೆಗೆ ಬರಗಾಲ ಮತ್ತು ಫಲಗಳ ಅಭಾವದಲ್ಲಿ ಸಿಲುಕಿಸಿಟ್ಟೆವು. ಆದರೆ, ಅವರಿಗೆ ಸುದಿನಗಳು ಬಂದಾಗ ಅವರು, ನಾವು ಇದಕ್ಕೇ ಅರ್ಹರಾಗಿದ್ದೆವೆನ್ನುತ್ತಿದ್ದರು. ದುರ್ದಿನಗಳು ಬಂದಾಗ ಮೂಸಾ ಮತ್ತು ಅವರ ಸಂಗಡಿಗರನ್ನು ಅಪಶಕುನವೆನ್ನುತ್ತಿದ್ದರು. ವಸ್ತುತಃ ಅವರ ಅಪಶಕುನವು ಅಲ್ಲಾಹನ ಕೈಯಲ್ಲಿತ್ತು. ಆದರೆ ಅವರಲ್ಲಿ ಹೆಚ್ಚಿನವರು ಅರಿವಿಲ್ಲದವರಾಗಿದ್ದರು. ಅವರು ಮೂಸಾರೊಡನೆ, 'ನೀನು ನಮ್ಮನ್ನು ಆಕರ್ಷಿಸಲು ಎಂತಹ ದೃಷ್ಟಾಂತವನ್ನು ತಂದರೂ ನಾವು ನಿನ್ನ ಮಾತನ್ನು ನಂಬುವವರಲ್ಲ' ಎಂದರು." (ಪವಿತ್ರ ಕುರ್‌ಆನ್, 7:130-132)

ಒಂದು ಜನಾಂಗಕ್ಕೆ ವಿನಾಶಕಾಲ ಬಂದಾಗ ಅದಕ್ಕೆ ಇಂತಹದೇ ದುರ್ಗತಿ ಬರುತ್ತದೆ. ತನ್ನ ಕರ್ಮಗಳ ದುಷ್ಪರಿಣಾಮಗಳನ್ನು ಅದು ಕಣ್ಣಾರೆ ಕಂಡರೂ ಅದಕ್ಕೆ ತನ್ನ ದುಷ್ಕರ್ಮಗಳ ಕುರಿತು ಆತ್ಮಾವಲೋಕನ ಮಾಡುವ ಸೌಭಾಗ್ಯ ದೊರೆಯುವುದಿಲ್ಲ. ಅದು ಯಾವಾಗಲೂ ಇತರರ ಮೇಲೆ ಗೂಬೆ ಕೂರಿಸುತ್ತದೆ. ಇತರರ ಮೇಲೆ ಅಪವಾದ ಹೇರುತ್ತದೆ. ಇದೇ ಸ್ಥಿತಿ ಫಿರ್‌ಔನೀಯರದ್ದೂ ಆಗಿತ್ತು. ತಮ್ಮ ಮೇಲೆರಗುವ ಸಂಕಷ್ಟಗಳು ಮತ್ತು ವಿಪತ್ತುಗಳಿಂದಾಗಿ ತಮ್ಮ ಕಣ್ಣುಗಳನ್ನು ತೆರೆಯುವ ಬದಲು ಮೂಸಾರ ಮೇಲೆ ಆರೋಪ ಹೊರಿಸತೊಡಗಿದರು. ಅತಿ ದೊಡ್ಡ ಹಠಮಾರಿತನ ಪ್ರದರ್ಶಿಸಿದರು. ಅವರು, ಇದೆಲ್ಲವೂ ನಿನ್ನ ಮಾಟದ ಫಲವಾಗಿದೆ. ನೀನು ಯಾವುದೇ ನಿದರ್ಶನವನ್ನು ತಂದರೂ ನಾವು ನಿನ್ನನ್ನು ನಂಬಲಾರೆವು ಎಂದು ಹೇಳಿದರು. ತಮ್ಮ ಧೋರಣೆಯು ಎಷ್ಟೊಂದು ಮೂರ್ಖತನದ್ದೆಂದು ಆಲೋಚಿಸುವ ಗೋಜಿಗೂ ಅವರು ಹೋಗಲಿಲ್ಲ. ತಮ್ಮನ್ನು ಸುಧಾರಿಸುವ ಮಾತಂತಿರಲಿ. ಮೂಸಾರ ಪವಾಡಗಳನ್ನು ಪದೇ ಪದೇ ಮಾಟವೆಂದು ಸುಳ್ಳಾಗಿಸುತ್ತಲೇ ಹೋದರು.

ಅವರ ಹಠಮಾರಿತನ ಮತ್ತು ಜಿದ್ದು ಮಿತಿ ಮೀರಿದಾಗ ಅಲ್ಲಾಹನು ಇನ್ನು ನಿಮ್ಮ ಕಾರಸ್ತಾನಗಳ ಸವಿಯಯುಣ್ಣಿರಿ ಎಂದು ಹೇಳಿದನು.

"ಕೊನೆಗೆ ನಾವು ಅವರ ಮೇಲೆ ಚಂಡಮಾರುತ ಕಳುಹಿಸಿದೆವು. ಮಿಡತೆಗಳ ಕೂಟವನ್ನು ಬಿಟ್ಟೆವು. (ಧಾನ್ಯ ಕೆಡಿಸುವ) ಕೀಟಗಳನ್ನು ಹಬ್ಬಿಸಿದೆವು. ಕಪ್ಪೆಗಳನ್ನು ಹೊರಡಿಸಿದೆವು, ರಕ್ತವನ್ನು ಸುರಿಸಿದೆವು. ಇವೆಲ್ಲ ದೃಷ್ಟಾಂತಗಳನ್ನು ಬೇರೆ ಬೇರೆಯಾಗಿ ತೋರಿಸಿದೆವು. ಆದರೆ, ಅವರು ಅಹಂಕಾರವೆಸಗುತ್ತಲೇ ಸಾಗಿದರು ಮತ್ತು ಅವರು ಮಹಾ ಅಪರಾಧಿ ಜನಾಂಗ ವಾಗಿದ್ದರು. ಅವರ ಮೇಲೆ ವಿಪತ್ತು ಎರಗಿದಾಗ ಅವರು ಹೀಗೆನ್ನುತ್ತಿದ್ದರು: 'ಓ ಮೂಸಾ, ನಿನಗೆ ನಿನ್ನ ಪ್ರಭುವಿನ ವತಿಯಿಂದ ದೊರೆತಿರುವ ಪದವಿಯ ಆಧಾರದಲ್ಲಿ ನಮಗಾಗಿ ಪ್ರಾರ್ಥಿಸು. ನೀನು ಈ ಸಲ ನಮ್ಮ ಮೇಲಿಂದ ಈ ವಿಪತ್ತನ್ನು ಹೋಗಲಾಡಿಸಿ ಬಿಟ್ಟರೆ ನಾವು ನಿನ್ನ ಮಾತನ್ನು ನಂಬುವೆವು ಮತ್ತು ಬನೀಇಸ್ರಾಈಲರನ್ನು ನಿನ್ನೊಂದಿಗೆ ಕಳುಹಿಸುವೆವು.' ಆದರೆ, ನಾವು ಅವರ ಮೇಲಿಂದ ನಮ್ಮ ಯಾತನೆಯನ್ನು, ಅವರು ಪೂರ್ತಿಗೊಳಿಸಲಿಕ್ಕಿದ್ದ ಒಂದು ಅವಧಿಯ ವರೆಗೆ ಸರಿಸಿಬಿಡುತ್ತಿದ್ದರೆ ಅವರು ಒಮ್ಮೆಲೆ ವಚನಭಂಗ ಮಾಡುತ್ತಿದ್ದರು."

(ಪವಿತ್ರ ಕುರ್‌ಆನ್, 7:133-135)

ಆ ಜನಾಂಗ ಅಲ್ಲಾಹನ ಶಿಕ್ಷೆ ಎರಗುವಾಗ ಅದನ್ನು ಕಣ್ಣಾರೆ ಕಾಣುತ್ತಿತ್ತು. ಆರ್ತನಾದ ಹಾಕುತ್ತಿತ್ತು. ಪಶ್ಚಾತ್ತಾಪಪಟ್ಟು ಮರಳುವ ವಾಗ್ದಾನ ಮಾಡುತ್ತಿತ್ತು. ಆದರೆ ಶಿಕ್ಷೆ ಸರಿದಾಗ ಪುನಃ ಮೊದಲು ಸಾಗುತ್ತಿದ್ದ ಅದೇ ಮಾರ್ಗದಲ್ಲಿ ನಡೆಯುತ್ತಿತ್ತು. ಇದು ಅವರ ಉದ್ಧಟತನ, ಹೃದಯ ಕಠೋರತನ ಮತ್ತು ದೌರ್ಭಾಗ್ಯವೆಂದೇ ಹೇಳಬೇಕಾಗಿದೆ. ಎಲ್ಲ ವಾಗ್ದಾನಗಳು ಮತ್ತು ಎಲ್ಲ ಪಶ್ಚಾತ್ತಾಪಗಳನ್ನು ಬದಿಗಿಟ್ಟು ಸತ್ಯದ ವಿರುದ್ಧ ತನ್ನ ಪ್ರತಿರೋಧ ಹೋರಾಟ ಹಿಂದಿನಂತೆಯೇ ಜಾರಿಯಲ್ಲಿರುತ್ತಿತ್ತು. ಆ ಜನಾಂಗದ ಹಠಮಾರಿತನವನ್ನು ಈ ರೀತಿ ಚಿತ್ರಿಸಲಾಗಿದೆ,

"ತರುವಾಯ ಅವರು ನಮ್ಮ ನಿದರ್ಶನಗಳನ್ನು ಅವರ ಮುಂದಿಟ್ಟಾಗ ಅವರು ಗೊಳ್ಳೆಂದು ನಕ್ಕುಬಿಟ್ಟರು. ನಾವು ಅವರಿಗೆ ಒಂದಕ್ಕಿಂತ ಒಂದು ಮಿಗಿಲಾದ ನಿದರ್ಶನಗಳನ್ನು ತೋರಿಸುತ್ತಲೇ ಹೋದೆವು. ಅವರು ತಮ್ಮ ನಿಲುಮೆಯಿಂದ ಹಿಮ್ಮೆಟ್ಟುವಂತಾಗಲು ನಾವು ಅವರನ್ನು ಯಾತನೆಯಲ್ಲಿ ಸಿಲುಕಿಸಿದೆವು. ಪ್ರತಿಯೊಂದು ಯಾತನೆಯ ವೇಳೆ ಅವರು, 'ಜಾದೂಗಾರನೇ, ನಿನ್ನ ಪ್ರಭುವಿನ ವತಿಯಿಂದ ನಿನಗೆ ಪ್ರಾಪ್ತವಾಗಿರುವ ಪದವಿಯ ಆಧಾರ ದಲ್ಲಿ ನಮಗಾಗಿ ಅವನನ್ನು ಪ್ರಾರ್ಥಿಸು. ನಾವು ಖಂಡಿತವಾಗಿಯೂ ಸನ್ಮಾರ್ಗಕ್ಕೆ ಬಂದು ಬಿಡುವೆವು' ಎನ್ನುತ್ತಿದ್ದರು. ಆದರೆ, ನಾವು ಅವರ ಮೇಲಿಂದ ಯಾತನೆಯನ್ನು ಸರಿಸಿದ ಕೂಡಲೇ ಅವರು ತಮ್ಮ ಮಾತಿಗೆ ತಪ್ಪಿ ಬಿಡುತ್ತಿದ್ದರು."

(ಪವಿತ್ರ ಕುರ್‌ಆನ್, 43:47-50)

ಈ ಹಠಮಾರಿತನ, ವಚನ ಭಂಗ, ಅಲ್ಲಾಹ್ ಮತ್ತು ಅವನ ಪ್ರವಾದಿ(ಮೂಸಾ)ಯೊಂದಿಗೆ ಮೋಸ-ವಂಚನೆ ಹಾಗೂ ಅಪಹಾಸ್ಯಗಳ ದುಷ್ಪರಿಣಾಮವೇನಾಗುವುದೆಂದು ಮೂಸಾ(ಅ) ಮೊದಲೇ ಫಿರ್‌ಔನನಿಗೆ ತಿಳಿ ಹೇಳಿದ್ದರು. ಅವರ ದುರ್ಗತಿಯ ಬಗ್ಗೆ ಹೀಗೆ ಎಚ್ಚರಿಕೆ ನೀಡಿದ್ದರು,

"ನಾವು ಮೂಸಾರಿಗೆ ಸ್ಪಷ್ಟವಾಗಿ ತೋರುವ ಒಂಭತ್ತು ನಿದರ್ಶನಗಳನ್ನು ದಯಪಾಲಿಸಿದ್ದೆವು. ಇನ್ನು ನೀವೇ ಬನೀಇಸ್ರಾಈಲರೊಡನೆ 'ಮೂಸಾರು ಅವರಲ್ಲಿಗೆ ಬಂದಾಗ ಫಿರ್‌ಔನನು, ಓ ಮೂಸಾ, ಖಂಡಿತವಾಗಿಯೂ ನೀನೊಬ್ಬ ಮಾಟಬಾಧಿತ ಮನುಷ್ಯನಾಗಿರುತ್ತೀ ಎಂದು ನಾನು ಶಂಕಿಸುತ್ತೇನೆಂದೇ ಹೇಳಿದ್ದನಷ್ಟೆ?' ಎಂದು ಕೇಳಿರಿ. ಅದಕ್ಕುತ್ತರವಾಗಿ ಮೂಸಾ ಹೇಳಿದರು, ಈ ಪ್ರಜ್ಞಾಪೂರ್ಣ ಪ್ರತ್ಯಕ್ಷ ಪ್ರಮಾಣಗಳನ್ನು ಆಕಾಶಗಳ ಮತ್ತು ಭೂಮಿಯ ಪ್ರಭುವಿನ ಹೊರತು ಇನ್ನಾರೂ ಅವತೀರ್ಣಗೊಳಿಸಿಲ್ಲವೆಂದು ನೀನು ಚೆನ್ನಾಗಿ ತಿಳಿದಿರುವೆ. ಓ ಫಿರ್‌ಔನ್! ನನ್ನ ಅಭಿಪ್ರಾಯ ಪ್ರಕಾರ ನೀನೊಬ್ಬ ಹತಭಾಗಿ ಆಗಿರುವೆ."

(ಪವಿತ್ರ ಕುರ್‌ಆನ್, 17:101-102)

ಆದರೆ ಮೂಸಾರ(ಅ) ಈ ಎಚ್ಚರಿಕೆಯೇನೂ ಅವನ ಮೇಲೆ ಪ್ರಭಾವ ಬೀರಲಿಲ್ಲ. ಒಬ್ಬನು ತಾನು ನಂಬುವುದೇ ಇಲ್ಲವೆಂದು ತೀರ್ಮಾನ ಮಾಡಿ ಬಿಟ್ಟ ಬಳಿಕ ಅವನನ್ನು ಎಷ್ಟೇ ದೊಡ್ಡ ಪವಾಡವಾಗಲಿ, ಆಧಾರ ಪ್ರಮಾಣವಾಗಲಿ ಸನ್ಮಾರ್ಗಕ್ಕೆ ತರಲಾರದು. ತನ್ನ ದುರ್ಗತಿಯು ತನ್ನ ತಲೆಯ ಮೇಲೆ ತೂಗಾಡುತ್ತಿರುವುದನ್ನು ಕಂಡೂ ಅದರಿಂದ ಪಾರಾಗುವ ಬಗ್ಗೆ ಯೋಚಿಸುವುದರ ಬದಲು ಪಂಥಾಹ್ವಾನ ನೀಡಿ ಅದನ್ನು ಆಹ್ವಾನಿಸುತ್ತಾನೆ. ಕೊನೆಗೂ ಅವನ ದುರ್ಗತಿ ಬಂದೇ ಬಿಡುತ್ತದೆ. ಅವನು ತನ್ನ ದುಷ್ಕರ್ಮಗಳ ಶಿಕ್ಷೆಯನ್ನು ಪಡೆದೇ ತೀರುತ್ತಾನೆ.

ಜನಾಂಗದ ಅಪರಾಧೀ ಮನೋಭಾವವನ್ನೊಮ್ಮೆ ನೋಡಿರಿ. ಅದರ ಮುಂದೆ ಸ್ಪಷ್ಟವಾದ ಪವಾಡಗಳು ಬಂದುವು. ಭಯಾನಕ ಸಂಕಷ್ಟಗಳು ಎದುರಾದುವು. ಆದರೆ ಎಚ್ಚರಿಕೆ, ಯಾತನೆಗಳಿಂದಲ್ಲ ಅವನ ಅಪರಾಧಗಳು ಹೆಚ್ಚುತ್ತಲೇ ಹೋದವು.

1. ಮೂಸಾರ ಲಾಠಿಯು ಕ್ಷಣ ಮಾತ್ರದಲ್ಲಿ ಭುಸುಗುಡುತ್ತಿರುವ ಹೆಬ್ಬಾವಾಗಿ ಮಾರ್ಪಡುತ್ತದೆ. ಆದರೆ ಅವನ ದೃಷ್ಟಿಯಲ್ಲಿ ಅದೊಂದು ಮಂತ್ರವಾದಿಯ ಮಾಟವಾಗಿದೆ.

2. ಬಗಲಿನಿಂದ ಕೈ ತೆಗೆದಾಗ ಸೂರ್ಯನಂತೆ ಹೊಳೆಯುವುದನ್ನು ಕಂಡರೂ ಅದನ್ನು ಐಂದ್ರಜಾಲಿಕ ಚಮತ್ಕಾರಕ್ಕಿಂತ ಹೆಚ್ಚಾಗಿ ಆತ ಪರಿಗಣಿಸಲಿಲ್ಲ.

3. ಮಂತ್ರವಾದಿಗಳ ವಿರುದ್ಧ ಮೂಸಾರಿಗೆ ಸ್ಪಷ್ಟ ವಿಜಯ ಪ್ರಾಪ್ತವಾಯಿತು. ತಮ್ಮ ಭರವಸೆಯ ಆಸರೆಯಾಗಿದ್ದ ಮಂತ್ರವಾದಿಗಳು ಸ್ವಯಂ ವಿಶ್ವಾಸ ತಾಳಿ ಶರಣಾದರು. ಆದರೆ ಫಿರ್‌ಔನೀಯರು ಸುಳ್ಳಾಗಿಸುತ್ತಲೇ ಇದ್ದರು.

4. ಆ ಜನಾಂಗದ ಮೇಲೆ ಭೀಕರ ಬರಗಾಲ ಎರಗಿತು. ಜನರು ಒಂದೊಂದು ಧಾನ್ಯಕ್ಕೂ ತತ್ತರಿಸಿದರು. ಮೂಸಾರ ಪ್ರಾರ್ಥನೆಯಿಂದ ಬರಗಾಲ ನೀಗಿತು. ಆದರೆ ಅವರು ಇದನ್ನು ಇಂದ್ರಜಾಲವೆಂದೇ ಸಾರಿದರು.

5. ಭೀಕರ ಚಂಡಮಾರುತ ಬೀಸಿತು. ಮಹಾಪೂರವುಂಟಾಗಿ ಗ್ರಾಮಗಳು, ಬೆಳೆಗಳು ನಾಶವಾದುವು. ಆದರೆ ಅದು ಅವರ ಕಣ್ಣು ತೆರೆಸಲಿಲ್ಲ.

6. ಇಡೀ ದೇಶದಲ್ಲಿ ಗ್ರಾಮ-ಪಟ್ಟಣಗಳನ್ನೂ ಬಿಡದೆ ಮಿಡಿತೆಗಳ ಹಾವಳಿ ಯುಂಟಾಯಿತು. ಆದರೆ ಇದು ಅವರಿಗೆ ಇಂದ್ರಜಾಲದ ಚಮತ್ಕಾರವಾಗಿ ಕಂಡಿತು.

7. ಹೇನು, ಸೊಳ್ಳೆ, ನುಸಿ ಮತ್ತು ತಿಗಣೆಗಳ ದಂಡು ಪ್ರತಿಯೊಂದು ಮನೆಯನ್ನೂ ಒಬ್ಬೊಬ್ಬ ಮನುಷ್ಯನನ್ನೂ ಕಾಡತೊಡಗಿತು. ಅನ್ನ ಪಾನೀಯ ಸೇವಿಸುವುದು, ಕೂರುವುದು, ಏಳುವುದು, ನಡೆದಾಡುವುದು ದುಸ್ತರವಾಯಿತು. ಆದರೆ ಇದಾವುದೂ ಅವರ ಮನ ಪರಿವರ್ತಿಸಲಿಲ್ಲ.

8. ಬಾವಿ, ಕೆರೆ, ನದಿ, ಕೇರಿಗಳಾದಿ ಎಲ್ಲೆಲ್ಲೂ ಕಪ್ಪೆಗಳು ಕುಪ್ಪಳಿಸತೊಡಗಿತು. ಜನ ಜೀವನವೇ ಅಸ್ತವ್ಯಸ್ತವಾಯಿತು. ಆದರೆ ಇದು ಜಾದೂಗಾರಿಕೆಯ ಚಮತ್ಕಾರವಾಗಿ ಅವರಿಗೆ ಕಂಡಿತು.

9. ಅದೇ ರೀತಿ ಬಾವಿ, ಕೆರೆ, ನದಿ, ಸರೋವರಗಳು ಮಾತ್ರವಲ್ಲ ಪಾತ್ರೆಗಳಲ್ಲೂ ನೀರು ರಕ್ತವಾಗಿ ಪರಿವರ್ತನೆಗೊಂಡಿತು. ಆದರೆ ಇದೆಲ್ಲವೂ ಅವರಿಗೆ ಮಾಟಗಾರಿಕೆ ಯಾಗಿಯೇ ಕಂಡಿತು.

ಆದರೆ ಸ್ವಾರಸ್ಯಕರ ಅಂಶವೇನೆಂದರೆ ಈ ಎಲ್ಲ ವಿಪತ್ತುಗಳೂ ಅವರು ಯಾರನ್ನು ಮಾಟಗಾರನೆಂದು ಕರೆಯುತ್ತಿದ್ದರೋ ಅವರ ಬಳಿ ಹೋಗಿ ಮೊಣಕಾಲೂರಿ ವಿನಂತಿಸಿದಾಗ ಅವರ ಪ್ರಾರ್ಥನೆಯಿಂದ ಸರಿದು ಹೋಗುತ್ತಿದ್ದುವು. ಆದರೆ ಅವರನ್ನು ಪ್ರವಾದಿಯೆಂದೋ ದೇವನಿಂದ ನಿಯುಕ್ತರಾದ ಸಂದೇಶವಾಹಕನೆಂದೋ ನಂಬಲು ಅವರು ಸಿದ್ಧರಿರಲಿಲ್ಲ. ಅವರ ಸಂದೇಶವನ್ನು ಒಪ್ಪಿಕೊಳ್ಳಲಿಕ್ಕೂ ತಯಾರಿರಲಿಲ್ಲ. ಅವರ ಬೆನ್ನಿಗೆ ಯಾತನೆಯ ಕೊರಡೆ ಯೇಟುಗಳು ಬೀಳುತ್ತಿದ್ದುವು. ಆದರೆ ಅದರಲ್ಲೂ ಅವರಿಗೆ ಮಾಟವೇ ಗೋಚರಿಸುತ್ತಿತ್ತು.

ಅವರ ಈ ಹಠಮಾರಿತನ ಮತ್ತು ಕಠೋರ ಮನೋವೃತ್ತಿಯನ್ನು ಅಲ್ಲಾಹನು ಹೀಗೆ ಚಿತ್ರಿಸಿರುವನು,

"ನಮ್ಮ ಸುವ್ಯಕ್ತ ನಿದರ್ಶನಗಳು ಅವರ ಮುಂದೆ ಬಂದಾಗ ಅವರು- ಇದು ಸ್ಪಷ್ಟ ಜಾದುವೆಂದು ಬಿಟ್ಟರು. ಅವರು ಸಂಪೂರ್ಣ ಅಕ್ರಮ ಹಾಗೂ ಅಹಂಕಾರದ ಮಾರ್ಗ ದಿಂದ ಆ ನಿದರ್ಶನಗಳನ್ನು ನಿಷೇಧಿಸಿದರು. ವಸ್ತುತಃ ಅವರ ಮನಸ್ಸುಗಳು ಅವನ್ನು ಒಪ್ಪಿ ಕೊಂಡಿದ್ದುವು. ಆ ಕಿಡಿಗೇಡಿಗಳ ಪರಿಣಾಮವೇನಾಯಿತೆಂಬುದನ್ನು ನೋಡಿಕೊಳ್ಳಿರಿ."

(ಪವಿತ್ರ ಕುರ್‌ಆನ್, 27:13-14)

ಮಾಟಗಾರರು ತಮ್ಮ ಮಾಟದ ಮೂಲಕ ಇಡೀ ದೇಶಕ್ಕೆ ಪಂಥಾಹ್ವಾನ ನೀಡಿ ಅದನ್ನು ನಾಶಗೊಳಿಸಿದ ಚರಿತ್ರೆ ಎಲ್ಲಾದರೂ ಎಂದಾದರೂ ನಡೆದದ್ದನ್ನು ಕಂಡಿದ್ದಾರೆಯೇ? ಒಂದು ವೇಳೆ ಹಾಗಿರುತ್ತಿದ್ದರೆ ಲೋಕದಲ್ಲಿ ಅವರದೇ ಸಾಮ್ರಾಜ್ಯತ್ವ ಮೆರೆಯುತ್ತಿತ್ತು. ಅವರೇ ಪ್ರಬಲರಾಗಿರುತ್ತಿದ್ದರು. ಆದರೆ ಅವರಾದರೋ ಕೆಲವು ಕ್ಷಣಗಳ ಮಟ್ಟಿಗೆ ಜನರನ್ನು ಮೋಡಿ ಮಾಡಿ, ಅವರಿಂದ ಬಹುಮಾನವನ್ನೋ ದಾನವನ್ನೋ ಗಳಿಸುವುದಲ್ಲದೆ ಗಂಭೀರ ವಿಷಯಗಳಿಗಾಗಿ ಅವರ ಸಮಯ ಕಳೆಯುವುದಿಲ್ಲ, ಅವರಿಗೆ ತಮ್ಮ ಜೀವನಾಧಾರಗಳ ಮೂಲಗಳನ್ನು ಸ್ವಾಧೀನಪಡಿಸುವ ಸಾಮರ್ಥ್ಯವಿಲ್ಲ. ಜನರ ಮುಂದೆ ಕೈ ಚಾಚಿಯೇ ಅವರ ಜೀವನ ಸಾಗಬೇಕು.

ಈ ನಿರಂತರ ವಿಪತ್ತುಗಳಿಂದ ಫಿರ್‌ಔನ್ ತತ್ತರಿಸಿ ಹೋದ. ಬಹಳ ಭೀತಿಗೊಳಗಾದ. ತನ್ನ ಕಾಲಡಿಯಿಂದ ನೆಲ ಜಾರುತ್ತಿರುವುದು ಅವನಿಗೆ ಕಂಡಿತು. ಅವನಿಗೆ ಸ್ಪರ್ಧೆಯಿಂದ ಸೋತ ಅವಮಾನ ಒಂದೆಡೆಯಾಗಿದ್ದರೆ, ಇನ್ನೊಂದೆಡೆ ಜನಸಾಮಾನ್ಯರ ಮೇಲೆ ತನ್ನ ಅಧಿಕಾರವೇನೂ ಹೆಚ್ಚು ಕಾಲ ನಡೆಯಲಾರದೆಂಬ ಭೀತಿಯೂ ಉಂಟಾಗಿತ್ತು. ಒಬ್ಬ ವ್ಯಕ್ತಿಯ ಸೂಚನೆಯಿಂದ ಇಡೀ ದೇಶವು ಅಡಿಮೇಲಾಗುತ್ತಿದೆ. ಅವನ ಪ್ರಾರ್ಥನೆಯಿಂದ ತಕ್ಷಣ ಮುಕ್ತಿ ದೊರೆಯುತ್ತದೆ. ಅಧಿಕಾರಶಾಹಿಗೆ ತುಟಿ ಪಿಟಕ್ಕೆನ್ನುವ ಧೈರ್ಯವಿಲ್ಲ, ಇದನ್ನೆಲ್ಲ ಜನಸಾಮಾನ್ಯರು ಕಣ್ಣಾರೆ ಕಾಣುತ್ತಿದ್ದಾರೆ. ಹಾಗಿರುವಾಗ ಅಧಿಕಾರಶಾಹಿಯ ದಬ್ಬಾಳಿಕೆಯನ್ನು ಅವರು ಎಷ್ಟು ಕಾಲ ಸಹಿಸಬಲ್ಲರು. ಈ ವಸ್ತುಸ್ಥಿತಿಯನ್ನು ಗ್ರಹಿಸಿದ ಫಿರ್‌ಔನ್ ತಿಳಿಗೇಡಿಗಳನ್ನು ತನ್ನ ಕಪಿಮುಷ್ಟಿಯಲ್ಲಿರಿಸಲಿಕ್ಕಾಗಿ ಇನ್ನೊಂದು ಹೊಸ ಬಲೆ ಬೀಸಿದ.

ಫಿರ್‌ಔನನ ಹೊಸ ತಂತ್ರ

"ಒಂದು ದಿನ ಫಿರ್‌ಔನನು ತನ್ನ ಜನಾಂಗದವರ ನಡುವೆ ಕೂಗಿ ಹೇಳಿದನು; 'ಜನರೇ, ಈಜಿಪ್ಟಿನ ಚಕ್ರಾಧಿಪತ್ಯ ನನ್ನದಲ್ಲವೇ? ಮತ್ತು ಈ ಕಾಲುವೆಗಳು ನನ್ನ ಅಧೀನದಲ್ಲಿ ಹರಿಯುತ್ತಿಲ್ಲವೇ? ನಿಮಗೇನು ಕಾಣುವುದಿಲ್ಲವೇ? ನಾನು ಮೇಲೋ ಅಥವಾ ಹೀನನೂ ನಿಂದ್ಯನೂ ಆಗಿರುವ ಮತ್ತು ತನ್ನ ಮಾತನ್ನು ಕೂಡಾ ವ್ಯಕ್ತವಾಗಿ ವಿವರಿಸಲಾಗದ ಈ ವ್ಯಕ್ತಿ ಮೇಲೋ? ಇವನ ಮೇಲೆ ಬಂಗಾರದ ಕಂಕಣಗಳೇಕೆ ಇಳಿಸಲ್ಪಟ್ಟಿಲ್ಲ? ಅಥವಾ ಇವನ ಅಂಗರಕ್ಷಕರಾಗಿ ದೇವಚರರ ತುಕಡಿಯೇಕೆ ಬಂದಿಲ್ಲ?' ಅವನು ತನ್ನ ಜನಾಂಗವನ್ನು ಕೀಳಾಗಿ ಕಂಡನು ಮತ್ತು ಅವರು ಅವನನ್ನು ಅನುಸರಿಸಿದರು. ವಾಸ್ತವದಲ್ಲಿ ಅವರು 'ಕರ್ಮ ಭ್ರಷ್ಟ'ರೇ ಆಗಿದ್ದರು." (ಪವಿತ್ರ ಕುರ್‌ಆನ್, 43:51-54)

ಮೂಸಾರನ್ನು ಮಾಟಗಾರನೆಂದು ಬಿಂಬಿಸಿದನು. ಅದರಲ್ಲಿ ಯಶಸ್ವಿಯಾಗಲಿಲ್ಲ, ಜನಾಂಗೀಯ ಪಕ್ಷಪಾತ ಹೊತ್ತಿಸಿದನು. ಆದರೆ ಒಂದು ತಾತ್ವಿಕ ಆಂದೋಲನದ ಮುಂದೆ ಅದು ಎಲ್ಲಿ ನಿಲ್ಲುತ್ತದೆ? ಹಿಂಸೆ-ದೌರ್ಜನ್ಯಗಳ ಗಾಣ ಚಲಾಯಿಸಿದನು. ಆದರೆ ಸತ್ಯದ

ವಾಹಕರ ಧೈರ್ಯ-ಸ್ಥೈರ್ಯಗಳು ಅದನ್ನೂ ನಿಷ್ಕ್ರಿಯಗೊಳಿಸಿತು. ಜನರ ಮನಸ್ಸುಗಳು ಸತ್ಯಸಂದೇಶ ಮತ್ತು ಆಧಾರ ಪ್ರಮಾಣಗಳಿಂದ ಶರಣಾಗುತ್ತವೆ. ಹಿಂಸೆ-ದೌರ್ಜನ್ಯಗಳಿಂದ ದ್ವೇಷವೇ ಹುಟ್ಟುತ್ತದೆ. ಈಗ ಅವನು ತನ್ನ ಅಪಪ್ರಚಾರದ ಮಂತ್ರವನ್ನು ಇನ್ನಷ್ಟು ತೀವ್ರಗೊಳಿಸಿದನು. ಜನರ ಮೇಲೆ ತನ್ನ ಉಪಕಾರಗಳ ಮತ್ತು ಬುದ್ಧಿವಂತಿಕೆಯ ಡಂಗುರ ಸಾರಿ ಜನಮನವನ್ನು ತನ್ನ ಅಂಕಿತದಲ್ಲಿಡಲು ಬಯಸಿದನು. ಅದಕ್ಕಾಗಿ ತನ್ನ ವಿಜಯಗಾಥೆ ಗಳು, ತನ್ನ ಸಾಧನೆಗಳು (Achievements) ಮತ್ತು ದೇಶದ ಅಭಿವೃದ್ಧಿಯನ್ನು (Development) ತೋರಿಸಿ ಈ ಎಲ್ಲ ಸುಭಿಕ್ಷೆ ಮತ್ತು ಅಭಿವೃದ್ಧಿಗಳು ತನ್ನಿಂದಾಗಿ ಉಂಟಾ ಗಿದೆಯೆಂದು ನಂಬಿಸಲು ಪ್ರಯತ್ನಿಸಿದನು. ತಾನಿಲ್ಲದಿದ್ದರೆ ಈ ದೇಶ ಎಲ್ಲಿಗೆ ಹೋದೀತು. ಇಡೀ ದೇಶ ಪಾಳು ಬಿದ್ದೀತು, ಬಂಜರಾದೀತು ಎಂದೆಲ್ಲ ನಂಬಿಸಲು ಪ್ರಯತ್ನಿಸಿದನು.

ಈ ಕಾಲದಲ್ಲೂ ಅಂತಹ ನಿರಂಕುಶ ಪ್ರಭುಗಳಿದ್ದಾರೆ. ಎಲ್ಲ ಕಾಲಗಳಲ್ಲೂ ಇಂತಹವರ ಸ್ವಭಾವ ಒಂದೇ ಆಗಿರುತ್ತದೆ. ತಮ್ಮ ಕಾರಣದಿಂದಲೇ ದೇಶದ ಅಭಿವೃದ್ಧಿಯಾಗುತ್ತದೆ. ತಾವಿಲ್ಲದಿದ್ದರೆ ದೇಶದ ಗತಿಯೇನಾದೀತೆಂದು ಬಿಂಬಿಸಲು ಪ್ರಯತ್ನಿಸುತ್ತಾರೆ. ಈ ರೀತಿ ಜನರ ಮೇಲೆ ಪ್ರಭುತ್ವ ನಡೆಸುವುದು ತಮ್ಮ ಹಕ್ಕೆಂದು ಭಾವಿಸುತ್ತಾರೆ.

ಫಿರ್‌ಔನ್ ತನ್ನ ಈ ಪ್ರಚಾರಕ್ಕಾಗಿ ಪ್ರಚಾರ-ಪ್ರಸಾರ ಖಾತೆ (Press Information Department) ತೆರೆದಿದ್ದನೋ ಇಲ್ಲವೋ ಅಥವಾ ಈ ಕಾರ್ಯವನ್ನು ತನ್ನ ಆಸ್ಥಾನಿಕರು ಮತ್ತು ದೂತರ ಮೂಲಕ ಮಾಡಿಸಿದನೋ ಎಂಬುದು ತಿಳಿದಿಲ್ಲ. ಆ ಕಾಲದಲ್ಲೆಂದಾದರೂ ರೇಡಿಯೋ, ಟಿ.ವಿ.ಗಳಿರುತ್ತಿದ್ದರೆ ಜನರನ್ನು ಸರಿಯಾಗಿ ಮರುಳು ಮಾಡುತ್ತಿದ್ದನು. ಆದರೆ ಅವನಿಗೆ ವಾರ್ತಾ ಮಾಹಿತಿದಾರನಾಗಿ (Press Information) ಒಬ್ಬ ಬುದ್ಧಿವಂತನಾದರೂ ಸಿಗಲಿಲ್ಲವೆಂಬುದು ಅವನ ದೌರ್ಭಾಗ್ಯ.

ಕವಿ ಮಹಾಶಯ ಅಕ್ಬರ್ ಅಲಹಾಬಾದಿ ಫಿರ್‌ಔನನ ಶಿಶುಹತ್ಯೆಯ ಕುರಿತು ಬರೆದ ಕವನದ ಸಾಲೊಂದರ ಅರ್ಥ ಹೀಗಿದೆ:

ಶಿಶು ಹತ್ಯೆಯ ನಡೆಸಿದ ಫಿರ್‌ಔನ್, ಹೆಸರು ಕೆಡಿಸಿದನಾತ
ಅಯ್ಯೋ! ವಿದ್ಯಾಲಯ ತೆರೆಯದಿರುವುದು ಆತನ ದುರಂತ.

ಈ ಮಾತು ಸರಿಯಾಗಿರಲೂ ಬಹುದು. ಆದರೆ ಆ ಕಾಲದಲ್ಲಿ ರೇಡಿಯೋ, ಟೆಲಿವಿಷನ್‌ಗಳಂತಹ ವಾರ್ತಾ ಪ್ರಸಾರ ಮಾಧ್ಯಮಗಳೂ ಇರಲಿಲ್ಲ. ಒಂದು ವೇಳೆ ಇರುತ್ತಿದ್ದರೆ, ಸರಕಾರಿ ಪ್ರಾಯೋಜಿತ ಈ ಉಪಕರಣಗಳು ಯಾವ ರೀತಿ ಜನರ ಮನ ಮಸ್ತಿಷ್ಕಗಳ ಮೇಲೆ ಆವರಿಸುತ್ತಿತ್ತು ಮತ್ತು ಎಷ್ಟು ಬೇಗ ಫಿರ್‌ಔನನು ತನ್ನ ದರ್ಪವನ್ನು ಮೆರೆಯುವ ವ್ಯವಸ್ಥೆ ಮಾಡುತ್ತಿದ್ದನೆಂದು ನೋಡತಕ್ಕದ್ದಾಗಿತ್ತು. ಆದರೆ ಅವನ ಸೌಭಾಗ್ಯವೋ ದೌರ್ಭಾಗ್ಯವೋ ಅವನಿಗೆ ಓರ್ವ ಬುದ್ಧಿವಂತ ವಾರ್ತಾ ಮಾಹಿತಿದಾರ ಸಿಗಲಿಲ್ಲ.

ತನ್ನ ಉಪಕಾರಗಳನ್ನು ಪ್ರಸ್ತಾಪಿಸುವುದಕ್ಕೆ ಮಾತ್ರ ಅವನು ಸಾಕು ಮಾಡಲಿಲ್ಲ, ತನಗೆ ಯಾವ ಆಧಾರದ ಮೇಲೆ ಅಧಿಕಾರ ಪ್ರಾಪ್ತವಾಗಿದೆಯೆಂದು ತಿಳಿಸುವುದು ಅಗತ್ಯ ವೆಂದು ಭಾವಿಸಿದನು. ಉತ್ತಮ ಚಾರಿತ್ರ್ಯ, ಧೈರ್ಯ-ಸ್ಥೈರ್ಯ, ಜ್ಞಾನ ಮತ್ತು ದೈವಿಕ ಮಾರ್ಗದರ್ಶನಗಳಾವುವೂ ಅಧಿಕಾರ ಗಳಿಸಲು ಅರ್ಹವಾದ ಗುಣಗಳಲ್ಲ, ಬದಲಾಗಿ ಐಶ್ವರ್ಯ, ಮಂತ್ರಿಮಾಗಧರ ಮತ್ತು ರಾಯಭಾರಿಗಳ ಕೂಟ, ಸರಿಯಿರಿ, ತೊಲಗಿರಿ ಎಂಬಂತಹ ಶಬ್ದ ಕೋಲಾಹಲ, ಹಿಂದಿನಿಂದಲೂ ಮುಂದಿನಿಂದಲೂ ಸೇವಕರ ಮತ್ತು ಚೇಲಾಗಳ ದಂಡು ಇತ್ಯಾದಿ ಒಬ್ಬನಿಗೆ ಪ್ರಾಪ್ತವಾಯಿತೆಂದರೆ ಆತ ದೊಡ್ಡ ಮನುಷ್ಯ ಎಂದು ಅಂದಾಜಿಸಲು ಸಾಕಾಗುತ್ತದೆ. ಈ ಫಕೀರ, ಹರಕು ಬಟ್ಟೆಯ ಯಾವುದೇ ಆಡಂಬರ ವಿಲ್ಲದ ವ್ಯಕ್ತಿಯನ್ನು ಜಗದೊಡೆಯನ ಪ್ರತಿನಿಧಿಯೆನ್ನುವುದಾದರೂ ಹೇಗೆ? ಇಷ್ಟು ದೊಡ್ಡ ಚಕ್ರವರ್ತಿಯ ಪ್ರತಿನಿಧಿ, ಇಂತಹ ದಯನೀಯ ಸ್ಥಿತಿ! ಅತ್ಯಾಶ್ಚರ್ಯ! ಕೈಯಲ್ಲಿ ಚಿನ್ನದ ಕಡಗಗಳಾಗಲಿ, ಹಿಂದೆ ಮುಂದೆ ದೇವಚರರ ಮೆರವಣಿಗೆಗಳಾಗಲಿ ಇಲ್ಲದ ಈತ ತಾನು ಸಕಲ ಲೋಕಗಳ ಪ್ರಭುವಿನ ಪ್ರತಿನಿಧಿಯೆಂದು ವಾದಿಸುತ್ತಾನೆ. ಮಾತಿನ ಶೈಲಿಯನ್ನಾದರೂ ನೋಡಿ, ಯಾವುದೇ ರಾಜ ಠೀವಿಯಿಲ್ಲ, ಬಿರುದು ಬಾವಲಿಗಳಿಲ್ಲ, ಇದೇನು ಒಪ್ಪತಕ್ಕ ವಿಷಯವೇ? ಫಿರ್‌ಔನನು ಮೂಸಾರ ವಿರುದ್ಧ ಈ ಧೋರಣೆ ಯಾಕೆ ಕೈಗೊಂಡನು ಎಂಬುದರ ಕಡೆಗೆ ಅಲ್ಲಾಹನು ಅತ್ಯಂತ ವಿಚಾರ ಪ್ರಚೋದಕ ಶೈಲಿಯಲ್ಲಿ ಬೆಳಕು ಚೆಲ್ಲಿದ್ದಾನೆ.

ಸರ್ವಾಧಿಕಾರಿ ಮನೋಭಾವ

ಅಲ್ಲಾಹನು ಹೇಳುತ್ತಾನೆ, "ಅವನು ತನ್ನ ಜನಾಂಗವನ್ನು ಹಗುರವಾಗಿ ಭಾವಿಸಿದನು. ಅವರು ಅವನನ್ನು ಅನುಸರಿಸಿದರು. ವಾಸ್ತವದಲ್ಲಿ ಅವರು ಕರ್ಮಭ್ರಷ್ಟರೇ ಆಗಿದ್ದರು."

ಈ ಒಂದು ವಾಕ್ಯದಲ್ಲಿ ಅಲ್ಲಾಹನು ಒಂದು ದೊಡ್ಡ ವಾಸ್ತವಿಕತೆಯನ್ನು ವಿವರಿಸಿ ರುವನು. ಜಗತ್ತಿನಲ್ಲಿ ಯಾರಾದರೊಬ್ಬ ಸರ್ವಾಧಿಕಾರಿ ಅಥವಾ ನಿರಂಕುಶ ಆಡಳಿತಗಾರ ಮೋಸ, ತಂತ್ರ ಹಾಗೂ ಹಿಂಸೆ, ದೌರ್ಜನ್ಯಗಳ ಮೂಲಕ ಅಧಿಕಾರ ಗಳಿಸಿದಾಗಲೆಲ್ಲ ತನ್ನೆದುರಿಗಿರುವ ಎಲ್ಲರನ್ನೂ ನಿಕೃಷ್ಟರೆಂದು ಭಾವಿಸುತ್ತಾನೆ. ಅವನ ದಬ್ಬಾಳಿಕೆಯಲ್ಲಿ ಅಪ್ಪಚ್ಚಿ ಯಾಗಿರುವ, ಅವನ ಶಕ್ತಿ ಮತ್ತು ಕುತಂತ್ರಗಳಿಂದ ಅವನ ನಿಯಂತ್ರಣಕ್ಕೆ ಬಂದಿರುವ ಮತ್ತು ತನ್ನ ಐಶ್ವರ್ಯದಿಂದ ಆತ್ಮಸಾಕ್ಷಿ ಮತ್ತು ನಿಷ್ಠೆಯನ್ನು ಖರೀದಿಸಿರುವವರಿಗೆ ಅವನು ಬೆಲೆ ಕೊಡುವುದಾದರೂ ಹೇಗೆ? ಯಾರಾದರೂ ತನ್ನ ವಿರುದ್ಧ ಸೆಟೆದು ನಿಂತರೆ ತನ್ನ ಶಕ್ತಿಯಿಂದ ಅವರನ್ನು ದಮನಿಸಬಲ್ಲೆ, ಅವರು ಇನ್ನಷ್ಟು ತಲೆಯೆತ್ತ ಬಯಸಿದರೆ ಅವರನ್ನು ಸಂಕೋಲೆಗಳಲ್ಲಿ ಕಟ್ಟಿ ಹಾಕುವೆ ಎಂದು ಭಾವಿಸಿರುವಾಗ ಅವನು ಅವರನ್ನು ಲೆಕ್ಕಿಸು ವುದಾದರೂ ಏತಕ್ಕೆ? ವಾಸ್ತವದಲ್ಲಿ ಒಂದು ಜನತೆ ಹೇಡಿಗಳಾಗಿ ಮಾರ್ಪಟ್ಟಾಗ ಎಲ್ಲ

ದಬ್ಬಾಳಿಕೆಯ ಮುಂದೆ ಕೈಕಟ್ಟಿ, ತಲೆ ಬಾಗಿ ನಿಲ್ಲುವಾಗ, ನಗ-ನಾಣ್ಯಗಳಿಗೆ ತಮ್ಮ ನಿಷ್ಠೆ ಮತ್ತು ಆತ್ಮಸಾಕ್ಷಿಯನ್ನು ಅಡವಿಟ್ಟಿರುವಾಗ ಅದು ಮೂಲಭೂತವಾಗಿ ಕರ್ಮಭ್ರಷ್ಟ ಜನಾಂಗವಾಗಿ ಬಿಡುತ್ತದೆ. ಎಲ್ಲ ಅಪಮಾನಗಳನ್ನು ಸಹಿಸಲು ಸಿದ್ಧವಾಗಿರುತ್ತದೆ.

ಎರಡನೆಯದಾಗಿ, ಆಡಳಿತ ಕೂಟದ ಜನಾಂಗದ ಫಿರ್‌ಔನ್ ಮತ್ತು ಅವನ ಆಸ್ಥಾನಿಕರು, ತಮ್ಮ ಅಧೀನ (ಗುಲಾಮ) ಜನಾಂಗದ ಇಬ್ಬರು ಎದ್ದುನಿಂತು ತಮ್ಮ ಮಾರ್ಗದರ್ಶಕರೂ ನೇತಾರರೂ ಆಗುವುದನ್ನು ಸಹಿಸಲು ಎಂದೆಂದಿಗೂ ಸಿದ್ಧರಿರಲಿಲ್ಲ. ಶತಮಾನಗಳಿಂದ ಯಾವ ಜನಾಂಗದ ಮೇಲೆ ಅಧಿಕಾರ ಚಲಾಯಿಸುತ್ತಿದ್ದರೋ ಅದೇ ಜನಾಂಗದ ಇಬ್ಬರ ಕೈಯಲ್ಲಿ ತಮ್ಮ ಅಧಿಕಾರವನ್ನು ಒಪ್ಪಿಸುವುದೆಂದರೆ ಅದು ಸಣ್ಣ ಮಾತೇ? ಆದ್ದರಿಂದಲೇ ಅವರು ಹೇಳಿದರು,

"ಅವರು ಹೀಗೆಂದರು- 'ನಾವು ನಮ್ಮಂತೆಯೇ ಇರುವ ಇಬ್ಬರ ಮೇಲೆ ವಿಶ್ವಾಸ ವಿರಿಸಬೇಕೆ? ಅದರಲ್ಲೂ, ಅವರು ನಮ್ಮ ದಾಸ್ಯದಲ್ಲಿರುವ ಜನಾಂಗದವರು.' ಆ ಪ್ರಕಾರ ಅವರು ಇಬ್ಬರನ್ನೂ ಸುಳ್ಳಾಗಿಸಿಬಿಟ್ಟರು ಮತ್ತು ನಾಶ ಹೊಂದುವವರಲ್ಲಿ ಸೇರಿ ಹೋದರು."

(ಪವಿತ್ರ ಕುರ್‌ಆನ್, 23:47-48)

ಈ ಅಧಿಕಾರ ಮದ, ಜನಾಂಗ ಮೇಲ್ಮೆ ಮತ್ತು ದರ್ಪ ಇತ್ಯಾದಿ ಮಾನವನ ಕಣ್ಣು ಮುಚ್ಚಿಸಿ ಬಿಡುತ್ತದೆ. ಸನ್ಮಾರ್ಗದ ಹಾದಿಯನ್ನು ನೋಡಲೇ ಬಿಡುವುದಿಲ್ಲ. ಅವನು ಸ್ವಯಂ ನಾಶ ಹೊಂದಲು ಸಿದ್ಧನಾಗುತ್ತಾನೆ. ಆದರೆ ತನ್ನ ಗರ್ವವನ್ನು ಕೈಬಿಡಲು ತಯಾರಿರುವುದಿಲ್ಲ.

ಅವರನ್ನು ಸನ್ಮಾರ್ಗಕ್ಕೆ ಕರೆತರಲು ಮೂಸಾ(ಅ) ಸಾಕಷ್ಟು ಪ್ರಯತ್ನಿಸಿದರು. ದೊಡ್ಡ ದೊಡ್ಡ ಪವಾಡಗಳನ್ನು ತೋರಿಸಿದರು. ಒಂದಕ್ಕಿಂತ ಒಂದು ಉತ್ತಮ ಪುರಾವೆಗಳನ್ನು ಮುಂದಿಟ್ಟರು. ಆದರೆ ಜನಾಂಗ ಮೇಲ್ಮೆ ಮತ್ತು ಅಧಿಕಾರ ಮದದಿಂದ ಪ್ರಮತ್ತವಾಗಿರುವ ಜನತೆ ನೇರಮಾರ್ಗವನ್ನು ನೋಡುವುದಾದರೂ ಹೇಗೆ? ಅದಕ್ಕೆ ಇನ್ನೂ ಕೆಲವು ಹೊಡೆತ ಗಳನ್ನು ತಿನ್ನಬೇಕಾಗಿತ್ತು. ಅದು ಸಂಪೂರ್ಣ ನಾಶವಾಗಲು ಸಿದ್ಧಪಡಿಸಿಡಲಾದಂತಹ ಹೊಂಡಕ್ಕೆ ಬೀಳಬೇಕಾಗಿತ್ತು. ಈ ಪ್ರತ್ಯಕ್ಷ ವಾಸ್ತವಿಕತೆಯನ್ನು ಕುರಿತೇ ಅಲ್ಲಾಹನು ಹೀಗೆ ಹೇಳಿದನು,

"ನಾವು ಮೂಸಾರನ್ನು ನಮ್ಮ ನಿದರ್ಶನಗಳೊಂದಿಗೂ (ನೇಮಕದ) ಸುವ್ಯಕ್ತ ಆಧಾರ ದೊಂದಿಗೂ ಕಳುಹಿಸಿದೆವು- ಫಿರ್‌ಔನ್ ಮತ್ತು ಅವನ ರಾಜಮಾನ್ಯ ಸರದಾರರ ಕಡೆಗೆ- ಆದರೆ, ಆ ಜನರು ಫಿರ್‌ಔನನ ಆಜ್ಞೆಯನ್ನು ಅನುಸರಿಸಿದರು. ವಸ್ತುತಃ ಫಿರ್‌ಔನನ ಆಜ್ಞೆಯು ಸನ್ಮಾರ್ಗ ಪರವಾಗಿರಲಿಲ್ಲ." **(ಪವಿತ್ರ ಕುರ್‌ಆನ್, 11:96-97)**

ಒಂದು ಜನಾಂಗಕ್ಕೆ ದುರ್ಗತಿ ಬಂದು ಬಿಟ್ಟಿತೆಂದರೆ ಅದು ತನ್ನ ಕಣ್ಣುಗಳನ್ನು ಇದೇ ರೀತಿ ಮುಚ್ಚಿ ಬಿಡುತ್ತದೆ. ಮುತ್ತುಗಳನ್ನು ಹೆಕ್ಕಿ ಹೆಕ್ಕಿ ಬಿಸಾಡುತ್ತದೆ ಮತ್ತು ಕಲ್ಲುಗಳನ್ನು ಆಯ್ದು ಶೇಖರಿಸುತ್ತದೆ. ಅದರ ಒಳಿತು-ಕೆಡುಕು ಮತ್ತು ಇಷ್ಟ-ಅನಿಷ್ಟದ ಮಾನದಂಡಗಳು ಬದಲಾಗುತ್ತದೆ. ಅದು ತನ್ನನ್ನು ತ್ವರಿತವಾಗಿ ವಿನಾಶಕೂಪಕ್ಕೆ ತಳ್ಳುವುದರ ಹಿಂದೆ ಓಡುತ್ತಿರುತ್ತದೆ.

ಪುರಾವೆ, ಪವಾಡಗಳು ಯಾವುದೇ ಜನಾಂಗವನ್ನು ವಿನಾಶದಿಂದ ರಕ್ಷಿಸುತ್ತಿದೆಯೆಂದಾದರೆ ಇಂದು ಈ ಜಗತ್ತಿನಲ್ಲಿ ಕೆಟ್ಟವರು ಮತ್ತು ಆಜ್ಞೋಲ್ಲಂಘಕರು ಇರುತ್ತಿರಲಿಲ್ಲ, ಇಡೀ ಜಗತ್ತೇ ಮಾನವನ ಪಾಲಿಗೆ ಸ್ವರ್ಗವಾಗಿ ಬಿಡುತ್ತಿತ್ತು. ನಿಜವಾಗಿ, ಪುರಾವೆ ಮತ್ತು ಪವಾಡಗಳಿಂದ ಪಾಠ ಕಲಿಯುವವರು ಈ ಲೋಕದ ಬಾಹ್ಯ ಸುಖಾಡಂಬರಗಳನ್ನು ಬಿಟ್ಟು ಅಗೋಚರನಾದ ಅಲ್ಲಾಹನ ಮೇಲೆ ನಂಬಿಕೆಯಿಡುವವರು ಮತ್ತು ಅವನ ಭಯದಿಂದ ಅವನ ವಾಗ್ದಾನದ ನಿರೀಕ್ಷೆಯಲ್ಲಿರುವವರಾಗಿದ್ದಾರೆ. ಈ ವಾಸ್ತವಿಕತೆಯನ್ನೇ ಅಲ್ಲಾಹನು ಈ ಸೂಕ್ತಗಳಲ್ಲಿ ವಿವರಿಸಿದ್ದಾನೆ.

"ಈ ಮುಂಚೆ ನಾವು ಮೂಸಾ ಮತ್ತು ಹಾರೂನರಿಗೆ 'ಸತ್ಯ ಅಸತ್ಯಗಳ ಮಾನದಂಡ' ಪ್ರಕಾಶ ಮತ್ತು (ದಿಕ್ರ್) ಬೋಧನೆಗಳನ್ನು, ತಮ್ಮ ಪ್ರಭುವನ್ನು ಪ್ರತ್ಯಕ್ಷವಾಗಿ ನೋಡದೆಯೇ ಭಯಪಡುವ ಹಾಗೂ (ವಿಚಾರಣೆಯ) ಆ ಘಳಿಗೆಯ ಬಗ್ಗೆ ಸದಾ ಭೀತರಾಗಿರುವ 'ಧರ್ಮನಿಷ್ಠ'ರ ಶ್ರೇಯಸ್ಸಿಗಾಗಿ ನೀಡಿದ್ದೆವು." (ಪವಿತ್ರ ಕುರ್‌ಆನ್, 21:48-49)

❖ ❖ ❖

ಫಿರ್‌ಔನನ ಆಸ್ಥಾನದಲ್ಲಿ ಇಸ್ಲಾಮೀ ಆಂದೋಲನದ ಚಟುವಟಿಕೆಗಳು

ಒಂದೆಡೆ ಫಿರ್‌ಔನನ ಈ ತಂತ್ರಗಾರಿಕೆ ಮತ್ತು ಬೆದರಿಕೆಗಳಿದ್ದರೆ, ಇನ್ನೊಂದೆಡೆ ಇಸ್ಲಾಮೀ ಆಂದೋಲನವು ತನ್ನ ಕಾರ್ಯವನ್ನು ಮುಂದುವರಿಸುತ್ತಲೇ ಇತ್ತು. ಫಿರ್‌ಔನ್ ಜನರನ್ನು ಮೂಸಾರಿಂದ 'ರಕ್ಷಿಸಲು' ಎಷ್ಟೆಲ್ಲ ಪ್ರಯತ್ನಿಸುತ್ತಿದ್ದನೋ ಅಷ್ಟೇ ಅವರ ಸಂದೇಶವು ಅವನ ದೇಶ ಮತ್ತು ಅಧಿಕಾರ ವಲಯದಲ್ಲಿ ವಿಸ್ತರಿಸುತ್ತಾ ಸಾಗುತ್ತಿತ್ತು. ಕೊನೆಗೆ ಈ ಅಪಾಯದಿಂದ ಫಿರ್‌ಔನನ ಆಸ್ಥಾನವೂ ಹೊರತಾಗಲಿಲ್ಲ. ಅವನ ಆಸ್ಥಾನದಲ್ಲೂ ಮೂಸಾರ ಸಂದೇಶ ದಿಂದ ಪ್ರಭಾವಿತವಾದವರು ಹುಟ್ಟಿದ್ದು ಮಾತ್ರವಲ್ಲ, ಅದಕ್ಕಾಗಿ ತಮ್ಮ ಜೀವದ ಹಂಗನ್ನೂ ತೊರೆಯಲು ಅವರು ಸಿದ್ಧರಾದರು. ವಾಸ್ತವವೇನೆಂದರೆ ತಾತ್ವಿಕ ಆಂದೋಲನಗಳು ತಮಗೆ ಬೆಂಬಲಿಗರನ್ನೂ ಅನುಕಂಪವುಳ್ಳವರನ್ನೂ ತಮ್ಮ ವೈರಿ ಪಾಳಯದಿಂದಲೂ ಗಳಿಸಿ ಕೊಳ್ಳುತ್ತವೆ. ಇಸ್ಲಾಮೀ ಆಂದೋಲನವಂತೂ ತನ್ನ ವೈರಿಗಳ ಮಧ್ಯೆಯೇ ಬೆಳೆಯುತ್ತದೆ. ಮೂಸಾರ ಜನನವೇ ಅದರ ಸ್ಪಷ್ಟ ಉದಾಹರಣೆಯಾಗಿದೆ.

ಇಸ್ಲಾಮೀ ಆಂದೋಲನದ ಇಂತಹದೇ ಓರ್ವ ಬೆಂಬಲಿಗ ಫಿರ್‌ಔನನ ಆಸ್ಥಾನಿಕರಲ್ಲೂ ಮೂಡಿ ಬಂದ. ಆತ ಮನಮುಟ್ಟುವ ಶೈಲಿಯಲ್ಲಿ ಮೂಸಾರ ಸಂದೇಶವನ್ನು ಬಹಳ ಯುಕ್ತಿ ಯಿಂದ ಆಸ್ಥಾನಿಕನಿಗೆ ಪರಿಚಯಿಸಿದ. ಅಷ್ಟೇ ಅಲ್ಲ, ಫಿರ್‌ಔನನ ಆಸ್ಥಾನದಲ್ಲಿ ಮೂಸಾರ ವಿರುದ್ಧ ನಡೆಯುತ್ತಿದ್ದ ಪಿತೂರಿಯನ್ನು ಅವರ ಮುಂದೆ ಅನಾವರಣಗೊಳಿಸಿ ಅವರನ್ನು ಎಚ್ಚರಿಸಿದ. ಒಂದು ಸಂದರ್ಭದಲ್ಲಂತೂ ಅವನು ಜೀವದ ಹಂಗು ತೊರೆದು, ಮೂಸಾರ ವಧೆಯ ತೀರ್ಮಾನವನ್ನು ಹಿಂತೆಗೆಯುವಂತೆ ತೀವ್ರ ಪ್ರಯತ್ನ ನಡೆಸಿದ. ಆ ವಿಶ್ವಾಸಿಯ ಧೈರ್ಯ ಮತ್ತು ದಿಟ್ಟ ಪಾತ್ರವನ್ನು ಕುರ್‌ಆನ್ ವಿವರವಾಗಿ ಹೀಗೆ ಪ್ರಸ್ತಾಪಿಸಿದೆ.

ಮೂಸಾರ(ಅ) ವಧೆಯ ತೀರ್ಮಾನ

"ನಾವು ಮೂಸಾರನ್ನು ಫಿರ್‌ಔನ್, ಹಾಮಾನ್ ಮತ್ತು ಕಾರೂನ್‌ರ ಕಡೆಗೆ, ನಮ್ಮ ನಿದರ್ಶನಗಳು ಹಾಗೂ ಸುವ್ಯಕ್ತವಾದ ಪ್ರಮಾಣದೊಂದಿಗೆ ರವಾನಿಸಿದೆವು. ಆದರೆ ಅವರು,

'ಮಾಟಗಾರ, ಸುಳ್ಳುಗಾರ' ಎಂದರು. ತರುವಾಯ ಅವರು ನಮ್ಮ ಕಡೆಯಿಂದ ಸತ್ಯವನ್ನು ಅವರ ಮುಂದೆ ತಂದಾಗ ಅವರು, 'ವಿಶ್ವಾಸವಿರಿಸಿ ಇವನ ಜೊತೆ ಸೇರಿಕೊಂಡವರೆಲ್ಲರ ಗಂಡು ಮಕ್ಕಳನ್ನು ವಧಿಸಿರಿ ಮತ್ತು ಹೆಣ್ಣು ಮಕ್ಕಳನ್ನು ಬದುಕಿರಲು ಬಿಡಿರಿ' ಎಂದರು. ಆದರೆ ಸತ್ಯನಿಷೇಧಿಗಳ ಕುತಂತ್ರವು ವ್ಯರ್ಥವಾಗಿಯೇ ಹೋಯಿತು. ಒಂದು ದಿನ ಫಿರ್‌ಔನನು ತನ್ನ ಆಸ್ಥಾನದವರೊಡನೆ, 'ನನ್ನನ್ನು ಬಿಡಿರಿ, ನಾನು ಈ ಮೂಸಾನನ್ನು ವಧಿಸಿ ಬಿಡುತ್ತೇನೆ. ಇವನು ತನ್ನ ಪ್ರಭುವನ್ನು ಕರೆದು ನೋಡಲಿ, ಇವನು ನಿಮ್ಮ ಧರ್ಮವನ್ನು ಬದಲಿಸಿ ಬಿಡುವನು ಅಥವಾ ದೇಶದಲ್ಲಿ ಗೊಂದಲವನ್ನುಂಟು ಮಾಡುವನು ಎಂಬ ಭಯ ನನಗೆ ಉಂಟಾಗಿದೆ' ಎಂದನು." (ಪವಿತ್ರ ಕುರ್‌ಆನ್, 40:23-26)

ಅಂದರೆ ಮೂಸಾರು ಸುವ್ಯಕ್ತ ದೃಷ್ಟಾಂತಗಳು ಮತ್ತು ಪವಾಡಗಳೊಂದಿಗೆ ಫಿರ್‌ಔನ್ ಮತ್ತು ಅವರ ಆಸ್ಥಾನದ ಗಣ್ಯರ ಬಳಿಗೆ ಬಂದರು. ಇದು ಅವರ ಪ್ರವಾದಿತ್ವದ ಸ್ಪಷ್ಟ ಪುರಾವೆಯಾಗಿತ್ತು. ಅಂತಹ ದೃಷ್ಟಾಂತಗಳನ್ನು ಪ್ರಸ್ತುತಪಡಿಸುವುದು ಮಂತ್ರವಾದಿಗಳಿಗೆ ಅಥವಾ ಕಪಟ ಪ್ರವಾದಿಗಳಿಗೆ ಸಾಧ್ಯವಿರಲಿಲ್ಲ, ಆದರೆ ಒಂದು ಹಠಮಾರಿ, ಸತ್ಯವಿರೋಧಿ ಮತ್ತು ಜಿದ್ದಿನ ಜನಾಂಗ ಅದಕ್ಕೆ ನೀಡಿದ ಉತ್ತರವೇನು ಗೊತ್ತೇ? ನೀನೋರ್ವ ಮಂತ್ರವಾದಿ ಮತ್ತು ಸುಳ್ಳುಗಾರನೆಂದಾಗಿತ್ತು.

ಫಿರ್‌ಔನ್ ಮತ್ತು ಅವನ ಸಂಗಡಿಗರ ಭಾರೀ ಅಪಪ್ರಚಾರದಿಂದಾಗಿ ಮೂಸಾ(ಅ) ದೇಶದಾದ್ಯಂತ ಮಂತ್ರವಾದಿಯೆಂಬ ನೆಲೆಯಲ್ಲಿ ಪ್ರಖ್ಯಾತರಾದರು. ಇಷ್ಟು ದೊಡ್ಡ ತೊಡಕನ್ನು ನಿವಾರಿಸದೆ ಅವರ ಪ್ರವಾದಿತ್ವದ ದೌತ್ಯವನ್ನು ನೆರವೇರಿಸುವುದು ಸಾಧ್ಯವಿರಲಿಲ್ಲ. ಯಾರೊಬ್ಬನೂ ಅವರ ಮಾತನ್ನು ಮತ್ತು ಸಂದೇಶವನ್ನು ಕೇಳಲು ಮತ್ತು ಅಂಗೀಕರಿಸಲು ಸಿದ್ಧರಾಗುತ್ತಿರಲಿಲ್ಲ, ಆದ್ದರಿಂದ ಮೂಸಾ(ಅ) ಈ ಮಿಥ್ಯೆಯನ್ನು ಒಡೆದು ಬಿಟ್ಟರು. ತೆರೆದ ಮೈದಾನದಲ್ಲಿ ಭಾರೀ ಜನಸಂದಣಿಯ ಮುಂದೆ ದೇಶದ ನುರಿತ ಪ್ರಸಿದ್ಧ ಮಂತ್ರವಾದಿಗಳಿಗೆ ಭಾರೀ ಸೋಲುಣಿಸಿದರು. ಇದರಿಂದ ಮೂಸಾ(ಅ) ಮಂತ್ರವಾದಿಯಲ್ಲ, ಅದಕ್ಕಿಂತಲೂ ಮಿಗಿಲಾದ ಒಂದು ಶಕ್ತಿ ಅವರಲ್ಲಿದೆಯೆಂದು ಸ್ಪಷ್ಟವಾಗಿ ಎಲ್ಲರಿಗೂ ತಿಳಿಯುವಂತಾಯಿತು. ಮಂತ್ರವಾದಿಗಳ ಈಮಾನಿನ ಧೈರ್ಯವಾದ ಘೋಷಣೆಯು ಮೂಸಾರ ಕಾರ್ಯಕ್ಕೆ ಇನ್ನಷ್ಟು ಶಕ್ತಿ ನೀಡಿತು. ಅನಂತರ ಮೂಸಾರ ಶಾಪ ಪ್ರಾರ್ಥನೆಯಿಂದ ಈಜಿಪ್ಟ್ ಜನಾಂಗದ ಮೇಲೆ ಪದೇ ಪದೇ ಯಾತನೆಗಳೆರಗ ತೊಡಗಿತು. ಅವರದೇ ಪ್ರಾರ್ಥನೆಯಿಂದ ಅವು ನೀಗುತ್ತಲೂ ಇದ್ದುವು. ಈಗ ಮೂಸಾರನ್ನು ಮಂತ್ರವಾದಿಯೆಂದು ಸಾರಲು ಯಾರಿಂದಲೂ ಸಾಧ್ಯವಿರಲಿಲ್ಲ, ಈ ಸ್ಪಷ್ಟ ವಿಜಯವು ಮೂಸಾರ ಸತ್ಯ ಸಂದೇಶದ ಕರೆಯ ಮೇಲೆ ಭಾರೀ ದೊಡ್ಡ ಪ್ರಭಾವ ಬೀರಿತು. ಕಿಂಚಿತ್ತಾದರೂ ಮನಸ್ಸಿನಲ್ಲಿ ಒಳಿತಿರುವ ಯಾರೂ ಅದರಿಂದ ಪ್ರಭಾವಿತಗೊಳ್ಳದೆ ಇರಲಿಲ್ಲ, ಜನರು ಮೆಲ್ಲಮೆಲ್ಲನೆ ಸತ್ಯಸ್ವೀಕಾರ ಮಾಡತೊಡಗಿದರು. ಫಿರ್‌ಔನನ ಕಾಲಡಿಯಿಂದ ನೆಲ ಕುಸಿಯತೊಡಗಿತು.

ಪರಿಸ್ಥಿತಿಯು ಈ ರೀತಿಯ ತಿರುವನ್ನು ಪಡೆಯುವುದು ಕಂಡಾಗ ಪರಾಜಿತ ಸರ್ವಾಧಿಕಾರಿಗಳು ಪ್ರಯೋಗಿಸುವ ಅಸ್ತ್ರವನ್ನೇ ಫಿರ್‌ಔನ್ ಕೂಡಾ ಬಳಸಿದನು. ಅಂದರೆ ಹಿಂಸೆ, ದೌರ್ಜನ್ಯ, ದಬ್ಬಾಳಿಕೆಗಳನ್ನು ಹರಿದುಬಿಟ್ಟನು. ಈ ಹಿಂಸಾಕಾಂಡದ ವೇಳೆಯೂ ಆತ ತನ್ನ ತಂದೆ-ತಾತಂದಿರ ವಿಧಾನವನ್ನೇ ಅನುಸರಿಸಿದನು. ಯಾರು ಮೂಸಾರ ಮೇಲೆ ವಿಶ್ವಾಸ ತಾಳಿದರೋ ಅವರಿಗೆ ಬೆಂಬಲ ನೀಡಿದರೋ ಅವರ ಗಂಡು ಮಕ್ಕಳನ್ನು ವಧಿಸಿ ಬಿಡಬೇಕು ಮತ್ತು ಹೆಣ್ಣು ಮಕ್ಕಳನ್ನು ಜೀವಂತ ಉಳಿಸಬೇಕೆಂದು ಆಜ್ಞೆ ಹೊರಡಿಸಿದನು. ಈ ರೀತಿಯ ಪ್ರಯೋಗಗಳಿಂದ ಸತ್ಯವಿಶ್ವಾಸಿಗಳನ್ನು ಹೆದರಿಸಿ, ಬೆದರಿಸಿ ಮೂಸಾರ ಸಂದೇಶದ ಪ್ರಭಾವವನ್ನು ಕುಗ್ಗಿಸಬಹುದೆಂದು ಆತ ಭಾವಿಸಿದ್ದ.

ಫಿರ್‌ಔನನ ಅಸ್ತ್ರಗಳು

ಫಿರ್‌ಔನನ ಎಲ್ಲ ಕುತಂತ್ರಗಳೂ ವಿಫಲವಾದುವು. ಇಸ್ಲಾಮಿನ ಸಂದೇಶವು ವ್ಯಾಪಕವಾಗುತ್ತಿರುವುದನ್ನು ಅವನಿಂದ ತಡೆಯಲಾಗಲಿಲ್ಲ. ಈ ಬೆಳವಣಿಗೆಯನ್ನು ಕಂಡು ಅವನ ಕೋಪ ಇನ್ನಷ್ಟು ಪ್ರಜ್ವಲಿಸಿತು. ಈ ಧ್ವನಿಯನ್ನು ಎಂದೆಂದಿಗೂ ಮೌನವಾಗಿಸುವ ಸಲುವಾಗಿ ಅವನು ಮೂಸಾರನ್ನು ವಧಿಸುವುದೆಂದೇ ತೀರ್ಮಾನಿಸಿದನು. ಬೇರೇ ಕಿತ್ತು ಹೋದರೆ ಅನಂತರ ಗೆಲ್ಲುಗಳು ತಮ್ಮಷ್ಟಕ್ಕೆ ಬಾಡಿ ಹೋಗುತ್ತವಲ್ಲವೇ? ಹಾಗೆ ಅವನು ಒಂದು ದಿವಸ ತನ್ನ ಆಸ್ಥಾನಿಕರೊಂದಿಗೆ ಹೇಳಿದ:

"ಬಿಡಿ ನನ್ನನ್ನು! ನಾನು ಈ ಮೂಸಾನನ್ನು ವಧಿಸಿ ಬಿಡುತ್ತೇನೆ. ಅವನು ನಿಮ್ಮ ಧರ್ಮವನ್ನು ಬದಲಾಯಿಸಿ ಬಿಡುವನು ಅಥವಾ ದೇಶದಲ್ಲಿ ಗಲಭೆ ಹುಟ್ಟಿಸುವನೆಂದು ನಾನು ಭಯಪಡುತ್ತೇನೆ."

ಇದು ಓರ್ವ ಮೋಸಗಾರ, ಹೇಡಿ ಮತ್ತು ಅಪರಾಧಿಯ ಮನದ ಮಾತಾಗಿತ್ತು. ವಾಸ್ತವದಲ್ಲಿ ತನ್ನ ಕಿರೀಟವೇ ಜಾರಿ ಹೋಗುತ್ತಿತ್ತು. ಆದರೆ ಆತ ಬಿಂಬಿಸುವುದೇನೆಂದರೆ ನೀವು ವೃಥಾ ನನ್ನನ್ನು ತಡೆಯುತ್ತೀರಿ. ನನಗೆ ತಪ್ಪು ಸಲಹೆ ನೀಡುತ್ತೀರಿ. ಇದಕ್ಕೆ ಒಂದೇ ಮದ್ದು, ಮೂಸಾನನ್ನು ವಧಿಸಿ ಬಿಡುವುದು! ಅವನ ಅಪರಾಧವೇನು? ಅವನು ತಪ್ಪು ಮಾಡಿರುವನೋ ಇಲ್ಲವೋ, ಅವನು ಶಿಕ್ಷೆಗೆ ಅರ್ಹನೋ ಅಲ್ಲವೋ ಎಂಬುದು ನನಗೆ ಬೇಕಿಲ್ಲ, ಅವನು ಮುಂದೆ ಅಪರಾಧವೆಸಗುವನು ಎಂಬ ನನ್ನ ಭೀತಿಯೇ ಅವನನ್ನು ವಧಿಸಲು ಸಾಕು. ಸಾರ್ವಜನಿಕ ಹಿತಾಸಕ್ತಿ (Public Maintenance Order) ಆಗಲಿ, ಪ್ರತಿಬಂಧಕ ಕಾನೂನುಗಳಾಗಲಿ ಆಧುನಿಕ ಕಾಲದಲ್ಲಿ ಹುಟ್ಟಿದ್ದಲ್ಲ, ಇದು ಅದೇ 'ಫಿರ್‌ಔನೀಯರ ಕಾರ್ಯವಿಧಾನ'ವಾಗಿದೆ. ಅದನ್ನು ಎಲ್ಲ ಕಾಲದ ನಿರಂಕುಶ ಆಡಳಿತಗಾರರು ತಮ್ಮ ಅಧಿಕಾರದ ಬುನಾದಿ ಅಲುಗಾಡುವುದನ್ನು ಕಂಡಾಗ ಪ್ರಯೋಗಿಸುತ್ತಾರೆ. ಅವರ ದೃಷ್ಟಿಯಲ್ಲಿ ಒಬ್ಬ ಮಾನವನ ಪ್ರಾಣಹರಣ ಮಾಡಲು ಅವನಿಂದ ಅಪಾಯವಿದೆಯೆಂಬ ಶಂಕೆಯೇ

ಸಾಕು. ಅಪಾಯ ಮುಂದೆ ಬಂದಾಗ ಏನಾದರೂ ಕ್ರಮ ಕೈಗೊಳ್ಳಬಹುದೆಂಬುದು ಅವರ ಮಸ್ತಿಷ್ಕಕ್ಕೆ ಹೊಳೆಯುವುದೇ ಇಲ್ಲ. ಅಪರಾಧಿಯನ್ನು ತಪ್ಪು ಮಾಡುವುದಕ್ಕಿಂತ ಮುಂಚೆಯೇ ಕೊಂದು ಬಿಟ್ಟರೆ ಕೆಲವು ಜೀವಗಳಂತೂ ಹೋಗಬಹುದು. ಆದರೆ ಅವರ ಅಧಿಕಾರ ಗದ್ದುಗೆ ಉಳಿಯುತ್ತದಲ್ಲ. ಮಾನವ ಜೀವಕ್ಕೆ ಅವರ ದೃಷ್ಟಿಯಲ್ಲಿರುವ ಬೆಲೆಯು ಅವರ ಅಧಿಕಾರಕ್ಕಿಂತ ಮೌಲ್ಯವುಳ್ಳದ್ದೇನೂ ಅಲ್ಲ. ಗೌರವಕ್ಕೆ ಪಾತ್ರರಾದವರು ಅಧಿಕಾರಸ್ಥರು ಅಥವಾ ಅವರ ಚೇಲಾಗಳಾಗಿದ್ದಾರೆ. ಏಕೆಂದರೆ ಚೇಲಾಗಳು ಅಧಿಕಾರಸ್ಥರ ತುತ್ತೂರಿಯಾಗಿರುತ್ತಾರೆ ಮತ್ತು ಅವರೆದುರು ಮಾತಾಡುವ ಧೈರ್ಯ ತೋರುವುದಿಲ್ಲ. ಇನ್ನು ಈ ಅಧಿಕಾರಸ್ಥರಾದರೋ ತಮಗೆ ಅವನಿಂದ ಅಪಾಯವಿದೆಯೆಂದು ಬಹಿರಂಗವಾಗಿ ಹೇಳುವಷ್ಟು ಧೈರ್ಯ ಅವರಿಗಿರು ವುದಿಲ್ಲ. ಅವರು ಯಾವುದೇ ಲಜ್ಜೆಯಿಲ್ಲದೆ ಜನರೊಂದಿಗೆ, ನಿಜವಾಗಿ ಅಪಾಯವಿರುವುದು ನಿಮಗೆ. ನಿಮ್ಮ ಸುರಕ್ಷೆ (Safety) ಮತ್ತು ಮಾನ-ಮರ್ಯಾದೆಯ ರಕ್ಷಣೆಗಾಗಿ ಈ ಕ್ರಮ ಕೈಗೊಳ್ಳುತ್ತಿದ್ದೇವೆಂದು ಹೇಳುತ್ತಾರೆ. ಹಾಗೆಯೇ ಫಿರ್‌ಔನ್ ಕೂಡಾ, ನನಗೆ ಮತ್ತು ನನ್ನ ಅಧಿಕಾರಕ್ಕೆ ಅಪಾಯವಿದೆಯೆಂದು ಹೇಳುವುದಿಲ್ಲ. ಬದಲಾಗಿ ಆತ ಹೇಳುವುದೇನು? ನಾನು ಭಯಪಡಿಸುವುದು ನಿಮ್ಮ ಈ ಧರ್ಮ ಅರ್ಥಾತ್ ಈ ಪ್ರಸಕ್ತ ಜಾರಿಯಲ್ಲಿರುವ ಕಾನೂನು, ಜೀವನ ವಿಧಾನ ಮತ್ತು ನಿಮ್ಮ ಅಧಿಕಾರಗಳೆಲ್ಲ ಬುಡಮೇಲಾಗುವುದು ಮತ್ತು ದೇಶದಲ್ಲಿ ಅರಾಜಕತೆಯುಂಟಾಗುವುದು. ನಿಮ್ಮ ಪ್ರಾಣ, ಸೊತ್ತು, ಮಾನ, ಪ್ರತಿಷ್ಠೆ ಘನತೆ, ಗೌರವವೆಲ್ಲ ಮಣ್ಣು ಪಾಲಾಗುವುದು. ಯಾವುದೂ ಸುರಕ್ಷಿತವಾಗಿರಲಾರದು. ಆದುದರಿಂದ ಈ ಎಲ್ಲ ಅಪಾಯಕಾರಿ ಆಟಗಳನ್ನು ನಿಮಗಾಗಿಯೇ ಆಡುತ್ತಿದ್ದೇನೆ.

ಮೂಸಾರ(ಅ) ನಿರಪೇಕ್ಷತೆ

ಇದನ್ನು ಇಸ್ಲಾಮೀ ಆಂದೋಲನದ ಮಹಿಮೆಯೆಂದು ಕರೆಯಿರಿ ಅಥವಾ ಮೂಸಾರ ಬೇಹುಗಾರಿಕಾ ಜಾಲದ ಪವಾಡವೆಂದು ಕರೆಯಿರಿ. ಮೂಸಾರಿಗೆ ಕೂಡಲೇ ಈ ಯೋಜನೆಯ ಅರಿವಾಗುತ್ತದೆ. ಬಹುಶಃ ಈ ಬೇಹುಗಾರ ಫಿರ್‌ಔನನ ಆಸ್ಥಾನದ ಆ ಧೈರ್ಯವಂತ ವಿಶ್ವಾಸಿಯೇ ಆಗಿರಬಹುದು ಅಥವಾ ಮೂಸಾರ ಸಂದೇಶ ಪ್ರಚಾರದಿಂದ ಪ್ರಭಾವಿತನಾದ ಇನ್ನಾರೋ ಆಸ್ಥಾನಿಕನಾಗಿರಬಹುದು. ಈ ಸುದ್ದಿಯನ್ನು ಕೇಳಿ ಮೂಸಾರಿಗೆ ಕಳವಳವೋ ಗಾಬರಿಯೋ ಆಗಲಿಲ್ಲ. ಮೂಸಾ(ಅ) ಶಾಂತವಾಗಿ ಹೀಗೆ ಹೇಳಿದರು,

"ಆಗ ಮೂಸಾ, 'ವಿಚಾರಣೆಯ ದಿನದ ಮೇಲೆ ವಿಶ್ವಾಸವಿರಿಸದಿರುವಂತಹ ಪ್ರತಿಯೊಬ್ಬ ದುರಹಂಕಾರಿಯ ವಿರುದ್ಧ ನಾನು ನನ್ನ ಪ್ರಭು ಹಾಗೂ ನಿಮ್ಮ ಪ್ರಭುವಿನ ಅಭಯ ಪಡೆದಿರುತ್ತೇನೆ' ಎಂದರು." **(ಪವಿತ್ರ ಕುರ್‌ಆನ್, 40:27)**

ಮೂಸಾ(ಅ) ಈ ಅಶುಭ ವಾರ್ತೆಗೆ ಎಳ್ಳಷ್ಟೂ ಬೆಲೆ ಕಲ್ಪಿಸಲಿಲ್ಲ.

ವಿಶ್ವಾಸಿಯೊಬ್ಬನ ಸತ್ಯ ಪ್ರಕಟನೆ

"ಈ ಸಂದರ್ಭದಲ್ಲಿ ತನ್ನ ಸತ್ಯವಿಶ್ವಾಸವನ್ನು ಬಚ್ಚಿಟ್ಟುಕೊಂಡಿದ್ದ ಫಿರ್‌ಔನನ ವಂಶದ ಓರ್ವ ಸತ್ಯವಿಶ್ವಾಸಿಯು ಹೀಗೆ ಹೇಳಿದನು, 'ನನ್ನ ಪ್ರಭು ಅಲ್ಲಾಹನಾಗಿರುತ್ತಾನೆಂದು ಹೇಳಿದುದಕ್ಕಾಗಿ ಮಾತ್ರ ನೀವು ಒಬ್ಬನನ್ನು ವಧಿಸಿ ಬಿಡುವಿರಾ? ವಸ್ತುತಃ ಅವರು ನಿಮ್ಮ ಪ್ರಭುವಿನ ಕಡೆಯಿಂದ ನಿಮ್ಮ ಬಳಿಗೆ ಸುವ್ಯಕ್ತ ಪ್ರಮಾಣಗಳನ್ನು ತಂದಿದ್ದಾರೆ. ಅವರು ಸುಳ್ಳುಗಾರರಾಗಿದ್ದರೆ ಅವರ ಸುಳ್ಳು ಸ್ವಯಂ ಅವರ ಮೇಲೆಯೇ ತಿರುಗಿ ಬೀಳುವುದು. ಅವರು ಸತ್ಯವಾದಿಯಾಗಿದ್ದರೆ ಯಾವ ಭಯಾನಕ ದುಷ್ಪರಿಣಾಮಗಳ ಕುರಿತು ಅವರು ನಿಮ್ಮನ್ನು ಎಚ್ಚರಿಸುತ್ತಿರುವರೋ ಅವುಗಳಲ್ಲಿ ಕೆಲವಂತು ನಿಮ್ಮ ಮೇಲೆ ಖಂಡಿತವಾಗಿಯೂ ಬಂದು ಬಿಡುವುವು. ಮಿತಿ ಮೀರುವಾತನಿಗೆ ಮತ್ತು ಸುಳ್ಳುಗಾರನಿಗೆ ಅಲ್ಲಾಹನು ಸನ್ಮಾರ್ಗ ದರ್ಶನ ನೀಡುವುದಿಲ್ಲ.' ನನ್ನ ಜನಾಂಗ ಬಾಂಧವರೇ, ಇಂದು ನಿಮಗೆ ಅಧಿಕಾರ ಪ್ರಾಪ್ತ ವಿದೆ ಮತ್ತು ಭೂಮಿಯಲ್ಲಿ ನೀವು ಮೇಲುಗೈಯುಳ್ಳವರಾಗಿದ್ದೀರಿ. ಆದರೆ, ಅಲ್ಲಾಹನ ಯಾತನೆ ನಮ್ಮ ಮೇಲೆ ಬಂದು ಬಿಟ್ಟರೆ ಯಾರು ತಾನೇ ನಮಗೆ ನೆರವಾಗಬಲ್ಲರು?"

(ಪವಿತ್ರ ಕುರ್‌ಆನ್, 40:28-29)

ಈ ಭಾಷಣವು ಯುಕ್ತಿಪೂರ್ಣ ಸಂದೇಶ ಪ್ರಚಾರದ ಒಂದು ಉಜ್ವಲ ಮಾದರಿ ಯಾಗಿದೆ. ಆ ವ್ಯಕ್ತಿ ಬಹಳ ಜಾಣ್ಮೆಯೊಂದಿಗೆ ಫಿರ್‌ಔನ್ ಮತ್ತು ಅವನ ಆಸ್ಥಾನಿಕರನ್ನು ಕೆರಳಿಸದೆ ಅವರ ತಪ್ಪುಗಳನ್ನು ಅವರಿಗೆ ಎತ್ತಿ ತೋರಿಸಿದನು. ಅವರನ್ನು ನೇರವಾಗಿ ಖಂಡಿಸುವ ಬದಲು ವಸ್ತುಸ್ಥಿತಿಯನ್ನು ಅವರ ಮುಂದಿಟ್ಟನು. ಮೂಸಾ(ಅ) ಸುಸ್ಪಷ್ಟ ದೃಷ್ಟಾಂತಗಳನ್ನು ತೋರಿಸಿದ್ದು ಅವುಗಳನ್ನು ನೀವೂ ನಿರಾಕರಿಸಲಾರಿರಿ ಎಂದು ಅವರೊಡನೆ ಹೇಳಿದನು. ಅನಂತರ ಅವರದೇ ಆಧಾರ ಪ್ರಮಾಣಗಳಿಂದ ಒಪ್ಪುವಂತೆ ಮಾಡಲು ಪ್ರಯತ್ನಿಸಿದನು. ಮೂಸಾ(ಅ) ಸುಳ್ಳುಗಾರನೆಂದು ಅವರು ಹೇಳುತ್ತಿದ್ದರು. ಅವನು ಅದಕ್ಕೆ ಉತ್ತರಿಸಿದ್ದು ಹೀಗೆ- ಈ ವ್ಯಕ್ತಿ (ಮೂಸಾ) ಸುಳ್ಳುಗಾರನೆಂದಾದರೆ ನೀವೇಕೆ ಚಿಂತಿಸುತ್ತೀರಿ. ಒಂದಲ್ಲ ಒಂದು ದಿನ ಅವನ ಸುಳ್ಳು ಅನಾವರಣಗೊಂಡು ತಾನು ಮಾಡಿದ್ದನ್ನು ಅವರು ಉಣ್ಣುವರು. ಇನ್ನು ಅವರು ಸತ್ಯವಂತನೆಂದಾದರೆ ಅವರು ನಿಮ್ಮನ್ನು ಯಾವ ದುಷ್ಪರಿಣಾಮ ಗಳಿಂದ ಹೆದರಿಸುತ್ತಿದ್ದಾರೋ ಅದು ಎಲ್ಲ ಅಲ್ಲವಾದರೆ ಸ್ವಲ್ಪಂಶವಾದರೂ ಖಂಡಿತ ನೆರವೇರುವ ಸಾಧ್ಯತೆಯಿದೆ.

ಇಲ್ಲಿ ಆ ವ್ಯಕ್ತಿ ಮೂಸಾರನ್ನು ಸತ್ಯಸಂಧನೆಂದು ಹೇಳಲಿಲ್ಲ, ಹಾಗಿದ್ದರೆ ನೀವು ಖಂಡಿತ ಶಿಕ್ಷಿಸಲ್ಪಡುವಿರಿ ಎಂದೂ ಹೇಳಲಿಲ್ಲ. ಅವನು ಈ ಹಿಂದಿನ ಆಧಾರಗಳನ್ನು ಎತ್ತಿ ತೋರಿಸಿ ಅದರ ಸ್ವಾಭಾವಿಕ ಪರಿಣಾಮವನ್ನಷ್ಟೇ ಹೇಳಿದನು. ಅನಂತರ ಅವನು ಮೇರೆ ಮೀರುವವರು ಮತ್ತು ಸುಳ್ಳುಗಾರರಿಗೆ ಅಲ್ಲಾಹನು ಸನ್ಮಾರ್ಗ ತೋರಿಸುವುದಿಲ್ಲ ಎಂಬ ಬುದ್ಧಿವಂತಿಕೆಯ ಮಾತನ್ನು ಹೇಳಿದನು. ಇಲ್ಲಿ ಅವನು ಫಿರ್‌ಔನ್ ಮತ್ತು ಆಸ್ಥಾನಿಕರಿಗೆ

ಒಂದು ದರ್ಪಣ ತೋರಿಸಿದನು. ಆದರಿಂದ ಅವರು ತಮ್ಮ ನೈಜ ಮುಖವನ್ನು ನೋಡಬಹುದಾಗಿತ್ತು. ಇಲ್ಲಿ ಅವನು ಹೆಸರೆತ್ತದೆಯೇ ನೀಡಿದ ಹೊಡೆತವನ್ನು ಅವರು ಗ್ರಹಿಸಿಕೊಂಡರು. ಆದರೆ ಅದನ್ನು ಆಕ್ಷೇಪಿಸುವಂತಿರಲಿಲ್ಲ.

ಈ ಮಾತಿಗೆ ಎರಡು ಅರ್ಥಗಳಿರಲು ಸಾಧ್ಯವಿತ್ತು. ಒಂದನೆಯದು, ಮೂಸಾ(ಅ) ಸತ್ಯವಂತನಾಗಿದ್ದರೆ, ಅವರು ತನ್ನನ್ನು ಯಾರ ಪ್ರತಿನಿಧಿಯೆಂದು ಹೇಳುತ್ತಾರೋ ಆ ದೇವನೇ ಅವರನ್ನು ಶಿಕ್ಷಿಸುವನು. ಏಕೆಂದರೆ ತನ್ನ ಮೇಲೆ ಸುಳ್ಳಾರೋಪ ಹೊರಿಸುವ ಮತ್ತು ತನ್ನ ಮನ ಬಂದಂತೆ ವರ್ತಿಸುವವನನ್ನು ಆತನು ಬಿಡಲಾರನು. ಎರಡನೆಯದು, ನೀವು ನಿಮ್ಮ ವರ್ತನೆಯ ಬಗ್ಗೆ ಚಿಂತಿಸಿರಿ. ಈ ವರೆಗೆ ನೀವು ಅಲ್ಲಾಹನನ್ನು ಧಿಕ್ಕರಿಸಿ ಅವನ ಸೃಷ್ಟಿಗಳ ಮೇಲೆ ಹಿಂಸೆ, ದೌರ್ಜನ್ಯಗಳನ್ನೆಸಗುವುದರಲ್ಲಿ ಎಲ್ಲ ಮಿತಿ ಮೇರೆಗಳನ್ನು ಮೀರಿದ್ದೀರಿ. ಸತ್ಯವು ನಿಮ್ಮ ಮುಂದೆ ಸ್ಪಷ್ಟವಾಗಿ ಬಂದ ನಂತರವೂ ಅದನ್ನು ನಿರಾಕರಿಸುತ್ತೀರಿ. ನಿಮ್ಮ ಈ ವರ್ತನೆಯು ನಿಮ್ಮನ್ನು ಅಲ್ಲಾಹನ ಕೋಪ ತಾಪಗಳಿಂದ ರಕ್ಷಿಸಲಾರದು! ತರುವಾಯ ಆ ವ್ಯಕ್ತಿ ತನ್ನ ಜನಾಂಗವನ್ನು ಈ ರೀತಿ ಎಚ್ಚರಿಸಿದನು- ಅಧಿಕಾರದ ಸೂರ್ಯ ಪ್ರಕಾಶವು ನಿಮ್ಮ ಕಣ್ಣು ಕುಕ್ಕದಿರಲಿ. ಇದರ ಬೆನ್ನಲ್ಲೇ ನೆರಳಿನ ಅಂಧಕಾರವೂ ಆವರಿಸುತ್ತದೆ. ಇಂದು ಅಧಿಕಾರವು ನಿಮ್ಮ ಕೈಯಲ್ಲಿದ್ದರೆ ನಾಳೆ ಇನ್ನೊಬ್ಬರ ಕೈಯಲ್ಲಿರಬಹುದು. ಅದೆಂದೂ ಶಾಶ್ವತವಲ್ಲ. ಅದನ್ನು ನೋಡಿ ನಮಗೆಂದೂ ಅಳಿವಿಲ್ಲವೆಂದು ಭಾವಿಸದಿರಿ. ಅಲ್ಲಾಹನ ಹಿಡಿತ ಬಂದರೆ ಈ ಎಲ್ಲ ಅಧಿಕಾರಗಳು ನೆಲ ಕಚ್ಚುವುದು.

ಈ ಭಾಷಣದಿಂದ ತಿಳಿದು ಬರುವ ಇನ್ನೊಂದು ವಿಷಯವೇನೆಂದರೆ ಫಿರ್‌ಔನ್ ಮತ್ತವನ ಸಂಗಾತಿಗಳು ಮೂಲಭೂತವಾಗಿ ದೇವಕಲ್ಪನೆಯುಳ್ಳವರಾಗಿದ್ದರು. ಆದುದರಿಂದಲೇ ಅವರನ್ನು ದೇವನ ಆಜ್ಞೋಲ್ಲಂಘನೆ ಮತ್ತವನ ಕೋಪದಿಂದ ಪದೇ ಪದೇ ಎಚ್ಚರಿಸಲಾಗುತ್ತಿತ್ತು. ಈ ಜನಾಂಗೀಯ ಪಕ್ಷಪಾತ ಮತ್ತು ಸ್ವಾರ್ಥ ಹಿತಾಸಕ್ತಿಗಳು ಹಾಳಾಗಿ ಹೋಗಲಿ. ಮೂಸಾರು ದೇವನ ವತಿಯಿಂದ ಅವರಿಗೆ ಕರೆ ಕೊಟ್ಟಾಗ ಹೇಳಿದ್ದೇನೆಂದರೆ, ಇದು ಮೂಸಾರ ದೇವನೇ ಆಗಿದ್ದರೆ ನಾವು ಅವನನ್ನು ನಿರಾಕರಿಸುತ್ತೇವೆ. ಅವರ ನೈಜ ತಿಕ್ಕಾಟ ಮೂಸಾ(ಅ) ತಂದಿರುವ ದೇವಕಲ್ಪನೆಯೊಂದಿಗಾಗಿತ್ತು. ಅವರ ದೃಷ್ಟಿಯಲ್ಲಿ ದೇವನಿಗಿರುವ ಸ್ಥಾನವೇನೆಂದರೆ ಮಾನವನು ಹೆಚ್ಚೆಂದರೆ ಕೆಲವು ಆರಾಧನಾ ಕರ್ಮಗಳನ್ನು ನೆರವೇರಿಸುವುದು, ಇನ್ನು ಕಾನೂನು ಮತ್ತು ಆಡಳಿತ ವ್ಯವಸ್ಥೆ ಅದೆಲ್ಲಾ ರಾಜನಿಗೆ ಸಲ್ಲತಕ್ಕದ್ದು. ಇದೇ ಅರ್ಥದಲ್ಲಿ ಫಿರ್‌ಔನ್ ಇಲಾಹ್ ಮತ್ತು ರಬ್ಬ್ (ಆರಾಧ್ಯ ಮತ್ತು ಪರಿಪಾಲಕ) ಎಂದು ವಾದಿಸಿದ್ದ. ಬಹುಶಃ ಸಜ್ದಾ ಅಲ್ಲಾಹನಿಗೆ ಮಾಡಿರಿ. ಕುಫ್ರನ್ನು ಪ್ರಾಮಾಣಿಕತೆಯೊಂದಿಗೆ ಅನುಸರಿಸಿ ಎಂದು ಆಧುನಿಕ ಕಪಟ ಧರ್ಮಭಕ್ತರ ಕಲ್ಪನೆಗಿಂತ ಅವನ ವಿಚಾರ ಭಿನ್ನವಾಗಿ ರಲಿಲ್ಲ. ಆ ವ್ಯಕ್ತಿಯ ಸಂತುಲಿತ ಮತ್ತು ಪುರಾವೆ ಸಹಿತ ಮಾತುಗಳಿಗೆ ಉತ್ತರಿಸಲು ಫಿರ್‌ಔನನಿಂದಾಗಲಿಲ್ಲ. ಅವನು ಲಜ್ಜಿತನಾಗಿ ಹೀಗೆ ಉತ್ತರಿಸಿದನು,

"ಆಗ ಫಿರ್‌ಔನನು, 'ನಾನು ನನಗೆ ಯುಕ್ತ ಕಂಡ ಸಲಹೆಯನ್ನೇ ನಿಮಗೆ ನೀಡುತ್ತಿದ್ದೇನೆ ಮತ್ತು ಸರಿಯಾದ ಮಾರ್ಗದ ಕಡೆಗೆ ನಾನು ನಿಮಗೆ ಮಾರ್ಗದರ್ಶನ ನೀಡುತ್ತೇನೆ' ಎಂದನು." (ಪವಿತ್ರ ಕುರ್‌ಆನ್, 40:29)

ಆ ವಿಶ್ವಾಸಿ ವ್ಯಕ್ತಿಯು ಫಿರ್‌ಔನ್ ಅವಾಕ್ಕಾಗಿರುವುದನ್ನು ಕಂಡಾಗ ತನ್ನ ಮಾತನ್ನು ಪೂರ್ತಿಗೊಳಿಸಲಿಕ್ಕಾಗಿ, ಬಹುಶಃ ಆ ದೌರ್ಭಾಗ್ಯಶಾಲಿಗಳ ಮೇಲೆ ತನ್ನ ಪ್ರಭಾವವುಂಟಾಗಲೆಂದು ಕೆಲವು ಐತಿಹಾಸಿಕ ಸಾಕ್ಷ್ಯಗಳನ್ನು ಮುಂದಿಟ್ಟನು. ಅವನು ಹೇಳಿದನು,

"ಆ ಸತ್ಯವಿಶ್ವಾಸಿ ಹೇಳಿದನು, 'ನನ್ನ ಜನಾಂಗದವರೇ, ಈ ಮುಂಚೆ ಅನೇಕ ಸಮೂಹಗಳ ಮೇಲೆ ಬಂದೆರಗಿದಂತಹ ದಿನವೇ ನಿಮ್ಮ ಮೇಲೂ ಬಂದು ಬಿಡುವುದೋ ಎಂಬ ಭಯ ನನಗಿದೆ- ಉದಾಹರಣೆಗಾಗಿ ನೂಹರ ಜನಾಂಗ, ಆದ್, ಸಮೂದ್ ಮತ್ತು ಅವರ ನಂತರದ ಜನಾಂಗಗಳ ಮೇಲೆ ಬಂದೆರಗಿದಂತಹ ದಿನ. ವಾಸ್ತವದಲ್ಲಿ ಅಲ್ಲಾಹನಿಗೆ ತನ್ನ ದಾಸರ ಮೇಲೆ ಅಕ್ರಮವೆಸಗಬೇಕೆಂಬ ಉದ್ದೇಶವೇನೂ ಇಲ್ಲ. ಓ ಜನಾಂಗವೇ! ನಾವು ಗೋಳಾಡುವಂತಹ ದಿನವು ನಿಮ್ಮ ಮೇಲೆ ಬಂದೆರಗಿ ಬಿಡುವುದೋ ಎಂದು ನಾನು ಭಯಪಡುತ್ತೇನೆ. ಅಂದು ನೀವು ಪರಸ್ಪರರನ್ನು ಕೂಗಿ ಕರೆಯುವಿರಿ; ಬೆನ್ನು ತಿರುಗಿಸಿ ಓಡುವಿರಿ. ಆದರೆ, ಆಗ ನಿಮ್ಮನ್ನು ಅಲ್ಲಾಹನಿಂದ ರಕ್ಷಿಸುವವರು ಯಾರೂ ಇರಲಾರರು. ವಾಸ್ತವದಲ್ಲಿ ಯಾರನ್ನು ಅಲ್ಲಾಹನು ದಾರಿಗೆಡಿಸಿಬಿಡುವನೋ ಅವನಿಗೆ ಬೇರಾರೂ ದಾರಿ ತೋರಿಸುವವರಿಲ್ಲ.' ಇದಕ್ಕೆ ಮುಂಚೆ ಯೂಸುಫರು ನಿಮ್ಮ ಬಳಿಗೆ ಸುವ್ಯಕ್ತ ನಿದರ್ಶನಗಳನ್ನು ತಂದಿದ್ದರು. ಆದರೆ ನೀವು ಅವರು ತಂದ ಶಿಕ್ಷಣದ ಬಗ್ಗೆ ಸಂಶಯದಲ್ಲೇ ಬಿದ್ದುಬಿಟ್ಟಿರಿ. ತರುವಾಯ ಅವರು ನಿಧನರಾದಾಗ ನೀವು, ಇನ್ನು ಅವರ ಬಳಿಕ ಎಷ್ಟು ಮಾತ್ರಕ್ಕೂ ಅಲ್ಲಾಹನು ಸಂದೇಶವಾಹಕರನ್ನು ಕಳುಹಿಸಲಿಕ್ಕಿಲ್ಲ ಎಂದಿರಿ." (ಪವಿತ್ರ ಕುರ್‌ಆನ್, 40:30-34)

ಇಲ್ಲಿ ಬಹಳ ಜಾಣ್ಮೆಯೊಂದಿಗೆ ಎಚ್ಚರಿಸುವ ತನ್ನ ಕರ್ತವ್ಯವನ್ನು ನೆರವೇರಿಸುತ್ತಾ ಅವರ ದುರ್ಗತಿಯ ಬಗ್ಗೆಯೂ ಆತ ಎಚ್ಚರಿಕೆ ನೀಡಿದ ಮತ್ತು ಸನ್ಮಾರ್ಗದತ್ತ ಮಾರ್ಗದರ್ಶನವನ್ನೂ ಮಾಡಿದ. (ಮೂಸಾರ ಜನಾಂಗವಾದ ಬನೀ ಇಸ್ರಾಈಲಿನವರೇ ಆಗಿದ್ದ) ಯೂಸುಫ್‌ರೊಂದಿಗೆ(ಅ) ಅವರ ಜನಾಂಗವು ವರ್ತಿಸಿದ ರೀತಿಯನ್ನು ಪುರಾವೆಯಾಗಿ ಮಂಡಿಸಿದ. ಅವರ ಪಾವನ ಬದುಕು, ಸರಿಯಾದ ಮಾರ್ಗದರ್ಶನ ಮತ್ತು ಅವರು ತೋರಿದ ಸನ್ಮಾರ್ಗವನ್ನು ಅವರ ಜೀವಿತ ಕಾಲದಲ್ಲೇ ಲೆಕ್ಕಿಸಲಿಲ್ಲ, ಈಗ ಅವರು ತೀರಿಕೊಂಡ ನಂತರ ಅವರ ಸ್ಥಾನಮಾನವನ್ನು ಒಪ್ಪಿಕೊಳ್ಳುತ್ತೀರಿ. ಈಗ ಅಂತಹ ಉತ್ತಮ ವ್ಯಕ್ತಿಗಳು ಎಲ್ಲಿ ಹುಟ್ಟುತ್ತಾರೆ ಎಂದು ಹೇಳುತ್ತಲೇ ಸನ್ಮಾರ್ಗವನ್ನು ಅಂಗೀಕರಿಸದಿರಲಿಕ್ಕಾಗಿ ಅವರದೇ ವ್ಯಕ್ತಿತ್ವವನ್ನು, ಮರೆಯಾಗಿ ಮಾಡಿದಿರಿ. ಈಗ ಅದೇ ವರ್ತನೆಯನ್ನು ಮೂಸಾರೊಂದಿಗೆ ತೋರಿಸುತ್ತೀರಿ. ಈಗ ಬದುಕಿರುವಾಗ ಅವರ ಮಾತನ್ನು ಕೇಳುವುದು ನಿಮಗೆ ಅರೋಚಕವಾಗಿದೆ. ಅವರ ಕಾಲಾನಂತರ ಇದೇ ರೀತಿಯಲ್ಲಿ ನೀವು ಅವರನ್ನು ಸ್ಮರಿಸುವಿರಿ.

ಆದರೆ ನಿಮಗೆ ಕಾಲಾವಕಾಶ ದೊರೆಯಲಾರದು. ಇನ್ನು, ಹಿಂದಿನ ಜನಾಂಗಗಳು ಅಲ್ಲಾಹನ ಪ್ರವಾದಿಗಳನ್ನು ಸುಳ್ಳಾಗಿಸಿದುದರಿಂದ ಕಂಡ ದುರ್ಗತಿಯನ್ನೇ ನೀವೂ ಕಾಣುವಿರಿ. ನಿಮ್ಮ ಈ ನೆವನ, ಹಠ ಮತ್ತು ಅಹಂಕಾರವು ನಿಮ್ಮನ್ನು ಸನ್ಮಾರ್ಗ ಸ್ವೀಕರಿಸಲು ಬಿಡಲಾರದು. ಈ ನಿಯಮವನ್ನು ಅಲ್ಲಾಹನು ಮುಂದಿನ ಸೂಕ್ತದಲ್ಲಿ ಹೀಗೆ ವಿವರಿಸಿರುವನು,

"ಇದೇ ರೀತಿಯಲ್ಲಿ ಅಲ್ಲಾಹನು, ಮಿತಿಮೀರುವವರನ್ನು, ಸಂಶಯಗ್ರಸ್ತರನ್ನು ಮತ್ತು ತಮ್ಮ ಬಳಿಗೆ ಯಾವುದೇ ಪ್ರಮಾಣವಾಗಲಿ, ಪುರಾವೆಯಾಗಲಿ ಬಂದಿರದಿದ್ದರೂ ಅಲ್ಲಾಹನ ಸೂಕ್ತಗಳ ಬಗ್ಗೆ ಜಗಳ ಮಾಡುವವರನ್ನು ಪಥಭ್ರಷ್ಟತೆಯಲ್ಲಿ ಹಾಕಿ ಬಿಡುತ್ತಾನೆ. ಈ ಧೋರಣೆಯು ಅಲ್ಲಾಹ್ ಮತ್ತು ಸತ್ಯವಿಶ್ವಾಸಿಗಳ ಬಳಿ ಅತ್ಯಂತ ತಿರಸ್ಕಾರಾರ್ಹವಾಗಿದೆ. ಇದೇ ರೀತಿಯಲ್ಲಿ ಅಲ್ಲಾಹ್ ಪ್ರತಿಯೊಬ್ಬ ಅಹಂಕಾರಿ ಹಾಗೂ ಮದಾಂಧನ ಹೃದಯಕ್ಕೆ ಮುದ್ರೆಯೊತ್ತಿ ಬಿಡುತ್ತಾನೆ." (ಪವಿತ್ರ ಕುರ್‌ಆನ್, 40:34-35)

ಅಲ್ಲಾಹನ ಸನ್ಮಾರ್ಗವು ಪುರಾವೆಗಳನ್ನು ಕೇಳಿ ಅವುಗಳ ಮೇಲೆ ಚಿಂತನೆ ನಡೆಸುವವರಿಗೆ ಸಿಗುತ್ತದೆ. ಅದರಲ್ಲಿ ಸತ್ಯವನ್ನು ಕಂಡುಕೊಂಡರೆ ಅವರು ಸ್ವೀಕರಿಸುತ್ತಾರೆ. ಅದಕ್ಕೆ ವ್ಯತಿರಿಕ್ತವಾಗಿ ತಾನು ಎದುರು ಕಕ್ಷಿಯ ಮಾತನ್ನು ಆಲಿಸುವುದೇ ಇಲ್ಲ, ಅವನ ಎಲ್ಲ ಪುರಾವೆಗಳನ್ನು ಖಂಡಿಸುತ್ತೇನೆ ಎಂದು ತೀರ್ಮಾನಿಸಿರುವ ಹಾಗೂ ನನ್ನ ಎದುರು ಕಕ್ಷಿಯು ನನಗಿಂತ ಕೆಳಮಟ್ಟದವನಾಗಿರುವಾಗ ಅವನ ಮಾತನ್ನು ನಾನು ಹೇಗೆ ನಂಬಲಿ ಎಂಬ ಧೋರಣೆ ಕೈಗೊಂಡವನ ಪಾಲಿಗೆ ಸನ್ಮಾರ್ಗದರ್ಶನದ ಬಾಗಿಲು ಮುಚ್ಚಿಕೊಂಡಿರುತ್ತದೆ. ಅವನು ತನ್ನ ಹಠ ಮತ್ತು ಅಹಂಕಾರದಿಂದಾಗಿ ಎಡವುತ್ತಲೇ ಇರುತ್ತಾನೆ.

ಫಿರ್‌ಔನನ ಅಪಹಾಸ್ಯ

ಫಿರ್‌ಔನನ ದುರಹಂಕಾರವು ಅವನನ್ನು ಈ ಪುರಾವೆಗಳ ಬಗ್ಗೆ ಚಿಂತನೆ ನಡೆಸಲು ಅವಕಾಶ ನೀಡಲಿಲ್ಲ. ಆ ಸತ್ಯವಿಶ್ವಾಸಿ ವ್ಯಕ್ತಿಯ ಪುರಾವೆಗಳನ್ನು ಖಂಡಿಸುವುದು ಸುಲಭವಲ್ಲವೆಂದು ಮನಗಂಡ ಆತ ಮಾತಿನ ದಿಕ್ಕನ್ನು ಮೂಸಾರ ಕಡೆಗೆ ತಿರುಗಿಸಿದನು ಮತ್ತು ತಮಾಷೆ, ಅಪಹಾಸ್ಯ ಮಾಡಲು ಮುಂದಾದನು. ಅವನು ಹೇಳಿದನು,

"ಫಿರ್‌ಔನ್ ಹೇಳಿದನು: 'ಹಾಮಾನ್, ನಾನು ಮಾರ್ಗಗಳವರೆಗೆ, ಆಕಾಶಗಳ ಮಾರ್ಗಗಳ ವರೆಗೆ, ತಲುಪುವಂತಾಗಲು ಮತ್ತು ಮೂಸಾನ ದೇವನನ್ನು ಇಣುಕಿ ನೋಡುವಂತಾಗಲು ನನಗಾಗಿ ಒಂದು ಉನ್ನತ ಕಟ್ಟಡವನ್ನು ನಿರ್ಮಿಸು. ನನಗಂತೂ ಈ ಮೂಸಾ ಸುಳ್ಳುಗಾರನೆಂದೇ ತೋರುತ್ತಾನೆ.' ಹೀಗೆ ಫಿರ್‌ಔನ್‌ನಿಗೆ ಅವನ ದುಷ್ಕರ್ಮವು ಮನೋಹರಗೊಳಿಸಲ್ಪಟ್ಟಿತು ಮತ್ತು ಅವನು ಸನ್ಮಾರ್ಗದಿಂದ ತಡೆಯಲ್ಪಟ್ಟನು. ಫಿರ್‌ಔನನ ಕುತಂತ್ರವೆಲ್ಲಾ (ಸ್ವತಃ ಅವನದೇ) ವಿನಾಶಕ್ಕಾಗಿ ವ್ಯಯವಾಯಿತು." (ಪವಿತ್ರ ಕುರ್‌ಆನ್, 40:36-37)

ಮೂಸಾರನ್ನು ಅಪಹಾಸ್ಯ ಮಾಡಿದ ಈ ಮಾತು ಅಲ್ ಕಸಸ್ ಅಧ್ಯಾಯದ 38ನೆಯ ಸೂಕ್ತದಲ್ಲಿ ಬಂದದ್ದೇ ಆಗಿದೆ. ಈಗ ಅವನು ಪುನಃ ತಮಾಷೆಯ ಶೈಲಿಯಲ್ಲಿ

ಮಾತಾಡುತ್ತಿದ್ದಾನೆ. ಮೂಸಾರ ಕರೆಯನ್ನು ಇದೇ ರೀತಿ ಅಣಕಿಸಿ ಹಾರಿಸಿ ಬಿಡಬಲ್ಲೆನೆಂದು ಆತ ಭಾವಿಸಿದ್ದ. ಆದರೆ ಇದು ಅವನಿಗೆ ಮಾತ್ರ ಸೀಮಿತವಾಗಿದ್ದ ನೀತಿಯಲ್ಲ. ಎಲ್ಲ ಕಾಲಗಳಲ್ಲೂ ಮೆರೆದಾಡುವ ಫಿರ್‌ಔನ್‌ಗಳು ಸತ್ಯದ ಕರೆಯನ್ನು ತಮಾಷೆಯಲ್ಲಿ ಹಾರಿಸಿ ಬಿಡಲು ಮತ್ತು ಅಪಹಾಸ್ಯ ಮಾಡಿ ಬಿಡಲು ಪ್ರಯತ್ನಿಸುತ್ತಾ ಬಂದಿದ್ದಾರೆ. ಆದರೆ ಅವರ ಈ ಕುತಂತ್ರಗಳು ಎಂದೂ ಯಶಸ್ವಿಯಾಗಿಲ್ಲ. ಈ ವಿಧಾನದಿಂದ ಅವರೇ ಸತ್ಯದಿಂದ ಬಹುದೂರ ಸಾಗುತ್ತಾರೆ. ಕೊನೆಗೆ ದುರ್ಗತಿಯು ಅವರ ಹಣೆಬರಹವಾಗಿ ಬಿಡುತ್ತದೆ.

ಆ ಸತ್ಯವಿಶ್ವಾಸಿಯು ಫಿರ್‌ಔನನ ಈ ಅಪಹಾಸ್ಯವನ್ನೂ ಪುರಾವೆಗಳಿಗೆ ಉತ್ತರಿಸಲಾಗದೆ ನೈಜ ವಿಷಯದಿಂದ ಪಲಾಯನ ಮಾಡಲೆತ್ನಿಸುವುದನ್ನೂ ಕಂಡಾಗ, ಆಸ್ಥಾನಿಕರ ನಿದ್ರಿಸುತ್ತಿದ್ದ ಮನಸಾಕ್ಷಿಯನ್ನು ಇನ್ನೊಮ್ಮೆ ಬಡಿದೆಬ್ಬಿಸಲು ಮತ್ತು ಅವರನ್ನು ನೇರ ಮಾರ್ಗಕ್ಕೆ ತರಲು ಪ್ರಯತ್ನಿಸಿದ.

ಸತ್ಯವಿಶ್ವಾಸಿಯ ಕೊನೆಯ ಪ್ರಯತ್ನ

"ಆ ಸತ್ಯವಿಶ್ವಾಸಿ ಹೇಳಿದನು, 'ನನ್ನ ಜನಾಂಗದವರೇ, ನನ್ನ ಮಾತನ್ನು ಸ್ವೀಕರಿಸಿರಿ. ನಾನು ನಿಮಗೆ ಸರಿಯಾದ ಮಾರ್ಗವನ್ನೇ ತೋರಿಸುತ್ತೇನೆ. ಓ ಜನಾಂಗವೇ! ಈ ಲೌಕಿಕ ಜೀವನವು ಕೆಲವೇ ದಿನಗಳ ಸಾಧನವಾಗಿದೆ. ಶಾಶ್ವತ ನಿವಾಸವು ಪರಲೋಕವೇ ಆಗಿದೆ. ದೋಷವೆಸಗಿದವನಿಗೆ ಅವನು ಮಾಡಿದ ದೋಷದಷ್ಟೇ ಪ್ರತಿಫಲ ಸಿಗುವುದು. ಸತ್ಕರ್ಮವೆಸಗಿದವನು ಪುರುಷನಿರಲಿ, ಸ್ತ್ರೀ ಇರಲಿ ಸತ್ಯವಿಶ್ವಾಸಿಯಾಗಿದ್ದರೆ ಇಂತಹವರೆಲ್ಲರೂ ಸ್ವರ್ಗವನ್ನು ಪ್ರವೇಶಿಸುವರು, ಅಲ್ಲಿ ಅವರಿಗೆ ಅಪಾರ ಜೀವನಾಧಾರ ನೀಡಲ್ಪಡುವುದು. ಓ ಜನಾಂಗವೇ, ಇದೇನು, ನಾನಂತು ನಿಮ್ಮನ್ನು ವಿಮೋಚನೆಯ ಕಡೆಗೆ ಕರೆಯುತ್ತಿದ್ದೇನೆ ಮತ್ತು ನೀವಾದರೋ ನನ್ನನ್ನು ನರಕಾಗ್ನಿಯತ್ತ ಆಹ್ವಾನಿಸುತ್ತಿರುವಿರಿ! ನಾನು ಅಲ್ಲಾಹನನ್ನು ನಿರಾಕರಿಸಬೇಕೆಂದೂ ಅವನೊಂದಿಗೆ ನಾನರಿಯದಂತಹ ಅಸ್ತಿತ್ವಗಳನ್ನು ಸಹಭಾಗಿಗಳಾಗಿ ಮಾಡ ಬೇಕೆಂದೂ ನೀವು ನನಗೆ ಕರೆ ಕೊಡುತ್ತಿದ್ದೀರಿ. ನಾನಾದರೋ ನಿಮ್ಮನ್ನು ಪ್ರಬಲನೂ ಮಹಾ ಕ್ಷಮಾದಾನಿಯೂ ಆಗಿರುವ ಆ ದೇವನ ಕಡೆಗೆ ಕರೆಯುತ್ತಿದ್ದೇನೆ. ಅಲ್ಲ, ಇದು ಸತ್ಯ. ಇದಕ್ಕೆ ವಿರುದ್ಧ ಸಾಧ್ಯವೇ ಇಲ್ಲ, ನೀವು ನನ್ನನ್ನು ಯಾರ ಕಡೆಗೆ ಕರೆಯುತ್ತಿರುವಿರೋ ಅವರಿಗೆ ಈ ಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ಯಾವುದೇ ಕರೆ ಇಲ್ಲ, ನಮಗೆಲ್ಲರಿಗೂ ಅಲ್ಲಾಹನ ಕಡೆಗೇ ಮರಳಿ ಹೋಗಬೇಕಾಗಿದೆ ಮತ್ತು ಮಿತಿಮೀರಿ ನಡೆಯುವವರು ನರಕಾಗ್ನಿಗೆ ಹೋಗಲಿರುವರು. ಇಂದು ನಾನು ಹೇಳುತ್ತಿರುವ ಮಾತನ್ನು ನೀವು ಜ್ಞಾಪಿಸಿಕೊಳ್ಳುವ ಕಾಲ ಸದ್ಯದಲ್ಲೇ ಬರಲಿದೆ. ನಾನು ನನ್ನ ವಿಷಯವನ್ನು ಅಲ್ಲಾಹನಿಗೆ ಒಪ್ಪಿಸಿ ಬಿಡುತ್ತೇನೆ. ಅವನು ತನ್ನ ದಾಸರ ಮೇಲ್ವಿಚಾರಕನಾಗಿರುತ್ತಾನೆ." (ಪವಿತ್ರ ಕುರ್‌ಆನ್, 40:38-44)

ಪ್ರತಿಯೊಬ್ಬ ಮಾನವನಿಗೆ ತಾನು ಯಾವ ಮಾರ್ಗ ಅನುಸರಿಸಬೇಕೆಂದು ತೀರ್ಮಾನಿಸಬೇಕಾದ ಒಂದು ನಿರ್ಣಾಯಕ ಸಮಯ ಬರುತ್ತದೆ. ಒಂದೆಡೆ ಮಿಥ್ಯವು ತನ್ನೆಲ್ಲ ಪ್ರತಾಪ

ಮತ್ತು ವೈಭವಗಳೊಂದಿಗೆ ಎದುರಿಗಿದ್ದರೆ ಇನ್ನೊಂದೆಡೆ ಸತ್ಯವು ಅವನ ಮೂಲಭೂತ ವಿಶ್ವಾಸ ಮತ್ತು ಧ್ಯೇಯೋದ್ದೇಶವಾಗಿ ಬಿಟ್ಟಿರುತ್ತದೆ. ಅದು ಅವನ ಮನ-ಮಸ್ತಿಷ್ಕಗಳನ್ನೂ ಆತ್ಮವನ್ನೂ ಆವರಿಸಿರುತ್ತದೆ. ಅದು ಅವನ ಆತ್ಮಸಾಕ್ಷಿಯ ಕರೆಯೂ ಅವನ ಆಗ್ರಹ-ಅಭಿಲಾಷೆಗಳ ಕೇಂದ್ರವೂ ಆಗಿರುತ್ತದೆ. ಅದು ಅವನನ್ನು ತನ್ನತ್ತ ಕರೆಯುತ್ತದೆ. ಆ ಸಂದರ್ಭದಲ್ಲಿ ಮಿಥ್ಯದೊಂದಿಗಿದ್ದರೆ ಲೌಕಿಕ ಪ್ರಗತಿ ಮತ್ತು ಸುಖಾಡಂಬರಗಳನ್ನು ಗಳಿಸಿದಂತೆ. ಸತ್ಯವನ್ನು ಬೆಂಬಲಿಸಿದರೆ ತನ್ನ ವಿನಾಶವನ್ನು ತಾನೇ ಆಹ್ವಾನಿಸಿದಂತೆ. ಇಂತಹ ನಿರ್ಣಾಯಕ ಹಂತದಲ್ಲಿ ಮಿಥ್ಯದ ವೈಭವಾಡಂಬರಗಳನ್ನು ಒದ್ದು ಸತ್ಯದ ಕೆಂಡವನ್ನು ತಮ್ಮ ಮುಷ್ಟಿಯಲ್ಲಿ ಅಮುಕಿ ಹಿಡಿಯುವ ಧೈರ್ಯ ತೋರಬಲ್ಲವರು ಬಹಳ ಅಪರೂಪ. ಆದರೆ ಸತ್ಯದ ರುಚಿಯನ್ನು ಕಂಡವರು ಇಂತಹ ಸನ್ನಿವೇಶಗಳಲ್ಲಿ ಎಲ್ಲ ತರದ ಪ್ರೇರಣೆ-ಅಪಾಯಗಳನ್ನು ಮೆಟ್ಟಿ ನಿಂತು ಸತ್ಯವನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾರೆ. ಆದ್ದರಿಂದ ಆ ವಿಶ್ವಾಸಿ ಸತ್ಪುರುಷನು ಎಲ್ಲ ಔಚಿತ್ಯಗಳನ್ನು ತಿರಸ್ಕರಿಸಿ ತನ್ನ ಈಮಾನನ್ನು ಸ್ಪಷ್ಟವಾಗಿ ಘೋಷಿಸಿ ಪರಲೋಕಕ್ಕೆ ಪ್ರಾಶಸ್ತ್ಯ ನೀಡಿರುವುದನ್ನು ಮನಮುಟ್ಟುವ ಶೈಲಿಯಲ್ಲಿ ಪುರಾವೆಗಳ ಸಹಿತ ಪ್ರಕಟಿಸಿದ. ತನ್ನ ಈ ಸತ್ಯ ಪ್ರಕಟನೆಯ ಪರಿಣಾಮವೇನೆಂದು ಆತನಿಗೆ ಚೆನ್ನಾಗಿ ಗೊತ್ತಿತ್ತು. ಆದರೂ ತನ್ನ ದೃಢ ಸಂಕಲ್ಪ ಮತ್ತು ಸತ್ಯದ ಮಾರ್ಗದಲ್ಲಿ ಎದುರಾಗಬಲ್ಲ ಯಾವುದೇ ಶಿಕ್ಷೆಯನ್ನು ಅನುಭವಿಸಲು ತನ್ನನ್ನು ಪೂರ್ಣವಾಗಿ ಸಿದ್ಧಪಡಿಸಿದ್ದ. ಜೊತೆಗೆ ತನ್ನ ಜನಾಂಗಕ್ಕೆ ಒಂದು ಎಚ್ಚರಿಕೆಯನ್ನೂ ನೀಡಿದ- "ಇಂದು ನೀವು ನಮ್ಮ ಮೇಲೆ ಸಿಟ್ಟಾಗಿ ನನ್ನನ್ನು ಏನು ಬೇಕಾದರೂ ಮಾಡಿ. ಆದರೆ ಒಂದು ದಿನ ನೀವು ನನ್ನ ಮಾತಿನ ಸತ್ಯತೆಯನ್ನು ಕಂಡುಕೊಳ್ಳುವಿರಿ. ಆಗ ನನ್ನನ್ನು ಸ್ಮರಿಸುವಿರಿ. ಇನ್ನು, ನನ್ನ ಕುರಿತು ಹೇಳಬೇಕೆಂದರೆ, ನಾನು ನನ್ನನ್ನು ಸಂಪೂರ್ಣವಾಗಿ ಅಲ್ಲಾಹನಿಗೆ ಅರ್ಪಿಸಿ ಬಿಟ್ಟಿದ್ದೇನೆ. ಅವನು ತನ್ನ ನಿಷ್ಠ ದಾಸರ ಬಗ್ಗೆ ಎಂದೂ ಅಶ್ರದ್ಧನಲ್ಲ. ನನ್ನ ರಕ್ಷಣೆಗೆ ಆತನೇ ಸಾಕು."

ಆತನ ಈ ಘೋಷಣೆ ಮತ್ತು ಎಚ್ಚರಿಕೆಗಳು ಫಿರ್‌ಔನ್ ಮತ್ತವನ ಆಸ್ಥಾನಿಕರ ಕೋಪವನ್ನು ಪ್ರಜ್ವಲಿಸಲು ಸಾಕಾಗಿತ್ತು. ಆದರೆ ಜಗದ್ರಕ್ಷಕನ ದಯೆ-ಕರುಣೆಗಳನ್ನು ನೋಡಿ! ಫಿರ್‌ಔನ್ ಮತ್ತವನ ಆಸ್ಥಾನಿಕರಿಗೆ ತಮ್ಮೆಲ್ಲ ಅಧಿಕಾರ, ಪ್ರಾಬಲ್ಯದ ಹೊರತಾಗಿಯೂ ಆ ಸತ್ಪುರುಷನ ರೋಮವನ್ನೂ ಕೊಂಕಿಸಲಾಗಲಿಲ್ಲ. ಅವರ ಎಲ್ಲ ತಂತ್ರಗಳೂ ವಿಫಲವಾದುವು. ಅದಕ್ಕೆ ವ್ಯತಿರಿಕ್ತವಾಗಿ ಫಿರ್‌ಔನ್ ತನ್ನ ಶಕ್ತಿ-ಸಾಮರ್ಥ್ಯಗಳ ಹೊರತಾಗಿಯೂ ಅವಮಾನಿತನಾದ ಮತ್ತು ಯಾತನೆಗೆ ಗುರಿಯಾದ. ಅವನ ಈ ಪಾಠಬೋಧಕ ದುರ್ಗತಿಯನ್ನು ಅಲ್ಲಾಹನು ಹೀಗೆ ವಿವರಿಸಿರುವನು.

ಸತ್ಪುರುಷನ ಸತ್ಪರಿಣಾಮ

"ಕೊನೆಗೆ ಅವರು ಆ ಸತ್ಯವಿಶ್ವಾಸಿಯ ವಿರುದ್ಧ ನಡೆಸಿದ್ದ ಅತ್ಯಂತ ದುಷ್ಟವಾದ ಎಲ್ಲ ಕುತಂತ್ರಗಳಿಂದ ಅಲ್ಲಾಹನು ಅವನನ್ನು ಕಾಪಾಡಿದನು ಮತ್ತು ಫಿರ್‌ಔನನ ಜೊತೆಗಾರರು

ಸ್ವಯಂ ಅತ್ಯಂತ ಕೆಟ್ಟ ಯಾತನೆಯ ಸುಳಿಗೆ ಸಿಕ್ಕಿಬಿಟ್ಟರು. ನರಕಾಗ್ನಿ! ಅದರ ಮುಂದೆ ಅವರು ಬೆಳಗು ಬೈಗುಗಳಲ್ಲಿ ತರಲ್ಪಡುತ್ತಾರೆ. ಪುನರುತ್ಥಾನದ ಘಳಿಗೆ ಬಂದಾಗ ಫಿರ್‌ಔನನ ಜನರನ್ನು ಅತ್ಯುಗ್ರ ಯಾತನೆಯಲ್ಲಿ ಪ್ರವೇಶಗೊಳಿಸಿರೆಂದು ಅಪ್ಪಣೆಯಾಗುವುದು."

(ಪವಿತ್ರ ಕುರ್‌ಆನ್, 40:45-46)

ಆತನ ಈ ಸ್ಪಷ್ಟ ಮತ್ತು ದಿಟ್ಟತನದ ಮಾತುಗಳ ಹೊರತಾಗಿಯೂ ಫಿರ್‌ಔನನಿಗೆ ಅವನ ಮೇಲೆ ಬಹಿರಂಗವಾಗಿ ಕೈ ಮಾಡಲು ಸಾಧ್ಯವಾಗದಿರುವುದು ಆತನ ವ್ಯಕ್ತಿ ಪ್ರಭಾವ ದಿಂದಾಗಿರಬಹುದು ಅಥವಾ ಈಮಾನಿನ ಪ್ರತಾಪವಾಗಿರಬಹುದು. ಅವನನ್ನು ಸಿಲುಕಿಸಲು ಮತ್ತು ತನ್ನ ನಿಯಂತ್ರಣದಲ್ಲಿಡಲು ಫಿರ್‌ಔನ್ ಏನೆಲ್ಲ ಉಪಾಯಗಳನ್ನೂ ವಿವಿಧ ತಂತ್ರ ಗಳನ್ನೂ ಹೂಡಿದ. ಆದರೆ ಅಲ್ಲಾಹನು ಪ್ರತಿಯೊಂದು ತಂತ್ರದ ವೇಳೆಯೂ ಆವನಿಗೆ ಸಹಾಯ ಮಾಡಿ ಅವನನ್ನು ರಕ್ಷಿಸಿದನು. ಅಲ್ಲಾಹನು ಯಾರನ್ನು ಉಳಿಸ ಬಯಸುವನೋ ಅವನನ್ನು ಅಳಿಸಲು ಯಾರಿಂದ ಸಾಧ್ಯ? ಅದಕ್ಕೆ ವ್ಯತಿರಿಕ್ತವಾಗಿ ಫಿರ್‌ಔನ್ ಮತ್ತವನ ಎಲ್ಲ ಸಂಗಾತಿಗಳು ಈ ಲೋಕದಲ್ಲೂ ನಿಂದ್ಯರಾದರು. ಇನ್ನು ಪರಲೋಕದಲ್ಲಂತೂ ಅವರ ದುರ್ಗತಿ ಮತ್ತು ಅವಮಾನವು ಅತ್ಯಂತ ಕೆಟ್ಟದಾಗಿರುವುದು.

ಈ ಘಟನೆಯಲ್ಲಿ ಸತ್ಯದ ದೀವಟಿಗೆ ಹಿಡಿದು ನಡೆಯುವವರಿಗೂ ಸತ್ಯವನ್ನು ವಿರೋಧಿಸುವುದರಲ್ಲಿ ಮುಂಚೂಣಿಯಲ್ಲಿರುವವರಿಗೂ ಉತ್ತಮ ಪಾಠವಿದೆ. ಇದರಲ್ಲಿ ಅಲ್ಲಾಹನ ಸಹಾಯದ ಮೇಲೆ ದೃಢನಂಬಿಕೆಯಿರುವವರಿಗೆ, ಅವರ ವಿರೋಧಿಗಳು ಎಷ್ಟೇ ಶಕ್ತಿ-ಸಾಮರ್ಥ್ಯಗಳನ್ನು ಹೊಂದಿರಲಿ, ಕೊನೆಗಂತೂ ಅವರು ಸೋಲುಣ್ಣುವುದು ಖಂಡಿತ. ಸತ್ಯದ ವಾಹಕರು ಈ ಲೋಕದಲ್ಲೂ ಯಶಸ್ವಿಯಾಗುವರು. ಪರಲೋಕದಲ್ಲೂ ವಿಜಯ ಹೊಂದುವರು ಎಂಬ ಸುವಾರ್ತೆಯಿದೆ.

❖ ❖ ❖

ಕಾರೂನ್-ಇಸ್ರಾಈಲಿ ಸಾಹುಕಾರ

ಫಿರ್‌ಔನನ ಜನಾಂಗದವನೇ ಆದ ಸತ್ಯವಿಶ್ವಾಸಿ ಆಸ್ಥಾನಿಕನೊಬ್ಬನ ವಿಶ್ವಾಸದಾರ್ಢ್ಯದ ಕತೆ ಒಂದೆಡೆಯಾದರೆ, ಇನ್ನೊಂದೆಡೆ ಮೂಸಾರ(ಅ) ಜನಾಂಗದವನಾದ ಕಾರೂನನ ಪಾತ್ರ ನಮಗೆ ಕಾಣುತ್ತದೆ. ಆತ ಸತ್ಯವನ್ನು ತಿರಸ್ಕರಿಸಿ, ತನ್ನ ಲೋಕವನ್ನು ಬೆಳಗಿಸಲಿಕ್ಕಾಗಿ ಫಿರ್‌ಔನ ನೊಂದಿಗೆ ಕೈಜೋಡಿಸಿದ. ಮಾತ್ರವಲ್ಲ, ತನ್ನದೇ ಜನಾಂಗದ ಬದ್ಧ ವೈರಿ (ಫಿರ್‌ಔನ್) ಯೊಂದಿಗೆ ಸೇರಿ ಮೂಸಾರನ್ನು ಸತಾಯಿಸಲು ಮುಂದಾದ. ಇತರ ಫಿರ್‌ಔನೀಯರಂತೆ ಸತ್ಯದ ಕರೆಯನ್ನು ದಮನಿಸುವುದರಲ್ಲಿ ಹಾಗೂ ಅದನ್ನು ವಿರೋಧಿಸುವುದರಲ್ಲಿ ಮುಂಚೂಣಿ ಯಲ್ಲಿ ನಿಂತ. ಅವನ ಈ ಪಾತ್ರವನ್ನು ಅಲ್ಲಾಹನು ಈ ರೀತಿ ವಿವರಿಸಿರುವನು,

"ಕಾರೂನ್, ಮೂಸಾರ ಜನಾಂಗದ ಒಬ್ಬ ವ್ಯಕ್ತಿಯಾಗಿದ್ದನು. ಅವನು ತನ್ನ ಜನಾಂಗದ ವಿರುದ್ಧ ಬಂಡಾಯವೆದ್ದನು. ನಾವು ಅವನಿಗೆ ಅದೆಷ್ಟು ಭಂಡಾರಗಳನ್ನು ನೀಡಿದ್ದೆವೆಂದರೆ ಅವುಗಳ ಬೀಗದ ಕೈಗಳನ್ನು ಬಲಶಾಲಿಗಳ ಒಂದು ಸಮೂಹವು ಬಹಳ ಕಷ್ಟದಿಂದ ಎತ್ತ ಬಹುದಾಗಿತ್ತು. ಒಮ್ಮೆ ಅವನ ಜನಾಂಗದವರು ಅವನೊಡನೆ- ಅಹಂಕಾರ ಪಡಬೇಡ. ಅಹಂಕಾರಪಡುವವರನ್ನು ಅಲ್ಲಾಹನು ಮೆಚ್ಚುವುದಿಲ್ಲ, ಅಲ್ಲಾಹನು ನಿನಗೆ ನೀಡಿರುವ ಸಂಪತ್ತಿನಿಂದ ನೀನು ಪರಲೋಕ ಗೃಹ ನಿರ್ಮಾಣ ಮಾಡುವ ಕುರಿತು ಚಿಂತಿಸು ಮತ್ತು ಇಹಲೋಕದಿಂದಲೂ ನಿನ್ನ ಪಾಲನ್ನು ಮರೆಯಬೇಡ. ಅಲ್ಲಾಹನು ನಿನಗೆ ಉಪಕಾರ ಮಾಡಿದಂತೆಯೇ ನೀನೂ ಪರೋಪಕಾರ ಮಾಡು ಮತ್ತು ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡಲು ಪ್ರಯತ್ನಿಸಬೇಡ. ಅಲ್ಲಾಹನು ಕ್ಷೋಭೆಯನ್ನುಂಟು ಮಾಡುವವರನ್ನು ಮೆಚ್ಚು ವುದಿಲ್ಲ." (ಪವಿತ್ರ ಕುರ್‌ಆನ್, 28:76-77)

ಈ ಕಾರೂನ್ ಬನೀ ಇಸ್ರಾಈಲರ ಪೈಕಿಯವನಾಗಿದ್ದ. ಇಸ್ರಾಈಲರ ಇತಿಹಾಸ ಹೇಳುವಂತೆ, ಆತ ಮೂಸಾರ ಕುಟುಂಬದವನೇ ಆಗಿದ್ದ. ಅವನು ತನ್ನ ಜನಾಂಗ ಮತ್ತು ತನ್ನ ಧರ್ಮದವರನ್ನು ತ್ಯಜಿಸಿ ಫಿರ್‌ಔನ್‌ನೊಂದಿಗೆ ಸೇರಿಕೊಂಡ. ಎಲ್ಲ ಕಾಲದ ಚತುರರು ಮತ್ತು ಸಂದರ್ಭ ಸಾಧಕರಂತೆ, ಆಡಳಿತ ವರ್ಗದವರೊಂದಿಗೆ ಸೇರಿಕೊಂಡರೆ ತನ್ನ ಐಹಿಕ ಬದುಕು ಬೆಳಗಬಹುದೆಂದು ಭಾವಿಸಿಕೊಂಡ. ದಮನಿತ ಹಾಗೂ ಮರ್ದಿತ ಜನಾಂಗವಾಗಿ ರುವ ಬನೀ ಇಸ್ರಾಈಲರೊಂದಿಗಿರುವುದರಿಂದ ಏನು ಪ್ರಯೋಜನ? ಈ ಯಜಮಾನರನ್ನು

ಸಂತೋಷಗೊಳಿಸಿದರೆ ಸುಖವಾಗಿ ಜೀವಿಸಬಹುದೆಂದು ಆತ ಲೆಕ್ಕ ಹಾಕಿದ. ಈ ವಿದ್ರೋಹದ ಫಲವಾಗಿ ಅವರಿಂದ ಸಾಕಷ್ಟು ಬಹುಮಾನಗಳನ್ನು ಪಡೆದುಕೊಂಡು ದೇಶದ ಅತಿ ದೊಡ್ಡ ಸಂಪತ್ತಿನ ಸಾಹುಕಾರನಾದ. ಅಪ್ಪಟ ಬಂಡವಾಳಶಾಹಿ ಮನೋವೃತ್ತಿಯವ ನಾಗಿದ್ದುದರಿಂದ ಅವನಿಗೆ ತನ್ನ ಬೊಕ್ಕಸವನ್ನು ಯಾವ ರೀತಿ ತುಂಬುವುದು, ಹಗಲು ರಾತ್ರಿಗಳಲ್ಲಿ ಅದನ್ನು ಹೇಗೆ ಹೆಚ್ಚಿಸುವುದು ಎಂಬ ಒಂದೇ ಚಿಂತೆಯಿತ್ತು. ತನ್ನ ಜನಾಂಗ ಅಪಮಾನಕ್ಕೀಡಾಗಿದ್ದರೆ ಆಗಲಿ, ಹಿಂಸೆ, ದೌರ್ಜನ್ಯಕ್ಕೊಳಗಾಗಿದ್ದರೆ ಆಗಲಿ, ತನಗೇನು? ಬಹಳಷ್ಟು ಜತನದಿಂದ ಕೂಡಿ ಹಾಕಿದ ತನ್ನ ಸಂಪತ್ತಿಗೇನೂ ಬಾಧೆಯುಂಟಾಗಬಾರದು! ಇಂತಹದೇ ಮನೋವೃತ್ತಿಯ ಪ್ರದರ್ಶನವನ್ನು ನಮ್ಮ ಉಪ ಭೂಖಂಡದ ಕೆಲವು ವಿದ್ರೋಹಿ ಗಳೂ ಮಾಡಿದ್ದಾರೆ. ಬ್ರಿಟಿಷರು ನಮ್ಮ ಭಾರತ-ಪಾಕ್ ನೆಲವನ್ನು ಸ್ವಾಧೀನಪಡಿಸುತ್ತಿದ್ದಾಗ ಈ ಮಂದಿ ತಮ್ಮ ಜಾಗೀರು ಮತ್ತು ನಾಯಕತ್ವವನ್ನು ಉಳಿಸಲು ಪ್ರಯತ್ನಿಸುತ್ತಿದ್ದರು. ಅತ್ತ ಸ್ವಾತಂತ್ರ್ಯ ಹೋರಾಟಗಾರರು ನೇಣುಗಂಬಕ್ಕೇರುತ್ತಿದ್ದರು. ಜೀವಾವಧಿ ಶಿಕ್ಷೆಯಲ್ಲಿ ಅಂಡ ಮಾನ್‌ಗೆ ಸಾಗಿಸಲ್ಪಡುತ್ತಿದ್ದರು. ಆದರೆ ಈ ಜನರು ಬ್ರಿಟಿಷರನ್ನು ಸಂತುಷ್ಟಗೊಳಿಸಲಿಕ್ಕಾಗಿ ಮತ್ತು ಅವರ ಆಸ್ಥಾನದಲ್ಲಿ ಹುದ್ದೆ ಪಡೆಯಲಿಕ್ಕಾಗಿ ಕಣ್ಣು ಮುಚ್ಚಿಕೊಂಡು ರಾತ್ರಿ ಹಗಲು ಪ್ರಯತ್ನಿಸುತ್ತಿದ್ದರು.

ಮೂಸಾ(ಅ) ಈಜಿಪ್ಟ್‌ನಲ್ಲಿ ಧರ್ಮಪ್ರಚಾರದ ಧ್ವಜವನ್ನು ಎತ್ತಿ ಹಿಡಿದಾಗ ಕಾರೂನನು ಆಡಳಿತ ವರ್ಗದ ಸೂಚನೆ ಪಡೆದು ಅವರನ್ನು ವಿರೋಧಿಸ ತೊಡಗಿದ. ಅವನ ವಿರೋಧ ಎಷ್ಟು ತೀವ್ರವಾಗಿತ್ತೆಂದರೆ ಮೂಸಾರ ವಿರುದ್ಧ ಸೆಣಸಾಟಕ್ಕಿಳಿದಿದ್ದ. ಅಲ್ಲಾಹನ ದೃಷ್ಟಿಯಲ್ಲಿ ದೊಡ್ಡ ದೊಡ್ಡ ಅಪರಾಧಿಗಳ ಸಾಲಿನಲ್ಲಿ ಈತನೂ ಒಬ್ಬನಾಗಿದ್ದ. ಅಲ್ಲಾಹನೇ ಹೀಗೆ ಹೇಳುತ್ತಾನೆ,

"ನಾವು ಮೂಸಾರನ್ನು ಫಿರ್‌ಔನ್, ಹಾಮಾನ್ ಮತ್ತು ಕಾರೂನ್‌ರ ಕಡೆಗೆ, ನಮ್ಮ ನಿದರ್ಶನಗಳು ಹಾಗೂ ಸುವ್ಯಕ್ತವಾದ ಪ್ರಮಾಣದೊಂದಿಗೆ ರವಾನಿಸಿದೆವು. ಆದರೆ ಅವರು, 'ಮಾಟಗಾರ, ಸುಳ್ಳುಗಾರ' ಎಂದರು." (ಪವಿತ್ರ ಕುರ್‌ಆನ್, 40:23-24)

ಇನ್ನೊಂದು ಕಡೆ ಹೀಗೆ ಹೇಳುತ್ತಾನೆ,

"ಮತ್ತು ಕಾರೂನ್, ಫಿರ್‌ಔನ್ ಹಾಗೂ ಹಾಮಾನ್‌ರನ್ನು ನಾವು ನಾಶಗೊಳಿಸಿದೆವು. ಮೂಸಾ, ಅವರ ಬಳಿಗೆ ಪ್ರತ್ಯಕ್ಷ ಪ್ರಮಾಣಗಳನ್ನು ತಂದರು. ಆದರೆ, ಅವರು ಭೂಮಿಯಲ್ಲಿ ದುರಹಂಕಾರದಿಂದ ಮೆರೆದರು. ವಸ್ತುತಃ ಅವರು ಮೀರಿಸುವವರಾಗಿರಲಿಲ್ಲ."

(ಪವಿತ್ರ ಕುರ್‌ಆನ್, 29:39)

ಅವನ ಬಂಡಾಯ ಮತ್ತು ಆತ್ಮದ್ರೋಹ ಎಷ್ಟೊಂದು ಎತ್ತರಕ್ಕೆ ಬೆಳೆಯಿತೆಂದರೆ ಅವನ ಬಳಿ ಶೇಖರಗೊಂಡ ಐಶ್ವರ್ಯಕ್ಕೆ ಲೆಕ್ಕಮಿತಿಯಿರಲಿಲ್ಲ, ಅವನ ಸಂಪತ್ತನ್ನು

ಅಂದಾಜಿಸಲು ಕುರ್‌ಆನಿನ, "ಶಕ್ತಿಶಾಲಿಗಳ ಒಂದು ತಂಡ ಅವನ ಖಜಾನೆಗಳ ಕೈಗಳನ್ನು ಬಹಳ ಕಷ್ಟದಿಂದ ಹೊರಬಹುದಾಗಿತ್ತು" ಎಂಬ ಹೇಳಿಕೆಯೇ ಸಾಕು.

ಕಾರೂನನ ಸಂಪತ್ತು

ಈ ಅಪಾರ ಸಂಪತ್ತು ಅವನನ್ನು ಹುಚ್ಚನಾಗಿಸಿ ಬಿಟ್ಟಿತು. ತನ್ನ ಸಂಪತ್ತಿನ ಬಗ್ಗೆ ಆತ ಮಿತಿಮೀರಿ ಅಹಂಕಾರ ಪಡತೊಡಗಿದ. ಎಲ್ಲ ಬಂಡವಾಳಶಾಹಿಗಳಂತೆ ತನ್ನ ಬಡ ಕುಟುಂಬ ದವರೊಂದಿಗೆ ಸಂಬಂಧ ಕಡಿದುಕೊಂಡು ಐಶ್ವರ್ಯವಂತರಾದ ಪರರೊಂದಿಗೆ ಸೇರುವುದು ಅವನ ಅಭ್ಯಾಸವಾಗಿ ಬಿಟ್ಟಿತು. ಈ ಸ್ಥಿತಿಗೆ ತಲಪಿದಾಗ ಅವನ ಜನಾಂಗದ ಕೆಲವು ಬುದ್ಧಿ ಜೀವಿಗಳು ಅವನಿಗೆ ಉಪದೇಶಿಸುತ್ತಾ, ಈ ನಿನ್ನ ಅಹಂಕಾರ ನಿನ್ನನ್ನು ಮಣ್ಣು ಮುಕ್ಕಿಸೀತು. ಏಕೆಂದರೆ ಅಲ್ಲಾಹನು ಎಲ್ಲ ಅಪರಾಧಗಳನ್ನು ಕ್ಷಮಿಸಿ ಬಿಡಬಹುದು. ಆದರೆ ಅಹಂಕಾರವನ್ನು ಕ್ಷಮಿಸಲಾರನು ಎಂದು ಹೇಳಿದರು. ಅವರು ಅವನಿಗೆ ಇನ್ನೂ ಉಪದೇಶಿಸಿದರು.

ಅಲ್ಲಾಹನು ನಿನಗೆ ನೀಡಿದ ಸಂಪತ್ತಿಗೆ ಕೃತಜ್ಞತಾರ್ಪಣೆಯೆಂಬಂತೆ ಆತನ ಬಡ-ಅಪೇಕ್ಷಿತ ದಾಸರ ಮೇಲೆ ಆತನ ಮಾರ್ಗದಲ್ಲಿ ಖರ್ಚು ಮಾಡು. ಅಲ್ಲಾಹನು ನಿನಗೆ ದಯಪಾಲಿಸಿದಂತೆ ನೀನು ಆತನ ದಾಸರಿಗೆ ನೀಡು. ನೀನು ಬೆನ್ನು ಹತ್ತಿರುವ ಈ ಲೋಕವು ನಶ್ವರವಾಗಿದೆ. ಇಲ್ಲಿ ನಿನಗೆ ಸಿಕ್ಕಿದ ಅವಕಾಶದಲ್ಲಿ ಮುಂದಿನ ಶಾಶ್ವತ ಲೋಕಕ್ಕಾಗಿ ಏನಾದರೂ ಮಾಡು. ಈ ನಿನ್ನ ಭವ್ಯ ಬಂಗಲೆಗಳು, ಮಹಲುಗಳು ಇಲ್ಲೇ ಉಳಿಯಲಿದೆ. ನಿನಗೆ ಮಾತ್ರ ಆರಡಿ ಮಣ್ಣಿನ ನೆಲ ಸಿಗುವುದೂ ಕಷ್ಟ, ಅಲ್ಲಾಹನು ನೀಡಿದ ಸಂಪತ್ತನ್ನು ಭೂಮಿಯ ಮೇಲೆ ಕ್ಷೋಭೆಯುಂಟು ಮಾಡಲು ಬಳಸದಿರು. ಅಲ್ಲಾಹನ ದಾಸರ ಆತ್ಮ ಸಾಕ್ಷಿಯನ್ನು ಖರೀದಿಸಲು, ಅವರನ್ನು ಸತಾಯಿಸಲು ಮತ್ತು ಅವರನ್ನು ಸಿಲುಕಿಸಲು ಉಪಯೋಗಿಸದಿರು. ಆ ಸಂಪತ್ತಿನಿಂದ ಒಳಿತನ್ನು ಹರಡು, ಕೆಡುಕನ್ನು ಅಳಿಸುವ ಕೆಲಸ ಮಾಡು. ಅಲ್ಲಾಹನು ನಿನಗೆ ನೀಡಿದ ಗೌರವ-ಪ್ರತಿಷ್ಠೆಗಳನ್ನು ಒಳಿತಿನ ಕಾರ್ಯಗಳಿಗಾಗಿ ವಿನಿಯೋಗಿಸು. ಏಕೆಂದರೆ ಕ್ಷೋಭೆಯುಂಟು ಮಾಡುವವರನ್ನು ಹೆಚ್ಚು ಸಮಯ ಅಲ್ಲಾಹನು ಸಹಿಸುವುದಿಲ್ಲ, ಇದು ಅವನ ನಿಯಮ. ಆದರೆ ಸಂಪತ್ತಿನ ಭಾರದಿಂದಾಗಿ ಕಣ್ಣು ಕುರುಡಾಗಿರುವವನಿಗೆ ಈ ಉಪದೇಶ ನಾಟುವುದಾದರೂ ಹೇಗೆ? ಆತ ಅತ್ಯಂತ ಅಹಂಕಾರ ದೊಂದಿಗೆ ಹೇಳಿದ:

"ಇವೆಲ್ಲ ನನಗೆ ಪ್ರಾಪ್ತವಾಗಿರುವ ಜ್ಞಾನದಿಂದಾಗಿ ಒದಗಿವೆ."

(ಪವಿತ್ರ ಕುರ್‌ಆನ್, 28:78)

ಕಾರೂನನ ಮನೋಸ್ಥಿತಿ

ಅಂದರೆ ಈ ಸಂಪತ್ತು ನನ್ನ ಪ್ರತಿಭೆ ಮತ್ತು ಸಾಮರ್ಥ್ಯದ ಫಲವಾಗಿದೆ. ನನಗೆ ಸಿಕ್ಕಿದ ಸ್ಥಾನಮಾನಕ್ಕೆ ನಾನು ಅರ್ಹನೇ ಆಗಿದ್ದೆ, ಈ ಸಂಪತ್ತು ಹಾಗೇನೂ ಸಿಕ್ಕ ಸಿಕ್ಕವರ

ಮೇಲೆ ಖರ್ಚು ಮಾಡಲಿಕ್ಕಿರುವುದಲ್ಲ, ಬಡತನವು ಅವರ ಹಣೆಬರಹವಾಗಿತ್ತು. ಆದ್ದರಿಂದಲೇ ವಂಚಿತರಾಗಿದ್ದಾರೆ. ಅವರ ಮೇಲೆ ನಾನೇಕೆ ಖರ್ಚು ಮಾಡಲಿ.

ಈ ಮನೋಸ್ಥಿತಿಯು ದೇವನನ್ನು ಮರೆತು ಎಲ್ಲ ಒಳಿತು ಮತ್ತು ಸಂಪನ್ನತೆಯು ತನ್ನ ಸಾಮರ್ಥ್ಯದ ಫಲವೆಂದು ಭಾವಿಸುವ ಪ್ರತಿಯೋರ್ವ ವ್ಯಕ್ತಿಯದ್ದಾಗಿರುತ್ತದೆ. ಈ ಸಾಮರ್ಥ್ಯ, ಈ ಪ್ರತಿಭೆ, ಈ ಬುದ್ಧಿವಂತಿಕೆ, ಈ ಅಭಿಪ್ರಾಯ ದಕ್ಷತೆ ಮತ್ತು ಅನುಕೂಲಕರ ವಾತಾವರಣವನ್ನೆಲ್ಲ ತನಗೆ ನೀಡಿದವನು ಯಾರೆಂದು ಆತ ಆಲೋಚಿಸದೆ ಹೋದ. ಒಂದು ವೇಳೆ ಆತ ಕುಂಟ, ಕುರುಡ, ಅಂಗವಿಕಲ, ಅಸಹಾಯಕನಾಗಿ ಹುಟ್ಟುತ್ತಿದ್ದರೆ ಈ ಉನ್ನತಿಗೆ ಆತ ತಲುಪುತ್ತಿದ್ದನೇ? ಆದರೆ ಈ ದೃಷ್ಟಿಕೋನದಿಂದ ಯಾರು ಆಲೋಚಿಸುತ್ತಾರೆ? ಹಾಗೆ ಆಲೋಚಿಸುವವರು ಪ್ರತಿಕ್ಷಣ ಅಲ್ಲಾಹನನ್ನು ಭಯಪಡುವವರು, ಅವನಿಗೆ ಕೃತಜ್ಞರಾಗಿರುವವರು ಮತ್ತು ಜಾಗೃತ ಮನಸ್ಸಿನವರು ಹಾಗೂ ದೃಷ್ಟಿಯುಳ್ಳವರಾಗಿರುತ್ತಾರೆ. ಆದ್ದರಿಂದಲೇ ಅಲ್ಲಾಹನು ಹೇಳುತ್ತಾನೆ,

"ಅಲ್ಲಾಹನು ಇದಕ್ಕಿಂತ ಮುಂಚೆ ಅವನಿಗಿಂತಲೂ ಹೆಚ್ಚು ಶಕ್ತಿ ಹಾಗೂ ಜನಬಲವನ್ನು ಹೊಂದಿದ್ದವರನ್ನು ನಾಶಗೊಳಿಸಿರುವನೆಂಬುದು ಅವನಿಗೆ ತಿಳಿದಿರಲಿಲ್ಲವೇ? ಅಪರಾಧಿಗಳೊಡನೆ ಅವರ ಪಾಪಗಳ ಕುರಿತು ಪ್ರಶ್ನಿಸಲಾಗುವುದಿಲ್ಲ." (ಪವಿತ್ರ ಕುರ್‌ಆನ್, 28:78)

ಈ ಹಿಂದೆ ಯಾರನ್ನೆಲ್ಲ ಹಿಡಿಯಲಾಗಿತ್ತೋ ಅವರೆಲ್ಲ ತಮ್ಮ ಅಪರಾಧಗಳನ್ನು ಒಪ್ಪಿಕೊಂಡದ್ದರಿಂದ ಹಿಡಿಯಲಾಗಿತ್ತೇ? ಈಗ ನೀವು ನಿಮ್ಮ ಅಪರಾಧಗಳನ್ನು ಒಪ್ಪಿಕೊಳ್ಳದಿರುವಾಗ ನೀವು ದೇವನ ಹಿಡಿತದಿಂದ ಪಾರಾಗಿ ಬಿಡುವಿರೆಂದು ಭಾವಿಸಿರುವಿರಾ? ಅಪರಾಧಿಗೆ ಶಿಕ್ಷೆ ನೀಡಲು ಆತ ಅಪರಾಧ ಮಾಡಿದ್ದಾನೆಂಬುದೇ ಸಾಕು. ಅದನ್ನಾತ ಒಪ್ಪಿಕೊಳ್ಳಲಿ, ಒಪ್ಪಿಕೊಳ್ಳದಿರಲಿ. ಅವರ ಅಪರಾಧಗಳ ಕೊಡ ತುಂಬಿ ಹೋದಾಗ ಯಾವುದೇ ಸಮಯದಲ್ಲಿ ಅವರ ದುರ್ಗತಿ ಬಂದೇ ತೀರುವುದು ಖಚಿತ. ಅವರ ದುರ್ಗತಿಯು ಅವರ ಅನುಮತಿಯನ್ನು ಅವಲಂಬಿಸಿರುವುದಿಲ್ಲ.

ಅಪರಾಧಿಗಳ ಮನೋಸ್ಥಿತಿಯೂ ವಿಚಿತ್ರವಾಗಿದೆ. ಹಿಂದಿನವರ ದುರ್ಗತಿ ನೋಡಿದಾಗ ಅದರ ಕಾರಣಗಳನ್ನು, ಅವರ ಕುಂದು ಕೊರತೆಗಳನ್ನು ಹುಡುಕತೊಡಗುತ್ತಾರೆ. ಆದರೆ ಅಂತಹದೇ ದುಷ್ಕರ್ಮಗಳನ್ನು ಮಾಡಿದರೆ ತಮಗೂ ದುರ್ಗತಿ ಬರಬಹುದೆಂಬುದನ್ನು ಆಲೋಚಿಸಲಿಕ್ಕೂ ಅವರು ಸಿದ್ಧರಿರುವುದಿಲ್ಲ. ವಾಸ್ತವದಲ್ಲಿ ಐತಿಹಾಸಿಕ ಘಟನೆಗಳಿಂದ, ಪುರಾತನ ಪಳೆಯುಳಿಕೆಗಳಿಂದ ದೇವನ ಮೇಲೆ ವಿಶ್ವಾಸವಿರುವವರು ಮಾತ್ರ ಪಾಠ ಕಲಿಯುತ್ತಾರೆ. ಅವನ ಶಿಕ್ಷೆಯ ಭಯದಿಂದ ಕಂಪಿಸುತ್ತಾರೆ. ಅವನ ಮುಂದೆ ವಿಚಾರಣೆಗೆ ನಿಲ್ಲುವುದರಿಂದ ಹೆದರುತ್ತಾರೆ.

ಕಾರೂನನ ಮುಂದೆ ಪೂರ್ವ ಇತಿಹಾಸದ ಪುಟಗಳು ತೆರೆದುಕೊಂಡಿದ್ದುವು. ಆದ್, ಸಮೂದ್, ನೂಹರ, ಲೂತರ ಜನಾಂಗಗಳ ಬಗ್ಗೆ ಅವನು ಅರಿಯದಿರಲಿಕ್ಕಿಲ್ಲ. ಅವರು

ಕಾರೂನನಿಗಿಂತ ಎಷ್ಟೋ ಹೆಚ್ಚು ಶಕ್ತಿ, ಸಂಪತ್ತು, ಅಧಿಕಾರ, ಪ್ರಾಬಲ್ಯ ಹೊಂದಿದವರಾಗಿದ್ದರು. ಆದರೆ ಅವರ ಧಿಕ್ಕಾರ ಮತ್ತು ನಿಷೇಧ ನೀತಿಯಿಂದಾಗಿ ಅವರ ಮೇಲೆ ಅಲ್ಲಾಹನ ಶಿಕ್ಷೆ ಎರಗಿದಾಗ ಅದನ್ನು ತಡೆಯಲು ಯಾವ ಶಕ್ತಿಗೂ ಸಾಧ್ಯವಾಗಲಿಲ್ಲ. ಅವರು ಹೇಳ ಹೆಸರಿಲ್ಲ ದಂತೆ ಈ ಲೋಕದಿಂದ ಅಳಿದು ಹೋದರು. ಹಾಗಿರುವಾಗ ಈ ಕಾರೂನ್ ಅವನಿಗೆ ಯಾವ ಲೆಕ್ಕ?

ಸಂಪತ್ತಿನ ಪ್ರದರ್ಶನ

ಕಾರೂನನ ಸಂಪತ್ತು, ಅವನ ನಡವಳಿಕೆ ಇತ್ಯಾದಿಗಳ ಬಗ್ಗೆ ಜನರು ಪರಸ್ಪರ ಗುಸುಗುಟ್ಟುವ ವಿಷಯ ತಿಳಿದಾಗ ಜನರ ಬಾಯಿ ಮುಚ್ಚಲು, ಅವರ ಮೇಲೆ ತನ್ನ ದರ್ಪವನ್ನು ಮೆರೆಯಲು ಮತ್ತು ತನ್ನ ಅಪರಾಧಗಳನ್ನು ಅಡಗಿಸಲು ಅತ್ಯಂತ ವೈಭವಾ ಡಂಬರಗಳೊಂದಿಗೆ ತನ್ನ ಸಂಪತ್ತಿನ ಪ್ರದರ್ಶನಕ್ಕಾಗಿ ಆತ ಹೊರಗಿಳಿದ. ಕುರ್‌ಆನ್ ಆ ಘಟನೆಯನ್ನು ಈ ರೀತಿ ವರ್ಣಿಸಿದೆ:

"ಒಂದು ದಿನ ಅವನು ತನ್ನ ಜನಾಂಗದ ಮುಂದೆ ತನ್ನ ಸಂಪೂರ್ಣ ಠೀವಿಯೊಂದಿಗೆ ಹೊರಟನು. ಲೌಕಿಕ ಜೀವನವನ್ನು ಬಯಸುವವರು ಅವನನ್ನು ಕಂಡು ಕಾರೂನನಿಗೆ ನೀಡಲಾಗಿರುವುದೇ ನಮಗೂ ಸಿಗುತ್ತಿದ್ದರೆ! ಇವನು ಮಹಾ ಅದೃಷ್ಟಶಾಲಿ ಎನ್ನ ತೊಡಗಿದರು."

(ಪವಿತ್ರ ಕುರ್‌ಆನ್, 28:79)

ಮೂರ್ಖರ ದುರಾಸೆ

ಇತರರ ಸಂಪತ್ತನ್ನು ನೋಡಿ ನಮಗೂ ಸಿಕ್ಕಿದರಾಗಬಹುದೆಂದು ಬಯಸುವ ಮೂರ್ಖರಿಗೆ ಈ ಲೋಕದಲ್ಲಿ ಕಡಿಮೆಯಿಲ್ಲ. ಕಾರೂನನ ಸಂಪತ್ತನ್ನು ನೋಡಿದವರ ಬಾಯಲ್ಲೂ ನೀರೂರಿದರೆ ಅದರಲ್ಲಿ ಆಶ್ಚರ್ಯವಿಲ್ಲ. ಮಾನವನ ಪ್ರತಿಷ್ಠೆಯು ಅವನ ಸಂಪತ್ತನ್ನು ಅವಲಂಬಿಸಿದೆ, ಸಂಪತ್ತೇ ಜೀವನದ ಮಾನದಂಡವೆಂದು ಭಾವಿಸುವ ಮೂರ್ಖರು ಅದಕ್ಕಾಗಿ ಹಾತೊರೆಯುವುದೂ ಸ್ವಾಭಾವಿಕ.

ಕಾರೂನನ ಮೆರವಣಿಗೆಯು ಸಂಪತ್ತಿನ ಪ್ರದರ್ಶನದೊಂದಿಗೆ ಹೊರಟಾಗ ಈ ಲೋಕವನ್ನೇ ಸರ್ವಸ್ವವೆಂದು ಭಾವಿಸುವವರು ತಮಗರಿವಿಲ್ಲದಂತೆಯೇ ಹೇಳತೊಡಗಿದರು- ಅಕಟಾ! ನಮಗೂ ಇಂತಹ ಸೌಭಾಗ್ಯ ದೊರೆಯುತ್ತಿದ್ದರೆ! ಸೌಭಾಗ್ಯವೆನ್ನುವುದು ಇದಕ್ಕೆ! ಒಂದೆಡೆ ಕಾರೂನನ ಸುಖಾಡಂಬರಗಳ ಈ ಸ್ಥಿತಿಯಾದರೆ, ಇನ್ನೊಂದೆಡೆ ಅಸಹಾಯಕ ದುರ್ದೈವಿಗಳು ತಮ್ಮ ದೌರ್ಭಾಗ್ಯಕ್ಕಾಗಿ ಕೈಕೈ ಹಿಸುಕತೊಡಗಿದರು. ಈ ಲೋಕಾರಾಧಕರು ಏನಾದರೂ ಹೇಳಿದರೆ ಅದು ಕಡಿಮೆಯೇ. ಎಷ್ಟೋ ವಿಶ್ವಾಸಿಗಳ ನಂಬಿಕೆಯೂ ಚಂಚಲ ವಾಗಿರಬಹುದು. ಒಂದೆಡೆ ತನ್ನ ಸಮಾಜಕ್ಕೆ ಮಾಡಿದ ಈ ದ್ರೋಹಕ್ಕಾಗಿ ಈ ಭವ್ಯ ಕೊಡುಗೆ ಗಳಾದರೆ, ಇನ್ನೊಂದೆಡೆ ಈಮಾನ್ ಮತ್ತು ಸತ್ಯಸಂಧತೆಗೆ ಸರಕಾರದಿಂದಲೂ ಹೊಡೆತ,

ಮೇಲಾಗಿ ಬಡತನ-ದಾರಿದ್ರ್ಯಗಳು. ಈ ಸಂದರ್ಭದಲ್ಲಿ ಎಷ್ಟೋ ಮಂದಿ ತಮ್ಮ ಆತ್ಮಸಾಕ್ಷಿಯನ್ನು ಮಾರಲು ತವಕ ಪಟ್ಟಿರಬಹುದು. ಅದೇ ರೀತಿ, ಎಷ್ಟೋ ಮಂದಿ ಸನ್ಮಾರ್ಗದ ಹತ್ತಿರ ಹತ್ತಿರ ಬಂದು ಹಿಂದೇಟು ಹಾಕಿರಬಹುದು. ಮೂಸಾರಿಗೆ(ಅ) ತಮ್ಮ ಆಂದೋಲನವು ಈ ರೀತಿ ಕೊಲೆಯಾಗುವುದನ್ನು ಕಂಡಾಗ ಅವರ ಮನಸ್ಸಿನಲ್ಲಿ ಎಂತಹ ತಳಮಳವುಂಟಾಗಿರ ಬಹುದು. ಧಿಕ್ಕಾರ ಮತ್ತು ವಿದ್ರೋಹವನ್ನು ಕಂಡು ಮರುಗುತ್ತಿರುವವರು ಈ ಪರಿಸ್ಥಿತಿಯನ್ನು ನೋಡಿ ಕೈಯೆತ್ತಿ ಪ್ರಾರ್ಥಿಸುತ್ತಾ, ತಮ್ಮ ಪ್ರಭುವಿನಲ್ಲಿ ತಮ್ಮ ಅಳಲನ್ನು ತೋಡಿಕೊಂಡರು.

ಮೂಸಾರ(ಅ) ಶಾಪ ಪ್ರಾರ್ಥನೆ

"ಮೂಸಾರವರು ಪ್ರಾರ್ಥಿಸಿದರು, ಓ ನಮ್ಮ ಪ್ರಭೂ, ನೀನು ಫಿರ್‌ಔನ್ ಮತ್ತು ಅವನ ಸರದಾರರಿಗೆ ಲೌಕಿಕ ಜೀವನದಲ್ಲಿ ವೈಭವಾಡಂಬರ ಹಾಗೂ ಸಂಪತ್ತನ್ನು ಪ್ರದಾನ ಮಾಡಿರುವಿ. ಓ ಪ್ರಭೂ, ಇದು ಅವರು ಜನರನ್ನು ನಿನ್ನ ಮಾರ್ಗದಿಂದ ತಪ್ಪಿಸಲಿಕ್ಕಾಗಿಯೇ? ಓ ಪ್ರಭೂ, ಅವರ ಸಂಪತ್ತನ್ನು ನಾಶಪಡಿಸು. ಅವರು ವೇದನಾಯುಕ್ತ ಯಾತನೆಯನ್ನು ಕಣ್ಣಾರೆ ಕಾಣುವವರೆಗೂ ವಿಶ್ವಾಸವಿರಿಸದಂತೆ ಅವರ ಹೃದಯಗಳ ಮೇಲೆ ಮುದ್ರೆ ಯೊತ್ತಿಬಿಡು." (ಪವಿತ್ರ ಕುರ್‌ಆನ್, 10:88)

ಜೀವದ ಹಂಗು ತೊರೆದು ನಡೆಸಿದ ಈ ಸುದೀರ್ಘ ಹೋರಾಟದ ಬಳಿಕ ಅಲ್ಲಾಹನ ಪ್ರವಾದಿ ಮಾಡಿದ ದುಃಖಭರಿತ ಪ್ರಾರ್ಥನೆಯಿದು. ಇದು ಅವರಿಗಿಂತ ಸಾವಿರಾರು ವರ್ಷಗಳ ಹಿಂದೆ ಅವರದೇ ಕಾರವಾನದ ಓರ್ವ ನಾಯಕ ನೂಹ್(ಅ) ಅವರು ಮೊಳಗಿಸಿದ್ದ ಪ್ರಾರ್ಥನೆಯ ಪ್ರತಿಧ್ವನಿಯಾಗಿದೆ.

"ನೂಹರು ಹೀಗೆಂದರು- ನನ್ನ ಪ್ರಭೂ, ಈ ಸತ್ಯನಿಷೇಧಿಗಳ ಪೈಕಿ ಯಾರನ್ನೂ ಭೂಮಿಯ ಮೇಲೆ ನೆಲೆಸಲು ಬಿಡಬೇಡ." (ಪವಿತ್ರ ಕುರ್‌ಆನ್, 71:26)

ಅಲ್ಲಾಹನ ವತಿಯಿಂದ ಪ್ರಾರ್ಥನೆಯು ಸ್ವೀಕೃತವಾದ ಸುವಾರ್ತೆ ಲಭಿಸುತ್ತದೆ. ಅವರಿಗೆ ಹೀಗೆ ಉತ್ತರ ಸಿಕ್ಕಿತು.

"ಅಲ್ಲಾಹನು ಉತ್ತರವಿತ್ತನು: ನಿಮ್ಮಿಬ್ಬರ ಪ್ರಾರ್ಥನೆಯು ಸ್ವೀಕರಿಸಲ್ಪಟ್ಟಿತು. ದೃಢಚಿತ್ತ ರಾಗಿರಿ, ಅಜ್ಞಾನಿಗಳ ಮಾರ್ಗವನ್ನೆಂದಿಗೂ ಅನುಸರಿಸಬೇಡಿರಿ."

(ಪವಿತ್ರ ಕುರ್‌ಆನ್, 10:89)

ಅಲ್ಲಾಹನು ತನ್ನ ಈ ನಿಷ್ಠ ದಾಸರಿಗೆ ಮೊದಲು, ನಿಮ್ಮ ಪ್ರಾರ್ಥನೆಯು ಸ್ವೀಕೃತ ವಾಗಿದೆ. ಇನ್ನು ನೀವು ಬಯಸುವುದೇ ಆಗುವುದೆಂಬ ಶುಭ ವಾರ್ತೆ ನೀಡಿದನು. ಅನಂತರ ಅವರಿಗೆ ಈ ಮಾರ್ಗವು ಬಹಳ ಸಂಕೀರ್ಣವಾದದ್ದು, ಇದರಲ್ಲಿ ನಡೆಯ ಬೇಕಾದರೆ ಬಹಳ ಸಹನೆ-ಸ್ಥೈರ್ಯದ ಅಗತ್ಯವಿದೆಯೆಂದು ಹೇಳಿದನು. ಅಜ್ಞಾನಿಗಳು ಸತ್ಯದ ವಾಹಕರ ನಿರಂತರ ಸೋಲನ್ನು ಕಂಡು ಆತ್ಮಸ್ಥೈರ್ಯ ಕಳೆದುಕೊಳ್ಳುತ್ತಾರೆ. ಬಹುಶಃ

ಸೋಲೇ ನಮ್ಮ ಹಣೆಬರಹವೆಂದು ಭಾವಿಸುತ್ತಾರೆ. ತರುವಾಯ ಮೆಲ್ಲಮೆಲ್ಲನೆ ಮಿಥ್ಯ ಶಕ್ತಿಗಳೊಂದಿಗೆ ಸ್ನೇಹ, ಒಪ್ಪಂದಕ್ಕೆ ಮುಂದಾಗುತ್ತಾರೆ ಮತ್ತು ತಮ್ಮ ಆತ್ಮಸಾಕ್ಷಿ, ಶರೀರ ಮತ್ತು ಮಿದುಳು ಎಲ್ಲವನ್ನೂ ಅವರಿಗೆ ಧಾರೆಯೆರೆಯುತ್ತಾರೆ. ಅಲ್ಲಾಹನು ಇಂತಹ ಅಜ್ಞಾನಿಗಳ ಈ ವರ್ತನೆಯಿಂದ ಜಾಗರೂಕರಾಗಿರಬೇಕೆಂದು ಎಚ್ಚರಿಸಿದನು. ಸತ್ಯದ ಮಾರ್ಗದಲ್ಲಿ ಸ್ಥಿರವಾಗಿ ನಿಂತು ಸಹನೆಯೊಂದಿಗೆ ಅಲ್ಲಾಹನ ವಿಧಿಯ ಚಮತ್ಕಾರಗಳನ್ನು ನೋಡುವಂತೆ ಆದೇಶಿಸಿದನು.

ಈ ಸುವಾರ್ತೆಯು ಯಾವ ರೀತಿ ಸೂರ್ಯನ ಬೆಳಕಿನಂತೆ ತನ್ನ ಸತ್ಯತೆಯನ್ನು ಸಿದ್ಧಪಡಿಸಿತೆಂದು ಈಗ ನೋಡಿ.

ಕಾರೂನನ ಸಂಪತ್ತು ಮತ್ತು ಐಶ್ವರ್ಯವನ್ನು ನೋಡಿದ ಒಂದು ವರ್ಗವು ಆಸೆಗಣ್ಣಿನಿಂದ ನೋಡಿದರೆ, ಇನ್ನೊಂದು ವರ್ಗ ಅಪ್ಪಟ ಸತ್ಯವಿಶ್ವಾಸಿಗಳದ್ದಿತ್ತು. ಅವರು ಈ ವಂಚನೆಯ ವಾಸ್ತವಿಕತೆಯನ್ನು ಚೆನ್ನಾಗಿ ಗ್ರಹಿಸಿದ್ದರು. ಧರ್ಮಭ್ರಷ್ಟ ಅಪರಾಧಿಗಳ ಮೇಲೆ ಐಶ್ವರ್ಯ ಮಳೆಯಾಗಿ ಸುರಿಯುವಾಗ ಅವರ ದುರ್ಗತಿ ಸಮೀಪಿಸಿದೆಯೆಂಬುದನ್ನು ಅವರು ತಿಳಿದಿರುತ್ತಾರೆ. ಆದ್ದರಿಂದ ಅವರು ತಮ್ಮ ಜನಾಂಗದ ಈ ಸಂಕುಚಿತವಾದಿಗಳು ಮತ್ತು ಅಪಕ್ವ ವಿಶ್ವಾಸಿಗಳಿಗೆ ಮನವರಿಕೆ ಮಾಡತೊಡಗಿದರು.

ವಿದ್ವಾಂಸರ ಉಪದೇಶ

"ಆದರೆ ಜ್ಞಾನವಿದ್ದವರು, 'ಅಯ್ಯೋ ನಿಮ್ಮ ಅವಸ್ಥೆಯೇ! ಸತ್ಯವಿಶ್ವಾಸವನ್ನು ಸ್ವೀಕರಿಸಿ, ಸತ್ಕರ್ಮವೆಸಗಿದವರಿಗೆ ಅಲ್ಲಾಹನ ಪುಣ್ಯಫಲವೇ ಮೇಲು. ಈ ಸಂಪತ್ತು, ಸಹನೆಯುಳ್ಳವರಿಗಲ್ಲದೆ ಬೇರಾರಿಗೂ ಸಿಗುವುದಿಲ್ಲ' ಎಂದು ಹೇಳಿದರು." (ಪವಿತ್ರ ಕುರ್‌ಆನ್, 28:80)

ಈ ವಾಸ್ತವಿಕತೆಗಳ ಕುರಿತು ವಿದ್ವಾಂಸರು ಸರಿಯಾದ ಮಾತನ್ನೇ ಆಡಿದ್ದಾರೆ. ಮಾನವನು ಕಣ್ಣೆದುರಿಗಿರುವುದನ್ನು ಬಿಟ್ಟು ಶಾಶ್ವತವಾಗಿ ದೊರೆಯುವುದರ ವಾಗ್ದಾನವನ್ನು ದೃಢವಾಗಿ ನಂಬುವುದೇ ಸತ್ಯವಿಶ್ವಾಸದ ಬುನಾದಿಯಾಗಿದೆ. ನಾನು ಮಾಡುತ್ತಿರುವುದರ ಪ್ರತಿಫಲವು ನನಗೆ ಇಲ್ಲಿ ಅಕ್ಷಯ ಪಾತ್ರೆಯಂತೆ ಕೂಡಲೇ ಸಿಗಬೇಕೆಂಬ ಉದ್ದೇಶ ಹೊಂದಿದವರು ಈ ಮಾರ್ಗದಲ್ಲಿ ನಿಲ್ಲಲಾರನು. ಇಲ್ಲಿ ನೂಹ್‌ರಂತಹ(ಅ) ಬದುಕೇ ಸಿಕ್ಕಿದರೂ ಇದೇ ಕೆಲಸವನ್ನು ಮಾಡುತ್ತಾ ಸಾಗಬೇಕಾಗಿದೆ. ಈ ದೀರ್ಘ ಅವಧಿಯಲ್ಲಿ ಕೈಗೇನೂ ದಕ್ಕದಿದ್ದರೂ ಕಳವಳಪಡಬೇಕಾಗಿಲ್ಲವೆಂಬ ಆತ್ಮಸ್ಥೈರ್ಯದ ಅಗತ್ಯವಿದೆ. ಈ ಧೈರ್ಯ-ಸ್ಥೈರ್ಯ ಇಲ್ಲದೆ ಹೋದರೆ ಕೆಲವೇ ಹೆಜ್ಜೆಗಳು ಸಾಗುವಷ್ಟರಲ್ಲಿ ಕಾಲು ಜಾರಿ ಬೀಳುವ ಸಂಭವವಿದೆ. ಈ ಧೈರ್ಯ-ಸ್ಥೈರ್ಯ, ದೃಢಚಿತ್ತತೆಯು ಸಹನೆ ವಹಿಸುವವರಿಗೆ ಮತ್ತು ಸಹನೆ ವಹಿಸುವ ಅಭ್ಯಾಸವಿರುವವರಿಗೆ ಮಾತ್ರ ಲಭ್ಯವಾಗುತ್ತದೆ. ಎಲ್ಲ ರೀತಿಯ ಆಮಿಷ, ಒತ್ತಡ, ಸಂಕಷ್ಟಗಳನ್ನು ಧೈರ್ಯದಿಂದ ಎದುರಿಸುವ ಛಲ, ಧರ್ಮಸಮ್ಮತ

ಸಂಪಾದನೆಯಿಂದ ಸಂತೃಪ್ತಿ, ಅಲ್ಲಾಹನ ಸಂಪ್ರೀತಿಗಾಗಿ ಒಣ ರೊಟ್ಟಿಯಾದರೂ ಸರಿ, ಅದರಲ್ಲಿ ತೃಪ್ತಿ ಹೊಂದುವುದು, ಸಂದರ್ಭ ಬಂದರೆ ಹಸಿವನ್ನೂ ಸಸಂತೋಷ ಸಹಿಸುವುದು, ಮಿಥ್ಯದ ಸಂಪ್ರೀತಿ ಗಳಿಸಲಿಕ್ಕಾಗಿ ರಾಶಿ ರಾಶಿ ಚಿನ್ನ ಸಿಕ್ಕಿದರೂ ಅದನ್ನು ತಿರಸ್ಕರಿಸುವುದು-ಇದೇ ವಾಸ್ತವದಲ್ಲಿ ಸಹನೆಯಾಗಿದೆ. ಇಂತಹ ಸಹನಶೀಲರಿಗೇ ಪರಲೋಕ ಮತ್ತು ಅಲ್ಲಿನ ಪ್ರತಿಫಲದ ಮೇಲೆ ದೃಢವಿಶ್ವಾಸ ಮೂಡಿರುತ್ತದೆ. ಈ ಲೋಕದ ಜಂಜಡದಲ್ಲಿ ಸಿಲುಕಿ ಯಾರು ಹಲಾಲ್-ಹರಾಮ್‌ನ ವ್ಯತ್ಯಾಸವನ್ನು ಪರಿಗಣಿಸುವುದಿಲ್ಲವೋ, ಅಲ್ಲಾಹನ ಸಂಪ್ರೀತಿ ಮತ್ತು ಕ್ರೋಧದ ಮಧ್ಯೆ ಅಂತರ ಕಲ್ಪಿಸುವುದಿಲ್ಲವೋ ಅಂಥವರಿಗೆ ಈ ಮಾರ್ಗವು ಭಾರೀ ಕಠಿಣವಾಗಿರುತ್ತದೆ. ಈ ಭಾರವನ್ನು ಇಳಿಸಲು ಅವನು ಸದಾ ಚಡಪಡಿಸುತ್ತಿರುತ್ತಾನೆ.

ಕಾರೂನ್ ಸಂಪತ್ತಿನ ಈ ಪ್ರದರ್ಶನದ ಮೂಲಕ ತನ್ನ ಗರಿಮೆಯ ಮುದ್ರೆಯೊತ್ತಲು ಪೂರ್ಣ ತಯಾರಿ ನಡೆಸಿದ್ದನು. ಆದರೆ ಅಲ್ಲಾಹನ ತೀರ್ಮಾನವು ಈಗ ಬಂತು ಬಿಟ್ಟಿತ್ತು. ಆತನು ತನ್ನ ದಾಸರನ್ನು ಒಂದು ಹಂತದ ವರೆಗೆ ಮಾತ್ರ ಪರೀಕ್ಷಿಸುತ್ತಾನೆ. ಜನರ ವಿಶ್ವಾಸ ಶ್ರದ್ಧೆಗಳು ಡೋಲಾಯಮಾನವಾಗುವಷ್ಟರ ಮಟ್ಟಿಗೆ ಕೆಡುಕು, ಭ್ರಷ್ಟಾಚಾರಗಳು ಮುಂದುವರಿದಾಗ ಅಲ್ಲಾಹನು ತನ್ನ ತೀರ್ಮಾನವನ್ನು ಜಾರಿಗೊಳಿಸಿ ಬಿಡುತ್ತಾನೆ. ಅದರಂತೆ ಅಲ್ಲಾಹನು ಕಾರೂನನಿಗೆ ಲೋಕಾಂತ್ಯದ ವರೆಗೂ ಜನರಿಗೆ ಪಾಠಬೋಧಕವಾಗಿರುವಂತಹ ತೀರ್ಮಾನವನ್ನು ಕೈಗೊಂಡನು. ಅವನ ಸರ್ವ ಸಂಪತ್ತು, ಭವ್ಯ ಬಂಗಲೆಗಳು ಮತ್ತು ಅವನ ಖಜಾನೆಗಳ ಸಮೇತ ಅವನನ್ನು ಭೂಮಿಯಲ್ಲಿ ಹುದುಗಿಸಿ ಬಿಟ್ಟನು. ಅಲ್ಲಾಹನು ಹೀಗೆ ಹೇಳಿದನು.

ಕಾರೂನನ ದುರ್ಗತಿ

"ಕೊನೆಗೆ ನಾವು ಅವನನ್ನೂ ಅವನ ಮನೆಯನ್ನೂ ನೆಲದೊಳಕ್ಕೆ ಹುದುಗಿಸಿ ಬಿಟ್ಟೆವು. ಆಗ ಅಲ್ಲಾಹನಿಗೆದುರು ಅವನ ನೆರವಿಗೆ ಬರಲು ಅವನಿಗೆ ಯಾವ ಸಹಾಯಕ ತಂಡವೂ ಇರಲಿಲ್ಲ ಮತ್ತು ಸ್ವತಃ ತನಗೆ ಸಹಾಯ ಮಾಡಿಕೊಳ್ಳಲಿಕ್ಕೂ ಅವನಿಂದಾಗಲಿಲ್ಲ. ನಿನ್ನೆಯ ವರೆಗೆ ಅವನ ಸ್ಥಾನಮಾನಕ್ಕೆ ಆಶೆಪಡುತ್ತಿದ್ದವರು, 'ಅಯ್ಯೋ! ಅಲ್ಲಾಹನು ತನ್ನ ದಾಸರ ಪೈಕಿ ತಾನಿಚ್ಛಿಸಿದವರಿಗೆ ಜೀವನಾಧಾರವನ್ನು ಸಮೃದ್ಧವಾಗಿ ನೀಡುತ್ತಾನೆ ಮತ್ತು ತಾನಿಚ್ಛಿಸಿದವರಿಗೆ ಅದನ್ನು ಪರಿಮಿತವಾಗಿ ಕೊಡುತ್ತಾನೆಂಬುದನ್ನು ನಾವು ಮರೆತು ಬಿಟ್ಟಿದ್ದೆವು, ಅಲ್ಲಾಹನು ನಮ್ಮ ಮೇಲೆ ದಯೆ ತೋರದಿರುತ್ತಿದ್ದರೆ ನಮ್ಮನ್ನೂ ನೆಲದಲ್ಲಿ ಹುದುಗಿಸಿ ಬಿಡುತ್ತಿದ್ದನು, ಅಯ್ಯೋ! ಸತ್ಯನಿಷೇಧಿಗಳು ಯಶಸ್ವಿಯಾಗುವುದಿಲ್ಲವೆಂಬುದು ನಮಗೆ ಮರತೇ ಹೋಗಿತ್ತು' ಎಂದರು." (ಪವಿತ್ರ ಕುರ್‌ಆನ್, 28:81-82)

ಸಂದೇಶ ಪ್ರಚಾರದ ಹೊಸ ಸಂಘಟನೆ

ಮೂಸಾರ(ಅ) ದಾರಿಯ ದೊಡ್ಡದೊಂದು ಬಂಡೆ ಸರಿಯಿತು. ಸತ್ಯನಿಷೇಧದ ಸೇವೆಗಾಗಿ, ಆತ್ಮಸಾಕ್ಷಿಯ ಖರೀದಿಗಾಗಿ ತೆರೆದಿದ್ದ ಖಜಾನೆಗಳ ಪೈಕಿ ಒಂದು ಖಜಾನೆಯ

ದ್ವಾರ ಮುಚ್ಚಲ್ಪಟ್ಟಿತು. ಆದರೂ ಮೂಸಾರಿಗೆ ಪ್ರಚಾರ ಕಾರ್ಯವನ್ನು ಬಹಿರಂಗವಾಗಿ ಮಾಡುವುದು ಸುಲಭವಾಗಿರಲಿಲ್ಲ, ಫಿರ್‌ಔನೀಯರ ದೌರ್ಜನ್ಯದ ಇನ್ನೊಂದು ಯುಗವು ಪರಾಕಾಷ್ಠೆಯಲ್ಲಿತ್ತು. ಕೆಲವೇ ಮಂದಿ ಯುವಕರ ಹೊರತು ಈಮಾನಿನ ಪ್ರದರ್ಶನ ಮಾಡುವಷ್ಟು ಶಕ್ತಿ ಯಾರಲ್ಲೂ ಇರಲಿಲ್ಲ, ಅಲ್ಲದೆ ಫಿರ್‌ಔನನ ಕೊನೆಯ ಹಾಗೂ ನಿರ್ಣಾಯಕ ಹೋರಾಟದ ಘಳಿಗೆ ಹತ್ತಿರ ಬಂದಿತ್ತು. ಆದರೆ ಈ ಸಂದೇಶವನ್ನು ಪ್ರಬಲ ಶಕ್ತಿಯೊಂದಿಗೆ ಸಂಘಟಿಸುವುದು ಅಗತ್ಯವಾಗಿತ್ತು. ಆದ್ದರಿಂದ ಈ ನಿರ್ಣಾಯಕ ಘಟ್ಟದಲ್ಲಿ ಅಲ್ಲಾಹನು ಕೆಲವು ಮಹತ್ವಪೂರ್ಣ ಆದೇಶಗಳನ್ನು ಅವತೀರ್ಣಗೊಳಿಸಿದನು.

ಪ್ರಚಾರ ಕೇಂದ್ರಗಳ ಸ್ಥಾಪನೆ

"ನಾವು ಮೂಸಾ ಮತ್ತು ಅವರ ಸಹೋದರನಿಗೆ (ಈ ರೀತಿ) ಸೂಚನೆ ಕೊಟ್ಟೆವು, ಈಜಿಪ್ಟಿನಲ್ಲಿ ತಮ್ಮ ಜನಾಂಗದವರಿಗಾಗಿ ಕೆಲವು ನಿವೇಶನಗಳನ್ನು ಒದಗಿಸಿರಿ. ತಮ್ಮ ಆ ನಿವೇಶನಗಳನ್ನು ಅಭಿಮುಖಕೇಂದ್ರ(ಕಿಬ್ಲಾ)ವನ್ನಾಗಿ ಮಾಡಿಕೊಳ್ಳಿರಿ, ನಮಾಝುನ್ನು ಸಂಸ್ಥಾಪಿಸಿರಿ ಮತ್ತು ಸತ್ಯವಿಶ್ವಾಸಿಗಳಿಗೆ ಶುಭವಾರ್ತೆ ನೀಡಿರಿ." (ಪವಿತ್ರ ಕುರ್‌ಆನ್, 10:87)

ಈ ಸೂಕ್ತವನ್ನು ಕೆಲವು ವಿದ್ವಾಂಸರು ಬನೀ ಇಸ್ರಾಈಲರ ಪುನರ್ಸಂಘಟನೆಯ ಆದೇಶವೆಂದು ಬಣ್ಣಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ಬನೀ ಇಸ್ರಾಈಲರಲ್ಲಿ ಸಾಮೂಹಿಕ ನಮಾಝ್‌ನ ವ್ಯವಸ್ಥೆಯು ಅಳಿದು ಹೋಗಿತ್ತು. ಆದ್ದರಿಂದ ಅವರ ಕೆಲವು ಆಯ್ದ ಮನೆಗಳನ್ನು ಮಸೀದಿಗಳ ಬದಲಿಯಾಗಿ ಮಾಡಲಾಯಿತು. ಈ ರೀತಿ ಧರ್ಮದ ಮೂಲ ಬೇಡಿಕೆಯಾದ ಇಕಾಮತುಸ್ಸಲಾಃ(ನಮಾಝ್‌ನ ಸಂಸ್ಥಾಪನೆ)ವನ್ನು ಈಡೇರಿಸುವ ವ್ಯವಸ್ಥೆ ಮಾಡಲಾಯಿತು.

ಇನ್ನು ಕೆಲವು ವಿದ್ವಾಂಸರ ಪ್ರಕಾರ, ಹಿಂಸೆ-ದೌರ್ಜನ್ಯಗಳ ಆ ಕಾಲದಲ್ಲಿ ಆರಾಧನಾಲಯಗಳಲ್ಲಿ ಒಂದುಗೂಡುವುದು ಸಾಧ್ಯವಿರಲಿಲ್ಲ, ಆದ್ದರಿಂದ ಕೆಲವು ಆಯ್ದ ಸೂಚಿತ ಮನೆಗಳಲ್ಲಿ ಈ ಕರ್ತವ್ಯ(ನಮಾಝ್)ವನ್ನು ಈಡೇರಿಸುವ ಅನುಮತಿ ನೀಡಲಾಯಿತು.

ಈ ಎಲ್ಲ ವಿಷಯಗಳು ಸರಿಯಾಗಿರಲೂ ಬಹುದು. ಆದರೆ ನನ್ನ ದೃಷ್ಟಿಯಲ್ಲಿ, ಸತ್ಯಸಂದೇಶ ಪ್ರಚಾರದ ಒಂದು ಮಹತ್ವದ ತಿರುವಿನಲ್ಲಿ ಅದಕ್ಕೊಂದು ಹೊಸ ಮಾರ್ಗಸೂಚಿಯನ್ನು ತೋರಿಸಲಾಯಿತು. ಕೆಲಸದ ಸ್ವರೂಪ ಮತ್ತು ವಿಧಾನಗಳನ್ನು ಒಂದು ಹೊಸ ರೀತಿಯಲ್ಲಿ ಅಳವಡಿಸಲು ಆದೇಶಿಸಲಾಯಿತು. ಇದೊಂದು ಮಹತ್ವದ ಆದೇಶವಾಗಿದ್ದು, ಅದರಂತೆ ನಡೆಯುವುದರಿಂದ ಅತ್ಯಂತ ನಿರ್ಣಾಯಕ ಹಾಗೂ ಅತಿ ಅಪಾಯಕಾರಿ ಘಟ್ಟದಲ್ಲೂ ಸಂದೇಶ ಪ್ರಚಾರ ಕಾರ್ಯವನ್ನು ಸಂಘಟಿಸಿ ಮುನ್ನಡೆಸ ಬಹುದಾಗಿದೆ. ಎಂತಹ ಪ್ರತಿಕೂಲ ವಾತಾವರಣವಿರಲಿ, ಯಾವ ಶಕ್ತಿಗೂ ಈ ಸಂಘಟಿತ ವ್ಯವಸ್ಥೆಯನ್ನು ಮುರಿಯಲು ಸಾಧ್ಯವಿಲ್ಲ.

ಸಂದೇಶ ಪ್ರಚಾರ ಕಾರ್ಯವನ್ನು ಬಹಿರಂಗವಾಗಿ ಮಾಡಬಹುದೇ?

ಮೂಲಭೂತವಾಗಿ ಸತ್ಯಪ್ರಚಾರಕನು ತನ್ನ ಸಂದೇಶವನ್ನು ಬಹಿರಂಗವಾಗಿ ಮುಂದಿಡಬೇಕು. ಗರಿಷ್ಠ ಜನರಿಗೆ ಅದನ್ನು ತಲಪಿಸಬೇಕು. ಯಾವೆಲ್ಲ ಪ್ರಚಾರ ಮಾಧ್ಯಮಗಳಿವೆಯೋ ಅವೆಲ್ಲವನ್ನೂ ಈ ಕಾರ್ಯಕ್ಕಾಗಿ ಬಳಸಬೇಕು. ಅದೇರೀತಿ, ಪರಿಸ್ಥಿತಿಯು ಎಷ್ಟೇ ಅನುಕೂಲವಾಗಿರಲಿ ಅಥವಾ ಪ್ರತಿಕೂಲವಾಗಿರಲಿ, ಸುಗಮವಾಗಿರಲಿ ಅಥವಾ ಕಠಿಣವಾಗಿರಲಿ ರಂಗ ಬಿಟ್ಟು ಓಡುವುದಕ್ಕಿಂತ ಸ್ಥಿರವಾಗಿ ನಿಂತು ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಬೇಕು. ಇದೆಲ್ಲವೂ ಸರಿಯೇ.

ಸಂದೇಶ ಪ್ರಚಾರದ ವಿಶಿಷ್ಟ ಶೈಲಿ

ಆದರೆ ಒಬ್ಬ ಸತ್ಯ ಪ್ರಚಾರಕ ಮತ್ತು ನಾಯಕನ ವೈಯಕ್ತಿಕ ಪಾತ್ರ ಹಾಗೂ ಸಂದೇಶ ಪ್ರಚಾರದ ಆಂದೋಲನಕ್ಕಾಗಿ ಸಂಪನ್ಮೂಲಗಳನ್ನು ಬಳಸುವುದು ಎರಡೂ ವಿಭಿನ್ನ ವಿಷಯಗಳಾಗಿವೆ. ಒಬ್ಬ ಸತ್ಯ ಪ್ರಚಾರಕ ಮತ್ತು ನಾಯಕನಲ್ಲಿ ಕಠಿಣತಮ ಪರಿಸ್ಥಿತಿಯಲ್ಲೂ ತನ್ನ ಸಂದೇಶವನ್ನು ಮುಂದಿಡುವಷ್ಟು ಧೈರ್ಯ ಸ್ಥೈರ್ಯವಿಲ್ಲದಿದ್ದರೆ, ಅದಕ್ಕಾಗಿ ಕಲ್ಲಿನ ಪೆಟ್ಟು ಸಹಿಸುವ, ಮುಳ್ಳಿನ ರಾಶಿಯಲ್ಲಿ ನಡೆಯುವ, ತನ್ನ ಮೇಲೆ ಹೊಲಸಿನ ಮಳೆ ಬೀಳುವುದನ್ನು ಸಹಿಸುವ ಹಾಗೂ ಆರೋಪ-ಬೈಗುಳದ ಸುರಿಮಳೆಗೆರೆಯಲ್ಪಡುವಾಗಲೂ ವಿರೋಧಿಗಳಿಗಾಗಿ ಹಿತಚಿಂತನೆಯಿಂದ ಪ್ರಾರ್ಥಿಸುವಷ್ಟು ಮನೋವೈಶಾಲ್ಯ ಹೊಂದಿರದಿದ್ದರೆ ಅವನು ಈ ಕೆಲಸಕ್ಕೆ ಅರ್ಹನೇ ಅಲ್ಲ, ಆದ್ದರಿಂದ ಪದೇ ಪದೇ ವಿವಿಧ ರೀತಿಯಲ್ಲಿ ಹೇಳಲಾಗಿದೆ,

"ಸಂದೇಶವಾಹಕರೇ, ದೃಢಚಿತ್ತರಾಗಿದ್ದ ಸಂದೇಶವಾಹಕರು ತಾಳ್ಮೆ ವಹಿಸಿದಂತೆ ತಾಳ್ಮೆ ವಹಿಸಿರಿ." **(ಪವಿತ್ರ ಕುರ್‌ಆನ್, 46:35)**

ಆದರೆ ಸತ್ಯಪ್ರಚಾರಕರ ಮುಂದೆ ಪರ್ವತವೊಂದು ಅಡ್ಡವಾಗಿ ನಿಂತಿದ್ದು, ಮುಂದೆ ಸಾಗುವ ಎಲ್ಲ ದಾರಿಗಳೂ ಮುಚ್ಚಲ್ಪಟ್ಟಿರುವಾಗ ಆತ ಅಲ್ಲೇ ನಿಂತು ತಲೆಯನ್ನು ಪರ್ವತಕ್ಕೆ ಬಡಿಯುತ್ತಾ ತನ್ನನ್ನು ಕೊನೆಗೊಳಿಸಬೇಕೆಂದು ಇದರರ್ಥವಲ್ಲ, ಅವನ ಸಂದೇಶ ಪ್ರಚಾರದ ಬೇಡಿಕೆಯೇನೆಂದರೆ ಪರ್ವತ ಎದುರಿಗೆ ಬಂದು, ಅದನ್ನು ಸಾಗಲು ಸಾಧ್ಯವಾಗದಿದ್ದರೆ ಆ ಪರ್ವತಕ್ಕೆ ಸುರಂಗವನ್ನು ಕೊರೆದು ತನ್ನ ಮಾರ್ಗವನ್ನು ಕಂಡುಕೊಳ್ಳಬೇಕು ಮತ್ತು ಆ ಸಂಕಷ್ಟಗಳಿಂದ ಪಾರಾಗಬೇಕು. ಆದ್ದರಿಂದಲೇ ಪ್ರವಾದಿಯವರಿಗೆ(ಸ) ಈ ರೀತಿ ಆದೇಶಿಸಲಾಯಿತು,

"ನಿಮ್ಮ ಅತ್ಯಂತ ನಿಕಟ ಸಂಬಂಧಿಕರಿಗೆ ಎಚ್ಚರಿಕೆ ನೀಡಿರಿ."

(ಪವಿತ್ರ ಕುರ್‌ಆನ್, 26:214)

ಈ ಆದೇಶದ ಮೇರೆಗೆ ಪ್ರವಾದಿ(ಸ) ಮೂರು ವರ್ಷಗಳ ಕಾಲ ಬಹಳ ಗುಪ್ತವಾಗಿ ತಮ್ಮ ಹತ್ತಿರದ ಸಂಬಂಧಿಕರು ಮತ್ತು ಆಪ್ತ ಸ್ನೇಹಿತರಿಗೆ ಆಹ್ವಾನ ನೀಡತೊಡಗಿದರು. ಕೆಲವೊಮ್ಮೆ ಸತ್ಕಾರ ಕೂಟಗಳಲ್ಲಿ ಪ್ರವಾದಿ(ಸ) ಈ ವಿಷಯವನ್ನು ಪ್ರಸ್ತಾಪಿಸಿದರೆ, ಇನ್ನು ಕೆಲವೊಮ್ಮೆ ತಮ್ಮ ಗೆಳೆಯರ ಬಳಗದಲ್ಲಿ ತಿಳಿಸುತ್ತಿದ್ದರು. ಆ ಅವಧಿಯಲ್ಲಿ ಪ್ರವಾದಿಯವರ(ಸ) ಕರೆ ಕೇಳಿದ ವ್ಯಕ್ತಿಗಳು ಯಾರಾಗಿದ್ದರು? ಅವರ ಅತ್ಯಂತ ನಂಬುಗೆಯ ಆಪ್ತರಾದ ಪ್ರಿಯ ಪತ್ನಿ ಖದೀಜಾ(ರ), ಅವರ ಖಾಸಗಿ ಸೇವಕ ಝೈದ್(ರ), ಊರಲ್ಲೂ ಪ್ರಯಾಣದಲ್ಲೂ ಅವರ ಜತೆಗಾರ ಅಬೂಬಕರ್(ರ) ಹಾಗೂ ತಾನೇ ಸಾಕಿ ಬೆಳೆಸಿದ ಚಿಕ್ಕಪ್ಪನ ಪುತ್ರ ಅಲೀ(ರ). ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಅನುಕೂಲಕರವಾದಾಗ ಪ್ರವಾದಿಯವರಿಗೆ(ಸ) ಹೀಗೆ ಆಜ್ಞೆ ಬಂತು,

"ನಿಮಗೆ ಕೊಡಲಾಗುತ್ತಿರುವ ಆದೇಶಗಳನ್ನು ಘಂಟಾಘೋಷವಾಗಿ ಸಾರಿಬಿಡಿರಿ."

(ಪವಿತ್ರ ಕುರ್‌ಆನ್, 15:94)

ಅಷ್ಟೇ ಅಲ್ಲ, ಅವರ ಆಹ್ವಾನವು ಸಾರ್ವತ್ರಿಕ ಚರ್ಚೆಗೊಳಗಾಯಿತು. ಅರೇಬಿಯಾದ ಮೂಲೆ ಮೂಲೆಗೂ ಒಂದಲ್ಲ ಒಂದು ಹಂತದ ವರೆಗೆ ಈ ಸಂದೇಶವು ಪರಿಚಿತವಾಯಿತು. ಜೊತೆಗೇ ವಿರೋಧವೂ ಕಠೋರವಾಯಿತು. ಮಕ್ಕಾದ ಬರಡು ಭೂಮಿಯಲ್ಲಿ ಇನ್ನು ಕಾಲೂರುವುದು ದುಸ್ತರವೆಂದು ಮನವರಿಕೆಯಾದಾಗ ಪ್ರವಾದಿ(ಸ) ಮದೀನಾದಲ್ಲಿ ತಮಗೆ ಸಂಗಾತಿಗಳನ್ನು ಹುಡುಕಿದರು. ಈ ಕಾರ್ಯವನ್ನು ಪ್ರವಾದಿ(ಸ) ಹೇಗೆ ಮಾಡಿದರು? ಸಾರ್ವಜನಿಕ ಸಭೆ ನಡೆಸಿ ತನ್ನ ಕೇಂದ್ರ ಸ್ಥಾನ ಬದಲಾಗಿದೆಯೆಂದು ಡಂಗುರ ಸಾರಿದರೇ? ಅಥವಾ ಮೆರವಣಿಗೆಗಳ ಮೂಲಕ ತಮ್ಮ ನಿಯೋಗಗಳನ್ನು ಕಳಿಸಿದರೆ? ಹಾಗೇನೂ ಇಲ್ಲ, ಎರಡು ವರ್ಷಗಳ ತನಕ ಮದೀನಾದಿಂದ ಕೆಲವು ವಿಶ್ವಾಸಾರ್ಹ ವ್ಯಕ್ತಿಗಳು ಬಹಳ ಗುಪ್ತವಾಗಿ ಬಂದರು. ಪ್ರಥಮ ಮತ್ತು ದ್ವಿತೀಯ ಒಡಂಬಡಿಕೆಗಳು ನಡೆದುವು. ಈ ಗುಪ್ತ ಕಾರ್ಯಾಚರಣೆ ನಡೆಯುತ್ತಿರುವಾಗ ಅತ್ತ ವಿಶ್ವಾಸಿಗಳನ್ನು ಫಿರ್‌ಔನನಂತೆ ಮೂಸಿ ನಡೆಯುತ್ತಾ ಇದ್ದ ಮಕ್ಕಾದವರಿಗೆ ಇದರ ಒಂದಿಷ್ಟು ಸುಳಿವೂ ಸಿಗಲಿಲ್ಲ. ಕೊನೆಗೆ ಅವರು ರಾತ್ರೋರಾತ್ರಿ ಅಂಧಕಾರದಲ್ಲಿ ಮದೀನಕ್ಕೆ ಹಿಜ್ರಃ ಮಾಡಿದರು. ಮಕ್ಕಾ ಮುಶ್ರಿಕರು ಪ್ರವಾದಿವರ್ಯರನ್ನು(ಸ) ಕೊಲ್ಲಲಿಕ್ಕಾಗಿ ಬಾಗಿಲಲ್ಲಿ ಕಾದು ನಿಂತದ್ದೇ ಬಂತು.

ಇಲ್ಲಿ ಮೂಸಾರಿಗೆ(ಅ) ತಮ್ಮ ಸಂದೇಶ ಪ್ರಚಾರ ಚಟುವಟಿಕೆಗಳನ್ನು ಯೋಜನಾಬದ್ಧವಾಗಿ ನೆರವೇರಿಸಬೇಕಾಗಿತ್ತು. ಆದರೆ ಅದು ಬಹಿರಂಗವಾಗಿ ಸಾಧ್ಯವಿರಲಿಲ್ಲ, ಆದುದರಿಂದ ವಿವಿಧ ಸಂಘಟಿತ ವ್ಯವಸ್ಥೆಗಳನ್ನು ಸ್ಥಾಪಿಸಿರಿ ಎಂದು ಆಜ್ಞಾಪಿಸಲಾಯಿತು. ಇಕಾಮತುಸ್ವಲಾತ್ ಅಥವಾ ನಮಾಝ್‌ನ ಸಂಸ್ಥಾಪನೆಯು ಇಸ್ಲಾಮೀ ವ್ಯವಸ್ಥೆಯ ಕಿರೀಟವಾಗಿರುವುದರಿಂದ ಅದನ್ನೇ ಸ್ಥಾಪಿಸಲು ಆಜ್ಞಾಪಿಸಲಾಯಿತು. ಉಳಿದ ವಿಷಯಗಳೆಲ್ಲ ತನ್ನಿಂತಾನೇ ಅದರಲ್ಲಿ ಸೇರಿಕೊಳ್ಳುತ್ತವೆ.

ಈಜಿಪ್ಟ್‌ನಲ್ಲಿ ಫಿರ್‌ಔನೀಯರ ಹಿಂಸೆ ದೌರ್ಜನ್ಯಗಳಿಂದಾಗಿ ಸಂದೇಶ ಪ್ರಚಾರ ಕಾರ್ಯವನ್ನು ವಿಸ್ತರಿಸುವುದು ಸಾಧ್ಯವಿರಲಿಲ್ಲ. ಒಂದು ಹೊಸ ಸ್ಥಳಕ್ಕೆ ಹಿಜ್ರತ್ ಮಾಡುವ ಕಾಲವೂ ಹತ್ತಿರ ಬಂದಿತ್ತು. ಆದ್ದರಿಂದ ಈ ಆಂದೋಲನದ ಜನರನ್ನು ಸಂಘಟಿತವಾಗಿ ಪರಸ್ಪರ ಬಂಧಿಸಿಡಲಿಕ್ಕಾಗಿ ಮತ್ತು ನಿರ್ದೇಶನಗಳು ತಲುಪುವುದರಲ್ಲಿ ವಿಳಂಬವಾಗದಿರಲು ಗ್ರಾಮ ಗ್ರಾಮಗಳಲ್ಲಿ ಅವರು ಕೇಂದ್ರಗಳನ್ನು ಸ್ಥಾಪಿಸಲು ಆದೇಶಿಸಿದರೆ, ಇನ್ನೊಂದೆಡೆ ಆಂದೋಲನದ ಜನರು ಫಿರ್‌ಔನನ ಹಿಂಸೆ-ದೌರ್ಜನ್ಯದಲ್ಲಿ ಸಿಲುಕಿ ಬಿಡದಂತಾಗಲು ಅತ್ಯಂತ ಗುಪ್ತವಾಗಿ ಹಾಗೂ ಮಿಂಚಿನಂತಹ ವ್ಯವಸ್ಥೆ ಮಾಡಲಾಯಿತು. ಅದರ ಪರಿಣಾಮವಾಗಿಯೇ ಹಿಜ್ರತ್‌ನ ಆಜ್ಞೆ ನೀಡಿದ್ದೇ ತಡ, ಇಡೀ ಈಜಿಪ್ಟ್‌ನಿಂದ ರಾತೋರಾತ್ರಿ ಲಕ್ಷಗಟ್ಟಲೆ ಜನರು ಒಂದೆಡೆ ಸೇರಿ ಹೊರಟು ಬಿಟ್ಟರು. ಇತ್ತ ಫಿರ್‌ಔನನಿಗೆ ಎಲ್ಲ ಬೇಹುಗಾರಿಕಾ ವ್ಯವಸ್ಥೆಯಿದ್ದೂ ಇದರ ಸುಳಿವು ಕೂಡಾ ಸಿಗದೆ ಹೋಯಿತು.

❖ ❖ ❖

ಫಿರ್‌ಔನನಿಗೆ ಮೂಸಾರ(ಅ) ಕೊನೆಯ ಎಚ್ಚರಿಕೆ

ಇನ್ನು ಈ ದೇಶದಲ್ಲಿ ಇಸ್ಲಾಮಿನ ಸಂದೇಶ ವ್ಯಾಪಕಗೊಳ್ಳುವುದು ಸಾಧ್ಯವಿಲ್ಲ ವೆಂಬುದು ಮೂಸಾರಿಗೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಒಂದೆಡೆ ಫಿರ್‌ಔನನು ಇಡೀ ದೇಶದ ಜನತೆಯನ್ನು ಜನಾಂಗವಾದದ ಮದಿರೆ ಕುಡಿಸಿ ಪ್ರಮತ್ತರನ್ನಾಗಿ ಮಾಡಿದ್ದನು. ಯಾವುದೇ ಮಾತನ್ನು ಅದು ಎಷ್ಟೇ ಸತ್ಯವಾಗಿರಲಿ, ಮೂಸಾ(ಅ) ಮಂಡಿಸುತ್ತಿದ್ದಾರೆಂಬ ಏಕೈಕ ಕಾರಣಕ್ಕಾಗಿ ಅವರು ತಿರಸ್ಕರಿಸುತ್ತಿದ್ದರೆ, ಇನ್ನೊಂದೆಡೆ ಫಿರ್‌ಔನನ ದಬ್ಬಾಳಿಕೆ ಮತ್ತು ಭಯಾನಕ ಹಿಂಸೆಯ ಗಾಣಕ್ಕೆ ದೊಡ್ಡ ದೊಡ್ಡ ವೀರಾಧಿವೀರರೂ ಕೂಡಾ ಆತ್ಮಸ್ಥೈರ್ಯ ಕಳಕೊಳ್ಳುತ್ತಿದ್ದರು. ಕಿಬ್ತೀ ಜನಾಂಗವು ಮೊದಲೇ ಜನಾಂಗವಾದದ ನಶೆಯಲ್ಲಿ ಮುಳುಗಿದ್ದರೆ, ಅಳಿದುಳಿದ ಸಜ್ಜನರು ಕೂಡಾ ವಿಶ್ವಾಸವನ್ನು ಘೋಷಿಸುವ ಧೈರ್ಯ ತೋರುತ್ತಿರಲಿಲ್ಲ, ಬನೀ ಇಸ್ರಾಈಲರಲ್ಲೇ ಒಂದು ದೊಡ್ಡ ಸಂಖ್ಯೆಯು ಮೂಸಾರನ್ನು ಬಹಿರಂಗವಾಗಿ ಬೆಂಬಲಿಸುವ ಸ್ಥಿತಿಯಲ್ಲಿರಲಿಲ್ಲ. ಎಲ್ಲ ಪ್ರವಾದಿಗಳಂತೆ ಮೂಸಾರಿಗೂ ಪ್ರವಾದಿತ್ವದ ದೂರದೃಷ್ಟಿಯಲ್ಲಿ, ಇನ್ನೇನು ಹಿಜ್ರತಿನ ಆಜ್ಞೆ ಬಂದೇ ಬಿಟ್ಟಿತೆಂದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಹಿಜ್ರತ್ (ದೇಶತ್ಯಾಗ- ವಲಸೆ)ಗಿಂತ ಮುಂಚೆ ಇನ್ನೊಮ್ಮೆ ಕೊನೆಯದಾಗಿ, ಹೊಣೆಗಾರಿಕೆಯನ್ನು ಈಡೇರಿಸಬೇಕೆಂದು ಅವರು ತೀರ್ಮಾನಿಸಿದರು. ಆದ್ದರಿಂದ ಅವರು ಒಂದು ದಿನ ಫಿರ್‌ಔನನ ಆಸ್ಥಾನಕ್ಕೆ ಹೋಗಿ ಅವನಿಗೆ ಈ ರೀತಿ ಮನವರಿಕೆ ಮಾಡಿದರು,

"ಅಲ್ಲಾಹನ ವಿರುದ್ಧ ವಿದ್ರೋಹವೆಸಗಬೇಡಿ. ನಾನು (ನನ್ನ ಪ್ರವಾದಿತ್ವದ ಬಗ್ಗೆ) ಸುಸ್ಪಷ್ಟ ಪುರಾವೆಯನ್ನು ನಿಮ್ಮ ಮುಂದಿಡುತ್ತೇನೆ. ನೀವು ನನ್ನ ಮೇಲೆ ಹಲ್ಲೆ ನಡೆಸುವುದರ ಬಗ್ಗೆ ನಾನು ನನ್ನ ಮತ್ತು ನಿಮ್ಮ ಪ್ರಭುವಿನ ಅಭಯ ಪಡೆದಿರುತ್ತೇನೆ. ನೀವು ನನ್ನ ಮಾತು ಕೇಳದಿದ್ದರೆ ನನ್ನ ಮೇಲೆ ಕೈ ಮಾಡುವುದರಿಂದ ದೂರವಿರಿ."

(ಪವಿತ್ರ ಕುರ್‌ಆನ್, 44:19-21)

ಅಂದರೆ ನನ್ನನ್ನು ವಿರೋಧಿಸುವುದರಲ್ಲಿ ನೀನು ಹಠ ತೋರಿಸುತ್ತಿರುವೆಯಾದರೆ ನೋಡು, ಚೆನ್ನಾಗಿ ತಿಳಿದಿರು. ನಾನು ನನ್ನ ಪ್ರವಾದಿತ್ವದ ಸಂಕೇತಗಳನ್ನು ನಿನಗೆ ತೋರಿಸಿ

ಬಿಟ್ಟಿದ್ದೇನೆ. ಇಷ್ಟು ದೀರ್ಘ ಅವಧಿಯಲ್ಲಿ ನನ್ನ ಸತ್ಯತೆಯನ್ನು ನೀನು ಮನಗಂಡಿರುವಿ. ಇನ್ನೂ ನೀನು ನಿನ್ನ ವಿದ್ವೇಷವನ್ನೇ ಮುಂದುವರಿಸುವೆಯಾದರೆ ಅದು ನನ್ನ ವಿರುದ್ಧವಲ್ಲ, ಅಲ್ಲಾಹನ ವಿರುದ್ಧವಾಗಿದೆ. ಏಕೆಂದರೆ ನಾನು ಕೇವಲ ಅವನ ದೂತನಾಗಿದ್ದೇನೆ. ನಾನು ಮಂಡಿಸುವ ವಾದಗಳು ಆತನದ್ದೇ ದಿವ್ಯವಾಣಿ ಮತ್ತು ಮಾರ್ಗದರ್ಶನದಂತೆ ಆಗಿವೆ.

ನೀನು ನನ್ನನ್ನು ಕೊಲ್ಲುವ ತೀರ್ಮಾನ ಮಾಡಿರುವೆ. ನಾನು ನಿನಗೆ ಎಚ್ಚರಿಕೆ ನೀಡುತ್ತಿದ್ದೇನೆ. ನೀನು ಈ ಮೂರ್ಖತನಕ್ಕೆ ಕೈಹಾಕಬಾರದು. ನನಗಂತೂ ನನ್ನ ಪ್ರಭುವಿನ ವತಿಯಿಂದ ನಿನ್ನ ಎಲ್ಲ ಕಿರುಕುಳಗಳಿಂದ ಮೊದಲೇ ಅಭಯ ಸಿಕ್ಕಿರುತ್ತದೆ. ನೀನು ನನ್ನ ಕೂದಲನ್ನೂ ಕೊಂಕಿಸಲಾರೆ. ಆದರೆ ನಿನ್ನ ಈ ಕಾರ್ಯಾಚರಣೆಯು ನಿನ್ನನ್ನೇ ಬಲಿ ತೆಗೆದೀತು. ನಿನಗಿಂತ ಮುಂಚಿನವರಿಗೆ ಬಂದಂತಹ ದುರ್ಗತಿಯು ಶೀಘ್ರದಲ್ಲೇ ನಿನಗೂ ಬಂದೀತು.

ಮೂಸಾರ ಈ ಎಚ್ಚರಿಕೆಯು ಹಿಂದಿನಂತೆಯೇ ಅರಣ್ಯರೋದನವಾಯಿತು. ಆದರೆ ಸತ್ಯದ ಪ್ರತಾಪದಿಂದಾಗಿ ಫಿರ್‌ಔನೀಯರು ಅವರ ಮೇಲೆ ಕೈಮಾಡಲು ಹಿಂಜರಿದರಾದರೂ ತಮ್ಮ ದುಷ್ಕೃತ್ಯಗಳಿಂದ ದೂರ ಸರಿಯಲಿಲ್ಲ.

❖ ❖ ❖

ಹಿಜ್ರತ್

ದೇವಸನ್ನಿಧಿಯಲ್ಲಿ ಮೂಸಾರ(ಅ) ಅಳಲು

ಮೂಸಾರಿಗೆ ಇನ್ನು ಈ ಜನಾಂಗದಲ್ಲಿ ಯಾವೊಂದು ಒಳಿತೂ ಉಳಿದಿಲ್ಲ, ಅದು ಹೊಲಸಿನಲ್ಲಿ ಚೆನ್ನಾಗಿ ತೊಯ್ದು ಹೋಗಿದೆಯೆಂಬುದು ಖಾತ್ರಿಯಾದಾಗ ದೇವಸನ್ನಿಧಿಯಲ್ಲಿ ಅವರು ಈ ರೀತಿ ತನ್ನ ಅಳಲನ್ನು ತೋಡಿಕೊಂಡರು,

"ಕೊನೆಗೆ ಅವರು ತಮ್ಮ ಪ್ರಭುವನ್ನು ಕೂಗಿ, 'ಇವರೊಂದು ಅಪರಾಧಿ ಜನಾಂಗ ವಾಗಿದ್ದಾರೆ' ಎಂದರು." (ಪವಿತ್ರ ಕುರ್‌ಆನ್, 44:22)

ಹಿಜ್ರತ್‌ನ ಆಜ್ಞೆ

ದೇವ ವತಿಯಿಂದ ಹೀಗೆ ಉತ್ತರ ಬಂತು:

"(ಅದಕ್ಕೆ ಉತ್ತರವಾಗಿ ಹೀಗೆ ಹೇಳಲಾಯಿತು) ಹಾಗಿದ್ದರೆ ನೀವು ರಾತೋರಾತ್ರಿ ನನ್ನ ದಾಸರನ್ನು ಕರೆದುಕೊಂಡು ಹೋಗಿಬಿಡಿರಿ. ನಿಮ್ಮನ್ನು ಬೆನ್ನಟ್ಟಲಾಗುವುದು-"

(ಪವಿತ್ರ ಕುರ್‌ಆನ್, 44:23)

ಈಗ ಫಿರ್‌ಔನ್ ಮತ್ತು ಮೂಸಾರ ಸಂಘರ್ಷವು ಪರಾಕಾಷ್ಠೆಗೆ ತಲಪಿತ್ತು. ಫಿರ್‌ಔನೀಯರ ದಬ್ಬಾಳಿಕೆಯೂ ಅದರ ತುತ್ತತುದಿಗೆ ತಲಪಿತ್ತು. ವಿಶ್ವಾಸಿಗಳಿಗೆ ತಮ್ಮ ವಿಶ್ವಾಸ(ಈಮಾನ್)ವನ್ನು ರಕ್ಷಿಸುವುದು ಸಾಧ್ಯವಿರಲಿಲ್ಲ. ಅವರ ಮುಂದೆ ಈಗ ಎರಡೇ ಮಾರ್ಗಗಳಿದ್ದುವು. ನೇಣುಗಂಬ ಅಥವಾ ವಿಶ್ವಾಸವನ್ನು ಕೈ ಬಿಡುವುದು. ಈಗ ಅವರಿಗೆ ಯಾವುದೇ ಅಭಯ ಸ್ಥಾನವಾಗಲಿ, ಶಾಂತಿಗೇಹವಾಗಲಿ ಇರಲಿಲ್ಲ. ಇಂತಹ ಸಂದರ್ಭ ಗಳಲ್ಲಿ ಅಲ್ಲಾಹನ ಪ್ರೀತಿ ಮತ್ತು ಕರುಣೆಯು ತನ್ನ ದಾಸರ ಮೇಲೆ ಅವರ ಸಾಮರ್ಥ್ಯಕ್ಕಿಂತ ಅಧಿಕ ಹೊರೆ ಹೊರಿಸುವುದನ್ನು ಸಹಿಸುವುದಿಲ್ಲ. ಆದ್ದರಿಂದ ಅಲ್ಲಾಹನ ಕ್ರಮದಂತೆ ಮೂಸಾರಿಗೆ ಹಿಜ್ರತ್‌ನ ಆಜ್ಞೆ ನೀಡಲಾಯಿತು. ಈ ಆಜ್ಞೆ ಮತ್ತು ಅದರ ವಿವರಗಳು ಕುರ್‌ಆನಿನ ಅನೇಕ ಕಡೆಗಳಲ್ಲಿ ಪ್ರಸ್ತಾಪಿಸಲಾಗಿದೆ.

"ನನ್ನ ದಾಸರನ್ನು ಕರೆದುಕೊಂಡು ರಾತೋರಾತ್ರಿ ಹೊರಟು ಹೋಗಿರಿ. ನಿಮ್ಮನ್ನು ಬೆನ್ನಟ್ಟಲಾಗುವುದು ಎಂದು ನಾವು ಮೂಸಾರಿಗೆ 'ದಿವ್ಯಬೋಧನೆ' ಕಳುಹಿಸಿದೆವು."

(ಪವಿತ್ರ ಕುರ್‌ಆನ್, 26:52)

"ನಾವು ಮೂಸಾರಿಗೆ ಈ 'ದಿವ್ಯವಾಣಿ' ಮಾಡಿದೆವು- ನೀವಿನ್ನು ರಾತೋರಾತ್ರಿ ನನ್ನ ದಾಸರನ್ನು ಕರೆದುಕೊಂಡು ಹೊರಟು ಹೋಗಿ ಬಿಡಿರಿ." (ಪವಿತ್ರ ಕುರ್‌ಆನ್, 20:77)

ಈ ಆಜ್ಞೆಯಿಂದ ಅಲ್ಲಾಹನ ಹಿರಿದಾದ ಜಾಣ್ಮೆ ಅನಾವರಣಗೊಳ್ಳುತ್ತದೆ. ಸತ್ಯ-ಅಸತ್ಯಗಳ ಸಂಘರ್ಷದಲ್ಲಿ, ಸತ್ಯವು ಒಂಟಿಯೂ ದುರ್ಬಲವೂ ಆಗಿರುವಾಗ ಮತ್ತು ಅಸತ್ಯವು ಅಧಿಕಾರದಲ್ಲಿ ಪೂರ್ಣ ಶಸ್ತ್ರಸಜ್ಜಿತವಾಗಿರುವಾಗ ಸತ್ಯದ ವಾಹಕರು ಮಿಥ್ಯದ ವಿರುದ್ಧ ಸೆಟೆದು ನಿಲ್ಲಬೇಕು ಮತ್ತು ಸತ್ಯದ ಸಂದೇಶವನ್ನು ಉನ್ನತಗೊಳಿಸಬೇಕು. ಅಸತ್ಯದ ಪ್ರಾಬಲ್ಯ, ದಬ್ಬಾಳಿಕೆ ಮತ್ತು ಹಿಂಸೆ-ದೌರ್ಜನ್ಯಗಳಿಗೆ ಹೆದರಿ ತಮ್ಮ ಹೊಣೆಗಾರಿಕೆ, ಉದ್ದೇಶ ಮತ್ತು ಧ್ಯೇಯವನ್ನು ಕೈಬಿಡಬಾರದು ಎಂಬುದು ಅಲ್ಲಾಹನ ಇಂಗಿತವಾಗಿರುವುದಂತೂ ಸರಿ. ಆದರೆ ಸತ್ಯದ ವಾಹಕರು ಕಿವುಡರು ಮತ್ತು ಕುರುಡರಂತೆ ಎದ್ದು ಗೋಡೆಗೆ ತಲೆ ಬಡಿದು ಸಾಯಬೇಕೆಂಬುದು ಖಂಡಿತ ಅವನ ಇಂಗಿತವಲ್ಲ. ಬದಲಾಗಿ, ಅವರು ಯುಕ್ತಿ ಜ್ಞಾನಿಗಳಂತೆ ಆ ಮಿಥ್ಯಗೋಡೆಯಲ್ಲಿ ಬೆರಳು ತುರುಕಿಸಲು ಎಲ್ಲಿ ಸ್ವಲ್ಪ ಸ್ಥಳಾವಕಾಶ ಸಿಗುತ್ತದೆ ಮತ್ತು ಸತ್ಯದ ವಾಹಕರಿಗೆ ಮುಂದೆ ಸಾಗಲು ಎಲ್ಲಿ ದಾರಿ ಸಿಗುತ್ತದೆ ಎಂಬುದನ್ನು ನೋಡಬೇಕು. ಇನ್ನು, ಅಂತಹ ಸಾಧ್ಯತೆ ಆಗ ಇಲ್ಲವೆಂದಾದರೆ ಅದೇ ಗೋಡೆಗೆ ತಲೆಯನ್ನು ಬಡಿದು ಸಾಯುವುದರ ಬದಲು ಅಲ್ಲಾಹನ ಭೂಮಿಯಲ್ಲಿ ಅನುಕೂಲಕರ ವಾತಾವರಣ ಸಿಗಬಲ್ಲಂತಹ ಸ್ಥಳವನ್ನು ಹುಡುಕಬೇಕು. ಹಾಗೆಯೇ ಸತ್ಯದ ಸಂದೇಶವು ಬೆಳೆಯುವ ಸಾಧ್ಯತೆಯಿಲ್ಲದೆ ಹೋದಾಗ ಅಲ್ಲಾಹನು ತನ್ನ ದಾಸರಿಗೆ ಹಿಜ್ರತ್ ಮಾಡುವ ಆಜ್ಞೆ ನೀಡುತ್ತಾನೆ.

ವಿಶ್ವಾಸಿಗಳನ್ನು ಫಿರ್‌ಔನನ ಕಪಿಮುಷ್ಟಿಯಿಂದ ರಕ್ಷಿಸಲು, ಸತ್ಯಸಂದೇಶವನ್ನು ಇತರ ಭಾಗಗಳಿಗೆ ಪರಿಚಯಿಸಲು ಮತ್ತು ಫಿರ್‌ಔನೀಯರ ಅಧಿಕಾರದ ಶವಪೆಟ್ಟಿಗೆಗೆ ಕೊನೆಯ ಮೊಳೆ ಹೊಡೆಯಲು ಅಲ್ಲಾಹನು ಮೂಸಾರಿಗೆ ಈ ರೀತಿ ಆದೇಶಿಸುತ್ತಾನೆ, ಇನ್ನು ಈ ದುರ್ದೈವಿ ನಾಡಿನಿಂದ ಹೊರ ನಡೆಯಿರಿ. ಹೋಗುವಾಗ ವಿಶ್ವಾಸಿಗಳನ್ನೂ ಜೊತೆಗೊಯ್ಯಿರಿ.

ಇಲ್ಲಿ ಒಂದು ವಿಷಯ ಗಮನಾರ್ಹವಾಗಿದೆ. ಅಲ್ಲಾಹನು 'ಹಾಡುಹಗಲಲ್ಲೇ ಹೊರಡಿರಿ' ಎಂದು ಹೇಳಲಿಲ್ಲ, ಬದಲಾಗಿ 'ರಾತೋರಾತ್ರಿ ನನ್ನ ದಾಸರನ್ನು ತೆಗೆದುಕೊಂಡು ಹೊರಡಿರಿ' ಎಂದು ಹೇಳುತ್ತಾನೆ. ಅಂದರೆ ಕೇವಲ ಹೊರಡುವುದು ಉದ್ದೇಶವಾಗಿರಲಿಲ್ಲ, ಬದಲಾಗಿ ಸತ್ಯವಿಶ್ವಾಸಿಗಳನ್ನು ರಕ್ಷಿಸಿ ಜೊತೆಗೊಯ್ಯುವುದೂ ಆಗಿತ್ತು. ಆದ್ದರಿಂದ ಜಾಗರೂಕತೆಯ ಮಾರ್ಗವನ್ನು ತೋರಿಸಿದನು. ಜೊತೆಗೆ ಸೂಚ್ಯವಾಗಿ, ವಿಶ್ವಾಸಿಗಳ ನೇತೃತ್ವವು ಬುದ್ಧಿಹೀನರು, ತಿಳಿಗೇಡಿಗಳು ಮತ್ತು ಮೂರ್ಖರ ಕೈಯಲ್ಲಿರಬಾರದು. ಅದು ಅತ್ಯಂತ ಚತುರ, ಜಾಣ, ಬುದ್ಧಿವಂತರು ಹಾಗೂ ಪರಿಸ್ಥಿತಿಯ ಏರಿಳಿತಗಳನ್ನು ಚೆನ್ನಾಗಿ ಬಲ್ಲ ಹಾಗೂ ಈ ಕಾರವಾನವನ್ನು ಸುರಕ್ಷಿತವಾಗಿ ಗುರಿ ತಲಪಿಸಬಲ್ಲಂತಹವರ ಕೈಯಲ್ಲಿರ ಬೇಕೆಂದೂ ತಿಳಿಸಿದನು. ಕೆಲಸ ಮಾಡುವಾಗ ಒಂದು ದಾರಿ ಮುಚ್ಚಿದರೆ ಇನ್ನೊಂದು

ದಾರಿಯನ್ನು ಹುಡುಕಬೇಕು. ಒಂದು ವಿಧಾನದಿಂದ ಕೆಲಸವು ಸುಗಮವಾಗಿ ನಡೆಯುವುದಿಲ್ಲವೆಂದಾದರೆ ಇನ್ನೊಂದು ವಿಧಾನವನ್ನನುಸರಿಸಬೇಕು ಎಂದೂ ತಿಳಿಸಿ ಫಿರ್‌ಔನನ ಈ ನಾಡಿನಿಂದ ನೀವು ಸುಲಭದಲ್ಲಿ ಪಾರಾಗಬಲ್ಲಿರೆಂದು ಭಾವಿಸಬೇಡಿ. ಅವರು ನಿಮ್ಮನ್ನು ಬೆಂಬತ್ತಿ ಬರುವರು. ನಿಮ್ಮನ್ನು ಸಂಪೂರ್ಣವಾಗಿ ಅಳಿಸಿ ಹಾಕಲು ಕೊನೆಯ ಕ್ಷಣದ ವರೆಗೂ ಪ್ರಯತ್ನ ಮುಂದುವರಿಸುವರು ಎಂದು ಮುಂದೆ ಬರಲಿರುವ ಅಪಾಯದ ಕುರಿತೂ ಎಚ್ಚರಿಕೆ ನೀಡಿದನು.

ಮೂಸಾರ(ಅ) ರಕ್ಷಣೋಪಾಯಗಳು

ಮೂಸಾರು(ಅ) ಅಲ್ಲಾಹನ ಮಾರ್ಗದರ್ಶನದಂತೆ ಸಾಧ್ಯವಿರುವ ಎಲ್ಲ ಜಾಗರೂಕತೆಯನ್ನು ಪಾಲಿಸಿದರು. ಈ ಮೊದಲೇ ಸ್ಥಾಪಿಸಲಾಗಿದ್ದ ತನ್ನ ಸಂಘಟನಾ ಕೇಂದ್ರಗಳನ್ನು (Cells) ಸಂಪೂರ್ಣವಾಗಿ ಬಳಸಿದರು. ಸಂದೇಶ ರವಾನೆಗೆ ಎಂತಹ ಗುಪ್ತ ಹಾಗೂ ವೇಗದ ವ್ಯವಸ್ಥೆ ಮಾಡಿದರೆಂದರೆ ಕೇವಲ ಒಂದೇ ಸೂಚನೆಗೆ ದೇಶದಾದ್ಯಂತದಿಂದ ಇಡೀ ಜನಾಂಗವೇ ಹರಿದು ಬಂತು. ರಾತ್ರಿಯ ಅಂಧಕಾರದಲ್ಲಿ ಸದ್ದಿಲ್ಲದೆ ಪ್ರಯಾಣ ಹೊರಟಿತು. ಫಿರ್‌ಔನ್ ತನ್ನೆಲ್ಲ ವ್ಯವಸ್ಥೆಗಳ ಹೊರತಾಗಿಯೂ ಪೆಚ್ಚಾಗಿ ಕುಳಿತು ಬಿಟ್ಟ.

ಆದರೆ ಈ ಎಲ್ಲ ಮುಂಜಾಗ್ರತಾ ಕ್ರಮಗಳ ಹೊರತಾಗಿಯೂ ಈ ದೇಶತ್ಯಾಗದ ವಾಸನೆ ಹೇಗೋ ಫಿರ್‌ಔನನ ಮೂಗಿಗೆ ಬಡಿದೇ ಬಿಟ್ಟಿತು. ಒಂದು ದೇಶದಿಂದ ಲಕ್ಷ ಗಟ್ಟಳೆ ಜನರು ಒಂದೇ ಸಮಯದಲ್ಲಿ ಹೊರಡುವುದು ರಹಸ್ಯವಾಗಿ ಉಳಿಯುವುದಾದರೂ ಹೇಗೆ?

ಫಿರ್‌ಔನನ ಗುಪ್ತ ಕಾರ್ಯಪಡೆ ಮತ್ತು ಅವನ ಸ್ವಜನಾಂಗ ಹಾಗೂ ಅವನ ಆಸ್ಥಾನದ ಚೇಲಾಗಳು ಇನ್ನೇತಕ್ಕೆ? ಅವರು ಕೂಡಲೇ ಸುದ್ದಿ ತಲಪಿಸಿದರು, ಪ್ರಭೂ! ಮಿಕಗಳು ಕೈತಪ್ಪಿ ಹೋಗುತ್ತಿವೆ. ಏನಾದರೂ ವ್ಯವಸ್ಥೆ ಮಾಡಿರಿ. ಫಿರ್‌ಔನ್ ತಪ್ಪಿ ಬೀಳುವುದು ಸಾಧ್ಯವೇ? ಕೂಡಲೇ ಎಲ್ಲ ಸರಕಾರಿ ಯಂತ್ರಗಳೂ ಸಜ್ಜುಗೊಂಡವು.

ಫಿರ್‌ಔನೀಯರ ರಕ್ಷಣಾ ವ್ಯವಸ್ಥೆಗಳು

"ಆಗ ಫಿರ್‌ಔನನು (ಸೇನೆಗಳನ್ನು ಸಜ್ಜುಗೊಳಿಸಲಿಕ್ಕಾಗಿ) ರಾಜಘೋಷಕರನ್ನು ನಗರಗಳಿಗೆ (ಹೀಗೆ ಹೇಳಿ) ಕಳುಹಿಸಿದನು- ಇವರು ಕೇವಲ ಬೆರಳೆಣಿಕೆಯಲ್ಲಿದ್ದಾರೆ- ಮತ್ತು ಇವರು ನನ್ನನ್ನು ಬಹಳ ಕುಪಿತಗೊಳಿಸಿದ್ದಾರೆ- ನಾವು ಸದಾ ಜಾಗೃತರಾಗಿರುವಂತಹ ಸಮೂಹವಾಗಿದ್ದೇವೆ." (ಪವಿತ್ರ ಕುರ್‌ಆನ್, 26:53-56)

ಫಿರ್‌ಔನ್ ಈ ಬೆಳೆಯುತ್ತಿರುವ ಹೊಸ ಧರ್ಮವನ್ನು ದಮನಿಸಲು ಮತ್ತು ಅಳಿಸಿ ಹಾಕಲು ಎಷ್ಟೋ ಅಸ್ತ್ರಗಳನ್ನು ಪ್ರಯೋಗಿಸಿ ಆಗಿತ್ತು. ಅದರ ಮಹಾ ನಾಯಕನನ್ನು ಕೊಲೆ ಮಾಡಲೂ ತೀರ್ಮಾನಿಸಿದ್ದನು. ಹಾಗಿರುವಾಗ ಉಳಿದವರ ಪಾಡೇನು? ಅವರಿಗೆ 'ದುರ್ಗತಿ ಕಾಣಿಸಲು' ಎಷ್ಟೆಲ್ಲಾ ಯೋಜನೆಗಳನ್ನು ಸಿದ್ಧಪಡಿಸಿರಬಹುದು. ಆದರೆ ಹಠಾತ್ತನೆ

ಮೂಸಾರವರ(ಅ) ಜನಾಂಗದ ಈ ದೇಶತ್ಯಾಗದ ಸುದ್ದಿ ಕೇಳಿ ಕೈ ಕೈ ಹಿಚುಕಿಕೊಂಡ. ಈ ನಮ್ಮ ಅಧಿಕಾರ ವಲಯದಿಂದಲೇ ಹೊರಹೋಗುವಷ್ಟು ಧೈರ್ಯವೇ? ವಿಷಯ ಇಷ್ಟಕ್ಕೇ ಕೊನೆ ಗೊಳ್ಳುವುದಿಲ್ಲ, ಓರ್ವ ನಿರಂಕುಶ ಆಡಳಿತಗಾರ ಎಷ್ಟೇ ಕ್ರೂರಿ, ಅಕ್ರಮಿ, ಮರ್ದಕ ಹಾಗೂ ಪ್ರತಾಪವಂತನಾಗಿರಲಿ, ಅಷ್ಟೇ ಅವನು ಹೇಡಿಯೂ ಕೀಳರಿಮೆಗೊಳಗಾದವನೂ ಆಗಿರುತ್ತಾನೆ. ನೂರು ಬಗೆಯ ಆಲೋಚನೆಗಳು ಅವನ ಮನಸ್ಸಿನಲ್ಲಿ ಸುಳಿದಾಡಿರ ಬಹುದು. ಈ ಬೆರಳೆಣಿಕೆಯ ಒಂದು ಸಂಘವನ್ನು ನನ್ನೆಲ್ಲ ಶಕ್ತಿ ಸಾಮರ್ಥ್ಯ ಹಾಗೂ ಆಡಳಿತದ ಪ್ರಾಬಲ್ಯದ ಹೊರತಾಗಿಯೂ ನನಗೆ ದಮನಿಸಲಾಗದಿರುವಾಗ ಇನ್ನು ಹೊರಗೆ ಹೋಗಿ ಎಂತಹ ಅನಾಹುತವುಂಟು ಮಾಡೀತೋ? ಆದ್ದರಿಂದ ಸೇನೆಯನ್ನು ಸಜ್ಜು ಗೊಳಿಸಲು ಆಜ್ಞೆ ಹೊರಡಿಸಿದ. "ನಾವು ಸದಾ ಜಾಗೃತರಾಗಿರುವಂತಹ ಒಂದು ಕೂಟ ವಾಗಿದ್ದೇವೆ" ಎಂಬ ಅದರ ಒಕ್ಕಣೆಯು ಅವನ ಆತಂಕಗಳನ್ನು ಪೂರ್ಣವಾಗಿ ಪ್ರತಿಬಿಂಬಿಸುತ್ತದೆ. ಈ ಘೋಷಣೆಯಲ್ಲಿ ಫಿರ್‌ಔನನ ಚಾರಿತ್ರ್ಯದ ಇನ್ನೊಂದು ಮುಖ ಗೋಚರಿಸುತ್ತದೆ. ಅವನು ಕನಿಷ್ಠ ಇಂದಿನ ಆಡಳಿತಗಾರರಿಗಿಂತ ಹೆಚ್ಚು ಸತ್ಯಪ್ರಿಯನೂ ನೇರ ನುಡಿಯವನೂ ಆಗಿದ್ದ. ಇವರು ಸಾಮ್ರಾಟನನ್ನು ಕುಪಿತಗೊಳಿಸಿದ್ದಾರೆ. ಆದ್ದರಿಂದ ಅವರ ಬೆನ್ನು ಹತ್ತಿದ್ದೇನೆಂದು ಸ್ಪಷ್ಟವಾಗಿ ಸಾರಿಬಿಟ್ಟ. ಇಂದಿನ ಕಪಟ ಆಡಳಿತಗಾರರು ಯಾರನ್ನಾದರೂ ಕೊಲ್ಲುವುದಾದರೂ ಔದಾರ್ಯ ಮತ್ತು ಸಂತೋಷದಿಂದ ಕೊಲ್ಲುತ್ತಾರೆ. 'Ispleased' ಎಂದು ಬರೆಯುತ್ತಾರೆ. ಅವನ ಕೋಪವು ಮೃತ್ಯುವಿನ ರೂಪದಲ್ಲಿ ಬರುತ್ತ ದಾದರೆ ಇವರ ಸಂತೋಷವು ಮರಣದ ಪರವಾನಿಗೆಯೊಂದಿಗೆ ಬರುತ್ತದೆ. ಆದರಿಂದಲೇ ಅವರ ನೀತಿ-ಚಾರಿತ್ರ್ಯಗಳನ್ನು ಅಳೆಯಬಹುದು.

ಇದೀಗ ಈ 'ಅಪಾಯ'ವನ್ನೆದುರಿಸುವ ಕೊನೆಯ ಅವಕಾಶವಾಗಿದೆ. ಆದ್ದರಿಂದ ಅದನ್ನು ಸಂಪೂರ್ಣ ನಾಶಪಡಿಸಬೇಕೆಂದು ಭಾವಿಸಿ ಫಿರ್‌ಔನನು ತನ್ನ ಎಲ್ಲ ಸಂಪನ್ಮೂಲ ಗಳನ್ನು ಒಂದುಗೂಡಿಸಿದನು. ಸತ್ಯದ ಪ್ರತಾಪವನ್ನು ನೋಡಿರಿ. 'ಇದು ಬೆರಳೆಣಿಕೆಯ ಸಂಘ'ವೆಂದು ಸ್ವಯಂ ಒಪ್ಪಿಕೊಳ್ಳುತ್ತಾನೆ. ಅದನ್ನು ಎದುರಿಸಲಿಕ್ಕಾಗಿ ಇಡೀ ದೇಶದ ಎಲ್ಲ ಅಧಿಕಾರಿಗಳನ್ನು ಕರೆಸಲಾಗುತ್ತದೆ. ಸೈನ್ಯವನ್ನು ಸಜ್ಜುಗೊಳಿಸಲಾಗುತ್ತದೆ. ಎಲ್ಲ ಕಾಲದ ಧರ್ಮವಿರೋಧಿಗಳನ್ನು ಬಾಧಿಸುವ 'ಸತ್ಯದ ಪ್ರತಾಪ' ಇದುವೇ ಆಗಿದೆ. ಎಲ್ಲ ಕಾಲ ಗಳಲ್ಲೂ ಕೆಲವೇ ಮಂದಿ ವಿಶ್ವಾಸಿಗಳ ಕಿರು ಸಂಘವನ್ನು 'ಅಪಾಯಕಾರಿ'ಗಳೆಂದು ಭಾವಿಸಿ, ಅವರನ್ನು ಮಟ್ಟ ಹಾಕಲು ಸೈನ್ಯಕ್ಕೆ ಸೈನ್ಯವನ್ನೇ ಸಿದ್ಧಪಡಿಸಲಾಗುತ್ತದೆ. ಸತ್ಯದ ವಾಹಕರನ್ನು ಪೀಡಿಸದಂತೆ ಇಂತಹ 'ವಿಷ ಜಂತು'ಗಳನ್ನು ತಡೆದಿರಿಸುವುದು ಇದೇ ಸತ್ಯದ ಪ್ರತಾಪ ವಾಗಿದೆ. ಫಿರ್‌ಔನನು ಮೂಸಾ(ಅ) ಮತ್ತವರ ಸಂಗಾತಿಗಳನ್ನು ಇನ್ನೆಂದೂ ತಲೆಯೆತ್ತ ದಂತೆ ನಾಶ ಪಡಿಸಲಿಕ್ಕಾಗಿ ಎಲ್ಲ ಏರ್ಪಾಡುಗಳನ್ನು ಮಾಡುತ್ತಾನೆ. ಆದರೆ ಲೋಕದಲ್ಲಿ ಎಲ್ಲ ವಿಷಯಗಳೂ ಅಧಿಕಾರ ಬಲದಿಂದ ಇತ್ಯರ್ಥವಾಗ ತೊಡಗಿದರೆ ಅಲ್ಲಾಹನ ಈ

ಭೂಮಿಯಲ್ಲಿ ದುರ್ಬಲ ಜೀವಿಗಳು ಉಳಿಯುವುದೇ ಸಾಧ್ಯವಿಲ್ಲ. ಫಿರ್‌ಔನನು ತನ್ನ ದೃಷ್ಟಿಯಲ್ಲಿ ಅತಿದೊಡ್ಡ ಉಪಾಯವೆಂದು ಭಾವಿಸಿದುದನ್ನು ಅಲ್ಲಾಹನ ವಿಧಿಯು ಬೇರೆಯೇ ಉದ್ದೇಶಕ್ಕಾಗಿ ಬಳಸಲು ಬಯಸಿತ್ತು. ಮೂಸಾ(ಅ) ಮತ್ತು ಸಂಗಾತಿಗಳನ್ನು ಕೊನೆಗಾಣಿಸಲಿಕ್ಕಾಗಿ ಸಜ್ಜುಗೊಂಡ ದಂಡು ಸ್ವತಃ ಫಿರ್‌ಔನನ ಅಧಿಕಾರದ ಶವಪೆಟ್ಟಿಗೆಯನ್ನು ಸಾಗಿಸಲು ಸಿದ್ಧವಾಗುತ್ತಿತ್ತು. ಎಂತಹ ಅದ್ಭುತ ವಾಸ್ತವಿಕತೆಯನ್ನು ಆ ಸರ್ವಜ್ಞನು ಹೇಳಿದನು,

"ಈ ರೀತಿಯಲ್ಲಿ ನಾವು ಅವರನ್ನು ಅವರ ಉದ್ಯಾನಗಳಿಂದಲೂ ಚಿಲುಮೆಗಳಿಂದಲೂ- ಖಜಾನೆಗಳಿಂದಲೂ ಅತ್ಯುತ್ತಮ ನಿವಾಸಗಳಿಂದಲೂ ಹೊರ ತಂದೆವು- ಇದು ಅವರ ಮೇಲೆ ಗತಿಸಿದುದಾಯಿತು. (ಇನ್ನೊಂದು ಕಡೆ) ಬನೀಇಸ್ರಾಈಲರನ್ನು ನಾವು ಇವೆಲ್ಲವುಗಳ ಉತ್ತರಾಧಿಕಾರಿಗಳಾಗಿ ಮಾಡಿದೆವು." (ಪವಿತ್ರ ಕುರ್‌ಆನ್, 26:57-59)

ಕೇವಲ ಭೌತಿಕ ಸಾಧನಾನುಕೂಲತೆಗಳನ್ನು ಮಾತ್ರ ನೋಡಬಲ್ಲ ಒಬ್ಬನ ಬಾಹ್ಯ ದೃಷ್ಟಿಗೆ, ದೇಶದಾದ್ಯಂತದಿಂದ ಸೇನೆಗಳು ಬಂದು ಸೇರುವುದು, ಯುವ ರಾಜರು ಮತ್ತು ಸೇನಾಧಿಪತಿಗಳು ಒಟ್ಟಾಗುವುದು ಮತ್ತು ಎಲ್ಲ ಸಂಪನ್ಮೂಲಗಳನ್ನು ಅದಕ್ಕಾಗಿ ಬಳಸುವುದರ ಅರ್ಥವೇನಾಗುತ್ತದೆಂದರೆ ಇದಿರು ಪಕ್ಷ ಅರ್ಥಾತ್ ಮೂಸಾ(ಅ) ಮತ್ತವರ ಬರಿಗೈಯ ಹಾಗೂ ಅಸಹಾಯಕ ಸಂಗಾತಿಗಳ ನಾಶ ಖಂಡಿತವೆಂದಾಗುತ್ತಿತ್ತು. ಇನ್ನೇನು ಈ ಸಂಘಟನೆಯ ಅಸ್ತಿತ್ವವು ಕೇವಲ ಕೆಲವೇ ಕ್ಷಣದ ಅತಿಥಿಯಾಗಿದ್ದು, ಅದು ತುಳಿಯಲ್ಪಡಲು ಮತ್ತು ದಮನಿಸಲ್ಪಡಲು ಏನೂ ವಿಳಂಬವಾಗದೆಂದು ಮಾತ್ರ ಅವನು ಯೋಚಿಸಬಲ್ಲ.

ಆದರೆ ಅಲ್ಲಾಹನ ಯುಕ್ತಿಯನ್ನು ನೋಡಿರಿ. ಅವನು ಇಡೀ ದೇಶದ ಮೂಲೆ ಮೂಲೆಗಳಿಂದಲೂ ಎಲ್ಲ ಕಿಡಿಗೇಡಿಗಳನ್ನೂ- ಅವರಲ್ಲಿ ಪ್ರತಿಯೊಬ್ಬನೂ ತನ್ನಷ್ಟಕ್ಕೆ ಒಬ್ಬ ಫಿರ್‌ಔನನಾಗಿದ್ದ- ಒಂದೆಡೆ ಸೇರಿಸಿದನು. ಅವರ ಪೈಕಿ ಒಬ್ಬನಾದರೂ ಉಳಿದಿದ್ದರೆ ಫಿರ್‌ಔನ ನಂತೂ ಅಳಿದು ಹೋಗುತ್ತಿದ್ದ, ಆದರೆ ಫಿರ್‌ಔನೀಯತೆ ಉಳಿಯುವ ಸಾಧ್ಯತೆಯಿತ್ತು. ಅವರೆಲ್ಲರನ್ನೂ ಅವರ ಅರಮನೆಗಳಿಂದಲೂ ಮನೆಗಳಿಂದಲೂ ಹೊರತಂದು ಅವರ ದುರ್ಗತಿಯು ಅವರನ್ನು ಕಾಯುತ್ತಿದ್ದ ಮಾರ್ಗದಲ್ಲಿ ಹಾಕಿ ಬಿಟ್ಟನು. ಅವರೆಲ್ಲರೂ "ಇನ್ನು ಹಿಡಿದೆವು, ಕೊಚ್ಚಿ ಹಾಕಿದೆವು" ಎಂಬ ಭ್ರಮೆಯಲ್ಲಿ ಸಿಲುಕಿದರು. ಇನ್ನು ಈ 'ಅಪಾಯ'ವನ್ನು ಶಾಶ್ವತವಾಗಿ ಕೊನೆಗೊಳಿಸುತ್ತೇವೆ ಎಂಬ ಭ್ರಮೆಯಲ್ಲಿ ಮುಳುಗಿದ್ದರು.

ಮೂಸಾರನ್ನು(ಅ) ಬೆಂಬತ್ತಲಾಯಿತು

"ಬೆಳಗಾಗುತ್ತಲೇ ಇವರು, ಅವರನ್ನು ಬೆನ್ನಟ್ಟಿ ಹೋದರು. ಎರಡು ಸಮೂಹಗಳು ಎದುರಾದಾಗ ಮೂಸಾರ ಸಂಗಾತಿಗಳು, 'ನಾವು ಸಿಕ್ಕಿ ಬಿದ್ದೆವು' ಎಂದು ಕೂಗಿದರು." (ಪವಿತ್ರ ಕುರ್‌ಆನ್, 26:60-61)

ಮೂಸಾ(ಅ) ಮತ್ತವರ ಸಂಗಾತಿಗಳಾದ ಈ ಸತ್ಯದ ವಾಹಕರು ಅತ್ಯಂತ ನಿರ್ಣಾಯಕ ಪರಿಸ್ಥಿತಿಯಲ್ಲಿದ್ದರು. ಅವರ ಅಸಹಾಯಕ ಪರಿಸ್ಥಿತಿ ನೋಡತಕ್ಕದ್ದೇ. ಹಿಂದಿನಿಂದ ಫಿರ್‌ಔನನ

ಮಹಾ ಸೈನ್ಯ ಎಲ್ಲ ರೀತಿಯ ಆಯುಧಪಾಣಿಗಳಾಗಿ, ಶಸ್ತ್ರಾಸ್ತ್ರ ಸಜ್ಜಿತರಾಗಿ ಎಲ್ಲ ಸಾಧನಾನುಕೂಲತೆಗಳೊಂದಿಗೆ ಬೆಂಬತ್ತಿ ಬಂದು ಮುಟ್ಟಿದೆ. ಮುಂದೆ ಮಹಾ ಸಮುದ್ರ. ಅದರ ಪ್ರತಿಯೊಂದು ಅಲೆಯೂ ಸಾವಿರಾರು ಜನರನ್ನು ನುಂಗಲು ಸಿದ್ಧವಾಗಿದೆ. ಪಾರಾಗೋಣವೆಂದರೆ ನಾವೆಯಾಗಲಿ, ದೋಣಿಯಾಗಲಿ ಇಲ್ಲ, ಒಂದೆಡೆ ಹೊಳೆಯುತ್ತಿರುವ, ಫಳಫಳ ಮಿನುಗುತ್ತಿರುವ ಖಡ್ಗಗಳು. ಇನ್ನೊಂದೆಡೆ ಸಾಮೂಹಿಕವಾಗಿ ಮುಳುಗಿ ಸಾಯುವುದು. ವಿಚಿತ್ರವಾದ ಉಭಯ ಸಂಕಟ! ಈ ಸಂದರ್ಭದಲ್ಲಿ ದೊಡ್ಡ ದೊಡ್ಡ ವೀರಾಧಿವೀರರ ಕರುಳು ಬಾಯಿಗೆ ಬಂದಂತಾಗಿದೆ. ಮರಣವನ್ನು ಭೇಟಿಯಾಗುವ ಮತ್ತು ಮರಣವನ್ನು ಎದುರಿಸುವ ಬೊಗಳೆ ಬಿಡುವುದು ಸುಲಭ. ಆದರೆ ಮರಣವು ತಲೆಯ ಮೇಲೆ ತೂಗುತ್ತಿರುವಾಗ ಮತ್ತು ಅದು ಕಣ್ಣ ಮುಂದೆ ಕಾಣುತ್ತಿರುವಾಗ ಸ್ಥಿರವಾದರಾಗಿ ನಿಲ್ಲುವುದು ಎಲ್ಲರಿಂದ ಸಾಧ್ಯವಿಲ್ಲದ ಮಾತು. ಹಾಗೆ ವರ್ಷಾನುಗಟ್ಟಳೆಯಿಂದ ಸಂಕಷ್ಟಗಳ ಸುಳಿಯಲ್ಲಿದ್ದ ಮೂಸಾರ ಸಂಗಾತಿಗಳು ಈ ಪರಿಸ್ಥಿತಿಯನ್ನು ಕಂಡು ಚೀರಿದರು.

ಬನೀ ಇಸ್ರಾಈಲರ ಆರ್ತನಾದ

"ನಾವಂತೂ ಹಿಡಿಯಲ್ಪಟ್ಟೆವು."

ಆ ಸಂದರ್ಭದಲ್ಲಿ ಅವರು ಎಂತಹ ಆರ್ತನಾದ ಮೊಳಗಿಸಿದರೂ ಅದು ಕಡಿಮೆಯೇ. ಇದು ಫಿರ್‌ಔನನು ಮೂಸಾರ(ಅ) ಮೇಲೆ ವಿಶ್ವಾಸ ತಂದಿದ್ದವರ ಮೇಲೆ ಎಸಗುತ್ತಿದ್ದ ದೌರ್ಜನ್ಯಗಳ ವೇಳೆ ಮಾಡುತ್ತಿದ್ದ ಆರ್ತನಾದವೇ ಆಗಿತ್ತು. ಅವರು ಅದಾಗಲೇ ಹೇಳುತ್ತಿದ್ದರು,

"ಅವರ ಜನಾಂಗದವರು ಹೇಳಿದರು: ನೀವು ಬರುವುದಕ್ಕೆ ಮುಂಚೆಯೂ ನಾವು ಸತಾಯಿಸಲ್ಪಡುತ್ತಿದ್ದೆವು. ಈಗ ನೀವು ಬಂದ ಬಳಿಕವೂ ಸತಾಯಿಸಲ್ಪಡುತ್ತಿದ್ದೇವೆ."

(ಪವಿತ್ರ ಕುರ್‌ಆನ್, 7:129)

ಈಗಂತೂ ತಲೆಯ ಮೇಲೆ ಮರಣವೇ ಸುಳಿದಾಡುತ್ತಿದೆ. ಇಂತಹ ನಿರ್ಣಾಯಕ ಸಂದರ್ಭದಲ್ಲಿ ಪ್ರವಾದಿತ್ವದ ದೃಢಚಿತ್ತತೆ ಮುಂದೆ ಬರುತ್ತದೆ. ಅಲ್ಲಾಹನ ವಾಗ್ದಾನಗಳ ಸತ್ಯತೆಯ ಮೇಲೆ ಅವರ ಸಂಪೂರ್ಣ ಭರವಸೆಯ ಪ್ರಕಟನೆಯು ಲೋಕಾಂತ್ಯದ ವರೆಗೂ ಸಜ್ಜನ ವಿಶ್ವಾಸಿಗಳಿಗೆ ಸಹನೆ, ಸ್ಥೈರ್ಯ ಮತ್ತು ಅಲ್ಲಾಹನ ಮೇಲೆ ಅಚಲ ನಂಬಿಕೆಯ ಪಾಠವನ್ನು ನೀಡುತ್ತಲೇ ಇರುವುದು. ಮೂಸಾ(ಅ) ಈ ನಿರ್ಣಾಯಕ ಘಳಿಗೆಯಲ್ಲೂ ಗಾಬರಿಗೊಳ್ಳಲಿಲ್ಲ, ಆರ್ತನಾದ ಹಾಕಲಿಲ್ಲ, ಕ್ಷಣಮಾತ್ರಕ್ಕೂ ನಿರಾಶರಾಗಲಿಲ್ಲ, ಬದಲಾಗಿ ಅಂತ್ಯದಿನದ ವರೆಗಿನ ಸಜ್ಜನ ವಿಶ್ವಾಸಿಗಳ ಮನಸ್ಸಿಗೆ ಸಾಂತ್ವನ ನೀಡಬಲ್ಲ ರೀತಿಯಲ್ಲಿ ಅಲ್ಲಾಹನ ಮೇಲೂ ಅವನ ವಾಗ್ದಾನಗಳ ಮೇಲೂ ಪೂರ್ಣ ಭರವಸೆಯನ್ನು ಪ್ರದರ್ಶಿಸಿದರು.

ಮೂಸಾರ(ಅ) ಸ್ಥಿರಚಿತ್ತತೆ

"ಆಗ ಮೂಸಾ, ಖಂಡಿತ ಇಲ್ಲ, ನನ್ನ ಸಂಗಡ ನನ್ನ ಪ್ರಭು ಇದ್ದಾನೆ. ಅವನು ಖಂಡಿತವಾಗಿಯೂ ನನಗೆ ದಾರಿ ತೋರುವವನು ಎಂದರು." (ಪವಿತ್ರ ಕುರ್‌ಆನ್, 26:62)

ವಾಸ್ತವದಲ್ಲಿ ಅಲ್ಲಾಹನ ಈ ಭೂಮಿಯಲ್ಲಿ ಪ್ರವಾದಿಗಳಿಗಿಂತ ಹೆಚ್ಚು ಸ್ಥಿರಚಿತ್ತತೆ ಮತ್ತು ಧೈರ್ಯ-ಸ್ಥೈರ್ಯ ಪ್ರದರ್ಶಿಸುವವರು ಇನ್ನಾರಿದ್ದಾರೆ? ಪ್ರವಾದಿಗಳ ಬದುಕನ್ನು ಮುಂದಿಟ್ಟು ನೋಡಿದರೆ ಜೀವನದ ಕಠಿಣತಮ ಘಳಿಗೆಯಲ್ಲೂ ಮಾನವ ನಿರಾಶರಾಗಲಾರ.

ಅಲ್ಲಾಹನ ವಾಗ್ದಾನದಂತೆ, ಪ್ರವಾದಿಯ ದೂರದೃಷ್ಟಿಯು ನೋಡುತ್ತಿದ್ದ ಆತನ ಸಹಾಯ ಬಂದೇ ಬಿಟ್ಟಿತು. ಮೂಸಾ(ಅ) ಮತ್ತವರ ಸಂಗಾತಿಗಳಿಗೆ ಮೋಕ್ಷ ದೊರಕುವ ಮತ್ತು ಫಿರ್‌ಔನ್ ಮತ್ತವರ ಸೈನ್ಯ ಸಂಪೂರ್ಣ ನಾಶವಾಗಿ ಹೋಗುವ ಮೂಲಕ ಆತನ ಸಹಾಯ ಬಂತು.

ಅಲ್ಲಾಹನ ಮಾರ್ಗದರ್ಶನ

"ನಾವು ಮೂಸಾರಿಗೆ 'ದಿವ್ಯವಾಣಿ' ಮೂಲಕ, 'ನಿಮ್ಮ ಲಾಠಿಯನ್ನು ಸಮುದ್ರಕ್ಕೆ ಹೊಡೆಯಿರಿ' ಎಂದು ಅಪ್ಪಣೆ ಕೊಟ್ಟೆವು. ಹಠಾತ್ತನೆ ಸಮುದ್ರ ಸೀಳಾಯಿತು ಮತ್ತು ಅದರ ಪ್ರತಿಯೊಂದು ಭಾಗವು ಒಂದು ಮಹಾ ಪರ್ವತದಂತಾಗಿ ಬಿಟ್ಟಿತು."

(ಪವಿತ್ರ ಕುರ್‌ಆನ್, 26:63)

ಮೂಸಾ(ಅ) ಸಮುದ್ರ ಕಿನಾರೆಯಲ್ಲಿ ನಿಂತು, ತನಗೆ ಹುಟ್ಟಿದಂದಿನಿಂದ ಈ ವರೆಗೆ ಹೆಜ್ಜೆ ಹೆಜ್ಜೆಗೂ ಅವರ ಮೇಲ್ನೋಟ ವಹಿಸುತ್ತಿದ್ದ ಅಲ್ಲಾಹನ ಸಹಾಯವನ್ನು ನಿರೀಕ್ಷಿಸು ತ್ತಿದ್ದರು. ಈಗ ಪರೋಕ್ಷ ಸಹಾಯ ಹೇಗೆ ಬರಬಹುದೆಂದು ಆಲೋಚಿಸುತ್ತಿರಬಹುದು. ಅಷ್ಟರಲ್ಲೇ ಹಠಾತ್ತನೆ ಬಂತು ದಿವ್ಯ ಮಾರ್ಗದರ್ಶನ. "ಹೊಡೆಯಿರಿ ನಿಮ್ಮ ಲಾಠಿಯನ್ನು, ನೋಡಿ, ಈಗ ದಾರಿ ತೆರೆದುಕೊಳ್ಳುತ್ತದೆ." ಹಾಗೆಯೇ ಅವರು ಆಜ್ಞೆಯನ್ನು ಪಾಲಿಸಿ ಲಾಠಿಯನ್ನು ಸಮುದ್ರಕ್ಕೆ ಹೊಡೆದದ್ದೇ ತಡ, ಸಮುದ್ರ ಒಡೆದು ಎರಡೂ ಬದಿಯಲ್ಲಿ ನಿಂತಿತು. ಮಧ್ಯದಲ್ಲಿ ಮೂಸಾ ಮತ್ತು ಅವರ ಕಾರವಾನಕ್ಕೆ ಸುರಕ್ಷಿತವಾಗಿ ಸಾಗಬಲ್ಲಂತಹ ದೊಡ್ಡ ದಾರಿಯುಂಟಾಯಿತು.

ಆದರೆ ಅಲ್ಲಾಹನ ಕರುಣೆಯು ಅಷ್ಟಕ್ಕೇ ನಿಲ್ಲಲಿಲ್ಲ. ಕಾರವಾನಕ್ಕೆ ಸಾಗಲು ಕೇವಲ ರಸ್ತೆಯುಂಟಾದರೆ ಸಾಕಾಗಿರಲಿಲ್ಲ, ಅದು ಒಣಗುವುದೂ ಅಗತ್ಯವಾಗಿತ್ತು. ಒಣಗದೆ ಹಾಗೆಯೇ ಕೆಸರು ತುಂಬಿದ ದಾರಿಯಾಗಿರುತ್ತಿದ್ದರೆ ಸಾಗುವವರು ಅದರಲ್ಲಿ ಸಿಲುಕಿ ಬೀಳುತ್ತಿದ್ದರು. ಆದ್ದರಿಂದ ಅಲ್ಲಾಹನು ಕೇವಲ ದಾರಿ ತೆರೆದು ಕೊಟ್ಟದ್ದಲ್ಲ, ಅದನ್ನು ಒಣಗಿಸಿಯೂ ಕೊಟ್ಟನು.

ಸಮುದ್ರ ಹೋಳಾಯಿತು

"ನಾವು ಮೂಸಾರಿಗೆ ಈ 'ದಿವ್ಯವಾಣಿ' ಮಾಡಿದೆವು- ನೀವಿನ್ನು ರಾತೋರಾತ್ರಿ ನನ್ನ ದಾಸರನ್ನು ಕರೆದುಕೊಂಡು ಹೊರಟು ಹೋಗಿ ಬಿಡಿರಿ. ಅವರಿಗೆ ಸಮುದ್ರದಲ್ಲಿ ಶುಷ್ಕ ಮಾರ್ಗವೊಂದನ್ನು ಮಾಡಿಕೊಳ್ಳಿರಿ. ಯಾರಾದರೂ ಹಿಂಬಾಲಿಸಿ ಬರುವರೆಂಬ ಭಯ ನಿಮಗೆ ಕಿಂಚಿತ್ತೂ ಬೇಡ ಮತ್ತು (ಸಮುದ್ರದ ನಡುವಿನಿಂದ ಹಾದು ಹೋಗುವಾಗ) ಹೆದರಲೂ ಬೇಡಿರಿ." (ಪವಿತ್ರ ಕುರ್‌ಆನ್, 20:77)

ಅಲ್ಲಾಹನು ಒಣಗಿದ ದಾರಿಯನ್ನು ಮಾಡಿಕೊಟ್ಟಿರುವುದು ಮಾತ್ರವಲ್ಲ, ಅವರಿಗೆ ಸಾಂತ್ವನವನ್ನೂ ನೀಡಿದನು. "ಹೆದರದಿರಿ. ಫಿರ್‌ಔನ್ ನಿಮ್ಮನ್ನು ಹಿಡಿಯಲಾರನು. ಮಾತ್ರವಲ್ಲ, ನೀವೆಲ್ಲ ಸಾಗಿ ಪಾರಾಗುವ ವರೆಗೆ ಸಮುದ್ರ ನೀರೂ ಬಂದು ಸೇರದು. ಅಷ್ಟೇ ಅಲ್ಲ, ನಿಮ್ಮ ವೈರಿಯೂ ನಿಮ್ಮನ್ನು ಹಿಡಿಯಲಾರನು. ಅವನು ಇಲ್ಲೇ ಮುಳುಗಿ ಸಾಯುವನು ಎಂಬ ಸುವಾರ್ತೆಯನ್ನೂ ನೀಡಿದನು.

"ಸಮುದ್ರವನ್ನು ಅದರ ಪಾಡಿಗೆ ತೆರೆದೇ ಇಡಲು ಬಿಡಿರಿ. ಈ ಸೇನೆಯು ಸಂಪೂರ್ಣ ಮುಳುಗಿ ಹೋಗುವುದು." (ಪವಿತ್ರ ಕುರ್‌ಆನ್, 44:24)

ಒಂದು ಕ್ಷಣ ಮುಂಚೆ ಸಾವಿರಾರು ಮಂದಿಯನ್ನು ನುಂಗಲು ಸಿದ್ಧವಾಗಿ ನಿಂತಿದ್ದ ಆದೇ ಸಮುದ್ರವು ಮೂಸಾ(ಅ) ಮತ್ತವರ ಸಂಗಾತಿಗಳಿಗೆ ಒಣ ರಸ್ತೆಯಾಗಿ ಪರಿಣಮಿಸಿತು. ಅವರೆಲ್ಲರನ್ನೂ ಸುರಕ್ಷಿತವಾಗಿ ಆಚೆ ದಡಕ್ಕೆ ಸೇರಿಸಿತು.

ಆದರೆ ಮಹಾಶಕ್ತಿವಂತನಾದ ಅಲ್ಲಾಹನಿಗೆ ಕೇವಲ ವಿಶ್ವಾಸಿಗಳ ಕೂಟವನ್ನು ರಕ್ಷಿಸುವುದು ಮಾತ್ರ ಬೇಕಾಗಿರಲಿಲ್ಲ, ಅಲ್ಲಾಹನತ್ತ ಕರೆಯುವುದನ್ನು ತಡೆಯುವ ದುಷ್ಟ ನಿರಂಕುಶ ಶಕ್ತಿಗಳಿಗೆ ಎಂತಹ ದುರ್ಗತಿಯುಂಟಾಗುತ್ತದೆಂಬುದನ್ನು ತೋರಿಸಬೇಕಾಗಿತ್ತು. ತಮ್ಮ ಅಧಿಕಾರ ಬಲ ಮತ್ತು ಪ್ರತಾಪದ ಮದದಿಂದ ಸತ್ಯದ ಕರೆಯನ್ನು ಅಣಗಿಸಲು ಹೊರಟವರು ಹೇಗೆ ನಿಂದ್ಯರಾಗುತ್ತಾರೆ. ತಮ್ಮ ಅಧಿಕಾರ ಬಲದಿಂದ ಈ ಕರೆಯನ್ನು ಅಳಿಸಿ ಹಾಕಬಯಸುವವರು ಸ್ವಯಂ ಹೇಗೆ ನಾಶವಾಗಿ ಹೋಗುತ್ತಾರೆಂಬ ಪಾಠವನ್ನು ಕಲಿಸಬೇಕಾಗಿತ್ತು.

ಫಿರ್‌ಔನ್ ಸಮುದ್ರಕ್ಕೆ ನುಗ್ಗಿದ

ಸಮುದ್ರ ಇಬ್ಭಾಗವಾಗಿ ಮೂಸಾ(ಅ) ಮತ್ತು ಸಂಗಾತಿಗಳು ಪಾರಾಗಿ ಕೈತಪ್ಪಿ ಹೋಗುವುದನ್ನು ಕಂಡಾಗ ಫಿರ್‌ಔನ್ ಕೋಪಾಗ್ನಿಯಿಂದ ಅಂಧನಾಗಿ ಹೋದ. ಸತ್ಯದ ಈ ಸ್ಪಷ್ಟ ಕುರುಹನ್ನು ಕಂಡೂ ಆತನ ಕಣ್ಣು ತೆರೆಯಲಿಲ್ಲ, ಅವನಲ್ಲಿ ಒಂದಿಷ್ಟು ಬುದ್ಧಿಯಿದ್ದಿದ್ದರೆ ಇಂತಹ ಸ್ಪಷ್ಟ ದೃಷ್ಟಾಂತವನ್ನು ನೋಡಿ ನೂರು ಬಾರಿ ಆಲೋಚಿಸಿ, ತನ್ನ ಮೂರ್ಖತನದಿಂದ ಹಿಂದೆ ಸರಿಯುತ್ತಿದ್ದ, ಆದರೆ ಮಿಥ್ಯದ ವಾಹಕರು ಮತ್ತು ಸತ್ಯದ ವಿರೋಧಿಗಳು ಯಾವಾಗಲೂ ಪ್ರತೀಕಾರಾಗ್ನಿಯಲ್ಲಿ ಅಂಧರಾಗಿ ಬಿಡುತ್ತಾರೆಂಬುದಕ್ಕೆ

ಇತಿಹಾಸದಲ್ಲಿ ಅನೇಕ ಉದಾಹರಣೆಗಳಿವೆ. ದೊಡ್ಡ ದೊಡ್ಡ ದೃಷ್ಟಾಂತಗಳನ್ನು ಕಂಡೂ ಅವರ ಕಣ್ಣು ತೆರೆಯುವುದಿಲ್ಲ. ಅವರ ಪ್ರತಿಯೊಂದು ಹೆಜ್ಜೆಯೂ ವಿನಾಶದತ್ತಲೇ ಏಳುತ್ತದೆ. ಅಲ್ಲಾಹನ ಮಾತು ಎಷ್ಟೊಂದು ಸತ್ಯ!

"ವಾಸ್ತವದಲ್ಲಿ ಕಣ್ಣುಗಳು ಕುರುಡಾಗುವುದಿಲ್ಲ, ಆದರೆ ಎದೆಗಳೊಳಗಿರುವ ಹೃದಯಗಳು ಕುರುಡಾಗಿ ಬಿಡುತ್ತವೆ." (ಪವಿತ್ರ ಕುರ್‌ಆನ್, 22:46)

ಹಾಗೆಯೇ ಫಿರ್‌ಔನ್ ಕೂಡಾ ಬನೀ ಇಸ್ರಾಈಲರ ವಿಮೋಚನೆ ಮತ್ತು ತನ್ನ ವಿನಾಶಕ್ಕಾಗಿ ಸಿದ್ಧಗೊಳಿಸಲಾದ ಆ ದಾರಿಗೆ ನುಗ್ಗಿಯೇ ಬಿಟ್ಟ. ಈ ಘಟನೆಯನ್ನು ಕುರ್‌ಆನ್ ಈ ರೀತಿ ವರ್ಣಿಸಿದೆ,

"ನಾವು ಅಲ್ಲೇ ಇನ್ನೊಂದು ಸಮೂಹವನ್ನು ಸಮೀಪಕ್ಕೆ ತಂದೆವು. ಮೂಸಾ ಮತ್ತು ಅವರ ಜೊತೆಗಿದ್ದವರೆಲ್ಲರನ್ನೂ ನಾವು ರಕ್ಷಿಸಿದೆವು ಮತ್ತು ಇತರರನ್ನು ಮುಳುಗಿಸಿಬಿಟ್ಟೆವು." (ಪವಿತ್ರ ಕುರ್‌ಆನ್, 26:64-66)

ಇಲ್ಲಿ ಅಲ್ಲಾಹನ ಗುಪ್ತ ಕಾರ್ಯಾಚರಣೆಯ ಯುಕ್ತಿ ನೋಡಿರಿ. ಯಾವ ರೀತಿ ಆತನು ಫಿರ್‌ಔನನ ಬೇರನ್ನೇ ಕಿತ್ತು ಹಾಕಿದನು? ಮೂಸಾ(ಅ) ಮತ್ತು ಕಾರವಾನ ಮುಂದೆ ಮುಂದೆ ಸಾಗುತ್ತಿತ್ತು. ಫಿರ್‌ಔನನ ಮಹಾ ಸೈನ್ಯ ಹಿಂದಿನಿಂದ ಮುನ್ನುಗ್ಗಿ ಬರುತ್ತಿತ್ತು. ಆ ಸಂದರ್ಭದಲ್ಲಿ ಬನೀ ಇಸ್ರಾಈಲರ ಅವಸ್ಥೆ ಏನಾಗಿರಬಹುದೆಂದು ಊಹಿಸುವುದೇ ಕಷ್ಟ. ಅತ್ತ ಫಿರ್‌ಔನ್ ತಾನು ಪೂರ್ಣವಾಗಿ ಯಶಸ್ವಿಯಾದೆನೆಂದು ಭಾವಿಸಿದ. ಆದರೆ ತನ್ನ ಮತ್ತು ಸೇನೆಯ ತಲೆಯ ಮೇಲೆ ಮೃತ್ಯು ಹಾರಾಡುತ್ತಿದೆಯೆಂದು ಪಾಪ, ಅವನಿಗೇನು ಗೊತ್ತು? ಯಾವುದನ್ನು ಅವನು ಗೆಲುವಿನ ಅಂತಿಮ ಗಡಿಯೆಂದು ಭಾವಿಸಿದ್ದನೋ ಅದುವೇ ಅವನ ಅಂತ್ಯದ ಪೀಠಿಕೆಯಾಗಿತ್ತು. ಅವನ ಎಲ್ಲ ಸೇನೆಗಳೂ ಸಮುದ್ರದ ಮಧ್ಯಕ್ಕೆ ತಲುಪಿದಾಗ ಮೂಸಾ(ಅ) ಮತ್ತು ಕಾರವಾನ ಆಚೆ ದಡಕ್ಕೆ ಸೇರಿ ಪಾರಾಗಿತ್ತು. ಇನ್ನೇನು, ಅಲ್ಲಾಹನ ಕಾರ್ಯಾಚರಣೆ ಆರಂಭವಾಗಿಯೇ ಬಿಟ್ಟಿತು. ಎರಡು ಬದಿಗೆ ಬೆಟ್ಟದಂತೆ ಸರಿದು ನಿಂತ ಸಮುದ್ರವು ಪುನಃ ಒಂದಾಯಿತು. ಫಿರ್‌ಔನನ ಆಡಳಿತದ ಶವಯಾತ್ರೆ ಹೊರಟಿತು.

ಇನ್ನೊಂದೆಡೆ ಕುರ್‌ಆನ್ ಆ ಮೂರ್ಖ ಶಿಖಾಮಣಿಯ ಆಡಳಿತದ ದುರ್ಗತಿಯನ್ನು ಈ ರೀತಿ ವರ್ಣಿಸಿದೆ,

"ಫಿರ್‌ಔನನು ತನ್ನ ಸೇನೆಯ ಸಹಿತ ಹಿಂಬಾಲಿಸಿ ಬಂದನು. ತರುವಾಯ ಸಮುದ್ರವು ಅವರನ್ನು ಆವರಿಸಬೇಕಾಗಿದ್ದ ರೀತಿಯಲ್ಲಿ ಸಂಪೂರ್ಣವಾಗಿ ಆವರಿಸಿತು. ಫಿರ್‌ಔನ್ ತನ್ನ ಜನಾಂಗವನ್ನು ದಾರಿಗೆಡಿಸಿಯೇ ಬಿಟ್ಟಿದ್ದನು. ಸರಿಯಾದ ಮಾರ್ಗದರ್ಶನವನ್ನೇನೂ ಮಾಡಿರಲಿಲ್ಲ." (ಪವಿತ್ರ ಕುರ್‌ಆನ್, 28:78-79)

ಸಂಕುಚಿತ, ದುರಹಂಕಾರಿ ಮತ್ತು ಪ್ರತೀಕಾರಾಗ್ನಿಯಲ್ಲಿ ಬೇಯುವ ಆಡಳಿತದ ದುರ್ಗತಿ ಹೀಗೆಯೇ ಆಗುತ್ತದೆ. ಅದು ತನ್ನನ್ನು ಮಾತ್ರವಲ್ಲ, ತನ್ನ ಜೊತೆ ತನ್ನ ಪರಿವಾರ ಬೆಂಬಲಿಗರು ಮತ್ತು ಸಹಾಯಕರ ಸಹಿತ ಎಲ್ಲರನ್ನೂ ದುರ್ಗತಿಗೆ ತಳ್ಳುತ್ತದೆ.

ಫಿರ್‌ಔನನ ವಿಶ್ವಾಸ ಘೋಷಣೆ

ಕುರ್‌ಆನಿನ ಇತರ ಕಡೆಗಳಲ್ಲಿ ಫಿರ್‌ಔನನ ಮುಳುಗುವ ಘಟನೆಯನ್ನು ಇನ್ನಷ್ಟು ವಿವರವಾಗಿ ಪ್ರಸ್ತಾಪಿಸಲಾಗಿದೆ. ಇಲ್ಲಿ ಹೀಗೆ ಹೇಳಲಾಗಿದೆ,

"ನಾವು ಬನೀಇಸ್ರಾಈಲರನ್ನು ಸಮುದ್ರ ದಾಟಿಸಿಕೊಂಡೊಯ್ದೆವು. ಅನಂತರ ಫಿರ್‌ಔನನೂ ಅವನ ಸೇನೆಯೂ ದಂಗೆ, ವಿದ್ವೇಷಗಳನ್ನು ಉದ್ದೇಶವಾಗಿರಿಸಿಕೊಂಡು ಅವರನ್ನು ಬೆನ್ನಟ್ಟಿದರು. ಕೊನೆಗೆ ಫಿರ್‌ಔನನು ಮುಳುಗುತ್ತಿರುವಾಗ ಹೀಗೆಂದನು, ಬನೀ ಇಸ್‌ರಾಈಲರು ವಿಶ್ವಾಸವಿಟ್ಟಿರುವ ದೇವನ ಹೊರತು ಅನ್ಯ ದೇವನಿಲ್ಲವೆಂದು ನಾನು ಒಪ್ಪಿಕೊಂಡೆನು ಮತ್ತು ನಾನೂ ಶರಣಾಗತರಾಗುವವರಲ್ಲಾಗಿರುತ್ತೇನೆ." (ಪವಿತ್ರ ಕುರ್‌ಆನ್, 10:90)

ಪವಾಡ ಸದೃಶವಾಗಿ ಸಮುದ್ರ ಇಬ್ಭಾಗವಾಗುವುದನ್ನು ಮತ್ತು ದಾರಿಯಾದುದನ್ನು ಆತ ಕಣ್ಣಾರೆ ಕಾಣುತ್ತಿದ್ದ. ಆವನಿಗೆ ಸತ್ಯವನ್ನು ಅರಿತು ತನ್ನ ವಿದ್ರೋಹ ನೀತಿಯನ್ನು ಕೈಬಿಟ್ಟು ಶರಣಾಗತಿಯ ಮಾರ್ಗ ಅನುಸರಿಸಲು ಆಗಲೂ ಅವಕಾಶವಿತ್ತು. ಆದರೆ ತಲೆಗೆ ದೇವತ್ವದ ಭ್ರಾಂತಿ, ಕಣ್ಣಿಗೆ ಅಧಿಕಾರ ಮದದ ನಶೆ ಹತ್ತಿರುವಾಗ ಮತ್ತು ಹೃದಯದಲ್ಲಿ ಪ್ರತೀಕಾರಾಗ್ನಿ ಹೊತ್ತಿ ಉರಿಯುವಾಗ ಬುದ್ಧಿ ಎಲ್ಲಿ ಕೆಲಸ ಮಾಡುತ್ತದೆ? ನೀರಿನಲ್ಲಿ ಒಂದೇ ಗೋತಾ ಹೊಡೆದಿರಬಹುದು. ಬುದ್ಧಿ ಸ್ತಿಮಿತಕ್ಕೆ ಬಂತು. ಮೃತ್ಯು ಕಣ್ಣ ಮುಂದೆ ಬಂದಾಗ ತನ್ನ ದೇವತ್ವದ ವಾಸ್ತವಿಕತೆಯ ಅರಿವಾಯಿತು. ಅತ್ಯಂತ ಅಸಹಾಯಕ ಅವಸ್ಥೆಯಲ್ಲಿ ಎಲ್ಲ ಮಂತ್ರಿಮಾಗಧರು ಮತ್ತು ಸೇನಾಬಲದ ಸಹಾಯದಿಂದ ಹತಾಶನಾದಾಗ ಕೂಗ ತೊಡಗಿದ, "ದೇವಾ! ನಾನು ವಿಶ್ವಾಸ ತಾಳಿದೆ." ಆದರೆ ಈಗೇನು ಪ್ರಯೋಜನ? ಸಮಯ ಮಿಂಚಿ ಹೋಗಿತ್ತು. ಮೂಸಾ(ಅ) ಎಷ್ಟು ದೀರ್ಘಕಾಲದಿಂದ ನಿನಗೆ ಸಮಜಾಯಿಸಿದರು. ಎಷ್ಟೆಲ್ಲಾ ಪುರಾವೆಗಳನ್ನು ನೀಡಿದರು, ದೃಷ್ಟಾಂತಗಳನ್ನು ತೋರಿಸಿದರು. ಆದರೆ ನಿನ್ನ ಹಠ ಮತ್ತು ನಿನ್ನ ಹಿಂಸೆ-ದೌರ್ಜನ್ಯಗಳು ಹೆಚ್ಚುತ್ತಲೇ ಹೋಯಿತು. ಆಗಲೇ ಮರ್ಯಾದೆಯಿಂದ ಒಪ್ಪಿಕೊಳ್ಳಬಹುದಾಗಿತ್ತು ನೀನು. ಆದರೆ 'ಲಾತೋಂ ಕೆ ಭೂತ್ ಬಾತೊಂಸೆ ಕಹಾಂ ಮಾನ್ತಾ ಹೈ' ಒದೆ ತಿನ್ನುವ ಪಿಶಾಚಿ ಉಪದೇಶಕ್ಕೆ ಬಗ್ಗುತ್ತದೆಯೆ? ಎಂಬಂತಾಗಿತ್ತು ನಿನ್ನ ಅವಸ್ಥೆ. ಮೃತ್ಯು ದೇವಚರ ಬಂದು ಕತ್ತು ಹಿಚುಕುವಾಗ ಈಗ ಬುದ್ಧಿ ಬಂತು. ಆದರೆ ಏನು ಪ್ರಯೋಜನ? ಅವನ ತಪ್ಪೊಪ್ಪಿಗೆಯನ್ನು ಅವನ ಮುಖಕ್ಕೇ ಹೊಡೆಯಲಾಯಿತು. ಅವನಿಗೆ ಈ ರೀತಿ ಉತ್ತರಿಸಲಾಯಿತು.

"ಈಗ ವಿಶ್ವಾಸವಿಡುತ್ತೀಯಾ? ವಸ್ತುತಃ ಇದಕ್ಕೆ ಮುಂಚಿನವರೆಗೂ ನೀನು ಆಜ್ಞೋಲ್ಲಂಘನೆ ಮಾಡುತ್ತಲಿದ್ದೆ ಮತ್ತು ಕಿಡಿಗೇಡಿಗಳಲ್ಲಾಗಿದ್ದೆ. ನಿಶ್ಚಯವಾಗಿಯೂ ನಮ್ಮ

ನಿದರ್ಶನಗಳ ಬಗ್ಗೆ ಅಲಕ್ಷ್ಯರಾಗಿರುವವರು ಬಹುಸಂಖ್ಯೆಯಲ್ಲಿದ್ದರೂ ನೀನು ಮುಂದಿನ ತಲೆಮಾರುಗಳಿಗೆ ಎಚ್ಚರಿಕೆಯ ದ್ಯೋತಕವಾಗಿರುವಂತೆ ನಾವಿನ್ನು ನಿನ್ನ ಶವವನ್ನು ಮಾತ್ರ ಸುರಕ್ಷಿತವಾಗಿರಿಸುವೆವು (ಎಂದು ಉತ್ತರಿಸಲಾಯಿತು.)" (ಪವಿತ್ರ ಕುರ್‌ಆನ್, 10:91-92)

ಫಿರ್‌ಔನನ ಶವವು ಇಂದಿಗೂ ಈಜಿಪ್ಟ್‌ನ ವಸ್ತುಸಂಗ್ರಹಾಲಯ (Museum) ದಲ್ಲಿರಿಸಲಾಗಿದೆ. ಅದರಲ್ಲಿ ಪ್ರತಿಯೊಬ್ಬ ವೀಕ್ಷಕನಿಗೂ ಪಾಠವಿದೆ. ಅದು ಮೌನ ಭಾಷೆಯಲ್ಲಿ ಹೇಳುತ್ತಾ ಇದೆ, "ನಾನು ಅಲ್ಲಾಹನ ವಿರುದ್ಧ ಬಂಡಾಯವೆದ್ದಿದ್ದೆ. ಅದರ ದುರ್ಗತಿಯನ್ನು ನೋಡಿದೆ. ಇನ್ನು ನೀವು ಈ ದುರ್ಗತಿಯಿಂದ ಪಾರಾಗಬಯಸುವಿರಾದರೆ ಈ ಮಾರ್ಗವನ್ನು ಅನುಸರಿಸಬಾರದು. ಅನ್ಯಥಾ ಇದೇ ದುರ್ಗತಿ ನಿಮಗೂ ಬಂದೀತು. ಆದರೆ ಈ ದುರ್ಗತಿಯಿಂದ ಎಷ್ಟು ಮಂದಿ ಪಾಠ ಕಲಿಯುತ್ತಾರೆ? ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಅವನ ಶವವನ್ನು ಜನರು ತೀವ್ರ ಆಸಕ್ತಿಯಿಂದ ನೋಡುತ್ತಾರೆ. ಅವನ ದುರ್ಗತಿಯನ್ನು ಓದುತ್ತಾರೆ. ಅನಂತರ ಕಣ್ಣು ಮುಚ್ಚಿಕೊಂಡು ಅದೇ ಮಾರ್ಗದಲ್ಲಿ ಮುಂದುವರಿಯುತ್ತಾರೆ. ಕಟ್ಟಕಡೆಗೆ ಅದೇ ದುರ್ಗತಿಗೆ ಬಲಿಯಾಗುತ್ತಾರೆ.

ಈ ಮಹಾ ಘಟನೆಯನ್ನು ಅಲ್ಲಾಹನು ಬನೀ ಇಸ್ರಾಈಲರ ಮೇಲೆ ಮಾಡಿದ ಬಹುದೊಡ್ಡ ಉಪಕಾರವೆಂದು ಬಣ್ಣಿಸಿದ್ದಾನೆ. ಇಡೀ ಕತೆಯನ್ನು ಸಂಕ್ಷೇಪಿಸಿ ಒಂದೇ ವಾಕ್ಯದಲ್ಲಿ ಹೀಗೆ ವಿವರಿಸಿದ್ದಾನೆ.

"ನಾವು ಸಮುದ್ರವನ್ನು ಭೇದಿಸಿ ನಿಮಗಾಗಿ ದಾರಿ ಮಾಡಿಕೊಟ್ಟ ಸಂದರ್ಭವನ್ನು ಸ್ಮರಿಸಿರಿ. ಬಳಿಕ ನಿಮ್ಮನ್ನು ಅದರೊಳಗಿಂದ ಸುರಕ್ಷಿತವಾಗಿ ಪಾರುಮಾಡಿಸಿದೆವು ಮತ್ತು ನಿಮ್ಮ ಕಣ್ಣೆದುರಲ್ಲೇ ಫಿರ್‌ಔನೀಯರನ್ನು ಮುಳುಗಿಸಿಬಿಟ್ಟೆವು." (ಪವಿತ್ರ ಕುರ್‌ಆನ್, 2:50)

❖ ❖ ❖

ಫಿರ್‌ಔನನ ಪಾಠದಾಯಕ ದುರ್ಗತಿ ಮತ್ತು ಅಲ್ಲಾಹನ ವಿಮರ್ಶೆ

ಫಿರ್‌ಔನನಿಗೆ ಈ ದುರ್ಗತಿ ಉಂಟಾಗಲು ಕಾರಣಗಳಾದರೂ ಏನು? ಈ ಕುರಿತು ಅಲ್ಲಾಹನು ಬೇರೆ ಬೇರೆ ಕಡೆಗಳಲ್ಲಿ ವಿವಿಧ ರೀತಿಯಲ್ಲಿ ಮತ್ತು ವಿವಿಧ ಶೈಲಿಯಲ್ಲಿ ವಿಮರ್ಶೆ ಮಾಡಿದ್ದಾನೆ. ಮುಂದೆ ಅವನಿಗೆ ಏನಾಗಲಿಕ್ಕಿದೆ ಎಂಬುದನ್ನೂ ವಿವರವಾಗಿ ಹೇಳಿದ್ದಾನೆ,

ಅಹಂಕಾರದ ಪರಿಣಾಮ: ಉಭಯ ಲೋಕಗಳಲ್ಲಿ ಶಾಪ

"ಅವನೂ ಅವನ ಸೇನೆಗಳೂ ಭೂಮಿಯಲ್ಲಿ ಯಾವ ಹಕ್ಕೂ ಇಲ್ಲದೆ ಅಹಂಭಾವ ತೋರಿದರು ಮತ್ತು ಅವರಿಗೆಂದೂ ನಮ್ಮ ಬಳಿ ಮರಳಲಿಕ್ಕಿಲ್ಲವೆಂದೇ ತಿಳಿದುಕೊಂಡರು. ಕೊನೆಗೆ ನಾವು ಅವನನ್ನೂ ಅವನ ಸೇನೆಗಳನ್ನೂ ಹಿಡಿದೆವು ಮತ್ತು ಸಮುದ್ರಕ್ಕೆ ಎಸೆದು ಬಿಟ್ಟೆವು. ಆ ಅಕ್ರಮಿಗಳ ಗತಿಯೇನಾಯಿತೆಂಬುದನ್ನು ನೋಡಿರಿ. ನಾವು ಅವರನ್ನು ನರಕದ ಕಡೆಗೆ ಆಹ್ವಾನಿಸುವ ಮುಂದಾಳುಗಳನ್ನಾಗಿ ಮಾಡಿದೆವು ಮತ್ತು ಅವರು ಪುನರುತ್ಥಾನ ದಿನ ಎಲ್ಲಿಂದಲೂ ಯಾವ ಸಹಾಯವನ್ನೂ ಪಡೆಯಲಾರರು. ನಾವು ಈ ಲೋಕದಲ್ಲಿ ಅವರ ಹಿಂದೆ ಶಾಪವನ್ನಿರಿಸಿದ್ದೇವೆ ಮತ್ತು ಪುನರುತ್ಥಾನ ದಿನ ಅವರು ಮಹಾ ಹಾನಿಗೊಳಗಾಗುವರು." (ಪವಿತ್ರ ಕುರ್‌ಆನ್, 28:39-42)

ನೈಜ ದೊಡ್ಡಸ್ತಿಕೆ ಮತ್ತು ಅಹಂಕಾರವು ಅಲ್ಲಾಹನ ಹಕ್ಕಾಗಿದೆ. ಯಾವ ಸೃಷ್ಟಿಗೂ ಆ ಹಕ್ಕಿಲ್ಲ, ಮಹಾನನಾದ ಸೃಷ್ಟಿಕರ್ತನೆದುರು ತನ್ನ ದೊಡ್ಡಸ್ತಿಕೆಯನ್ನು ಮೆರೆಯುವುದು. ಮತ್ತು ತನ್ನನ್ನು ಅನುಸರಿಸುವಂತೆ ಜನರನ್ನು ನಿರ್ಬಂಧಿಸುವುದು, ಈ ಭೂಮಿಯನ್ನು ತನ್ನ ಜಾಗೀರೆಂದು ಭಾವಿಸಿ ಮನಬಂದಂತೆ ವರ್ತಿಸುವುದು ಮತ್ತು ತಾನು ಯಾರ ಮುಂದೆಯೂ ಜವಾಬ್ದಾರನಲ್ಲವೆಂದು ಭಾವಿಸುವುದು ಯಾರಿಗೂ ಭೂಷಣವಲ್ಲ,

ಫಿರ್‌ಔನ್ ಮತ್ತವನ ಪರಿವಾರದವರು ಇದೇ ನೀತಿಯನ್ನನುಸರಿಸಿದರು. ಅವರ ಗತಿಯೇನಾಯಿತು ನೋಡಿ. ಇದು ಆ ದುರ್ಗತಿಯ ಆರಂಭ ಮಾತ್ರ. ಮುಂದೆ ಅವನ

ಗತಿಯು ಇದಕ್ಕಿಂತಲೂ ಕೆಟ್ಟದಾಗಿರುವುದು. ತಮ್ಮ ವಕ್ರ ಬುದ್ಧಿಯಿಂದ ಅವರು ಸತ್ಯದ ವಿರೋಧದಲ್ಲಿ ಎಂತಹ ವಿಧಾನ ಮತ್ತು ಅಸ್ತ್ರಗಳನ್ನು ಬಳಸಬಹುದು, ದ್ವೇಷದಲ್ಲಿ ಯಾವ ಮಟ್ಟಕ್ಕೆ ತಲುಪಬಹುದು ಎಂಬುದರ ಮಾದರಿಯನ್ನು ಅವರು ಮುಂದಿನ ಪೀಳಿಗೆಗಳಿಗೆ ಬಿಟ್ಟು ಹೋದರು. ಅವರು ಕೇವಲ ತಮ್ಮ ಕೃತ್ಯಗಳಿಗೆ ಮಾತ್ರ ಶಿಕ್ಷಿಸಲ್ಪಡುವುದಲ್ಲ, ಬದಲಾಗಿ ಅವರನ್ನು ಅನುಸರಿಸಿ ಅಕ್ರಮ, ವಿದ್ರೋಹಗಳಲ್ಲಿ ತೊಡಗಿದಂತಹ ಎಲ್ಲ ದುರಾಚಾರಿಗಳ ಅಪರಾಧಗಳ ಶಿಕ್ಷೆಯನ್ನೂ ಅನುಭವಿಸುವರು. ಅವರನ್ನು ಪರಲೋಕದಲ್ಲಿ ಕೇವಲ ನರಕಕ್ಕೆ ತಳ್ಳುವುದು ಮಾತ್ರವಲ್ಲ, ಅವರು ಅಪರಾಧಿಗಳ ನೇತಾರರೆಂಬ ನೆಲೆಯಲ್ಲಿ ಕಠಿಣತಮ ಶಿಕ್ಷೆಗೆ ಗುರಿಯಾಗುವರು. ಆಗ ಅವರಿಗೆ, ತಮ್ಮ ಸೇನೆ ಮತ್ತು ಸಂಗಾತಿಗಳು ತಮ್ಮ ನೆರವಿಗೆ ತಲುಪದ ಅಸಹಾಯಕರಾಗಿದ್ದರೆಂದು ತಿಳಿದು ಬರುವುದು. ಅವರ ಈ ದುರಾಚಾರ ಮತ್ತು ಬಂಡಾಯದ ಶಿಕ್ಷೆ ಈ ಲೋಕದಲ್ಲೇ ಸಿಕ್ಕಿತು. ಅಂತ್ಯದಿನದ ವರೆಗೂ ಅವರ ಮೇಲೆ ಶಾಪದ ಸುರಿಮಳೆಗೈಯುತ್ತಲಿರುವುದು. ಪರಲೋಕದಲ್ಲಿ ಅವರ ರೂಪವೇ ಬದಲಾಗಿ ಬಿಡುವಂತಹ ಭಯಾನಕ ಶಿಕ್ಷೆ ಅವರಿಗೆ ಸಿಗುವುದು. ಅವರು ಅಂದು ದುರದೃಷ್ಟಶಾಲಿಗಳ ಮತ್ತು ಅವಮಾನಿತರ ಸಾಲಿನಲ್ಲಿರುವರು. ಅವರಿಗೆ ಸಿಗಲಿರುವ ಭಯಾನಕ ಶಿಕ್ಷೆಯನ್ನು ಊಹಿಸುವಾಗಲೇ ಮೈ ಜುಮ್ಮೆನ್ನುತ್ತದೆ. ಅಲ್ಲಾಹನು ಅದರಿಂದ ನಮ್ಮನ್ನು ರಕ್ಷಿಸಲಿ.

ಪರಲೋಕದಲ್ಲಿ ಫಿರ್‌ಔನನಿಗೆ ಒದಗಲಿರುವ ದುರ್ಗತಿಯನ್ನು ಅಲ್ಲಾಹನು ಈ ರೀತಿ ವರ್ಣಿಸಿದ್ದಾನೆ,

ನರಕವಾಸಿಗಳ ಮುಂದಾಳಾಗಿರುವನು

"ಪುನರುತ್ಥಾನ ದಿನದಂದು ಅವನು ತನ್ನ ಜನಾಂಗದ ಮುಂದೆ ನಿಂತು ಅವರನ್ನು ತನ್ನ ನೇತೃತ್ವದಲ್ಲಿ ನರಕದ ಕಡೆಗೆ ಒಯ್ಯುವನು. ಅವರು ತಲಪುವ ಸ್ಥಾನ ಅದೆಷ್ಟು ನಿಕೃಷ್ಟ! ಅವರ ಮೇಲೆ ಇಹಲೋಕದಲ್ಲೂ ಶಾಪಬಿದ್ದಿತು ಮತ್ತು ಪುನರುತ್ಥಾನದಂದೂ ಬೀಳುವುದು. ಅವರಿಗೆ ಸಿಗುವ ಪ್ರತಿಫಲ ಎಷ್ಟು ನಿಕೃಷ್ಟ!" (ಪವಿತ್ರ ಕುರ್‌ಆನ್, 11:98-99)

ಇಂದು ಈ ಲೋಕದಲ್ಲಿ ಫಿರ್‌ಔನ್‌ಗಳಾಗಿ ಮೆರೆಯುವವರು, ಪಥಭ್ರಷ್ಟತೆಯನ್ನು ಹರಡುವ ನಾಯಕರುಗಳು ತಮ್ಮ ಹಿಂದಿನವರ ದುರ್ಗತಿಯಿಂದ ಪಾಠ ಕಲಿತು, ತಮ್ಮ ನೀತಿಯನ್ನು ಸರಿಪಡಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಇಂದಿನ ಈ ಸುಖಾಡಂಬರಗಳು ಅವರನ್ನು ವಂಚನೆಯಲ್ಲಿರಿಸಿವೆಯಲ್ಲವೇ? ಅವೆಲ್ಲ ಎಷ್ಟು ದಿನಗಳಿಗೆ? ಅದೆಲ್ಲವೂ ಇಲ್ಲಿ ಕೈತಪ್ಪಿ ಹೋಗುವುದು. ಪರಲೋಕದಲ್ಲಿ ಸಿಗುವ ಯಾತನೆಯಂತೂ ಅದಕ್ಕೆ ಹೊರತಾಗಿದೆ. ಲೋಕದಲ್ಲಿ ತಮ್ಮ ಹೆಸರು, ಪ್ರಸಿದ್ಧಿ ಮೆರೆಯಬೇಕೆಂಬುದು ಅವರ ಈ ಆಟವಾಗಿದೆ! ಆದರೆ ಪರಿಣಾಮವೇನಾಗುವುದು? ಈ ಲೋಕದಲ್ಲೂ ನಿಂದ್ಯತೆ, ಪರಲೋಕದಲ್ಲೂ ಅಪಮಾನ.

ಈ ಲೋಕವನ್ನು ಬೆಳಗಿಸಲಿಕ್ಕಾಗಿ ಫಿರ್‌ಔನನು ಈ ಎಲ್ಲ ಆಟಗಳನ್ನು ಆಡಿದ. ಆದರೆ ಅವನಿಗೆ ಈ ಲೋಕವೂ ಸಿಗಲಿಲ್ಲ, ಲೋಕದ ಸುಖವನ್ನೂ ಕಳೆದುಕೊಂಡ.

"ಅವರು ಅದೆಷ್ಟೋ ಉದ್ಯಾನಗಳನ್ನೂ ಚಿಲುಮೆಗಳನ್ನೂ ಹೊಲಗಳನ್ನೂ ಭವ್ಯ ಅರಮನೆಗಳನ್ನೂ ಬಿಟ್ಟು ಹೋದರು. ಅವರು ಸುಖಿಸುತ್ತಿದ್ದ ಎಷ್ಟೋ ಭೋಗ ಸಾಮಗ್ರಿಗಳು ಅವರ ಹಿಂದೆಯೇ ಉಳಿದು ಬಿಟ್ಟವು- ಅವರ ಅಂತ್ಯ ಹೀಗಾಯಿತು. ನಾವು ಇತರರನ್ನು ಈ ವಸ್ತುಗಳ ವಾರೀಸುದಾರರಾಗಿ ಮಾಡಿದೆವು. ತರುವಾಯ ಆಕಾಶವಾಗಲಿ-ಭೂಮಿಯಾಗಲಿ ಅವರಿಗಾಗಿ ರೋದಿಸಲಿಲ್ಲ ಮತ್ತು ಒಂದಿಷ್ಟು ಕಾಲಾವಕಾಶವನ್ನೂ ಅವರಿಗೆ ನೀಡಲಾಗಲಿಲ್ಲ. ಹೀಗೆ ನಾವು ಬನೀಇಸ್ರಾಈಲರನ್ನು ನಿಂದನೀಯ ಯಾತನೆಯಿಂದಲೂ ಮಿತಿಮೀರಿ ಸಾಗುವವರ ಪೈಕಿ ನಿಜಕ್ಕೂ ಅತ್ಯಂತ ಮೇಲ್ಮಟ್ಟದವನಾಗಿದ್ದ ಫಿರ್‌ಔನನಿಂದಲೂ ಮುಕ್ತಿ ನೀಡಿದೆವು." (ಪವಿತ್ರ ಕುರ್‌ಆನ್, 44:25-31)

ಫಿರ್‌ಔನೀಯರ ಈ ಎಲ್ಲ ವಿರೋಧಕ್ಕೆ ಮೂಸಾ(ಅ) ಮತ್ತವರ ಸಂದೇಶ ಯಶಸ್ವಿಯಾಗಿ ಬಿಟ್ಟರೆ ತಮ್ಮ ಅಧಿಕಾರ ಕೊನೆಗೊಳ್ಳುವುದು, ತಮ್ಮ ಸುಖಾಡಂಬರಗಳು ಭಂಗಗೊಳ್ಳುವುದು, ತಮ್ಮ ದೇವತ್ವದ ಮೆರುಗು ಮತ್ತು ಅಲ್ಲಾಹನ ದಾಸರ ಮೇಲೆ ತಮ್ಮ ಸ್ವಘೋಷಿತ ದೇವತ್ವವು ನಂದಿಹೋಗುವುದು ಎಂಬ ಭೀತಿಯಿಲ್ಲದೆ ಬೇರಾವ ಕಾರಣವೂ ಆಗಿರಲಿಲ್ಲ. ಈ ಸ್ವಾರ್ಥ ಹಿತಾಸಕ್ತಿಯನ್ನು ಕಾಪಾಡಲಿಕ್ಕಾಗಿ ಅವರು ಈ ಎಲ್ಲ ಪ್ರಯತ್ನಗಳನ್ನು ಮಾಡಿದರು. ಸತ್ಯದ ಸಂದೇಶವನ್ನು ತಿರಸ್ಕರಿಸಿದರು. ಅಲ್ಲಾಹನ ಪ್ರವಾದಿಯನ್ನೇ ಅವರು ಸತ್ಯದಲ್ಲಿದ್ದಾರೆಂದು ತಿಳಿದೂ ಸುಳ್ಳಾಗಿಸಿದರು. ಆದರೆ ಏನಾಯಿತು? ಅಲ್ಲಾಹನ ಶಿಕ್ಷೆ ಎರಗಿದಾಗ ಯಾರೂ ಉಳಿಯದಾದರು. ಕ್ಷಮಾಯಾಚನೆಗಾಗಲಿ, ಪಶ್ಚಾತ್ತಾಪಪಟ್ಟು ಮರಳುವುದಕ್ಕಾಗಲಿ ಸಮಯಾವಕಾಶ ದೊರೆಯಲಿಲ್ಲ. ತಮ್ಮ ನಿರೀಕ್ಷೆ, ಆಗ್ರಹ ಮತ್ತು ಉಪಾಯಗಳಿಗೆ ವ್ಯತಿರಿಕ್ತವಾಗಿ ಅವೆಲ್ಲವನ್ನೂ ಬಿಡಬೇಕಾಗಿ ಬಂತು. ಕೈತಪ್ಪಿ ಹೋದುದು ಮಾತ್ರವಲ್ಲ, ಅವರ ಮೇಲೆ ಅಪಮಾನಕರ ಯಾತನೆ ಎರಗಿತು. ಅವರ ವಿನಾಶಕ್ಕಾಗಿ ಯಾರೂ ಕಣ್ಣೀರು ಸುರಿಸಲಿಲ್ಲ, ಯಾವ ಕಡೆಯಿಂದಲೂ ಆರ್ತನಾದ ಮೊಳಗಲಿಲ್ಲ, ಯಾರೂ ಶೋಕಗೀತೆ ಹಾಡಲಿಲ್ಲ ಮತ್ತು ಎದೆ ಬಡಿದುಕೊಳ್ಳಲಿಲ್ಲ. ಬದಲಾಗಿ ಲೋಕಾಂತ್ಯದವರೆಗೆ ಅವರ ಮೇಲೆ ಶಾಪವೇ ಶಾಪ ಸುರಿಯುತ್ತಲಿರುವುದು. ತಮ್ಮ ಅಧಿಕಾರ ಶಕ್ತಿಯ ಮದದಿಂದ ಯಾರನ್ನು ದಮನಿಸಲು ಮತ್ತು ಅಳಿಸಿ ಹಾಕಲು ಅವರು ಬಯಸಿದ್ದರೋ ಅವರನ್ನು ಅಲ್ಲಾಹನು ರಕ್ಷಿಸಿದನು. ಮಾತ್ರವಲ್ಲ, ಅವರಿಗೆ ಅತ್ಯುತ್ತಮ ಪುರಸ್ಕಾರ ನೀಡಿ ಗೌರವಿಸಿದನು.

❖ ❖ ❖

ಅಲ್ಲಾಹನ ಕಾರ್ಯವಿಧಾನ ಮತ್ತು ವಿಶ್ವಾಸಿಗಳಿಗೆ ಸುವಾರ್ತೆ

ಒಂದು ಜನಾಂಗವು ಸಾಮೂಹಿಕವಾಗಿ ಅಲ್ಲಾಹನ ಪ್ರವಾದಿಗಳ ಸಂದೇಶವನ್ನು ತಿರಸ್ಕರಿಸಿದಾಗ, ಸುಸ್ಪಷ್ಟ ದೃಷ್ಟಾಂತಗಳನ್ನು ಕಣ್ಣಾರೆ ಕಂಡೂ ಅದನ್ನು ಸುಳ್ಳೆಂದು ಸಾರಿದಾಗ, ಎಚ್ಚರಿಕೆ ಮತ್ತು ಬೆದರಿಕೆಗಳ ಹೊರತಾಗಿಯೂ ಪಶ್ಚಾತ್ತಾಪಪಟ್ಟು ಸುಧಾರಿಸುವ ಬದಲು ಬಂಡಾಯ ಮತ್ತು ಕಿಡಿಗೇಡಿತನವನ್ನೇ ಮುಂದುವರಿಸಿದಾಗ, ತನ್ನ ಅಧಿಕಾರ ಮದದಿಂದ ಸತ್ಯದ ವಾಹಕರ ಮೇಲೆ ಬಾಹ್ಯ ನೋಟಕ್ಕೆ ಅವರೆಷ್ಟೇ ಕಡಿಮೆ ಸಂಖ್ಯೆಯಲ್ಲಿದ್ದು ದುರ್ಬಲರಾಗಿದ್ದಾಗ್ಯೂ ಹಿಂಸೆ ದೌರ್ಜನ್ಯಗಳನ್ನೆಸಗ ತೊಡಗಿದಾಗ ಅಂತಹ ಜನಾಂಗವನ್ನು ಅಲ್ಲಾಹನು ಸಂಪೂರ್ಣ ನಾಶ ಮಾಡಿ ಬಿಡುತ್ತಾನೆ ಮತ್ತು ಅದೇ ದಮನಿಸಲ್ಪಟ್ಟ ಸತ್ಯದ ವಾಹಕರಿಗೆ ಪ್ರಾಬಲ್ಯ ನೀಡುತ್ತಾನೆ. ಅದೇ ವಾಸ್ತವಿಕತೆಯನ್ನು ಈ ಕೆಳಗಿನ ಸೂಕ್ತದಲ್ಲಿ ಹೇಳಲಾಗಿದೆ.

"ಆ ಪ್ರಕಾರ ಅವರು ಇಬ್ಬರನ್ನೂ ಸುಳ್ಳಾಗಿಸಿಬಿಟ್ಟರು ಮತ್ತು ನಾಶ ಹೊಂದುವವರಲ್ಲಿ ಸೇರಿ ಹೋದರು." (ಪವಿತ್ರ ಕುರ್‌ಆನ್, 23:48)

ಸತ್ಯದ ಕರೆಯನ್ನು ತಿರಸ್ಕರಿಸುವವರನ್ನು ಪುಡಿಗಟ್ಟಲಾಗುವುದು. ಸ್ವಲ್ಪ ಸಮಯದ ವರೆಗೆ ಅವರನ್ನು ಸಡಿಲ ಬಿಡುವಾಗ ತಮ್ಮನ್ನು ಹಿಡಿಯುವವರಾರೂ ಇಲ್ಲವೆಂದು ಅವರು ಭಾವಿಸುತ್ತಾರೆ. ಗರ್ವದಿಂದ ಬೀಗುತ್ತಾರೆ. ನಿಮ್ಮನ್ನು ರಕ್ಷಿಸುವೆನೆಂದು ವಾಗ್ದಾನ ಮಾಡಿರುವ ನಿಮ್ಮ ದೇವನು ಎಲ್ಲಿದ್ದಾನೆ ಎಂದು ಪಂಥಾಹ್ವಾನ ನೀಡುತ್ತಾರೆ. ಆದರೆ ತಮ್ಮ ಮೇಲೊಬ್ಬ ದೇವನಿದ್ದಾನೆ ಎಂಬುದು ಅವರಿಗೆ ಶೀಘ್ರವೇ ಮನವರಿಕೆಯಾಗುತ್ತದೆ.

"ಮತ್ತು ಮದ್‌ಯನಿನವರು ಸಹ ಸುಳ್ಳಾಗಿಸಿದ್ದಾರೆ ಮತ್ತು ಮೂಸಾ ಸಹ ಸುಳ್ಳಾಗಿಸಲ್ಪಟ್ಟಿದ್ದಾರೆ. ನಾನು ಈ ಎಲ್ಲ ಸತ್ಯನಿಷೇಧಿಗಳಿಗೆ ಮೊದಲು ಕಾಲಾವಕಾಶ ನೀಡಿದೆನು, ಅನಂತರ ಹಿಡಿದು ಬಿಟ್ಟೆನು. ನನ್ನ ಶಿಕ್ಷೆ ಹೇಗಿತ್ತೆಂಬುದನ್ನು ನೋಡಿಕೊಳ್ಳಿರಿ."

(ಪವಿತ್ರ ಕುರ್‌ಆನ್, 22:44)

ಈ ಅವಧಿಯು ಅವರನ್ನು ವಂಚನೆಗೊಳಪಡಿಸಿತು. ಅದನ್ನು ಅವರು ದೇವನ ದೌರ್ಬಲ್ಯವೆಂದು ಬಗೆದರು. ಆದರೆ ಅವರ ಅವಧಿ ಮುಗಿದಾಗ ಅವರ ಹೆಸರೆತ್ತುವವರಾರೂ ಇಲ್ಲದ ರೀತಿಯಲ್ಲಿ ಅವರಿಗೆ ಶಿಕ್ಷೆ ದೊರೆಯಿತು.

ಸರ್ವಾಧಿಕಾರಿಗಳನ್ನು ಮುಳುಗಿಸಲಾಗುವುದು

"ಕೊನೆಗೆ ಫಿರ್‌ಔನನು ಮೂಸಾ ಮತ್ತು ಬನೀಇಸ್ರಾಈಲರನ್ನು ಭೂಮುಖದಿಂದ ಕಿತ್ತೆಸೆಯಬೇಕೆಂದು ನಿರ್ಧರಿಸಿದನು. ಆದರೆ ನಾವು ಅವನನ್ನೂ ಅವನ ಸಂಗಡಿಗರನ್ನೂ ಒಟ್ಟಾಗಿ ಮುಳುಗಿಸಿ ಬಿಟ್ಟೆವು." (ಪವಿತ್ರ ಕುರ್‌ಆನ್, 17:103)

"ಕೊನೆಗೆ ಅವರು ನಮ್ಮನ್ನು ರೇಗಿಸಿದಾಗ ನಾವು ಅವರ ಮೇಲೆ ಪ್ರತೀಕಾರ ತೀರಿಸಿದೆವು ಮತ್ತು ಅವರೆಲ್ಲರನ್ನೂ ಮುಳುಗಿಸಿ ಬಿಟ್ಟೆವು- ಹಾಗೂ ಅವರನ್ನು ಅನಂತರದವರ ಪಾಲಿಗೆ ಮುಂಗಾಮಿಗಳಾಗಿಯೂ ಪಾಠಪ್ರದ ಮಾದರಿಗಳಾಗಿಯೂ ಮಾಡಿಬಿಟ್ಟೆವು-"

(ಪವಿತ್ರ ಕುರ್‌ಆನ್, 43:55-56)

ಅಲ್ಲಾಹನ ಬಳಿ ವಿಳಂಬವಾಗಬಹುದು. ಆದರೆ ಅಂಧಕಾರವಿಲ್ಲ, ಅಕ್ರಮಿಗಳಿಗೆ ಸ್ವಲ್ಪ ಕಾಲಾವಕಾಶ ಸಿಕ್ಕಿದಾಗ ಮತ್ತು ಅವರಿಗೆ ಸಂಪೂರ್ಣವಾಗಿ ಸತ್ಯವನ್ನು ಮನವರಿಕೆ ಮಾಡಲು ಸ್ವಲ್ಪ ಸಮಯ ಸಿಕ್ಕಿದಾಗ ತಮಗಿಂತ ಮೇಲೆ ಯಾರೂ ಇಲ್ಲ ಮತ್ತು ತಮ್ಮ ಕೈ ಹಿಡಿಯುವವರು ಯಾರೂ ಇಲ್ಲವೆಂದು ಅವರು ಭಾವಿಸುತ್ತಾರೆ. ಆದರೆ ಅಲ್ಲಾಹನು ತಾಳ್ಮೆಯಿಲ್ಲದವನೋ ದುಡುಕು ಸ್ವಭಾವದವನೋ ಅಲ್ಲ, ಪ್ರತೀಕಾರ ತೀರಿಸುವುದಕ್ಕೂ ಅವಸರಪಡುವವನಲ್ಲ. ಅಕ್ರಮಿಗಳಿಗೆ ಅವರ ದುಷ್ಕೃತ್ಯಗಳ ಮಾಪಕ ತುಂಬುವವರೆಗೆ ಕಾಲಾವಕಾಶ ನೀಡುತ್ತಾನೆ. ಅವರಲ್ಲಿ ಒಳಿತಿನ ಅಂಶವೇನೂ ಬಾಕಿ ಉಳಿದಿಲ್ಲವೆಂದು ಕಂಡಾಗ, ನೋಡುವವರು ಮತ್ತು ಕೇಳುವವರು ಮೂಗಿಗೆ ಬೆರಳಿಟ್ಟು ಬಿಡುವ ರೀತಿಯಲ್ಲಿ ಅವರನ್ನು ಹಿಡಿಯುತ್ತಾನೆ. ಫಿರ್‌ಔನನ ಪ್ರಕರಣದ ಈ ಮುಖವನ್ನು ಅಲ್ಲಾಹನು ಈ ರೀತಿ ಪ್ರಕಟಪಡಿಸಿದನು,

ಅಹಂಕಾರಿಗಳಿಗೆ ಶಾಪವೇ ಶಾಪ

"ಮೂಸಾರ ವೃತ್ತಾಂತದಲ್ಲಿ (ನಿಮಗೆ ನಿದರ್ಶನವಿದೆ). ನಾವು ಅವರನ್ನು ಸುಸ್ಪಷ್ಟ ಆಧಾರ ಪ್ರಮಾಣದೊಂದಿಗೆ ಫಿರ್‌ಔನನ ಬಳಿಗೆ ಕಳುಹಿಸಿದಾಗ- ಅವನು ತನ್ನ ಅಧಿಕಾರ ಬಲದ ಬಗ್ಗೆ ಅಹಂಕಾರಪಟ್ಟು, 'ಇವನು ಜಾದೂಗಾರನೋ ಹುಚ್ಚನೋ ಆಗಿದ್ದಾನೆ' ಎಂದನು. ಕೊನೆಗೆ ನಾವು ಅವನನ್ನೂ ಅವನ ಸೇನೆಗಳನ್ನೂ ಹಿಡಿದೆವು ಮತ್ತು ಸಮುದ್ರಕ್ಕೆ ಎಸೆದು ಬಿಟ್ಟೆವು ಮತ್ತು ಅವನು ನಿಂದ್ಯನಾಗಿ ಬಿಟ್ಟನು." (ಪವಿತ್ರ ಕುರ್‌ಆನ್, 51:38-40)

ಫಿರ್‌ಔನನ ದುಸ್ವಭಾವವನ್ನು ಕೆಲವೇ ಸಂಕ್ಷಿಪ್ತ ವಾಕ್ಯಗಳಲ್ಲಿ ವಿವರಿಸುವ ಮೂಲಕ ಅಲ್ಲಾಹನು ಅವನ ಪಾಠಬೋಧಕ ದುರ್ಗತಿಯನ್ನು ಮುಂದೆ ಬರಲಿರುವ ಎಲ್ಲ

ಫಿರ್ಔನ್‌ಗಳಿಗೂ ಎಚ್ಚರಿಕೆ ನೀಡುತ್ತಿದ್ದಾನೆ. ನೀವು ನಿಮ್ಮ ದುಷ್ಕೃತ್ಯಗಳನ್ನು ತೊರೆಯುವುದಿಲ್ಲ ವೆಂದಾದರೆ ನಿಮ್ಮ ಗತಿಯೂ ಹೀಗೆಯೇ ಆಗುವುದೆಂದು ಈ ಮೂಲಕ ತಿಳಿಸುತ್ತಿದ್ದಾನೆ.

ಆಜ್ಞೋಲ್ಲಂಘಕರಿಗೆ ಕಠಿಣ ಶಿಕ್ಷೆ

"ಆದರೆ, ಅವನು ಸುಳ್ಳಾಗಿಸಿ ಬಿಟ್ಟನು ಮತ್ತು ಧಿಕ್ಕರಿಸಿದನು. ತರುವಾಯ ಕುತಂತ್ರ ಗಳನ್ನೆಸಗಲಿಕ್ಕಾಗಿ ಮರಳಿದನು. ಮತ್ತು ಜನರನ್ನು ಒಟ್ಟುಗೂಡಿಸಿದನು. 'ನಾನು ನಿಮ್ಮ ಮಹಾಪ್ರಭು' ಎಂದು ಸಾರಿದನು. ಕೊನೆಗೆ ಅಲ್ಲಾಹನು ಅವನನ್ನು ಪರಲೋಕದ ಹಾಗೂ ಈ ಲೋಕದ ಯಾತನೆಯಲ್ಲಿ ಹಿಡಿದು ಬಿಟ್ಟನು. ವಾಸ್ತವದಲ್ಲಿ ಭಯಪಡುವ ಪ್ರತಿಯೊಬ್ಬನಿಗೂ ಇದರಲ್ಲಿ ಪಾಠವಿದೆ." (ಪವಿತ್ರ ಕುರ್‌ಆನ್, 79:21-26)

ಇಲ್ಲಿ ಅಹಂಕಾರ, ಗರ್ವ, ಹಠಮಾರಿತನದ ಪರಿಣಾಮವೇನಾಯಿತೆಂದು ತಿಳಿಸ ಲಾಗಿದೆ. ಫಿರ್ಔನನು ತನ್ನೆಲ್ಲ ಶಕ್ತಿ ಸಾಮರ್ಥ್ಯಗಳು ಮತ್ತು ಬುದ್ಧಿವಂತಿಕೆಯ ಹೊರತಾಗಿಯೂ ಅಲ್ಲಾಹನ ಹಿಡಿತದಿಂದ ಪಾರಾಗಲಿಲ್ಲ, ಆದರೆ ಇಂತಹ ಘಟನೆಯಿಂದ ಜಾಗತಿಕ ವಿದ್ಯಮಾನ ಗಳನ್ನು ಕಣ್ತೆರೆದು ನೋಡಿ ಅದರ ದುಷ್ಪರಿಣಾಮದಿಂದ ಭೀತರಾಗುವವರು ಮಾತ್ರ ಪಾಠ ಕಲಿಯುತ್ತಾರೆ ಹಾಗೂ ದೇವನ ಮುಂದೆ ಹಾಜರಾಗಲಿಕ್ಕಿದೆ, ಪ್ರತಿಯೊಂದು ಕರ್ಮದ ವಿಚಾರಣೆ ಎದುರಿಸಲಿಕ್ಕಿದೆ ಮತ್ತು ಅವನ ಆಜ್ಞೋಲ್ಲಂಘನೆ ಮಾಡಿದರೆ ಅವನ ಶಿಕ್ಷೆಯಿಂದ ಇಲ್ಲೂ ಪಾರಾಗಲು ಸಾಧ್ಯವಿಲ್ಲ, ಪರಲೋಕದಲ್ಲೂ ರಕ್ಷಣೆ ದೊರೆಯಲಾರದು ಎಂದು ದೃಢವಾಗಿ ನಂಬಿರುವವರು ಮಾತ್ರ ಸನ್ಮಾರ್ಗವನ್ನು ಪಡೆಯಬಲ್ಲರು.

ಮಕ್ಕಾದ ನಿವಾಸಿಗಳಿಗೆ ಫಿರ್ಔನನ ದುರ್ಗತಿಯನ್ನು ತಿಳಿಸುತ್ತಾ ಅವರ ಮೂಲಕ ಇಡೀ ಜಗತ್ತಿಗೆ ಪ್ರವಾದಿಯವರ(ಸ) ಸಂದೇಶವನ್ನು ವಿರೋಧಿಸುವುದನ್ನು ಬಿಟ್ಟು ಬಿಡಿರಿ. ಅನ್ಯಥಾ ಈ ಮುಂಚೆ ಫಿರ್ಔನನಿಗೆ ಒದಗಿದ ದುರ್ಗತಿಯೇ ನಿಮಗೂ ಬಂದೀತು ಎಂದು ಎಚ್ಚರಿಸಲಾಗಿದೆ.

ಪ್ರವಾದಿಗಳನ್ನು ವಿರೋಧಿಸುವವರನ್ನು ಬಿಟ್ಟು ಬಿಡಲಾಗದು

"ನಾವು ಫಿರ್ಔನನ ಕಡೆಗೆ ಒಬ್ಬ ಸಂದೇಶವಾಹಕರನ್ನು ಕಳುಹಿಸಿದ್ದಂತೆಯೇ ನಿಮ್ಮ ಮೇಲೂ ಸಾಕ್ಷಿಯಾಗಿ ಒಬ್ಬ ಸಂದೇಶವಾಹಕನನ್ನು ಕಳುಹಿಸಿರುತ್ತೇವೆ. ಫಿರ್ಔನನು ಆ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದಾಗ ನಾವು ಅವನನ್ನು ಅತ್ಯಂತ ಉಗ್ರವಾಗಿ ಹಿಡಿದು ಬಿಟ್ಟೆವು (ಎಂಬುದನ್ನು ಗಮನಿಸಿರಿ)." (ಪವಿತ್ರ ಕುರ್‌ಆನ್, 73:15-16)

ಫಿರ್ಔನನು ನಮ್ಮ ಪ್ರವಾದಿಯ (ಮೂಸಾರ) ಕರೆಯನ್ನು ಧಿಕ್ಕರಿಸಿದನು. ತನ್ನ ಅಧಿಕಾರ ಮದದಿಂದ ವಿಶ್ವಾಸಿಗಳನ್ನು ದಮನಿಸಲು ನೋಡಿದನು. ಆದರೆ ನಾವು ಅವನ ಈ ಉದ್ಧಟತನದ ಪ್ರತೀಕಾರ ಪಡೆದೆವು ಮತ್ತು ಬಾಹ್ಯನೋಟಕ್ಕೆ ಅತ್ಯಂತ ದುರ್ಬಲ,

ಮರ್ದಿತ ಮತ್ತು ಅಸಹಾಯಕರಾಗಿದ್ದ ಅವನದೇ ಜನರಿಂದ ಅವನನ್ನು ಬುಡಮೇಲು ಗೊಳಿಸಿದೆವು. ಅಷ್ಟೇ ಅಲ್ಲ, ಅದೇ ದಮನಿಸಲ್ಪಟ್ಟ ಜನತೆಯನ್ನು ಪೂರ್ವ-ಪಶ್ಚಿಮಗಳ ಮಾಲಿಕರನ್ನಾಗಿ ಮಾಡಿದೆವು.

ಮರ್ದಿತರನ್ನು ಭೂಮಿಯ ವಾರೀಸುದಾರರಾಗಿ ಮಾಡಲಾಗುವುದು

"ಆಗ ನಾವು ಅವರಿಂದ ಪ್ರತೀಕಾರ ಪಡೆದೆವು ಮತ್ತು ಅವರನ್ನು ಸಮುದ್ರದಲ್ಲಿ ಮುಳುಗಿಸಿ ಬಿಟ್ಟೆವು. ಏಕೆಂದರೆ, ಅವರು ನಮ್ಮ ದೃಷ್ಟಾಂತಗಳನ್ನು ಸುಳ್ಳಾಗಿಸಿದ್ದರು ಮತ್ತು ಅವುಗಳ ಬಗ್ಗೆ ಅಲಕ್ಷ್ಯರಾಗಿದ್ದರು. ಅವರ ಸ್ಥಾನದಲ್ಲಿ ದುರ್ಬಲರಾಗಿರಿಸಲ್ಪಟ್ಟಿದ್ದವರನ್ನು ನಾವು ಸಮೃದ್ಧಿಯನ್ನಿರಿಸಿದ್ದ ಆ ಭೂಭಾಗದ ಪೂರ್ವ ಪಶ್ಚಿಮಗಳ ವಾರೀಸುದಾರರನ್ನಾಗಿ ಮಾಡಿ ಬಿಟ್ಟೆವು. ಈ ರೀತಿಯಲ್ಲಿ ಬನೀಇಸ್ರಾಈಲರಿಗೆ ನೀಡಿದ್ದ ನಿನ್ನ ಪ್ರಭುವಿನ ಉತ್ತಮ ವಾಗ್ದಾನವು ನೆರವೇರಿತು. ಏಕೆಂದರೆ ಅವರು ತಾಳ್ಮೆ ವಹಿಸಿದ್ದರು. ಫಿರ್‌ಔನ್ ಮತ್ತು ಅವನ ಜನಾಂಗ ದವರು ರಚಿಸಿದ್ದೆಲ್ಲವನ್ನೂ ಕಟ್ಟಿಟ್ಟಿದ್ದೆಲ್ಲವನ್ನೂ ನಾವು ಧ್ವಂಸ ಮಾಡಿ ಬಿಟ್ಟೆವು."

(ಪವಿತ್ರ ಕುರ್‌ಆನ್, 7:136-137)

ಈ ಸೂಕ್ತದ ಮೂಲಕ ದುರ್ಬಲ-ಮರ್ದಿತ ಸತ್ಯವಿಶ್ವಾಸಿಗಳಿಗೆ ಸುವಾರ್ತೆ ನೀಡ ಲಾಗಿದೆ ಮತ್ತು ತಮ್ಮ ಅಧಿಕಾರದ ಗರ್ವದಲ್ಲಿ ಆ ಮರ್ದಿತರ ಮೇಲೆ ಸರ್ವ ರೀತಿಯಲ್ಲಿ ದೌರ್ಜನ್ಯಗಳನ್ನೆಸಗುವ ಎಲ್ಲ ಸರ್ವಾಧಿಕಾರಿಗಳಿಗೆ ಎಚ್ಚರಿಕೆ (Warning) ನೀಡಲಾಗಿದೆ. ಮರ್ದಿತರಿಗೆ, ನಿಮ್ಮ ಸಹನೆ ವ್ಯರ್ಥವಾಗಲಾರದು, ನೀವು ಮೂಸಾ(ಅ) ಮತ್ತವರ ಜನತೆಯಂತೆ ಯಶಸ್ವಿಯಾಗುವಿರಿ. ಅಕ್ರಮಿಗಳು ಮತ್ತು ಸರ್ವಾಧಿಕಾರಿಗಳನ್ನು ಫಿರ್‌ಔನ್ ಮತ್ತವನ ಪರಿವಾರದವರಂತೆ ನಾಶಗೊಳಿಸಲಾಗುವುದು ಎಂದು ಸಾಂತ್ವನ ನೀಡಲಾಗಿದೆ.

ಅಲ್ಲಾಹನ ಪ್ರವಾದಿಗಳನ್ನು ಸುಳ್ಳಾಗಿಸುವ, ಅವರ ಸಂದೇಶವನ್ನು ಧಿಕ್ಕರಿಸುವ ಮತ್ತು ಅಲ್ಲಾಹನ ವಿರುದ್ಧ ಬಂಡಾಯ, ವಿದ್ರೋಹ ಮತ್ತು ಅಹಂಕಾರದ ಧೋರಣೆ ತಳೆಯುವ ಎಲ್ಲ ಜನರಿಗೂ ನಿಮಗಿಂತ ಮುಂಚೆ ಯಾವ ಅಹಂಕಾರಿಯನ್ನೂ ಪುಡಿಗಟ್ಟದೆ ಬಿಡದಿರುವಾಗ ನಿಮ್ಮನ್ನು ಹೇಗೆ ಬಿಡಲಾದೀತು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಎಲ್ಲ ದುರಹಂಕಾರಿಗಳಿಗೂ ಪಾಠಬೋಧಕ ಶಿಕ್ಷೆ ಲಭಿಸಿದೆ. ಈ ಶಿಕ್ಷೆ ಯಾವುದೇ ಅಕ್ರಮದ ಕಾರಣದಿಂದಲ್ಲ, ಬದಲಾಗಿ ಅವರು ಸಿಲುಕಿದ್ದ ಅವರ ದುರಾಚಾರಗಳ ಕಾರಣದಿಂದಾಗಿತ್ತು.

ದುರಹಂಕಾರಿಗಳ ಪಾಠಬೋಧಕ ದುರ್ಗತಿ

"ಮತ್ತು ಕಾರೂನ್, ಫಿರ್‌ಔನ್ ಹಾಗೂ ಹಾಮಾನ್‌ರನ್ನೂ ನಾವು ನಾಶಗೊಳಿಸಿದೆವು. ಮೂಸಾ, ಅವರ ಬಳಿಗೆ ಪ್ರತ್ಯಕ್ಷ ಪ್ರಮಾಣಗಳನ್ನು ತಂದರು. ಆದರೆ, ಅವರು ಭೂಮಿಯಲ್ಲಿ

ದುರಹಂಕಾರದಿಂದ ಮೆರೆದರು. ವಸ್ತುತಃ ಅವರು ಮೀರಿಸುವವರಾಗಿರಲಿಲ್ಲ. ಕೊನೆಗೆ ನಾವು ಪ್ರತಿಯೊಬ್ಬನನ್ನೂ ಅವನ ಪಾಪಗಳಿಗಾಗಿ ಹಿಡಿದೆವು. ತರುವಾಯ ನಾವು ಅವರಲ್ಲಿ ಕೆಲವರ ಮೇಲೆ, ಕಲ್ಲುಗಳ ಮಳೆಗರೆಯುವ ಬಿರುಗಾಳಿಯನ್ನು ಕಳುಹಿಸಿದೆವು. ಇನ್ನು ಕೆಲವರ ಮೇಲೆ ಒಂದು ಭಯಂಕರ ಸ್ಫೋಟವು ಬಂದೆರಗಿತು. ಮತ್ತೆ ಕೆಲವರನ್ನು ನಾವು ಭೂಮಿಯಲ್ಲಿ ಹುದುಗಿಸಿಬಿಟ್ಟೆವು. ಬೇರೆ ಕೆಲವರನ್ನು ಮುಳುಗಿಸಿಬಿಟ್ಟೆವು. ಅಲ್ಲಾಹನು ಅವರ ಮೇಲೆ ಅಕ್ರಮವೆಸಗುವವನಾಗಿರಲಿಲ್ಲ. ಆದರೆ ಅವರು ತಾವೇ ತಮ್ಮ ಮೇಲೆ ಅಕ್ರಮವೆಸಗುತ್ತಿದ್ದರು."

(ಪವಿತ್ರ ಕುರ್‌ಆನ್, 29:39-40)

ತರುವಾಯ, ಅಕ್ರಮದ ದಾರವು ಸಡಿಲವಾಗುವುದನ್ನು ಕಂಡು ಧೈರ್ಯಗುಂದ ಬಾರದು, ಹತಾಶರಾಗಬಾರದು, ದಬ್ಬಾಳಿಕೆ ಮತ್ತು ದುರಾಚಾರಗಳ ಮುಂದೆ ಮಂಡಿಯೂರ ಬಾರದು ಎಂದು ವಿಶ್ವಾಸಿಗಳಿಗೆ ಸಾಂತ್ವನ ನೀಡಲಾಗಿದೆ. ಪ್ರತಿಯೊಬ್ಬ ಅಕ್ರಮಿಗೂ ಅಲ್ಲಾಹನ ಛಡಿ ಸಿದ್ಧವಾಗಿದೆ. ಅವರ ಕರ್ಮಾವಧಿ ಮುಗಿದುಬಿಟ್ಟರೆ ದೇವಯಾತನೆಯ ಛಡಿಯೇಟಿನಿಂದ ಪಾರಾಗಿ ಅವರು ಎಲ್ಲಿಗೂ ಹೋಗಲಾರರು.

ವಿದ್ರೋಹಿಗಳಿಗೆ ದೇವಯಾತನೆಯ ಛಡಿಯೇಟು

"ಕಣಿವೆಗಳಲ್ಲಿ ಬಂಡೆಗಳನ್ನು ಕೊರೆದಿದ್ದ ಸಮೂದರೊಂದಿಗೆ- ಮತ್ತು ಮೊಳೆಗಳವನಾದ ಫಿರ್‌ಔನನೊಂದಿಗೆ-(ಅವನು ಹೇಗೆ ವರ್ತಿಸಿದನೆಂಬುದನ್ನು ನೀವು ನೋಡಲಿಲ್ಲವೇ?). ಇವರು ಜಗತ್ತಿನ ನಾಡುಗಳಲ್ಲಿ ವಿದ್ರೋಹವೆಸಗಿದವರಾಗಿದ್ದರು- ಮತ್ತು ಅಲ್ಲಿ ಬಹಳಷ್ಟು ಕ್ಷೋಭೆ ಹರಡಿದ್ದರು. ಕೊನೆಗೆ ನಿಮ್ಮ ಪ್ರಭು ಅವರ ಮೇಲೆ ಯಾತನೆಯ ಕೊರಡೆಯನ್ನು ಬಾರಿಸಿ ಬಿಟ್ಟನು. ವಾಸ್ತವದಲ್ಲಿ ನಿಮ್ಮ ಪ್ರಭು ಹೊಂಚು ಹಾಕುತ್ತಿದ್ದಾನೆ."

(ಪವಿತ್ರ ಕುರ್‌ಆನ್, 89:9-14)

ವಿಶ್ವಾಸಿಗಳಿಗೆ ವಿಜಯ ಮತ್ತು ಪ್ರಾಬಲ್ಯ

ಲೋಕದಾದ್ಯಂತದ ಮತ್ತು ಎಲ್ಲ ಕಾಲದ ವಿಶ್ವಾಸಿಗಳಿಗೆ ಈ ರೀತಿ ಸುವಾರ್ತೆ ನೀಡಲಾಗಿದೆ.

"ನಾವು ಮೂಸಾ ಮತ್ತು ಹಾರೂನರ ಮೇಲೆ ಅನುಗ್ರಹ ತೋರಿದೆವು. ಅವರನ್ನೂ ಅವರ ಜನಾಂಗವನ್ನೂ ಮಹಾ ಪೀಡನದಿಂದ ಪಾರುಗೊಳಿಸಿದೆವು ಮತ್ತು ಅವರಿಗೆ ಸಹಾಯ ಮಾಡಿದೆವು. ಇದರಿಂದಾಗಿ ಅವರೇ ಮೇಲುಗೈ ಸಾಧಿಸಿದರು ಅವರಿಗೆ ಅತ್ಯಂತ ಸ್ಪಷ್ಟವಾದ ಗ್ರಂಥ ನೀಡಿದೆವು. ಅವರಿಗೆ ಸನ್ಮಾರ್ಗದರ್ಶನ ಮಾಡಿಸಿದೆವು. ಮತ್ತು ಅನಂತರದ ತಲೆಮಾರು ಗಳಲ್ಲಿ ಅವರ ಶುಭ ಸ್ಮರಣೆಯನ್ನು ಉಳಿಸಿದೆವು. ಮೂಸಾ ಮತ್ತು ಹಾರೂನರ ಮೇಲೆ

ಸಲಾಮ್ (ಶುಭಾಶಯ) ಇದೆ. ನಾವು ಪುಣ್ಯ ಕಾರ್ಯವೆಸಗುವವರಿಗೆ ಇಂತಹದೇ ಸತ್ಫಲ ನೀಡುತ್ತೇವೆ. ನಿಶ್ಚಯವಾಗಿಯೂ ಅವರೀರ್ವರೂ ನಮ್ಮ ಸತ್ಯವಿಶ್ವಾಸಿ ದಾಸರಲ್ಲಾಗಿದ್ದರು."

(ಪವಿತ್ರ ಕುರ್‌ಆನ್, 37:114-122)

ಅಂದರೆ ಯಾವ ರೀತಿ ಮೂಸಾ ಮತ್ತು ಹಾರೂನ್‌ರಿಗೆ ಫಿರ್‌ಔನನಂತಹ ನಿರಂಕುಶ ಸರ್ವಾಧಿಕಾರಿ ಆಡಳಿತಗಾರನ ಮೇಲೆ ಸ್ಪಷ್ಟ ವಿಜಯ ನೀಡಿದನೋ ಮತ್ತು ಇಬ್ಬರು ದುರ್ಬಲ, ಅಸಹಾಯಕ ಸಹೋದರರನ್ನು ಅವನ ಹಿಂಸೆ-ದೌರ್ಜನ್ಯಗಳಿಂದ ಪಾರುಗೊಳಿಸಿ, ಅವರ ಕೈಯಿಂದಲೇ ಅವನ ಅಧಿಕಾರ ಪಟ್ಟವನ್ನು ಬುಡಮೇಲುಗೊಳಿಸಿದನೋ ಅದೇ ರೀತಿಯಲ್ಲಿ ಎಲ್ಲ ಕಾಲಗಳಲ್ಲೂ ನಾವು ವಿಶ್ವಾಸಿಗಳನ್ನು ರಕ್ಷಿಸುವೆವು. ಮಾತ್ರವಲ್ಲ ಅವರಿಗೆ ಸ್ಪಷ್ಟವಾದ ಪ್ರಾಬಲ್ಯವನ್ನೂ ನೀಡುವೆವು. ಅಷ್ಟೇ ಅಲ್ಲ, ನಾವು ವೈರಿಗಳನ್ನು ನಾಶಪಡಿಸಿದೆವು. ಲೋಕಾಂತ್ಯದ ವರೆಗೂ ಅವರ ಮೇಲೆ ಶಾಪ ಸುರಿಸುತ್ತಲೇ ಇರುವೆವು. ಇದಕ್ಕೆ ವ್ಯತಿರಿಕ್ತವಾಗಿ ಮೂಸಾ-ಹಾರೂನ್ ಸಹೋದರರಿಗೆ ವಿಜಯ ನೀಡಿದೆವು ಮಾತ್ರವಲ್ಲ, ಲೋಕಾಂತ್ಯದ ವರೆಗೂ ಅವರ ಉತ್ತಮ ನೆನಪನ್ನು ಬಿಟ್ಟಿರುವೆವು. ಎಂದಾದರೂ ಎಲ್ಲಾದರೂ ಅವರ ಹೆಸರೆತ್ತಲ್ಪಟ್ಟಾಗ ಅವರಿಗೆ ಶಾಂತಿ ಕೋರಲಾಗುವುದು.

ಇಷ್ಟು ಉನ್ನತ ಸ್ಥಾನ ಯಾಕೆ ನೀಡಲಾಯಿತೆಂದರೆ ಅವರು ಒಳಿತಿನ ವಾಹಕರಾಗಿದ್ದರು. ಸತ್ಯದ ಪ್ರತಿಪಾದಕರಾಗಿದ್ದರು. ಅಲ್ಲಾಹನ ನಿಷ್ಠ ದಾಸರಾಗಿದ್ದರು. ಅವರು ಅಲ್ಲಾಹನ ವತಿಯಿಂದ ನೀಡಲಾದ ಆಜ್ಞೆಗಳನ್ನು ತಪ್ಪದೆ ಸದಾ ಪಾಲಿಸುತ್ತಿದ್ದರು. ಅದರಲ್ಲಿ ಜೀವ-ಸೊತ್ತುಗಳ ಅಪಾಯ ಎದುರಾದರೂ ಸತ್ಯದ ಮಾರ್ಗದಲ್ಲಿ ಯಾವುದೇ ಸಂಕಷ್ಟ, ಸತ್ವ ಪರೀಕ್ಷೆಗಳು ಅವರ ಪಾದಗಳನ್ನು ವಿಚಲಿತಗೊಳಿಸಲಿಲ್ಲ, ಅವರಲ್ಲಿ ವಿಶ್ವಾಸವು ದೃಢವಾಗಿ ಬೇರೂರಿತ್ತು. ಆ ವಿಶ್ವಾಸಿ ದಾಸರ ಮೇಲೆ ಮಾಡಲಾದ ಅನುಗ್ರಹಗಳನ್ನು ಇಂದು ಕೂಡಾ ತಮ್ಮನ್ನು ವಿಶ್ವಾಸಿಗಳೆಂದು ಸಾಬೀತುಪಡಿಸುವ ಎಲ್ಲರ ಮೇಲೂ ಸುರಿಯಲಾಗುವುದು.

ಮೂಡಿದರೆ ಇಬ್ರಾಹೀಮರ(ಅ) ಈಮಾನ್ ಇವತ್ತೂ
ತಣ್ಣಗಾಗುವುದು ಉರಿಯುವ ಬೆಂಕಿಯು ಯಾವತ್ತೂ

ಅಲ್ಲಾಹನ ಕರುಣೆಯು ಆ ಇಬ್ಬರು ಸಹೋದರರ ಮೇಲೆ ಮಾತ್ರ ಆಗಿರುವುದಲ್ಲ, ಬದಲಾಗಿ ಅವರನ್ನು ಅನುಸರಿಸಿದ ಎಲ್ಲರ ಮೇಲೆ ಅವರ ಸಾರ್ವತ್ರಿಕ ಕರುಣೆ ಆವರಿಸಿರುವುದು.

ಮಾರ್ಗದರ್ಶನ ಮತ್ತು ನಾಯಕತ್ವ

ಅಲ್ಲಾಹನು ಹೇಳುತ್ತಾನೆ,

"ಅವರು ತಾಳ್ಮೆ ವಹಿಸಿದಾಗ ಮತ್ತು ನಮ್ಮ ಸೂಕ್ತಗಳನ್ನು ನಂಬುತ್ತಿದ್ದಾಗ ನಾವು ಅವರೊಳಗಿಂದ, ನಮ್ಮ ಆಜ್ಞೆಯಿಂದ ಮಾರ್ಗದರ್ಶನ ಮಾಡುತ್ತಿದ್ದಂತಹ ಮುಂದಾಳುಗಳನ್ನು ಎಬ್ಬಿಸಿದೆವು." **(ಪವಿತ್ರ ಕುರ್‌ಆನ್, 32:24)**

ಅವರು ನಮ್ಮ ಆಜ್ಞೆಗಳನ್ನು ಪಾಲಿಸಿದಾಗ, ನಮ್ಮ ವಾಗ್ದಾನಗಳನ್ನು ನಂಬಿ ಎಲ್ಲ ರೀತಿಯ ಅಪಾಯಗಳನ್ನೆದುರಿಸಿದಾಗ, ನಮ್ಮ ಮಾರ್ಗದಲ್ಲಿ ಬರುವ ಎಲ್ಲ ಸಂಕಷ್ಟಗಳ ವೇಳೆ ಸಹನೆ ವಹಿಸಿದಾಗ, ಈ ಮಾರ್ಗದಲ್ಲಿ ಅಗತ್ಯವಾಗಿರುವ ಧೈರ್ಯ-ಸ್ಥೈರ್ಯಗಳನ್ನು ಪ್ರದರ್ಶಿಸಿದಾಗ ನಾವು ಅವರಿಗೆ ಮುಕ್ತಿ ನೀಡಿದೆವು. ಅವರನ್ನು ಜಯಶಾಲಿಗಳನ್ನಾಗಿ ಮಾಡಿದೆವು. ಮಾತ್ರವಲ್ಲ, ಎಲ್ಲಕ್ಕಿಂತಲೂ ಮಿಗಿಲಾಗಿ ನಾವು ಅವರನ್ನು ಲೋಕದ ನಾಯಕರಾಗಿ ಮಾಡಿದೆವು. ಇನ್ನು ಯಾವುದಾದರೂ ಜನತೆ ಲೋಕದ ನಾಯಕರಾಗ ಬಯಸುವುದಾದರೆ ಅವರು ಇದೇ ಮಾರ್ಗ ಮತ್ತು ಇದೇ ವಿಧಾನವನ್ನು ಅನುಸರಿಸ ಬೇಕಾದೀತು.

❖ ❖ ❖

ಫಿರ್‌ಔನ್-ಮೂಸಾರ(ಅ) ಘಟನೆಯು ಒಂದು ದೊಡ್ಡ ದೃಷ್ಟಾಂತವಾಗಿದೆ

"ನಿಶ್ಚಯವಾಗಿಯೂ ಈ ಘಟನೆಯಲ್ಲೊಂದು ನಿದರ್ಶನವಿದೆ. ಆದರೆ ಇವರಲ್ಲಿ ಹೆಚ್ಚಿನವರು ನಂಬುವವರಲ್ಲ. ನಿಶ್ಚಯವಾಗಿಯೂ ನಿಮ್ಮ ಪ್ರಭು ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್, 26:67-68)

ಇಲ್ಲಿ ಅಲ್ಲಾಹನು ಮೂಸಾ(ಅ) ಮತ್ತು ಫಿರ್‌ಔನರ ವೃತ್ತಾಂತವನ್ನು ಕೇವಲ ಐತಿಹಾಸಿಕ ವೆಂಬ ನೆಲೆಯಲ್ಲಿ ಪ್ರಸ್ತಾಪಿಸಿರುವುದಲ್ಲ, ಅದರ ಉದ್ದೇಶವನ್ನು ಅವನೇ ತಿಳಿಸಿರುತ್ತಾನೆ. ಇದರಲ್ಲಿ ವಿಶ್ವಾಸಿಗಳಿಗೂ ಅವಿಶ್ವಾಸಿಗಳಿಗೂ ಬಹಳ ದೊಡ್ಡ ನೈತಿಕ ಪಾಠವಿದೆ. ಉಭಯತ್ರರಿಗೂ ಪಾಠಬೋಧಕ ಉಪದೇಶವಿದೆ. ಒಂದು ಸ್ಪಷ್ಟ ಐತಿಹಾಸಿಕ ಸತ್ಯವೂ ಇದೆ. ಸತ್ಯ-ಅಸತ್ಯದ ಸಂಘರ್ಷ ಹೊಸತೇನೂ ಅಲ್ಲ, ಅನಾದಿ ಕಾಲದಿಂದಲೂ ನಡೆಯುತ್ತಾ ಬಂದಿದೆ. ಇನ್ನೂ ಅದು ನಡೆಯುತ್ತಲೇ ಇರುವುದು. ಸತ್ಯದ ಸಂದೇಶ ಯಾವಾಗಲೂ ಅಪರಿಚಿತ ಮತ್ತು ವಿರೋಧದ ವಾತಾವರಣದಲ್ಲೇ ಬೆಳೆದಿದೆ. ಅದನ್ನು ಒಪ್ಪುವವರ ಮೇಲೆ ಭಯಾನಕ ಹಿಂಸೆ-ದೌರ್ಜನ್ಯಗಳು ನಡೆದಿವೆ. ಅವರು ಯಾವಾಗಲೂ ದುರ್ಬಲರು ಮತ್ತು ಅಸಹಾಯಕ ರಾಗಿದ್ದರು. ಅಧಿಕಾರಶಾಹಿಗಳ ದೃಷ್ಟಿಯಲ್ಲಿ ಶಾಪಗ್ರಸ್ತರಾಗಿದ್ದರು.

ಇದಕ್ಕೆ ವ್ಯತಿರಿಕ್ತವಾಗಿ ಸತ್ಯದ ವಿರೋಧಿಗಳು ಯಾವಾಗಲೂ ಸಂಪನ್ನರಾಗಿರುತ್ತಾರೆ. ಅವರ ಮೇಲೆ ಧನ-ಕನಕ, ಶಕ್ತಿ-ಪ್ರತಾಪಗಳ ಸುರಿಮಳೆಯಾಗುತ್ತಿರುತ್ತದೆ. ಅದೇ ಅಹಂಕಾರದ ಕಾರಣ ಅವರು ಯಾವಾಗಲೂ ಸತ್ಯದ ಕರೆಯನ್ನು ವಿರೋಧಿಸುತ್ತಾ ಬಂದಿದ್ದಾರೆ. ಅದನ್ನು ಅವಮಾನಿಸಿ, ನಿಂದಿಸಿ ಅದನ್ನು ದಮನಿಸಲು ಮತ್ತು ಅಳಿಸಿ ಹಾಕಲು ಪ್ರಯತ್ನಿಸಿದ್ದಾರೆ. ಅದನ್ನು ದಮನಿಸಲು ಹೊರಟಾಗ ಅದಕ್ಕೆ ಒಡಂಬಡದೆ ಇದ್ದಾಗ ಭೀಕರ ಹಿಂಸೆ-ದೌರ್ಜನ್ಯಗಳನ್ನೆಸಗಿದ್ದಾರೆ. ಅವರಿಗೆ ಎಷ್ಟೆಲ್ಲಾ ಉಪದೇಶಿಸಲು, ಮನವರಿಕೆ ಮಾಡಿಸಲು ಪ್ರಯತ್ನಿಸಲಾಯಿತೋ ಅಷ್ಟೇ ಅವರ ಕ್ರೋಧಾಗ್ನಿ ಹೊತ್ತಿ ಉರಿಯಿತು. ಸತ್ಯಧರ್ಮದ ಪ್ರತಿಪಾದಕರು ಜೀವಿಸಲೂ ಆಗದ ರೀತಿಯಲ್ಲಿ ಅವರನ್ನು ಮಾಡಿಬಿಟ್ಟರು. ಇಂತಹ ಪರಿಸ್ಥಿತಿಗಳಲ್ಲಿ ಹೆಚ್ಚಿನವರು ಸಂದೇಶವು ವಿಜಯಿಯಾಗುವುದರ ಬಗ್ಗೆ ಹತಾಶರಾಗಿ ಬಿಡುತ್ತಾರೆ.

ವಾತಾವರಣದಲ್ಲಿ ನಿರಾಶೆಯ ಕಾರ್ಮೋಡಗಳು ಆವರಿಸಿರುತ್ತದೆ. ಹಿಂಸೆ-ದೌರ್ಜನ್ಯ, ದಬ್ಬಾಳಿಕೆಗಳು ತಾಂಡವವಾಡುತ್ತವೆ. ತಾತ್ಕಾಲಿಕವಾಗಿ ಸತ್ಯದ ವಿರೋಧಿಗಳು ಮೆರೆದಾಡುತ್ತಾರೆ. ನಾವೇನು ಮಾಡಿದರೂ ಈ ಭೂಮಿಯಲ್ಲಿ ನಮ್ಮ ಕೈ ಹಿಡಿಯುವವರು ಯಾರೂ ಇಲ್ಲವೆಂದು ಭಾವಿಸುತ್ತಾರೆ. ತಮ್ಮ ಅಧಿಕಾರದ ದರ್ಪದಿಂದ ಮತ್ತು ತಮ್ಮ ಪ್ರಾಬಲ್ಯದ ದುರಹಂಕಾರದಿಂದ ಎಂತಹ ಸ್ಪಷ್ಟ ಮನಮುಟ್ಟುವ ಪುರಾವೆಗಳೂ ಅವರ ಮೇಲೆ ಪ್ರಭಾವ ಬೀರದಷ್ಟು ಅಂಧರಾಗಿ ಬಿಡುತ್ತಾರೆ. ಅವರ ಕಣ್ಣು ತೆರೆಸುವುದಿಲ್ಲ. ಪರಿಸ್ಥಿತಿ ಇಲ್ಲಿಗೆ ತಲಪಿದಾಗ ಅಲ್ಲಾಹನ ಕರುಣೆ ಉಕ್ಕಿ ಹರಿಯುತ್ತದೆ. ಆಗ ಸತ್ಯದ ವಿರೋಧಿಗಳಿಗೆ ಲೋಕಾಂತ್ಯದ ವರೆಗೂ ಜನರು ಪಾಠ ಕಲಿಯುವ ರೀತಿಯಲ್ಲಿ ಶಿಕ್ಷೆ ನೀಡಲಾಗುತ್ತದೆ. ಅವರಿಗೆ ನೀಡಲಾಗಿದ್ದ ಎಚ್ಚರಿಕೆಯು ಸಾಕ್ಷಾತ್ಕಾರಗೊಳ್ಳುತ್ತದೆ.

"ನಿಜಕ್ಕೂ ನಿಮ್ಮ ಪ್ರಭುವಿನ ಹಿಡಿತವು ಬಹಳ ಕಠಿಣವಾದುದು."

(ಪವಿತ್ರ ಕುರ್‌ಆನ್, 85:12)

ಅತ್ತ ವಿಶ್ವಾಸಿಗಳೊಂದಿಗೆ ಮಾಡಲಾದ ವಾಗ್ದಾನವನ್ನು ಪೂರೈಸಲಾಗುತ್ತದೆ.

"ಖಂಡಿತವಾಗಿಯೂ ಅವರಿಗೆ ಸಹಾಯ ಮಾಡಲಾಗುವುದು."

(ಪವಿತ್ರ ಕುರ್‌ಆನ್, 37:172)

ಲೋಕಾಂತ್ಯದ ವರೆಗಿನ ವಿಶ್ವಾಸಿಗಳಿಗೆ ಈ ಸುವಾರ್ತೆ ನೀಡಲಾಗುತ್ತದೆ.

"ನನ್ನ ದಾಸರೇ! ಅಲ್ಲಾಹನ ಕರುಣೆಯ ಬಗ್ಗೆ ನಿರಾಶರಾಗಬೇಡಿರಿ."

(ಪವಿತ್ರ ಕುರ್‌ಆನ್, 39:53)

ಸರ್ವ ಸ್ತುತಿಯೂ ಸರ್ವಲೋಕಗಳ ಪಾಲಕನಿಗೆ ಮೀಸಲು.

❖ ❖ ❖